ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಪ್ರೌಢಪ್ರಬಂಧ)

ಸಂಶೋಧನ

ಶಂಕ್ರಪ್ಪ. ಎಂ. ಬಡಿಗೇರ.

ಮಾರ್ಗದರ್ಶಕರು

ಡಾ. ಎಸ್.ವೈ. ಸೋಮಶೇಖರ.

ಮುಖ್ಯಸ್ಥರು ಮತ್ತು ಅಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ ೫೮೩.೨೭೬

೨೦೦೯

687

ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಪ್ರೌಢಪ್ರಬಂಧ)

ಸಂಶೋಧನೆ

ಶಂಕ್ರಪ್ಪ. ಎಂ. ಬಡಿಗೇರ.

ಮಾರ್ಗದರ್ಶಕರು

ಡಾ. ಎಸ್.ವೈ. ಸೋಮಶೇಖರ.

ಮುಖ್ಯಸ್ಥರು ಮತ್ತು ಅಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ- ೫೮೩೨೭೬

೨೦೦೬

ಮಾರ್ಗದರ್ಶಕರ ಪ್ರಮಾಣ ಪತ್ರ

ಶಂಕ್ರಪ್ಪ. ಎಂ. ಬಡಿಗೇರ ರವರು **"ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ"** ಎಂಬ ಪ್ರೌಢಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಎಂ.ಫಿಲ್ ಪದವಿಯ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಪ್ರೌಢಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಯಾವುದೇ ಬಗೆಯ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 14/10/09
ಸ್ಥಳ: ವಿದ್ಯಾರಣ್ಯ.

(ಡಾ. ಎಸ್.ವೈ. ಸೋಮಶೇಖರ)
ಅಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಶೋಧಕರ ಪ್ರಮಾಣ ಪತ್ರ

"ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ" ಎಂಬ ಶೀರ್ಷಿಕೆಯ ಈ ಪ್ರೌಢಪ್ರಬಂಧವನ್ನು ಡಾ. ಎಸ್.ವೈ. ಸೋಮಶೇಖರ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಯ ಅವಶ್ಯಕತೆಗಾಗಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸಿರುತ್ತೇನೆ. ಪ್ರಸ್ತುತ ಪ್ರಬಂಧವು ನಮ್ಮ ಸ್ವಂತ ಪರಿಶ್ರಮದ ಫಲವಾಗಿದೆ, ಈ ಮೊದಲು ಇದನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 14/10/09
ಸ್ಥಳ: ವಿದ್ಯಾರಣ್ಯ.


(ಶಂಕ್ರಪ್ಪ. ಎಂ. ಬಡಿಗೇರ)
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕರ್ನಾಟಕ ರಾಜ್ಯ






ಗದಗ ಜಿಲ್ಲೆ


ಬಿಜಾಪೂರಕ್ಕೆ
ಸೊಲ್ಲಾಪೂರಕ್ಕೆ
ಸೊಲ್ಲಾಪೂರಕ್ಕೆ
ಬಾಗಲಕೋಟ ಜಿಲ್ಲೆ
ರಾಷ್ಟ್ರೀಯ. ಹೆದ್ದಾರಿ 213
ಕುಷ್ಟಗಿಗೆ
ಹುಬ್ಬಳ್ಳಿಯಿಂದ
ರೋಣ
ಕೊಪ್ಪಳ ಜಿಲ್ಲೆ
ಧಾರವಾಡದಿಂದ
ಗದಗ
ಗುಂತಕಲ್‌ಗೆ
ರಾಷ್ಟ್ರೀಯ. ಹೆದ್ದಾರಿ 63
ಹುಬ್ಬಳ್ಳಿಯಿಂದ
ಗುತ್ತಿ
ರಾಜ್ಯ ಹೆದ್ದಾರಿ
ಮುಂಡರಗಿ
ಲಕ್ಷ್ಮೇಶ್ವರ
ಶಿರಹಟ್ಟಿ
ಹಗರಿಬೊಮ್ಮನಹಳ್ಳಿ
ಬಳ್ಳಾರಿ ಜಿಲ್ಲೆ
ಹಾವೇರಿಯಿಂದ
ಹಾವೇರಿ ಜಿಲ್ಲೆ
ಹಾವೇರಿಯಿಂದ





ಮಾಚಳ್ಳಿ
ಯಳವತ್ತಿ
ಶಿರಹಟ್ಟಿ
ಮಾಗಡಿ
ಬಸಾಪೂರ
ವರವಿ
ಕಡಕೋಳ
ರಾಮಗೇರಿ
ಗೊಜನೂರ
ಮಜ್ಜೂರ
ಮುಕ್ತಿಮಂದಿರ
ಛಬ್ಬಿ
ಬಟ್ಟೂರ
ದೇವಿಹಾಳ
ಗುಲಗುಂಜಿಕೊಪ್ಪ
ಲಕ್ಷ್ಮೇಶ್ವರ
ಬೆಳ್ಳಟ್ಟಿ
ಶಿಗ್ಲಿ
ಕೊಂಚಗೇರಿ
ಸೂರಣಗಿ
ಹೊಸೂರ
ತಂಗೋಡ
ಕೋಗನೂರ
ಬಾಲೇಹೊಸೂರ
ಹಬ್ಬಾಳ
ಇಟಗಿ
ಸಾಸಲವಡ
ಬಸಾಪೂರ
ಹಾವೇರಿ ಜಿಲ್ಲೆ
ಬಳ್ಳಾರಿ ಜಿಲ್ಲೆ

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ವಿಧಾನ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಪೂರ್ವ ಅಧ್ಯಯನಗಳು

೧.೫. ಅಧ್ಯಯನದ ಸ್ವರೂಪ

ಅಧ್ಯಾಯ : ೧
ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ವಿಧಾನ

೧. ೧ ಪೀಠಿಕೆ

ಭಾರತದ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಟವಾಗಿ ಪುನಾರಚಿಸುವ ನಿಟ್ಟಿನಲ್ಲಿ ಕನ್ನಡ ನಾಡಿನ ಕೊಡುಗೆ ಅಪಾರವಾಗಿದೆ. ಈ ನಾಡು ಒಂದು ಕಾಲದಲ್ಲಿ ಪೂರ್ವ-ಪಶ್ಚಿಮವಾಗಿ ಬಂಗಾಳಕೊಲ್ಲಿಯಿಂದ ಅರಬ್ಬೀಸಮುದ್ರದವರೆಗೂ, ದಕ್ಷಿಣ-ಉತ್ತರವಾಗಿ ಕಾವೇರಿಯಿಂದ ಗೋದಾವರಿಯವರೆಗೂ ವಿಶಾಲವಾಗಿತ್ತು. ಈ ನಾಡಿನ ಇತಿಹಾಸ ಪೂರ್ವ ಮತ್ತು ಇತಿಹಾಸ ಕಾಲದ ಪುರಾತತ್ವ ಅವಶೇಷಗಳು ಕರ್ನಾಟಕದಾದ್ಯಂತ ಹರಡಿವೆ. ಇವು ಹಲವು ಶತಮಾನಗಳಲ್ಲಿ ಮಾನವನು ನಡೆದು ಬಂದ ದಾರಿಯ ಕಿರು ನೋಟವನ್ನು ಸ್ಪಷ್ಟಪಡಿಸುತ್ತವೆ. ಹೀಗಾಗಿ ಈ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಪುನಾರಚಿಸುವ ನಿಟ್ಟಿನಲ್ಲಿ ಪುರಾತತ್ವ ಅವಶೇಷಗಳ ಪಾತ್ರ ಬಹು ಮುಖ್ಯವೆನಿಸುತ್ತದೆ. ಅಂತಹ ಪುರಾತತ್ವ ಅವಶೇಷಗಳ ಅನ್ವೇಷಣೆ, ಶೋಧನೆ, ಸಂಗ್ರಹಣೆ, ವಿಶ್ಲೇಷಣೆ ಮತ್ತು ಪ್ರಕಟಣೆ ಒಂದು ನಾಡಿನ ನರನಾಡಿಗಳೆನಿಸಿರುವ ಗ್ರಾಮಗಳಿಂದ ಆರಂಭವಾಗಬೇಕಾಗಿದೆ. ಆಗ ಮಾತ್ರ ಆ ನಾಡಿನ ಸಾಂಸ್ಕೃತಿಕ ಇತಿಹಾಸದ ಬಹುಮುಖ ಚಿತ್ರವನ್ನು ವಸ್ತುನಿಷ್ಟವಾಗಿ ಪುನಾರಚಿಸಬಹುದು ಮತ್ತು ಈವರೆಗೆ ತಿಳಿದುಬಂದಿರುವ ಇತಿಹಾಸದಲ್ಲಿ ಕಳೆದುಹೋದ ಕೊಂಡಿಗಳನ್ನು ಕಂಡುಕೊಳ್ಳಬಹುದು. ಈ ನಿಟ್ಟಿನಲ್ಲಿ ಗದಗ ಜಿಲ್ಲೆಯ ಶಿರಹಟ್ಟಿ ಪರಿಸರದ ಕೆಲವು ಗ್ರಾಮಗಳಲ್ಲಿರುವ ಶಾಸನ, ದೇವಾಲಯ ಹಾಗೂ ಪುರಾತತ್ವ ನೆಲೆಗಳ ಸಾಂಸ್ಕೃತಿಕ ಅದ್ಯಯನವನ್ನು ಕೈಗೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಶಿರಹಟ್ಟಿ ಪರಿಸರದಲ್ಲಿ ಗ್ರಾಮವಾರು ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿನ ಕ್ಷೇತ್ರಮಾಹಿತಿಗಳೆಲ್ಲವನ್ನು ಕಲೆಹಾಕಿ ಅವುಗಳನ್ನು ಸಾಂಸ್ಕೃತಿಕ ದೃಷ್ಟಿಕೋನಗಳಿಂದ ಪರಿಶೀಲಿಸಿ ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಆಶಯ.

ಕನ್ನಡನಾಡಿನ ಪ್ರತಿಯೊಂದು ಗ್ರಾಮಗಳು ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ವಿಫುಲ ಸಾಮಗ್ರಿಗಳನ್ನು ಒಳಗೊಂಡಿವೆ. ಇಲ್ಲಿಯ ಆಕರಗಳು ಈ ನಾಡಿನ ಸಮಗ್ರ ಇತಿಹಾಸ ರಚನೆಗೆ ಪೂರಕವಾಗಿವೆ. ಹೀಗಿದ್ದರೂ ಈ ನಿಟ್ಟಿನಲ್ಲಿ ಆಗಿರುವ ಸಂಶೋಧನೆ ಬಹಳ ಕಡಿಮೆ ಎಂದೇ ಹೇಳಬಹುದು. ಕರ್ನಾಟಕ ಇತಿಹಾಸಕ್ಕೆ ಸಂಬಂದಿಸಿದಂತೆ ಸಾಕಷ್ಟು ಕೃತಿಗಳು ರಚನೆ ಆಗಿದ್ದರೂ ಪ್ರಾದೇಶಿಕವಾಗಿ ಆಗಿರುವ ಕೆಲಸ ತೃಪ್ತಿಕರವಾಗಿಲ್ಲ. ಈ ನಿಟ್ಟಿನಲ್ಲಿ ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಎಂಬ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸದಾ ಹೊಸಹೊಸದನ್ನು ಅನ್ವೇಷಿಸುವ ದಿಶೆಯಲ್ಲಿ ಸಂಶೋಧಕನು ತನ್ನ ಕಾರ್ಯತತ್ಪರತೆಯಲ್ಲಿ ಕೇವಲ ಸಾಂಪ್ರದಾಯಿಕ ಆಧಾರಗಳಿಗೆ ಅಥವಾ ಲಿಖಿತ ಮತ್ತು ಪುರಾತತ್ವ ಆಕರಗಳಿಗೆ ಜೋತು ಬೀಳದೇ, ಮೌಖಿಕ ಅಥವಾ ಕಥನ ರೂಪದ ಆಧಾರಗಳನ್ನು ಭಿನ್ನ

ದೃಷ್ಟಿಕೋನದಡಿ ಅಧ್ಯಯನ ಮಾಡುವುದು ಅತೀ ಅವಶ್ಯಕವಾಗಿದೆ. ಹೀಗಾಗಿ ಐತಿಹ್ಯಗಳು ಇತಿಹಾಸದ ಆಕರಗಳು ಹೌದು. ಮೌಖಿಕ ಪರಂಪರೆಯು ಮನುಷ್ಯನ ಚಟುವಟಿಕೆಗಳನ್ನು ಜೀವಂತವಾಗಿ ಉಳಿಸಿಕೊಂಡು ಬರುವ ಶಕ್ತಿಯಿದ್ದರೆ, ಪುರಾತತ್ವ ಆಕರಗಳಿಗೆ ಭೌತಿಕವಾಗಿ ಉಳಿದುಕೊಂಡು ಬಂದ ಹೆಗ್ಗಳಿಕೆ ಇದೆ. ಆದ್ದರಿಂದ ಪುರಾತತ್ವ ಮತ್ತು ಐತಿಹ್ಯಗಳನ್ನು ಸಮೀಕರಿಸಿದ ಅಧ್ಯಯನಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ. ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಶಿರಹಟ್ಟಿ ಪರಿಸರದಲ್ಲಿ ಲಿಖಿತವಾಗಿರುವ ಮತ್ತು ಪ್ರತ್ಯಕ್ಷವಾಗಿ ಕಂಡುಬರುವ ಪುರಾತತ್ವ ಭೌತಿಕ/ಆಕರಗಳ ಜೊತೆಗೆ ಈ ಪ್ರದೇಶದಲ್ಲಿ ಗುಪ್ತಗಾಮಿನಿಯಾಗಿ ಅರಳಿಕೊಂಡಿರುವ ಜನಸಾಮಾನ್ಯರ ನೆನಪುಗಳ ಮೂಲಕ ಉಳಿದುಕೊಂಡು ಬಂದಿವೆ. ಪ್ರಸ್ತುತ ಅಧ್ಯಯನವು ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪರಾತತ್ವ ಎಂಬ ಶೀರ್ಷಿಕೆಯನ್ನು ಒಳಗೊಂಡಿದೆ. ಈ ಮೇಲಿನ ಮುಖ್ಯ ಉದ್ದೇಶವನ್ನಿಟ್ಟುಕೊಂಡು ಅಧ್ಯಯನವನ್ನು ರೂಪಿಸುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಶಿರಹಟ್ಟಿ ಪರಿಸರವು ಗದಗ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಿದೆ. ಜಿಲ್ಲಾ ಕೇಂದ್ರದಿಂದ ೩೨ ಕಿ.ಮೀ ಅಂತರದಲ್ಲಿದೆ. ಕವಿರಾಜಮಾರ್ಗಕಾರ ವರ್ಣಿಸಿರುವಂತೆ ತಿರುಳುಗನ್ನಡನಾಡಿನ ಬಹುಪಾಲು ಭಾಗವನ್ನೇ ಒಳಗೊಂಡಿರುವ ಗದಗ ಜಿಲ್ಲೆಯು ಶಿರಹಟ್ಟಿ, ನರಗುಂದ, ಮುಂಡರಗಿ, ರೋಣ, ಗದಗ ಎಂಬ ಐದು ತಾಲೂಕುಗಳನ್ನು ಒಳಗೊಂಡಿದೆ.

ಶಿರಹಟ್ಟಿ ಪರಿಸರವು ಪುರಾತತ್ವ ದೃಷ್ಟಿಯಿಂದ ಮೌಖಿಕ ಕಥನ/ಐತಿಹ್ಯ, ರಾಜಕೀಯ, ದೇವಾಲಯ, ಶಾಸನ, ಶಿಲ್ಪ ಆಡಳಿತ ಮುಂತಾದ ಹಲವು ಚಾರಿತ್ರಿಕ ಅಂಶಗಳ ದೃಷ್ಟಿಯಿಂದ ಮಹತ್ವವುಳ್ಳ ಪ್ರದೇಶ. ಉತ್ತರಕ್ಕೆ ಗದಗ ತಾಲೂಕ ದಕ್ಷಿಣಕ್ಕೆ ಹಾವೇರಿ ಜಿಲ್ಲಾ ಗಡಿ ಪೂರ್ವಕ್ಕೆ ಮುಂಡರಗಿ ತಾಲೂಕು, ಪಶ್ಚಿಮಕ್ಕೆ ಕುಂದಗೋಳ ತಾಲೂಕು ಮುಖ್ಯವಾಗಿವೆ. ಐತಿಹಾಸಿಕ ಪರಂಪರೆಯನ್ನು ಗೊತ್ತುಪಡಿಸುವ ಕುರುಹುಗಳನ್ನು ಒಳಗೊಂಡ ಮಹತ್ವದ ಕೆಲವು ಪ್ರಾಚೀನ ಗ್ರಾಮಗಳು ಈ ಪರಿಸರದಲ್ಲಿವೆ. ಅವುಗಳಲ್ಲಿ ಪ್ರಮುಖವಾದ ಶಿರಹಟ್ಟಿ, ದೇವಿಹಾಳ, ಶ್ರೀಮಂತಗಡ, ಬೆಳ್ಳಟ್ಟಿ, ಕಪಲಟ್ಟಿ, ಹೊಳೆಇಟಗಿ, ಹೆಬ್ಬಾಳ, ಹೊಸೂರು, ರಣತೂರ, ವರವಿ, ನಾಗರಮಡವು, ಎತ್ತಿನಹಳ್ಳಿ, ತಂಗೋಡ ಇವುಗಳನ್ನು ವಾಸ್ತು ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಈ ನಾಡನ್ನು ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರ್ಯರು, ಹೊಯ್ಸಳರು, ಯಾದವರು ಮತ್ತು ವಿಜಯನಗರದ ಅರಸರು ಆಳ್ವಿಕೆ ಮಾಡಿದರು. ಆ ಕಾಲದಲ್ಲಿ ಶಿರಹಟ್ಟಿ ಪರಿಸರವು ಜೈನ, ಶೈವ ಹಾಗೂ ವೈಷ್ಣವ ಧರ್ಮಗಳ ನೆಲೆವೀಡಾಗಿದ್ದು ಧಾರ್ಮಿಕ ಕ್ಷೇತ್ರದಲ್ಲಿ ತುಂಬಾ ಖ್ಯಾತಿಯನ್ನೆ ಪಡೆದಿತ್ತು.

೧.೨ ಅಧ್ಯಯನ ಉದ್ದೇಶ

ಪ್ರಸ್ತುತ ಅಧ್ಯಯನದಲ್ಲಿ ಅಜ್ಞಾತವಾಗಿರುವ ಶಿರಹಟ್ಟಿ ಪರಿಸರದ ನೆಲೆಗಳು, ದೇವಾಲಯಗಳು ಮತ್ತು ಶಾಸನಗಳನ್ನು ಈ ಅಧ್ಯಯನದ ಮೂಲಕ ಬೆಳಕಿಗೆ ತರುವುದು; ಇಲ್ಲಿನ ದೇವಾಲಯಗಳ ಕಲೆ, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು; ಈ ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳನ್ನು ಪರಾಮರ್ಶಿಸಿ ಇದಕ್ಕೆ ಪೂರಕವಾಗಿ ಬಳಸಿಕೊಳ್ಳುವುದೇ ಆಗಿದೆ. ಒಟ್ಟಾರೆಯಾಗಿ **"ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ"** ಕುರಿತು ಸಮಗ್ರ ಚಿತ್ರಣವನ್ನು ನೀಡುವ ಉದ್ದೇಶ ಪ್ರಸ್ತುತ ಅಧ್ಯಯನದ್ದು.

ಪುರಾತತ್ವ ಮತ್ತು ಇತಿಹಾಸಕ್ಕೆ ಸಂಬಂಧಪಟ್ಟಂತೆ ಅಧ್ಯಯನಗಳು ಹೆಚ್ಚಾಗಿ ದಾಖಲಾಗಿರುವ ಸಂಗತಿಗಳನ್ನು ಪ್ರತ್ಯಕ್ಷವಾಗಿ ಕಂಡುಬರುವ ಅವಶೇಷಗಳನ್ನು ಆಧರಿಸಿಕೊಂಡು ರಚನೆಗೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ಸಾವಿರಾರು ವರ್ಷಗಳಿಂದ ನೆನಪಿನ ಅಂಗಳದಲ್ಲಿ ಉಳಿದುಕೊಂಡು ಬಂದಿರುವ ಮೌಖಿಕ ಪರಂಪರೆಗಳಾದ ಕಥನ ಮತ್ತು ಐತಿಹ್ಯಗಳು ಸಮಗ್ರ ಹಾಗೂ ಸೂಕ್ಷ್ಮ ಅದ್ಯಯನಗಳನ್ನು ಪುಷ್ಟಿಗೊಳಿಸುವ ಹಾಗೂ ಸದೃಡಗೊಳಿಸುವ ಕಾರ್ಯದಲ್ಲಿ ಯಶಸ್ವಿಯಾಗುತ್ತವೆ. ಅದರಂತೆ ಶಿರಹಟ್ಟಿ ಪರಿಸರದ ಪುರಾತತ್ವ ಆಕರಗಳನ್ನು ಮತ್ತು ಅಲ್ಲಿರುವ ಐತಿಹ್ಯಗಳನ್ನು ಸಮನ್ವಯಗೊಳಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧.೩ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕ ಮತ್ತು ಕಾಲಾವಧಿ ದೃಷ್ಟಿಯಿಂದ ಇತಿಹಾಸ ಆರಂಭಕಾಲದಿಂದ ಕ್ರಿ.ಶ. ೧೮ ನೇ ಶತಮಾನದವರೆಗೆ ನಿರ್ದಿಷ್ಟಪಡಿಸಿಕೊಳ್ಳಲಾಗಿದೆ. ಭೌಗೋಳಿಕ ಹಿನ್ನೆಲೆಯಲ್ಲಿ ಶಿರಹಟ್ಟಿ ಪರಿಸರದಲ್ಲಿ ಬರುವ ಪ್ರಮುಖ ಗ್ರಾಮಗಳಿಗೆ ಈ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಅವುಗಳಲ್ಲಿ ಶಿರಹಟ್ಟಿ, ವರವಿ, ಛಬ್ಬಿ, ದೇವಿಹಾಳ, ರಣತೂರ, ಬೆಳ್ಳಟ್ಟಿ, ಹೆಬ್ಬಾಳ, ತೆಗ್ಗಿನಭಾವನೂರ, ಜೆಲ್ಲಿಗೇರಿ, ಸಾಸರವಾಡ, ಹೊಳೆಇಟಗಿ, ಕಪಲಟ್ಟಿ, ಅಂಕಲಿ, ಕೋಗನೂರು ಗ್ರಾಮಗಳಲ್ಲಿನ ದೇವಾಲಯ ಹಾಗೂ ಪುರಾತತ್ವೀಯ ನೆಲೆಗಳನ್ನು ಗುರುತಿಸಿ ಅವುಗಳ ಐತಿಹಾಸಿಕ ಮಹತ್ವವನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ.

೧.೪ ಅಧ್ಯಯನದ ವಿಧಾನ

ಪುರಾತತ್ವೀಯ ಹಿನ್ನೆಲೆಯನ್ನು ಇಟ್ಟುಕೊಂಡು ಕೈಗೊಂಡಿರುವ ಪ್ರಸ್ತುತ ಅಧ್ಯಯನವು ಕ್ಷೇತ್ರಕಾರ್ಯ ಆಧಾರಿತವಾದದ್ದು. ಕ್ಷೇತ್ರ ಕಾರ್ಯದ ಮೂಲಕ ಪ್ರಾಥಮಿಕ ಹಾಗೂ ಅನುಷಂಗಿಕ ಮಾಹಿತಿಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಂಡು, ಪ್ರತಿಗ್ರಾಮದ ಪುರಾತತ್ವ

ಹಾಗೂ ಐತಿಹ್ಯಗಳನ್ನು ಸಮಗ್ರವಾಗಿ ಅವಲೋಕಿಸಿ ವಿಶ್ಲೇಷಿಸುವ ಕಾರ್ಯ ವಿಧಾನಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಈ ಪ್ರದೇಶದ ಪ್ರತಿ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಅಲ್ಲಿನ ವಿವರಗಳನ್ನು ಪರಿಶೀಲಿಸಿ ದಾಖಲಿಸಿಕೊಂಡಿದ್ದೇವೆ. ಜೊತೆಗೆ ತತ್ಸಂಬದ್ಧ ಅಧ್ಯಯನಗಳನ್ನು ಗಮನದಲ್ಲಿರಿಸಿಕೊಂಡು ಪೂರಕವಾದ ಮಾಹಿತಿಗಳನ್ನು ಬೇರೆ ಬೇರೆ ನೆಲೆಯಿಂದಲೂ ಪಡೆದು ಕೆಲವು ವಿಷಯಗಳನ್ನು ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ವಕ್ತೃಗಳಿಂದ ಮಾಹಿತಿಯನ್ನು ಪಡೆಯಲಾಗಿದೆ. ಕ್ಷೇತ್ರ ಕಾರ್ಯಗಳಲ್ಲಿ ಕಂಡುಬರುವ ಹೊಸ ನೆಲೆಗಳು ಹಾಗೂ ಅಲ್ಲಿಯ ಅವಶೇಷಗಳನ್ನು ಸಂಗ್ರಹಿಸಿ ಛಾಯಾಚಿತ್ರಗಳನ್ನು ಪಡೆದುಕೊಂಡು ಅವುಗಳನ್ನು ಕಾಲಾನುಕ್ರಮದಲ್ಲಿ ವಿಂಗಡಿಸಿ ಸಂಶೋಧನೆಗೆ ಒಳಪಡಿಸಲಾಗಿದೆ. ಇತಿಹಾಸ ಮತ್ತು ಪುರಾತತ್ವ ಹಾಗೂ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಅಳವಡಿಸಿರುವ ಅಧ್ಯಯನದ ವಿಧಾನಗಳನ್ನು ಪರಿಗಣಿಸಿ ಅಧ್ಯಯನವನ್ನು ಕೈಗೊಂಡಿದ್ದೇನೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಬರುವ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ, ಅವುಗಳ ಆಡಳಿತ ವ್ಯವಸ್ಥೆ, ಬಿಟ್ಟ ದಾನದತ್ತಿ ಮುಂತಾದವುಗಳನ್ನು ಗಮನಿಸಲಾಗಿದೆ. ಪುರಾತತ್ವ ನೆಲೆ ಮತ್ತು ಶಾಸನಗಳು ಪ್ರಸ್ತುತ ಅಧ್ಯಯನದ ಪ್ರಧಾನ ಆಕರಗಳಾಗಿವೆ.

೧.೫ ಅಧ್ಯಯನಗಳ ಸಮೀಕ್ಷೆ

ಈವರೆಗೆ ಹಲವು ವಿದ್ವಾಂಸರು ಮತ್ತು ಸಂಶೋಧಕರು ತಮ್ಮ ಅಧ್ಯಯನದ ಪರಿಮಿತಿಯಲ್ಲಿ ಶಿರಹಟ್ಟಿ ಪರಿಸರದ ಕೆಲವು ಮಹತ್ವದ ದೇವಾಲಯ ಶಾಸನ, ಶಿಲ್ಪ, ಸ್ಮಾರಕ, ಐತಿಹಾಸಿಕ ಸ್ಥಳಗಳು, ಪುರಾತತ್ವ ನೆಲೆಗಳನ್ನು ಪೂರಕವಾಗಿಟ್ಟುಕೊಂಡು ಹಲವು ಹೊಸ ವಿಷಯಗಳನ್ನು ಹೊರಗೆಡವಿದ್ದಾರೆ. ಅವು ಈ ಕೆಳಗಿನಂತಿವೆ.

೧.೬ ಗ್ಯಾಜೆಟಿಯರ, ವಾರ್ಷಿಕ ವರದಿ ಮತ್ತು ಶಾಸನ ಸಂಪುಟಗಳು

ಶ್ರೀ ವೇಂಕಟರಂಗೋ ಕಟ್ಟಿ . ಅವರು ಸಂಪಾದಿಸಿರುವ "ಧಾರವಾಡ, ಬೆಳಗಾವಿ ಹಾಗೂ ಬಿಜಾಪೂರ, ಜಿಲ್ಲೆಗಳ ಗ್ಯಾಜಿಟಿಯರ್‌ಗಳಲ್ಲಿ ಶಿರಹಟ್ಟಿ ಪರಿಸರದ ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯ ಕುರಿತಾದ ಸಂಕ್ಷಿಪ್ತವಾದ ವಿವರಗಳಿವೆ. ಡಾ. ಸೂರ್ಯನಾಥ ಕಾಮತ್ ಅವರು ಸಂಪಾದಿಸಿರುವ "ಧಾರವಾಡ ಜಿಲ್ಲೆಯ ಗ್ಯಾಜೆಟಿಯರ್‌ನಲ್ಲಿ ಶಿರಹಟ್ಟಿ ಪರಿಸರದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ವಿವರ ಮತ್ತು ಕೆಲವು ಐತಿಹಾಸಿಕ ಗ್ರಾಮಗಳ ಸಂಕ್ಷಿಪ್ತವಾದ ವಿವರಗಳಿವೆ. ಎನ್ಯುವಲ್ ರಿಪೋರ್ಟ್ ಆ್ಯನ್ ಸೌತ್ ಇಂಡಿಯನ್ ಎಪಿಗ್ರಫಿ ೧೯೪೧–೪೨, ೧೯೪೨–೪೩, ೧೯೫೩–೫೪ ವಾರ್ಷಿಕ ವರದಿಯಲ್ಲಿ ಶಿರಹಟ್ಟಿ ಪರಿಸರದ ಶಾಸನಗಳು ವರದಿಯಾಗಿವೆ.[೬] ಎಪಿಗ್ರಫಿಯಾ ಇಂಡಿಕಾ ಸಂಪುಟ IVರಲ್ಲಿ ಶಿರಹಟ್ಟಿ ಪರಿಸರದ ಹೆಬ್ಬಾಳ ಗ್ರಾಮದ ಒಂದು ಶಾಸನ ಪ್ರಕಟವಾಗಿದೆ.[೭] ಡಾ.ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿರುವ 'ಧಾರವಾಡ

ಜಿಲ್ಲೆಯ ಶಾಸನ ಸೂಚಿಯಲ್ಲಿ ಶಿರಹಟ್ಟಿ ಪರಿಸರದಲ್ಲಿನ ಈಗಾಗಲೇ ಪ್ರಕಟವಾಗಿರುವ ಶಾಸನಗಳನ್ನೆಲ್ಲ ಒಂದೆಡೆಗೆ ಕಲೆಹಾಕಿ ವರದಿ ಮಾಡಿದ್ದಾರೆ.

ಕೃತಿಗಳು :

ಕೆ.ಬಿ. ಶಿವತಾರಕ್ ಅವರು ತಮ್ಮ 'ಕರ್ನಾಟಕ ಪುರಾತತ್ವ ನೆಲೆಗಳು' ಎಂಬ ಕೃತಿಯಲ್ಲಿ ಕಳೆದ ಶತಮಾನದ ಪೂರ್ವಾರ್ಧದಿಂದೀಚೆಗೆ ಕರ್ನಾಟಕದಲ್ಲಿ ಶೋಧಿತವಾಗಿ ವರದಿಯಾಗಿರುವ ವಿವಿಧ ಶಿಲಾಯುಗ ಸಂಸ್ಕೃತಿಗಳಿಗೆ ಸಂಬಂಧಿಸಿದ ವಸತಿ ನೆಲೆಗಳನ್ನು ಒಂದೆಡೆಗೆ ಕಲೆಹಾಕಿದ್ದಾರೆ. ಅದರಲ್ಲಿ ಶಿರಹಟ್ಟಿ ಪರಿಸರದ ಹಳೆ ಶಿಲಾಯುಗಕ್ಕೆ ಸಂಬಂಧಪಟ್ಟಂತೆ ಆದರಹಳ್ಳಿ, ಇಟಗಿ, ದೇವಿಹಾಳ, ಬೆಳಗಟ್ಟಿ, ಬೆಳ್ಳಟ್ಟಿ, ಹೊಸೂರಗಳಲ್ಲಿ ಬೃಹತ್ ಶಿಲಾಯುಗದ ನಲೆಗಳು ಪತ್ತೆಯಾಗಿವೆ. ಆಡರಕಟ್ಟಿ, ಇಟಗಿ, ಚೌಡಾಳ, ತಂಗೋಡ, ನವೆಭಾವನೂರ, ಬೆಳ್ಳಟ್ಟಿ ಮತ್ತು ಬೆಳಗಟ್ಟಿಗಳಲ್ಲಿ ಬೃಹತ್ ಶಿಲಾಯುಗದ ನಲೆಗಳು ಬೆಳಕಿಗೆ ಬಂದಿವೆ[೬] ಆರ್. ಗೋಪಾಲ ಅವರು ಸಂಪಾದಿಸಿದ "ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ಎಂಬ ಕೃತಿಯಲ್ಲಿ ದೇವಾಲಯ, ಶಿಲ್ಪ ಮತ್ತು ಶಾಸನಗಳನ್ನು ಪರಿಚಯಿಸಿದ್ದಾರೆ.[೭] ಬಾಲಸುಬ್ರಮಣ್ಯ, ಸಿ.ಎಸ್. ವಾಸುದೇವನ್ ಹಾಗೂ ರಮೇಶ ನಾಯಕ ಅವರು 'ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ' ಎಂಬ ಕೃತಿಯಲ್ಲಿ ಶಿರಹಟ್ಟಿ ಪರಿಸರದ ಪ್ರಾಚೀನ ದೇವಾಲಯಗಳ ಸಂಕ್ಷಿಪ್ತ ವಾಸ್ತು ಲಕ್ಷಣಗಳನ್ನು ಗಮನಿಸಿದ್ದಾರೆ.[೮]

ಲೇಖನಗಳು

ಬಿ.ಎಸ್. ಪಾಟೀಲ ಸಂಪಾದಕತ್ವದಲ್ಲಿ 'ಕಪೋತಗಿರಿ' ಎಂಬ ಸ್ಮರಣ ಸಂಚಿಕೆಯಲ್ಲಿ ಶಿರಹಟ್ಟಿ ಪರಿಸರದ ಸಂಕ್ಷಿಪ್ತ ಲೇಖನಗಳು ಪ್ರಕಟವಾಗಿವೆ.[೯] ೨೦೦೯ರ ಲಕ್ಕುಂಡಿ ಉತ್ಸವ ಎಂಬ ಸ್ಮರಣ ಸಂಚಿಕೆಯಲ್ಲಿ ಜೆ. ಜಿ. ಹಲಸೂರ ಅವರ "ಶಿರಹಟ್ಟಿ ಒಂದು ಪರಿಚಯ" ಎಂಬ ಲೇಖನ ಪ್ರಕಟವಾಗಿದೆ.[೧೦] ಎಸ್.ಪಿ. ಪಾಟೀಲ ಮತ್ತು ಎಸ್.ಬಿ.ಅಯ್ಯನಗೌಡರ ಅವರ "ಪುಲಗೇರಿಯ ಶಂಖ ಜೀನೋದ್ಧವ ಕಾವ್ಯ"[೧೧], ಕೆ.ಪಿ.ಈರಣ್ಣವರ "ಮಹತ್ಮಾ ಮೌನೇಶ್ವರರು"[೧೨], ಎ.ಜಿ.ದಿಕ್ಷಿತ್ ಅವರ "ಶ್ರೀ ಮೌನೇಶ್ವರರ ವಚನ ಸುಧೆ"[೧೩], ಮಂಜುಳಾ ಪತ್ತಾರ ಮತ್ತು ಪ್ರೇಮಾ ಕಡ್ಲಿಕೊಪ್ಪರವರ "ಜಾನಪದ ಹಾಡಗಳು" ಎಂಬ ಲೇಖನಗಳು ಪ್ರಕಟವಾಗಿವೆ.

ಸಂಶೋಧನ ಪ್ರಬಂಧಗಳು

ಧನ್ವಂತ ಹಾಜವಗೋಳ ರವರ "ಮುಳಗುಂದ ನಾಡು", ರು.ಮ.ಷಡಕ್ಷರಯ್ಯ ರವರ "ಲಕ್ಷ್ಮೇಶ್ವರ ಮತ್ತು ವಿಜಯನಗರ ಅಧ್ಯಯನ"[೧೪],ಕೊತ್ತಲ ಮಹದೇವಪ್ಪನವರ "ಶಿರಹಟ್ಟಿ ತಾಲೂಕಿನ ದರ್ಶನ"[೧೫], ಎಸ್.ಆರ್.ಶಿರಹಟ್ಟಿಯವರ "ಶಿರಹಟ್ಟಿ ಫಕೀರೇಶ್ವರ ಮಠ" ಒಂದು ಅಧ್ಯಯನ[೧೬], ಎಂ.ಎಂ ಪಡಶೆಟ್ಟಿಯವರ "ತಿಂಥಣಿ ಮೌನಪ್ಪಯ್ಯ" ಒಂದು ಅಧ್ಯಯನ ಎಂಬ ಸಂಶೋಧನ ಪ್ರಬಂಧಗಳು ಬೆಳಕಿಗೆ ಬಂದಿವೆ.[೧೭]

ಪತ್ರಿಕೆಗಳು:- ವಿಜಯ ಕರ್ನಾಟಕ ಪತ್ರಿಕೆ ೧೮-೦೫-೨೦೦೦ ದಲ್ಲಿ "ವಿಶಿಷ್ಟ ವ್ಯಕ್ತಿತ್ವದ ಕಾರಣಿಕ ಪುರುಷ ಶ್ರೀ ಜಗದ್ಗುರು ಫಕೀರೇಶ್ವರರು", (ಎಸ್.ವಿವೇಕಾನಂದ ಗೌಡರು, ಶಿರಹಟ್ಟಿ.) ಶ್ರೀ ಜಗದ್ಗುರು ಫಕೀರೇಶ್ವರ ಸಂಸ್ಥಾನ ಮಠದಲ್ಲಿ "ಹಿಂದೂ ಮುಸ್ಲಿಂ ಸಾಮರಸ್ಯದ ಕುರುಹುಗಳು", (ಎಸ್. ಸರ್ವಮಂಗಳ.) ವಿಜಯ ಕರ್ನಾಟಕ ಪತ್ರಿಕೆ, ೧೮-೦೫-೨೦೦೧ ರಲ್ಲಿ ಶ್ರೀ ಜಗದ್ಗುರು ಫಕೀರೇಶ್ವರರು, (ಶಂಕರಗೌಡ ಪಾಟೀಲ.) ಪ್ರಜಾವಾಣಿ ಪತ್ರಿಕೆಯಲ್ಲಿ ಭಾವುಕತೆಯ ಪ್ರತೀಕ ಶಿರಹಟ್ಟಿ ಫಕ್ಕೀರೇಶ್ವರರು ವಿಶಿಷ್ಟ ಸಾಂಪ್ರದಾಯಿಕ ವೇದ ಶಿರಹಟ್ಟಿ ಮಠ. (ಬಂಗೇರಿ)

ಕರ್ನಾಟಕ ಚರಿತ್ರೆಗೆ ಸಂಬಂದಿಸಿದಂತೆ ಸಾಕಷ್ಟು ಕೃತಿಗಳು ರಚನೆಯಾಗಿದ್ದರೂ ಪ್ರಾದೇಶಿಕ ನೆಲೆಯಲ್ಲಿ ಆಗಿರುವ ಕೆಲಸ ತೃಪ್ತಿಕರವಾಗಿಲ್ಲ. ಆದ್ದರಿಂದ ಪುರಾತತ್ವ ಆಕರಗಳಷ್ಟೇ ಮಹತ್ವದ ಮತ್ತು ಐತಿಹಾಸಿಕ ಆಕರಗಳಾಗಿರುವ ಮೌಖಿಕ ಪರಂಪರೆ ಮತ್ತು ಶಾಸನಗಳನ್ನು ಅಧ್ಯಯನದ ಚೌಕಟ್ಟಿನಲ್ಲಿ ಒಳಪಡಿಸುವ ಪ್ರಯತ್ನ ಮಾಡಿದ್ದೇನೆ. ಇವೆಲ್ಲ ಚರಿತ್ರೆಯ ಅಧ್ಯಯನದ ಹೊಸದೃಷ್ಟಿಗೆ ಸಾಕ್ಷಿಯಾಗಿ ಪ್ರಾದೇಶಿಕ ಇತಿಹಾಸ ರಚನೆಯ ಆಯಾಮಗಳನ್ನು ವಿಸ್ತರಿಸಿವೆ. ಈ ನಿಟ್ಟಿನಲ್ಲಿ "ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ" ಎಂಬ ಅಧ್ಯಯನವು ಈ ವರೆಗಿನ ಅಧ್ಯಯನಗಳಲ್ಲಿ ಕಂಡುಬರುವ ಕೊರತೆಯನ್ನು ತುಂಬಿಕೊಡುವ ಪ್ರಯತ್ನವಾಗಿದೆ.

<u>೧.೮ ಅಧ್ಯಯನದ ಸ್ವರೂಪ</u>

ಈ ಮೇಲಿನ ಅಧ್ಯಯನದ ವಿಧಾನದಲ್ಲಿ ಗಮನಿಸಿದಂತೆ ಹಲವು ವಿಧಾನಗಳನ್ನು ಅನುಸರಿಸಿ ಪ್ರತ್ಯೇಕಿಸಲಾದ ವಸ್ತು ವಿಷಯಗಳನ್ನು ವ್ಯವಸ್ಥಿತವಾಗಿ ನಿರೂಪಿಸಿ ಮತ್ತು ವಿಶ್ಲೇಷಣೆಯ ದೃಷ್ಟಿಯಿಂದ ಪ್ರಸ್ತುತ ಸಂಶೋಧನ ಪ್ರಬಂಧವನ್ನು ಒಟ್ಟು ೮ ಅಧ್ಯಾಯಗಳಾಗಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

"ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ" ಎಂಬ ೧ನೆಯ ಅಧ್ಯಾಯದಲ್ಲಿ ಪ್ರಾಸ್ತಾವಿಕ ವಿಚಾರಗಳೊಂದಿಗೆ ಶಾಸನ ಮತ್ತು ದೇವಾಲಯಗಳ ಮಹತ್ವ, ಅಧ್ಯಯನದ ಅವಶ್ಯಕತೆ ಉದ್ದೇಶ, ವ್ಯಾಪ್ತಿ, ವಿಧಾನ, ಪೂರ್ವಾಧ್ಯಯನಗಳ ಸಮೀಕ್ಷೆ ಮತ್ತು ಪ್ರಬಂಧದ ಸ್ವರೂಪವನ್ನು ಸ್ಪಷ್ಟಪಡಿಸಿದ್ದೇನೆ.

"ಭೌಗೋಳಿಕ ಪರಿಸರ" ಎಂಬ ೨ನೆಯ ಅಧ್ಯಾಯ "ಅಧ್ಯಯನದ ಪರಿಸರ"ದಲ್ಲಿ ಶಿರಹಟ್ಟಿಯ ಗ್ರಾಮನಾಮ ನಿಷ್ಪತ್ತಿ ಮತ್ತು ಅದರ ಮೇರೆಗಳು, ವಿಸ್ತೀರ್ಣ, ಜನಸಂಖ್ಯೆ, ಹವಾನಿಯಂತ್ರಣ ಮತ್ತು ಮಳೆ, ಅರಣ್ಯ, ಮಣ್ಣು, ವ್ಯವಸಾಯ, ಬೆಳೆ, ಜಲಸಂಪನ್ಮೂಲ, ಪ್ರಾಣಿಗಳು ಹಾಗೂ ಸಂಪರ್ಕ ವ್ಯವಸ್ಥೆ ಮೊದಲಾದ ಕುರಿತಿದೆ.

"ರಾಜಕೀಯ ಇತಿಹಾಸ" ಎಂಬ ೩ನೆಯ ಅಧ್ಯಾಯದಲ್ಲಿ ಸ್ಥಳೀಯ ಶಾಸನಗಳನ್ನು ಪ್ರಮುಖವಾಗಿಟ್ಟುಕೊಂಡು ಸಂದರ್ಭನುಸಾರವಾಗಿ ಈ ಪರಿಸರದಲ್ಲಿ ಅನೇಕ ಅರಸು ಮನೆತನಗಳು

ಆಳ್ವಿಕೆ ನಡೆಸಿವೆ. ಈ ಅರಸು ಮನೆತನಗಳ ಆಡಳಿತ ಮತ್ತು ರಾಜಕೀಯ ಹಿನ್ನೆಲೆಯ ಜೊತೆಗೆ ಅಂದಿನ ಆಡಳಿತಾಧಿಕಾರಿಗಳ ಹಾಗೂ ಅಂದಿನ ಪ್ರಧಾನ ಮತ್ತು ಉಪಆಡಳಿತ ಪ್ರಾಂತ್ಯಗಳನ್ನು ಕುರಿತು ಮಾಹಿತಿಯನ್ನು ಒಳಗೊಂಡಿದೆ.

"ಪ್ರಾಕ್ಚಾರಿತ್ರಿಕ ನೆಲೆಗಳು" ಎಂಬ ೪ನೆಯ ಅಧ್ಯಾಯದಲ್ಲಿ ಹಳೇಶಿಲಾಯುಗ, ಸೂಕ್ಷ್ಮಶಿಲಾಯುಗ, ಬೃಹತ್‌ಶಿಲಾಯುಗ ಹಾಗೂ ಇತಿಹಾಸ ಆರಂಭ ಕಾಲಕ್ಕೆ ಸಂಬಂಧಿಸಿದ ನೆಲೆಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸಲಾಗಿದೆ.

ದೇವಾಲಯ ಮತ್ತು ವಾಸ್ತು ಶಿಲ್ಪಗಳು ಎಂಬ ೫ ನೆಯ ಅಧ್ಯಾಯದಲ್ಲಿ ಅಧ್ಯಯನದ ಹಿನ್ನಲೆಯಾಗಿ ಕನ್ನಡ ನಾಡಿನ ದೇವಾಲಯಗಳ ನಿರ್ಮಾಣದ ಪ್ರಾರಂಭ ಮತ್ತು ವಿವಿಧ ವಾಸ್ತು ಶೈಲಿಯ ದೇವಾಲಯ ತಿಳುವಳಿಕೆಯ ಪರಿಚಯದೊಂದಿಗೆ ಶಿರಹಟ್ಟಿ ಪರಿಸರದಲ್ಲಿರುವ ಶೈವ, ವೈಷ್ಣವ, ಜೈನ ದೇವಾಲಯಗಳ ಕಾಲಮಾನ, ನಿರ್ಮಾತೃ ಮತ್ತು ಅವುಗಳ ವಾಸ್ತು ಲಕ್ಷಣಗಳನ್ನು ಚರ್ಚಿಸಲಾಗಿದೆ. ಅಷ್ಟೇ ಅಲ್ಲದೆ ಶಿಲ್ಪಗಳ ನಿರ್ಮಾಣದ ಪ್ರಾರಂಭ ಮತ್ತು ಬೆಳವಣಿಗೆಯ ಪರಿಚಯದೊಂದಿಗೆ ಶಿರಹಟ್ಟಿ ಪರಿಸರದ ಶಿಲ್ಪಗಳ ಕಾಲಮಾನ ಹಾಗೂ ಪ್ರತಿಮಾ ಲಕ್ಷಣಗಳನ್ನು ಗುರುತಿಸಿದೆ.

ಶಾಸನಗಳೆಂಬ ೬ನೆಯ ಅಧ್ಯಾಯದಲ್ಲಿ ಶಿರಹಟ್ಟಿ ಹೋಬಳಿಯ ಕೆಲವು ಗ್ರಾಮಗಳಲ್ಲಿ ಲಭ್ಯವಿರುವ ಶಾಸನಗಳನ್ನು ಒಂದಡೆಗೆ ಕಲೆಹಾಕಲಾಗಿದೆ. ಇವುಗಳ ಹಿನ್ನೆಲೆಯಲ್ಲಿ ರಾಜಕೀಯ, ಆಡಳಿತ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮಹತ್ವವನ್ನು ಚರ್ಚಿಸಲಾಗಿದೆ.

"ಸಾಂಸ್ಕೃತಿಕ ಚಿತ್ರಣ" ಎಂಬ ೭ ನೆಯ ಅಧ್ಯಾಯದಲ್ಲಿ ಶಿರಹಟ್ಟಿ ಪರಿಸರದಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳಾದ ಜಾತ್ರೆ, ಉತ್ಸವ, ಅಚಾರ ವಿಚಾರ, ನಂಬಿಕೆ, ನಾಟಕ ಕಲಾವಿದರು ಮತ್ತು ಸಾಹಿತ್ಯವನ್ನು ಗುರುತಿಸಿ ವಿಶ್ಲೇಷಣೆ ಮಾಡಿದ್ದೇವೆ.

ಸಮಾರೋಪವೆಂಬ ೮ನೆಯ ಅಧ್ಯಾಯವು ಇಡೀ ಅಧ್ಯಯನದ ಸಂಕ್ಷಿಪ್ತ ರೂಪವಾಗಿದೆ.

ಈ ಪ್ರಬಂಧದ ಕೊನೆಯಲ್ಲಿ ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ನೆರವಾದ ಕನ್ನಡ ಮತ್ತು ಇಂಗ್ಲಿಷ ಕೃತಿಗಳು, ಲೇಖನಗಳು, ಪತ್ರಿಕೆಗಳ ಪಟ್ಟಿಯನ್ನು ನೀಡಲಾಗಿದ್ದು. ಕೊನೆಯಲ್ಲಿ ದೇವಾಲಯ ಮತ್ತು ಶಿಲ್ಪಗಳ ಮಹತ್ವದ ಛಾಯಾಚಿತ್ರಗಳನ್ನು ಲಗತ್ತಿಸಿದೆ.

ಟಿಪ್ಪಣಿಗಳು

೧. ಧಾರವಾಡ, ಬೆಳಗಾವಿ, ಬಿಜಾಪೂರ, ಕಾನಂಡಾ ಜಿಲ್ಲೆಗಳ ಗೆಜಿಟಿಯರ್

೨. ಧಾರವಾಡ ಜಿಲ್ಲೆಯ ಗೆಜಿಟಿಯರ್, ಪು. ೨೧೦

೩. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು. ಶಾಸನ ಸಂಖ್ಯೆ ೮, ೬೯, ೨೦೫, ೯೪, ೪೬. ಪು. ೧೬೭.

೪. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ದೆಹಲಿ. ಪು. ೩೫೦-೩೫೬.

೫. ಧಾರವಾಡ ಜಿಲ್ಲೆಯ ಶಾಸನ ಸೂಚಿ ಪು. ೩೬-೩೯.

೬. "ಕರ್ನಾಟಕ ಪುರಾತತ್ವ ನೆಲೆಗಳು" ಪು. ೧೫೩-೧೬೧.

೭. "ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ಪು. ೮೮, ೯೪, ೧೯೫.

೮. 'ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ' ಪು. ೨೪೭-೨೯೦.

೯. "ಕಪೋತಗಿರಿ" ಪು. ೯೦-೯೩

೧೦.೨೦೦೯ ರ ಲಕ್ಕುಂಡಿ ಉತ್ಸವ ಪು. ೮೫-೮೭

ಅಧ್ಯಾಯ : ೨

ಭೌಗೋಳಿಕ ಪರಿಸರ

೨.೧ ಶಿರಹಟ್ಟಿ ಗ್ರಾಮನಾಮ ನಿಷ್ಪತ್ತಿ
೨.೨ ಭೌಗೋಳಿಕ ಸ್ಥಾನ ಮತ್ತು ಹಿನ್ನೆಲೆ.
೨.೩ ಮೇರೆಗಳು
೨.೪ ವ್ಯವಸಾಯ ಮತ್ತು ನೀರಾವರಿ
೨.೫ ಕೈಗಾರಿಕೆಗಳು ಮತ್ತು ಖನಿಜ ಸಂಪತ್ತು
೨.೬ ಜಲಸಂಪತ್ತು
೨.೭ ಹವಾಗುಣ ಮತ್ತು ಮಳೆ.

ಅಧ್ಯಾಯ – ೨

ಭೌಗೋಳಿಕ ಪರಿಸರ.

೨.೧ ಪೀಠಿಕೆ

ಪ್ರತಿಯೊಂದು ಪ್ರದೇಶದ ಜನಜೀವನ ಮತ್ತು ಇತಿಹಾಸ ಅಲ್ಲಿನ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪತ್ತಿನ ಹಿನ್ನೆಲೆಯಿಂದ ಪ್ರಭಾವಿತವಾಗಿರುತ್ತದೆ. ಮಾನವನು ಸ್ವಾಭಾವಿಕವಾಗಿ ನೈಸರ್ಗಿಕ ಸಂಪನ್ಮೂಲಗಳನ್ನೇ ಅವಲಂಬಿಸಿರುತ್ತಿದ್ದನು. ನೆಲದಗುಣ, ಖನಿಜ ಸಂಪತ್ತು, ನದಿ, ಪರ್ವತ, ಮರಳುಗಾಡು, ತೀರಪ್ರದೇಶ ಮೊದಲಾದ ಸಂಪನ್ಮೂಲಗಳು ಅಲ್ಲಿನ ನಿವಾಸಿಗಳ ಕಸುಬು, ಉಡಿಗೆ ತೊಡುಗೆ, ಧಾರ್ಮಿಕ, ಸ್ವಾಭಾವಿಕ ಆಚಾರ, ವಿಚಾರಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಹೀಗಾಗಿ ಭೌಗೋಳಿಕ ಸನ್ನಿವೇಶಗಳು ಐತಿಹಾಸಿಕದೊಂದಿಗೆ ಬಾಹ್ಯ ನಿಕಟವಾದ ಸಂಬಂಧ ಹೊಂದಿರುವುದು ಸ್ಪಷ್ಟವಾಗುತ್ತದೆ. ಆ ದೃಷ್ಟಿಯಿಂದ ಪ್ರಸ್ತುತ ಶಿರಹಟ್ಟಿ ಪರಿಸರದ ಭೌಗೋಳಿಕ ಪರಿಸರವನ್ನು ಸಂಕ್ಷಿಪ್ತವಾಗಿ ವಿವರಿಸಿದೆ.[೧]

೨.೨ ಶಿರಹಟ್ಟಿ ಗ್ರಾಮನಾಮ ನಿಷ್ಪತ್ತಿ

ಶಾಸನಗಳ ಅಧ್ಯಯನದಂತೆ ಇಂದು ಸ್ಥಳನಾಮಗಳ ಅಧ್ಯಯನವೂ ಅಷ್ಟೆ ಮಹತ್ವದ ವಿಷಯವಾಗಿದೆ. ಈ ಆಶಯದ ಹಿನ್ನಲೆಯಲ್ಲಿ ಗ್ರಾಮನಾಮ ಅಧ್ಯಯನ ನಡೆಸುವುದು ಅಗತ್ಯ. "ಹೆಸರು" ಎಂಬ "ನಾಮ" ಪದವು ರೂಢನಾಮ-ಅಂಕಿತನಾಮ-ಅನ್ವರ್ಥಕನಾಮ ಮೊದಲಾದ ವಿವಿಧ ಮುಖಗಳಿಂದ ಪರಿಚಿತವಾಗಿರುವ ವ್ಯಾಕರಣ ಪ್ರಕ್ರೀಯೆ, ಯಾವುದೇ ವ್ಯಕ್ತಿ ವಸ್ತು ಸಂಗತಿಯನ್ನು ಪ್ರತ್ಯೇಕವಾಗಿ ಸೂಚಿಸಿ, ಸಂಭೋದಿಸಿ ಕರೆಯುವಲ್ಲಿ ಸೌಜ್ಞಾವಾಚಿಗಳಾಗಿ, ದೆ.ಜ.ಗೌ. ಅವರ ಸ್ಥಳನಾಮ ವ್ಯಾಸಾಂಗದಲ್ಲಿ ಸೂಚಿಸಿರುವಂತೆ ವ್ಯಕ್ತಿನಾಮ-ಜಾತಿನಾಮ-ಸ್ಥಳನಾಮ-ಸಂಸ್ಥಾನಾಮ-ಶಿರೋನಾಮ-ವಾಣಿಜ್ಯನಾಮ-ಪ್ರಾಕೃತಿಕನಾಮ-ವಸ್ತುನಾಮ-ಐತಿಹಾಸಿಕನಾಮ-ಸಂಕೀರ್ಣನಾಮ ಹೀಗೆ ಅವುಗಳ ಪಟ್ಟಿ ಬೆಳೆಯುತ್ತಾ ಹೋಗುವದು ಅದರ ವ್ಯಾಪಕತೆಯನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಗ್ರಾಮಗಳಿಗೆ ನಾಮಕರಣ ಮಾಡುವ ಪೂರ್ವದಲ್ಲಿ ಅವುಗಳಿಗೆ ಹಟ್ಟಿಯೆಂದೊ, ಬೀಡೆಂದೋ, ಕರೆಯುತ್ತಿದ್ದರೆಂದು ಹೇಳುವ ದೇ.ಜ.ಗೌ. ಅವರ ಮಾತಿನಂತೆ "ಶಿರಹಟ್ಟಿ"ಗೂ ಕೂಡ ಪ್ರಾರಂಭದಲ್ಲಿ "ಹಟ್ಟಿ" ಎಂದು ಕರೆದಿರಬೇಕು. ಕಾಲಾಂತರದಲ್ಲಿ ಮತ್ತೆ ಕೆಲವು ಜನವಸತಿ ನೆಲೆಗಳು ಅದರ ಸುತ್ತಮುತ್ತ ಬೆಳದುದರಿಂದ ಅವುಗಳನ್ನು ಗುರುತಿಸಲು ಪ್ರತ್ಯೇಕವಾದ ನಾಮಕರಣ ಅವಶ್ಯವಾಗಿ "ಶಿರಹಪುರ" ಎಂಬ ಹೆಸರು ಬಂದಿರುವ ಸಾಧ್ಯತೆಯಿದೆ. ಏಕೆಂದರೆ ಇದರ ಅಕ್ಕ ಪಕ್ಕದ ಊರುಗಳು ಇಂದು ಹರಿಪುರ, ಖಾನಾಪುರ, ಪರಸಾಪುರ, ಹೊಳಲಾಪುರ ಎಂಬ

ಹೆಸರನ್ನು ಪಡೆದುಕೊಂಡಿವೆ. ನಂತರದಲ್ಲಿ ಶಿರಹಪುರವು ಸಿರಿಹಟ್ಟಿ-ಸಿರಹಟ್ಟಿ-ಶಿರಹಟ್ಟಿ ಎಂಬ ಹೆಸರನ್ನು ಪಡೆದುಕೊಂಡಿರಬಹುದು. "ಶಿರಹಟ್ಟಿ" ಎಂದು ಕರೆಯುವ ಈ ಊರಿನ ಪೂರ್ವದ ಹೆಸರು ಇಲ್ಲಿರುವ ಶಾಸನಗಳಲ್ಲಿ ಉಲ್ಲೇಖವಾಗಿಲ್ಲ, ಈ ಊರಿನ ಪ್ರಾಚೀನ ಹೆಸರು 'ಹಟ್ಟಿ' ಎಂಬುದು ಇಲ್ಲಿನ ಜನರ ಅಭಿಪ್ರಾಯ, ಪ್ರಾರಂಭದ ಹಂತದಲ್ಲಿ ಈ ರೀತಿ ಕರೆದಿರುವ ಸಾಧ್ಯತೆಯಿದೆ. ಈ 'ಹಟ್ಟಿ'ಯ ಅಕ್ಕಪಕ್ಕದಲ್ಲಿ ಮತ್ತೆ ಕೆಲವು ಜನವಸತಿ ಗುಂಪು ಹುಟ್ಟಿಕೊಂಡು ಅವು ಲಿಂಗಲಾಪುರ ಮತ್ತು 'ಮ್ಯಾಗೇರಿ' ಎಂಬ ಹೆಸರನ್ನು ಪಡೆದುಕೊಂಡವು. ಇವೆರಡರ ಮಧ್ಯದಲ್ಲಿರುವ 'ಹಟ್ಟಿ'ಗೂ ನಾಮಕರಣ ಅವಶ್ಯಕವೆನಿಸಿತು. ಆಗ ಅದು 'ಶಿರಹಪುರ' ಎಂಬ ಹೆಸರನ್ನು ಪಡೆದುಕೊಂಡಿತು. ನಂತರ ಶಿರಹಪುರವು ಬೆಳೆದಂತೆ ಲಿಂಗಲಾಪುರ ಮತ್ತು ಮ್ಯಾಗೇರಿಗಳು ಅದರಲ್ಲಿ ಸೇರಿಕೊಂಡವು ನಂತರ ಇದು ಶಿರಹಟ್ಟಿಯ ಎರಡು ಓಣಿಗಳಾಗಿವೆ.[೨] ಡಾ. ಸೂರ್ಯನಾಥ ಕಾಮತ್‌ರವರು, 'ಧಾರವಾಡ ಜಿಲ್ಲೆಯ ಗೆಜೆಟಿಯರ್'ದಲ್ಲಿ ಶಿರಹಟ್ಟಿಯ ಪ್ರಾಚೀನ ಹೆಸರು 'ಶಿರಹಪುರ' ಎಂದು ಉಲ್ಲೇಖಿಸಿದ್ದಾರೆ[೩]. ಗಂಗಾಧರ ಜಾದೇವ ಅವರು ಬರೆದ "ಶ್ರೀ ಫಕ್ಕೀರೇಶ್ವರ ಪುರಾಣದಲ್ಲಿಯೂ" 'ಶಿರಹಪುರ'ದ ಉಲ್ಲೆಖವು ಕಂಡು ಬಂದಿದೆ.[೪]

ಕ್ರಿ.ಶ. ೧೭೦೦ ರಲ್ಲಿ ಕದಡಿಯ ದೇವಯಾಣಗೌಡರು ಲಕ್ಷ್ಮೇಶ್ವರ ದೇಸಾಯಿಯವರ ಐದನೆಯ ಕೆಂಚನಗೌಡರಿಗೆ ಬರೆದುಕೊಟ್ಟ ಕ್ರಯ ಪತ್ರದಲ್ಲಿ ಶಿರಹಟ್ಟಿಯ ಉಲ್ಲೇಖ ಕಂಡುಬರುತ್ತದೆ.[೫] ಹೆಳವನ ಹೊತ್ತಿಗೆಯಲ್ಲಿಯೂ 'ಶಿರಹಟ್ಟಿ'ಯ ಉಲ್ಲೇಖವನ್ನು, ಕಾಣಬಹುದು. ಇದರಂತೆ ಇದು ಸಿರಿಯನಹಟ್ಟಿ-ಸಿರಹಟ್ಟಿ - ಶಿರಹಟ್ಟಿ ಎಂಬಂತೆ ಇದೊಂದು ವ್ಯಕ್ತಿನಾಮವೇ ಆಗಿರಬಹುದು.[೬] ಎಂಬ ಅಭಿಪ್ರಾಯವೇ ಸಮಂಜಸವಾಗಿದೆ.

೨.೩ ಭೌಗೋಳಿಕ ಸ್ಥಾನ ಮತ್ತು ಹಿನ್ನೆಲೆ ವಿಸ್ತೀರ್ಣ ಜನಸಂಖ್ಯೆ ಕ್ರಿ.ಶ ೧೯೯೭ ರವರೆಗೆ ಶಿರಹಟ್ಟಿಯು ಧಾರವಾಡ ಜಿಲ್ಲೆಯಲ್ಲಿದ್ದು ೧೯೯೭ ರಲ್ಲಿ ಗದಗ ಜಿಲ್ಲೆಗೆ ಸೇರಿಸಲಾಯಿತು, ತಾಲೂಕಾ ಕೇಂದ್ರವಾದ ಶಿರಹಟ್ಟಿಯ ಉತ್ತರ-ದಕ್ಷಿಣ ೧೫°.೧೫' ಅಕ್ಷಾಂಶ ಮತ್ತು ಪೂರ್ವ-ಪಶ್ಚಿಮ ೭೫°.೩೫' ರೇಖಾಂಶದ ವರೆಗೆ ವಿಸ್ತರಿಸಿದೆ. ಇದು ಸಮುದ್ರ ಮಟ್ಟದಿಂದ ೨೨೦೦ ಅಡಿ ಎತ್ತರದಲ್ಲಿದೆ. ಧಾರವಾಡದಿಂದ ಆಗ್ನೇಯಕ್ಕೆ ಸುಮಾರು ೯೦ ಕಿ.ಮೀ. ಅಂತರದಲ್ಲಿ ಶಿರಹಟ್ಟಿ ಇದೆ.

೨.೪ ಮೇರೆಗಳು: ಶಿರಹಟ್ಟಿಯ ಉತ್ತರ ದಿಕ್ಕಿಗೆ ಗದಗ ತಾಲೂಕು, ದಕ್ಷಿಣ ದಿಕ್ಕಿಗೆ ಸವಣೂರು ತಾಲೂಕು, ವಾಯವ್ಯದಲ್ಲಿ ಹುಬ್ಬಳ್ಳಿ ತಾಲೂಕು, ಆಗ್ನೇಯದಲ್ಲಿ ಹೂವಿನ ಹಡಗಲಿ ತಾಲೂಕುಗಳು ಸುತ್ತು ವರೆದಿವೆ. ಶಿರಹಟ್ಟಿ ತಾಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣತೆ ೯೪೯.೨ ಚ.ಕಿಮಿ ಆಗಿರುತ್ತದೆ. ಈ ತಾಲೂಕಿನಲ್ಲಿ ೯೩ ಹಳ್ಳಿಗಳಿದ್ದು, ಅವುಗಳಲ್ಲಿ ೭೯ ಹಳ್ಳಿಗಳು ಜನವಸತಿ ಪ್ರದೇಶಗಳಾಗಿದ್ದು, ಇನ್ನುಳಿದವುಗಳು ಜನವಸತಿ ಇಲ್ಲದ ಹಳ್ಳಿಗಳಾಗಿದ್ದವು. ಈ ತಾಲೂಕಿನಲ್ಲಿ ಎರಡು ಹೋಬಳಿಗಳಿವೆ ೧) ಶಿರಹಟ್ಟಿ ಹೋಬಳಿ ೨) ಲಕ್ಷ್ಮೇಶ್ವರ ಹೋಬಳಿ. ೨೦೦೧ ರ ಜನಗಣತಿಯ ಪ್ರಕಾರ ಶಿರಹಟ್ಟಿ

ತಾಲೂಕಿನ ಒಟ್ಟು ಜನಸಂಖ್ಯೆ ೧,೮೩,೧೯೧ ಎಂದು ಸಮೀಕ್ಷೆ ಮಾಡಲಾಗಿದೆ ಶಿರಹಟ್ಟಿ ತಾಲೂಕಿನ ಜನಸಂಖ್ಯಾ ಪ್ರಮಾಣ ಪ್ರತಿ ಚ. ಕಿ,.ಮಿ.ಗೆ ೧೩೮ ಆಗಿರುತ್ತದೆ. ಈ ತಾಲೂಕಿನಲ್ಲಿ ಹಿಂದೂ, ಮುಸ್ಲಿಂ, ಜೈನ, ಕ್ರೈಸ್ತ ಮರಾಠ, ಹೀಗೆ ಹಲವಾರು ಜಾತಿಗೆ ಸೇರಿದ ಜನರು ವಾಸಿಸುತ್ತಿದ್ದಾರೆ. ಇದು ಸಮುದ್ರ ಮಟ್ಟದಿಂದ ಎತ್ತರದಲ್ಲಿರುವರಿಂದ ಇಲ್ಲಿಯ ಹವಾಗುಣ ಹಿತಕರವಾಗಿದೆ. ಇಲ್ಲಿ ಮಾವು, ಬೇವು, ಆಲ, ಬನ್ನಿ, ಹುಣಸೆ, ಜಾಲಿ, ಹೀಗೆ ಹಲವಾರು ಜಾತಿಯ ಮರಗಳು ಅಧಿಕ ಸಂಖ್ಯೆಯಲ್ಲಿ ಬೆಳೆಯುತ್ತವೆ. ಇಲ್ಲಿ ಒಟ್ಟು ನಾಲ್ಕು ಮಳೆಮಾಪನ ಕೇಂದ್ರಗಳಿದ್ದು ಇವುಗಳ ಪ್ರಕಾರ ಮಳೆ ಪ್ರಮಾಣ ೯೪೮.೯ ಮಿ.ಮಿ. ಎಂದು ಕಂಡು ಬಂದಿದೆ. ಆದರೆ ವಾಸ್ತವಿಕ ಮಳೆ ಪ್ರಮಾಣ ೩೦೮.೪. ಮಿ.ಮಿ. ಗಳಷ್ಟಾಗಿದೆ. ಸರಾಸರಿ ಉಷ್ಣಾಂಶ ಪ್ರಮಾಣ ಗರಿಷ್ಠ ೩೭°.೩ ಸೆಲ್ಸಿಯಸ್ ಕನಿಷ್ಟ ೨೨°.೫ ಸೆಲ್ಸಿಯಸ್.

೨.೫ ವ್ಯವಸಾಯ ಮತ್ತು ನೀರಾವರಿ

ಶಿರಹಟ್ಟಿ ತಾಲೂಕಿನ ಒಟ್ಟು ೯೪೯೧೩ ಹೆಕ್ಟೇರ ಭೂಮಿ ವ್ಯವಸಾಯಕ್ಕೆ ಸೂಕ್ತವಾಗಿದೆ, ಹಾಗೂ ಶೇಕಡಾ ೭೦ ಮಂದಿ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಇಲ್ಲಿಯ ಭೂಮಿಯು ಕೆಂಪು, ಕಪ್ಪು, ಮರಳು ಮಿಶ್ರಿತ ಜವುಗು, ತಗ್ಗು ದಿನ್ನೆಗಳಿಂದ ಕೂಡಿದೆ. ತಾಲೂಕಿನ ಹೆಚ್ಚಿನ ಜನರು ಮಳೆಯನ್ನೆ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಪಶ್ಚಿಮ ಕರಾವಳಿಯಿಂದ ಬೀಸುವ ಮುಂಗಾರು ಮಾರುತಗಳು ಇಲ್ಲಿಯ ವ್ಯವಸಾಯಕ್ಕೆ ಹೆಚ್ಚು ಅನುಕೂಲಕರವಾಗಿವೆ. ಇಲ್ಲಿಯ ಜಮೀನನ್ನು ಎರಡು ವಿಧಗಳಾಗಿ ವಿಂಗಡಿಸಿದ್ದು, ಒಣಬೆಳೆ ಬೆಳೆಯುವ ಜಮೀನನ್ನು ಜಿರಾಯುತ ಜಮೀನು ಮತ್ತು ನೀರಾವರಿ ಬೆಳೆ ಬೆಳೆಯವ ಜಮೀನನ್ನು ಬಗಾಯಿತು ಜಮೀನುಗಳೆಂದು ಕರೆಯುತ್ತಾರೆ. ಈ ಪರಿಸರದಲ್ಲಿ ಪ್ರಾಚೀನ ಕಾಲದಲ್ಲಿನ ಕಟ್ಟಡ, ಕೆರೆ ಮತ್ತು ಜಲಾಶಯಗಳು ಇಂದಿಗೂ ಉಪಯುಕ್ತವಾಗಿವೆ. ಶಿರಹಟ್ಟಿ ಪರಿಸರದಲ್ಲಿನ ಮಜ್ಜೂರ, ಬಾಲೆಹೊಸುರು, ಮಾಗಡಿ, ದೇವಿಹಾಳ, ಈ ಗ್ರಾಮೀಣ ಕೆರೆಗಳಿಂದ ಸಣ್ಣ ಪ್ರಮಾಣದ ನೀರಾವರಿ ಸೌಲಭ್ಯವನ್ನು ರೈತರು ಪಡೆದುಕೊಂಡಿದ್ದಾರೆ. ಈ ಭಾಗದಲ್ಲಿ ಭೂಮಿಯ ಗುಣಧರ್ಮಕ್ಕನುಗುಣವಾಗಿ ಜೋಳ, ಗೋದಿ, ಶೇಂಗಾ, ಹತ್ತಿ, ಮೆಣಸಿನಕಾಯಿ, ಕಡಲೆ, ಎಳ್ಳು, ಸೂರ್ಯಕಾಂತಿ, ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕಪ್ಪು ಮಣ್ಣಿನ ಎರೆ ಜಮೀನಿನಲ್ಲಿ ಎರಡು ಬೆಳೆಗಳನ್ನು ಬೆಳೆದರೆ, ಕೆಂಪು ಮಸಾರಿ ಮಣ್ಣಿನಲ್ಲಿ ಒಂದು ಬೆಳೆಯನ್ನು ಬೆಳೆಯುತ್ತಾರೆ.[೬]

೨.೬ ಕೈಗಾರಿಕೆ ಮತ್ತು ಖನಿಜ ಸಂಪತ್ತು

ಶಿರಹಟ್ಟಿಯಲ್ಲಿ ಯಾವುದೇ ಗುಡ್ಡಗಳಿರದಿದ್ದರೂ ತಾಲೂಕಿನ ಗೊಜನೂರು, ಅಕ್ಕಿಗುಂದ, ಛಬ್ಬಿ, ಶ್ರೀಮಂತಗಡ, ಪರಸಾಪುರ, ಈ ಊರುಗಳಲ್ಲಿ ಸಣ್ಣ ಗುಡ್ಡಗಳಿವೆ ಶಿರಹಟ್ಟಿಯ ಪೂರ್ವಕ್ಕೆ ಸುಮಾರು ೧೦ ಕಿ.ಮಿ ದೂರದಲ್ಲಿ ಕಪ್ಪತಗುಡ್ಡವಿದೆ. ಗದಗದ ಆಗ್ನೇಯದಿಂದ ಪ್ರಾರಂಭವಾದ ಈ ಗುಡ್ಡ ದಕ್ಷಿಣೋತ್ತರವಾಗಿ ಸುಮಾರು ೪೮ ಕಿ.ಮಿ ಉದ್ದವಾಗಿ ಹಬ್ಬಿದೆ. ಇದು

ತುದಿಗಳಲ್ಲಿ ಸುಮಾರು ೬ ಕಿ..ಮಿ. ಅಗಲವಾಗಿದೆ. ಸುತ್ತಲಿನ ಪ್ರದೇಶಕ್ಕಿಂತ ಸರಾಸರಿಯಾಗಿ ಸುಮಾರು ೧೨೨ ಕಿ.ಮಿ ಮತ್ತು ಮಧ್ಯದಲ್ಲಿ ಇದರ ಅತ್ಯನ್ನತ ಶಿಖರವು ಸಮುದ್ರಮಟ್ಟದಿಂದ ೬೩೭ ಮೀ ಎತ್ತರವಾಗಿದೆ. ಈ ಗುಡ್ಡದಲ್ಲಿ ಮ್ಯಾಂಗನೀಸ್, ಕಬ್ಬಿಣದ ಅದಿರು ಮತ್ತು ಬಂಗಾರದ ನಿಕ್ಷೇಪ ಇರುವ ದಾಖಲೆಗಳಿವೆ. ಇಲ್ಲಿಯ ಸಸ್ಯವರ್ಗವೆಲ್ಲವೂ ಕುರುಚಲು ಮಾದರಿಯಾಗಿದ್ದು ಚಿಕ್ಕ ಗಿಡಗಂಟೆಗಳಿಂದ ಕೂಡಿದೆ. ಮಳೆಗಾಲದ ಅವಧಿಯಲ್ಲಿ ಹುಲ್ಲು ಬೆಳೆಯುತ್ತಿದ್ದು ಪಶು ಪಾಲನೆಗೆ ಸಾಕಷ್ಟು ಅನುಕೂಲವಾಗಿದೆ. ಚಿಗರೆ, ಮೊಲ, ತೋಳ, ನರಿ, ಕಿರುಬ, ಕಾಡುಹಂದಿ, ಚಿರತೆ, ನವಿಲು ಮುಂತಾದ ವನ್ಯ ಪ್ರಾಣಿ ಪಕ್ಷಿಗಳು ಇಲ್ಲಿವೆ. ಈ ಗುಡ್ಡದಲ್ಲಿ ಮಲ್ಲಯ್ಯನ ದೇವಸ್ಥಾನವಿದ್ದು ಪ್ರತಿ ಶ್ರಾವಣ ಮಾಸದಲ್ಲಿ ಜಾತ್ರೆಯು ನಡೆಯುವದು. "ಎಪ್ಪತ್ತು ಗುಡ್ಡ ನೋಡುವುದಕ್ಕಿಂತ ಕಪ್ಪತ್ತಗುಡ್ಡವನ್ನು ನೋಡಬೇಕು." ಎಂದು ಹೇಳುವ ಜನರಮಾತು ಅದರ ವೈಶಾಲ್ಯತೆಯ ಸೊಬಗನ್ನು ವ್ಯಕ್ತಪಡಿಸುತ್ತದೆ. ಇತ್ತೀಚಿಗೆ ಇಲ್ಲೊಂದು ಪವನ ಶಕ್ತಿ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ.

ಈ ಪರಿಸರದಲ್ಲಿ ಗ್ರಾಮೀಣ ಸಂಪನ್ಮೂಲ ಬಳಸಿಕೊಂಡು ಅಸ್ತಿತ್ವಕ್ಕೆ ಬಂದ ಕೈಗಾರಿಕೆಗಳನ್ನು ಹೆಚ್ಚು ಅಂದರೆ ಕೈಮಗ್ಗ, ಕಂಬಳ ನೆಯುವುದು, ಬೀಡಿ ಕಟ್ಟುವುದು, ಬಿದಿರು ವಸ್ತುಗಳನ್ನು ತಯಾರಿಸುವುದು, ಚುರುಮರಿ, (ಮಂಡಕ್ಕಿ) ಅವಲಕ್ಕಿ ಮತ್ತು ರೇಷ್ಮೇ ಸಾಕಾಣಿಕೆ, ಇಟ್ಟಿಗೆಗಳ ತಯಾರಿಕೆ, ಚರ್ಮದ ಹದಮಾಡುವುದು ಇಂತಹ ಉದ್ಯಮಗಳಲ್ಲಿ ಸಾವಿರಾರು ಜನ ನಿರತರಾಗಿದ್ದಾರೆ. ಆದರೆ ಮುಖ್ಯವಾಗಿ ಲಕ್ಷ್ಮೇಶ್ವರದಲ್ಲಿ ನೂಲಿನ ಗಿರಣಿ ಮತ್ತು ಹತ್ತಿ (ಹಿಂಜುವ) ಕಾರಖಾನೆಗಳಿವೆ.

೨.೭ ಜಲ ಸಂಪತ್ತು

೧) **ತುಂಗಭದ್ರಾ:-** ರಾಜ್ಯದ ಪಶ್ಚಿಮ ಘಟ್ಟಗಳಲ್ಲಿ ಹಬ್ಬಿ ಈಶಾನ್ಯ ಮುಖವಾಗಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳು ಕೂಡಲಿಯಿಂದ ಪ್ರಾರಂಭವಾಗುವ ತುಂಗಭದ್ರಾ ನದಿಯು ಶಿವಮೊಗ್ಗ ಜಿಲ್ಲೆಯನ್ನು ಬಿಡುವವರೆಗೂ ಉತ್ತರಗಾಮಿನಿಯಾಗಿದೆ. ಕರ್ನಾಟಕ ರಾಜ್ಯವನ್ನು ದಾಟುವ ವರೆಗೂ ಎಡಭಾಗದಲ್ಲಿ ಧಾರವಾಡ ಮತ್ತು ರಾಯಚೂರು ಜಿಲ್ಲೆಗಳು ಬಲಭಾಗದಲ್ಲಿ ಚಿತ್ರದುರ್ಗ ಜಿಲ್ಲೆಗಳು ಮತ್ತು ಸ್ವಲ್ಪದೂರ ಆಂಧ್ರಪ್ರದೇಶ ಇವುಗಳ ನಡುವೆ ಗಡಿರೇಖೆಯಾಗಿ ಈ ನದಿ ಹರಿಯುತ್ತದೆ. ಶಿವಮೊಗ್ಗ ಜಿಲ್ಲೆಯನ್ನು ಬಿಟ್ಟು ಈ ನದಿಯು ಶಂಕರನಹಳ್ಳಿಯ ಬಳಿ ಧಾರವಾಡ ಜಿಲ್ಲೆಯ ಸಂಪರ್ಕ ಪಡೆದು ಸ್ವಲ್ಪ ದೂರ ಈಶ್ಯಾನಕ್ಕೆ ಸಾಗಿ ಅಲ್ಲಿಂದ ಬಹುತೇಕ ಜಿಲ್ಲೆಯ ಪೂರ್ವ ಗಡಿಯಾಗಿ ಹರಿದು ಇದು ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಬೇರ್ಪಡಿಸಿರುವುದು. ಮೊದಲು ಶಂಕರನಹಳ್ಳಿಯ ಉತ್ತರಕ್ಕೆ ಹಾವಿನಂತೆ ಸುತ್ತಿ ಹರಿದು ಹಾವೇರಿ ತಾಲೂಕಿನ ಪೂರ್ವದಲ್ಲಿ ಸ್ವಲ್ಪದೂರ ಮಾತ್ರ ಜಿಲ್ಲೆಯ ಒಳಗೆ ಪ್ರವೇಶಿಸಿ ಹಾವನೂರು ಮುಖಾಂತರ ಉತ್ತರಕ್ಕೆ ಹರಿಯುವುದು. ಮುಂದೆ ಶಿರಹಟ್ಟಿ ತಾಲೂಕಿನ ಎಲ್ಲೆಯಾಗಿ ಅದರ

ಆಗ್ನೇಯ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಸ್ವಲ್ಪದೂರ ಮಾತ್ರ ಹರಿದು ಅನಂತರ ಮುಂಡರಗಿ ತಾಲೂಕಿನ ದಕ್ಷಿಣದಲ್ಲಿ ಈಶಾನ್ಯ ಮುಖವಾಗಿ ಸಾಗಿ ಹೆಸರೂರಿನ ದಕ್ಷಿಣದಲ್ಲಿ ಪೂರ್ವಾಭಿಮುಖವಾಗಿ ಬಳ್ಳಾರಿಯನ್ನು ಪ್ರವೇಶಿಸುತ್ತದೆ. ತುಂಗಭದ್ರಾ ನದಿಯನ್ನು ಮುಂಡರಗಿ ತಾಲೂಕಿನ ಹಿರೇಹಳ್ಳವೂ ಮತ್ತು ಕಪ್ಪತ್ತಗುಡ್ಡದ ನೈರುತ್ಯದ ಅಂಚಿನಲ್ಲಿರುವ ಶಿರಹಟ್ಟಿಯ ಹಳ್ಳದಲ್ಲಿ ಕೂಡಿಕೊಳ್ಳುತ್ತವೆ. ಅಲ್ಲಿಂದ ಮುಂದೆ ಆಂಧ್ರಪ್ರದೇಶದ ಕರ್ನೂಲ ಜಿಲ್ಲೆಯಲ್ಲಿ ಸಾಗಿ ಕರ್ನೂಲ ಪಟ್ಟಣದಿಂದ ಸ್ವಲ್ಪಮುಂದೆ ಸಾಗಿ ಕೃಷ್ಣಾ ನದಿಯಲ್ಲಿ ಲೀನವಾಗುವುದು. ಧಾರವಾಡ ಜಿಲ್ಲೆಯ ಗಡಿಯಲ್ಲಿ ಸುಮಾರು ೧೫೦ ಕಿ.ಮಿ ದೂರ ಹರಿಯುವ ಈ ನದಿಯು ತನ್ನ ಎಡದಂಡೆಯಲ್ಲಿ ರಾಣೆಬೆನ್ನೂರ, ಹಾವೇರಿ, ಶಿರಹಟ್ಟಿ, ಮತ್ತು ಮುಂಡರಗಿ ತಾಲೂಕುಗಳ ವ್ಯವಸಾಯಕ್ಕೆ ಸಹಕಾರಿಯಾಗಿದೆ. ಕರ್ನಾಟಕದಲ್ಲಿ ತುಂಗಭದ್ರಾ ನದಿಯು ಹರಿಯುವ ಒಟ್ಟು ಉದ್ದ ೪೦೩ ಕಿ.ಮೀ. ಕೂಡಲಿಯಿಂದ ಬಳ್ಳಾರಿ ಜಿಲ್ಲೆಯಂಚನ್ನು ತಲುಪುವವರೆಗೂ ಕಡಿದಾದ ಎತ್ತರ ದಂಡೆಗಳ ಮಧ್ಯೆ ಹರಿದುಬರುತ್ತದೆ. ನದಿಯ ಪಾತ್ರ ಸುಮಾರು ೧೦೦ ರಿಂದ ೨೦೦ ಮೀ ಗಳಷ್ಟು ಅಗಲವಾಗಿದ್ದು. ಬಹುತೇಕ ಬಂಡೆಗಳಿಂದ ಕೂಡಿದ್ದು ಅಲ್ಲಲ್ಲಿ ಮಡುಗಳು, ಸುಳಿಗಳು ಸಾಮಾನ್ಯವಾಗಿವೆ. ತುಂಗಭದ್ರಾ ನದಿಯು ರಾಜ್ಯದ ಜೀವನದಿಯಾಗಿದ್ದು, ವರ್ಷದ ಎಲ್ಲಾ ಕಾಲದಲ್ಲಿಯೂ ನೀರು ಹರಿಯುವುದಾದರೂ ಬೇಸಿಗೆಯಲ್ಲಿ ಹರಿಯುವ ನೀರಿನ ಪ್ರಮಾಣ ಕಡಿಮೆ, ಈ ನದಿಯ ನೀರನ್ನು ಸಾಕಷ್ಟು ಮಟ್ಟಿಗೆ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದ್ದು ಬಳ್ಳಾರಿ ಜಿಲ್ಲೆ ತಲುಪುವವರೆಗೆ ಕಡಿದಾದ ದಂಡೆಗಳಿರುವದರಿಂದ ಈ ಭಾಗದಲ್ಲಿ ಯಾವ ಆಣೆಕಟ್ಟುಗಳು ಇರುವದಿಲ್ಲಾ. ನದಿಗೆ ಅಡ್ಡಲಾಗಿ ಹುಬ್ಬಳ್ಳಿ-ಬೆಂಗಳೂರು ಮಾರ್ಗದ ಮಧ್ಯೆ ರೈಲ್ವೆ ಸೇತುವೆ ಹಾಗೂ ರಸ್ತೆ ಸೇತುವೆ ಇದ್ದು, ಈ ಜಿಲ್ಲೆಯ ಗಳಗನಾಥ ಮತ್ತು ಚೌಡದಾನಪುರಗಳು ತುಂಗಭದ್ರಾ ನದಿಯ ದಂಡೆ ಯಲ್ಲಿರುವುದರಿಂದ ಇವು ಪವಿತ್ರ ಕ್ಷೇತ್ರಗಳಾಗಿವೆ.

೨.೮ **ಹವಾಗುಣ ಮತ್ತು ಮಳೆ:** ಶಿರಹಟ್ಟಿಯ ಪರಿಸರದಲ್ಲಿ ಹವಾಗುಣ ಸಾಧಾರಣವಾಗಿದ್ದು, ಎಪ್ರೀಲ್ ಮತ್ತು ಮೇ ತಿಂಗಳಲ್ಲಿ ಅಧಿಕ ಉಷ್ಣಾಂಶ ಇರುತ್ತದೆ. ಡಿಸೆಂಬರದಿಂದ ಫೆಬ್ರವರಿಯವರೆಗೆ ಚಳಿ ಇರುತ್ತದೆ. ಜೂನದಿಂದ ಸೆಪ್ಟಂಬರವರೆಗೆ ಈ ಪರಿಸರದಲ್ಲಿ ೬೦೮.೪ ಮಿ.ಮಿ. ಪ್ರಮಾಣದ ಮಳೆಯಾಗುತ್ತದೆ.[೯]

ಅರಣ್ಯ : ಶಿರಹಟ್ಟಿ ಪರಿಸರದಲ್ಲಿ ಅಲ್ಲಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದಟ್ಟವಾದ ಅರಣ್ಯ ಪ್ರದೇಶ ಕಂಡುಬರುತ್ತವೆ. ಅವುಗಳಲ್ಲಿ ನೀಲಗಿರಿ, ಹುಣಸೆ ಮರ, ಬೇವಿನ ಮರ, ಅರಳಿ ಮರ, ತೇಗದ ಮರಗಳು ಪ್ರಧಾನವಾಗಿವೆ. ಶಿರಹಟ್ಟಿ ಪರಿಸರದಲ್ಲಿ ಒಟ್ಟು ೧೨.೯೪೩ ಹೆಕ್ಟೇರ ಅರಣ್ಯ ಪ್ರದೇಶವನ್ನು ಒಳಗೊಂಡಿದೆ. ಶಿರಹಟ್ಟಿಯ ಪರಿಸರದಲ್ಲಿ ನರಿ, ನವಿಲು, ತೋಳ, ಮೊಲ, ಕಾಡು ಬೆಕ್ಕುಗಳು

ವಿಶೇಷವಾಗಿ ಗೋಚರಿಸುತ್ತವೆ. ಎತ್ತು, ಎಮ್ಮೆ, ಆಕಳು, ಕುರಿ, ಕೋಳಿ, ನಾಯಿ, ಬೆಕ್ಕು ಮುಂತಾದ ಸಾಕು ಪ್ರಾಣಿಗಳಿವೆ. ಅನೇಕ ಬಗೆಯ ಪಕ್ಷಿಗಳು ಕಂಡುಬರುತ್ತವೆ.

ಸಂಪರ್ಕ ವ್ಯವಸ್ಥೆ: ಶಿರಹಟ್ಟಿಯು ಮುಂಡರಗಿ ಹಡಗಲಿ ಹಾವೇರಿ ಕುಂದಗೋಳ ಮಧ್ಯದಲ್ಲಿ ಇರುವುದರಿಂದ ಸಂಪರ್ಕವ್ಯವಸ್ಥೆ ಸುಗಮವಾಗಿದೆ. ಇದರ ಸಮೀಪದಲ್ಲಿ ಯಲವಿಗಿ ರೈಲು ಸಂಪರ್ಕ ವ್ಯವಸ್ಥೆ ಇರುತ್ತದೆ.

ಟಿಪ್ಪಣಿಗಳು :

೧) "ಧಾರವಾಡ ಜಿಲ್ಲೆಯ ಗೆಜೆಟಿಯರ್", ಪು. ೧–೨೦

೨) "ಶಿರಹಟ್ಟಿ ಫಕ್ಕೀರೇಶ್ವರ ಮಠ" ಒಂದು ಅಧ್ಯಯನ , ಪು.೬–೧೧

೩) ಅದೇ. ಪು.೧೨

೪) "ಶ್ರೀ ಫಕ್ಕೀರೇಶ್ವರ ಪುರಾಣ", ಪು ೧೦–೧೨.

೫) "ಮಾನವೀಕ ಭಾರತ" ಸಂಪುಟ–೨ ಸಂ–೧, ಪು ೬೩.

೬) ಅದೇ. ಪು. ೬೭

೭) ಪೂರ್ವೋಕ್ತ ಪು. ೧–೨೦

೮) ಅದೇ ಪು. ೧೯

ಅಧ್ಯಾಯ : ೩

ರಾಜಕೀಯ ಇತಿಹಾಸ

ಅಧ್ಯಾಯ –೩

ರಾಜಕೀಯ ಇತಿಹಾಸ ಮತ್ತು ಆಡಳಿತ ವಿಭಾಗಗಳು.

೩.೧ ಪೀಠಿಕೆ.

ಗದಗ ಜಿಲ್ಲೆಯ ಪ್ರದೇಶವು ಕನ್ನಡನಾಡಿನಲ್ಲಿ ಆಳಿದ ವಿವಿಧ ಅರಸ ಮನೆತನಗಳ ಆಳ್ವಿಕೆಗೆ ಒಳಪಡುತ್ತಾ ಬಂದಿರುವುದು ಸಮಕಾಲೀನ ಶಾಸನ, ಪುರಾತತ್ವ ಮತ್ತು ಸಾಹಿತ್ಯಿಕ ಕುರುಹುಗಳಿಂದ ಮನದಟ್ಟಾಗುವುದು. ಈ ಶಿರಹಟ್ಟಿ ಪರಿಸರದ ಕೇಂದ್ರವಾಗಿಟ್ಟುಕೊಂಡು ಈ ಪರಿಸರದಲ್ಲಿ ಆಳ್ವಿಕೆ ಕೈಗೊಂಡಿದ್ದು ವಿವಿಧ ಅರಸು ಮನೆತನಗಳು ಹಾಗೂ ಪ್ರಾಚೀನ ಆಡಳಿತ ವಿಭಾಗಗಳನ್ನು ಕುರಿತು ಸಹ ನಿರೂಪಿಸಲಾಗಿದೆ. ಈ ಪರಿಸರದಲ್ಲಿ ಆಳ್ವಿಕೆ ಕೈಗೊಂಡಿದ್ದ ಅರಸರು, ರಾಣಿಯರು, ಮಹಾಮಂಡಳೇಶ್ವರರು, ಮಹಾಸಾಮಂತರರರು, ಪ್ರಭುಗಾವುಂಡರು, ಗಾವುಂಡರು ದೇವಾಲಯಗಳ ನಿರ್ಮಾಣಕ್ಕೆ ಉದಾರವಾಗಿ ದಾನ ದತ್ತಿಗಳನ್ನು ನೀಡಿ ಪ್ರೋತ್ಸಾಹಿಸಿರುವುದನ್ನು ಕಾಣಬಹುದು.

ಇತಿಹಾಸ ಕಾಲದಲ್ಲಿ ಮೌರ್ಯರು, ಶಾತವಾಹನರು ಈ ಜಿಲ್ಲೆಯನ್ನು ಆಳಿದ್ದು ಐತಿಹಾಸಿಕ ಆಧಾರಗಳಿಂದ ತಿಳಿದುಬರುತ್ತದೆ.[೧] ಮುಂದೆ ಮೂರನೇ ಶತಮಾನದಿಂದ ಆಳ್ವಿಕೆ ನಡೆಸಿದ ಬನವಾಸಿಯ ಕದಂಬರು ತಮ್ಮ ರಾಜ್ಯವನ್ನು ಇಲ್ಲಿಯವರಗೆ ವಿಸ್ತರಿಸಿದ್ದರು. ಬಾದಾಮಿಯ ಚಾಲುಕ್ಯರು ೫ ರಿಂದ ೮ ನೇ ಶತಮಾನದಲ್ಲಿ ಆಳ್ವಿಕೆ ಮಾಡಿದರು ಆಗ ಇದು ಅವರ ಸಾಮ್ರಾಜ್ಯದ ಹೃದಯ ಭಾಗದಲ್ಲಿದ್ದಿತು. ಈ ಸಾಮ್ರಾಜ್ಯ ವ್ಯವಸ್ಥೆ ಮುಂದೆ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು ಮತ್ತು ವಿಜಯನಗರ ಕಾಲದವರೆಗೂ ಮುಂದುವರೆಯಿತು. ಆಗ ಈ ಪ್ರದೇಶದಲ್ಲಿ ಪೆರ್ಬಾಳ ೭೦, ಪುಲಿಗೆರೆ ೩೦೦ ಎಂಬ ಆಡಳಿತ ವಿಭಾಗಗಳು ಅಸ್ತಿತ್ವದಲ್ಲಿದ್ದವು.[೨]

೩.೨ ಮೌರ್ಯರು ಮತ್ತು ನಂದರು

ಗದಗ ಜಿಲ್ಲೆಯ ಪೂರ್ವಕ್ಕಿರುವ ಕೊಪ್ಪಳ, ಬಳ್ಳಾರಿ ಮತ್ತು ದಕ್ಷಿಣಕ್ಕಿರುವ ಚಿತ್ರದುರ್ಗ ಪ್ರದೇಶಗಳಲ್ಲಿ ಅಶೋಕನ ಶಾಸನಗಳು ಲಭ್ಯವಾಗಿವೆ. ಹಾಗಾಗಿ ಗದಗ ಜಿಲ್ಲಾ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಪಟ್ಟಿರಬಹದಾಗಿದೆ. ಮಗಧದ ನಂದ ಮನೆತನವು ಕ್ರಿಸ್ತ ಪೂರ್ವ ಸುಮಾರು ನಾಲ್ಕನೇ ಶತಮಾನದಲ್ಲಿ ಪಾಟಲೀಪುತ್ರದಿಂದ ಆಳುತ್ತಿದ್ದರು. ಕುಂತಳ ನಾಡು ಎಂದೇ ಕರೆಯಲ್ಪಡುತ್ತಿದ್ದ ಕನ್ನಡ ನಾಡಿನ ಉತ್ತರ ಭಾಗವು ಅವರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಸಿಂಗಿ ರಾಜನು ಸಿಂಗಿ ರಾಜ ಪುರಾಣದಲ್ಲಿ ಹೇಳಿದೆ.[೩] ಮೌರ್ಯ ಮನೆತನದ ಚಂದ್ರಗುಪ್ತನು (ಕ್ರಿಸ್ತ ಪೂರ್ವ ೩೨೩–೨೯೯) ಕೌಟಿಲ್ಯನ ಸಹಾಯದಿಂದ ನಂದರನ್ನು ನಾಶಮಾಡಿ ಮಗಧದ ಅಧಿಪತಿಯಾದನು. ಆಗ ಕನ್ನಡ ನಾಡು ಮೌರ್ಯ ಪ್ರಭುತ್ವಕ್ಕೆ ಒಳಪಟ್ಟಿತ್ತು.[೪] ಚಂದ್ರಗುಪ್ತನು ತನ್ನ ಜೀವನದ

ಕೊನೆಗಾಲದಲ್ಲಿ ಜೈನ ಧರ್ಮವನ್ನು ಸ್ವೀಕರಿಸಿ ಶ್ರುತ ಕೇವಲಿ ಭದ್ರಬಾಹು ಮುನಿಯೊಂದಿಗೆ ಈ ನಾಡಿನ ಶ್ರವಣ-ಬೆಳಗೋಳಕ್ಕೆ ಬಂದನೆಂದು ಶಾಸನಗಳು ಮತ್ತು ಸಾಹಿತ್ಯ ಆಕರಗಳಿಂದ ಸ್ಪಷ್ಟವಾಗುತ್ತದೆ.[೫] ಚಂದ್ರಗುಪ್ತನ ಮೊಮ್ಮಗ ಅಶೋಕ ಚಕ್ರವರ್ತಿಯು (ಕ್ರಿಸ್ತ ಪೂರ್ವ ೨೭೩ ರಿಂದ ೨೩೨) ಆಳ್ವಿಕೆ ಕಾಲದ ೧೭ ಶಾಸನಗಳು ಈ ನಾಡಿನಲ್ಲಿ (ಬ್ರಹ್ಮಗಿರಿ, ಸಿದ್ದಾಪೂರ, ಜಟ್ಟಂಗಿರಾಮೇಶ್ವರ, ನಿಟ್ಟೂರು, ಉದಯಗೋಳಂ, ಮಸ್ಕಿ, ಕೊಪ್ಪಳ, ಸನ್ನತಿ) ದೊರೆತಿವೆ. ಕನ್ನಡನಾಡಿನಲ್ಲಿ ಈ ಶಾಸನಗಳೇ ಅತ್ಯಂತ ಪ್ರಾಚೀನವಾಗಿವೆ. ಹೀಗಾಗಿ ಈ ನಾಡಿನ ಚಾರಿತ್ರಿಕ ಘಟ್ಟವನ್ನು ಮೌರ್ಯರ ಕಾಲದಿಂದ ಗುರುತಿಸಲಾಗುತ್ತದೆ.[೬] ಶಿರಹಟ್ಟಿ ಪರಿಸರದಲ್ಲಿ ಎರಡು ಮನೆತನಗಳಿಗೆ ಸಂಬಂಧಿಸಿದ ಕುರುಹುಗಳು ದೊರೆತಿಲ್ಲ. ಆದರೆ ಇತರೆಡೆಯಲ್ಲಿ ದೊರೆತ ಆ ಎರಡು ಮನೆತನಗಳ ಕುರುಹುಗಳಿಂದ ಈ ಪರಿಸರ ಆ ಮನೆತನಗಳ ಆಳ್ವಿಕೆಯ ಪ್ರಭಾವದಲ್ಲಿತ್ತೆಂಬುದಂತೂ ಸ್ಪಷ್ಟ.

೩.೩ ಶಾತವಾಹನರು:

ಮೌರ್ಯರ ತರುವಾಯ ದಖ್ಖನಿನಲ್ಲಿ ಅಧಿಕಾರ ಸ್ಥಾಪಿಸಿದ ಶಾತವಾಹನರು (ಕ್ರಿ.ಪೂ.೧ ನೇ ಶತಮಾನದಿಂದ ೩ ನೇ ಶತಮಾನದ ವರಗೆ) ಕ್ರಮೇಣ ಪೂರ್ವ ಮತ್ತು ದಕ್ಷಿಣದೆಡೆಗೆ ವಿಸ್ತರಿಸಿದ್ದರು. ಕನ್ನಡ ನಾಡಿನ ಉತ್ತರ ಭಾಗದಲ್ಲಿ ಅವರ ರಾಜಕೀಯ ಹಿಡಿತ ಸ್ಪಷ್ಟವಿದೆ. ಬನವಾಸಿ ಮತ್ತು ಸನ್ನತಿ ಅವರ ಪ್ರಧಾನ ಅಡಳಿತ ಕೇಂದ್ರಗಳಾಗಿದ್ದವು. ಚಂದ್ರವಳ್ಳಿ, ವಡಗಾಂವ-ಮಾದಾಪುರ ಮುಂತಾದ ಇತರೆ ಕೆಂದ್ರಗಳು ಅಸ್ತಿತ್ವದಲ್ಲಿದ್ದವು. ಆ ಕಾಲದಲ್ಲಿ ಸಂಸ್ಕೃತಿ ನೆಲೆಗೊಂಡಿದ್ದ ೨೫೦ ನೆಲೆಗಳು ನಾಡಿನಾದ್ಯಂತ ಬೆಳಕು ಕಂಡಿವೆ.[೭]

ಶಾತವಾಹನರು ಮೌರ್ಯರ ಕಾಲದಲ್ಲಿದ್ದ ವಿಭಾಗ ಕ್ರಮವನ್ನೇ ಕೆಲವು ಸ್ಥಳೀಯ ಬದಲಾವಣೆ ಗಳೊಂದಿಗೆ ಜಾರಿಗೊಳಸಿದಂತೆ ತೋರುತ್ತದೆ. ಇವರು ತಮ್ಮ ಸಾಮ್ರಾಜ್ಯವನ್ನು ಜನಪದ ಅಥವಾ ರಾಷ್ಟ್ರಗಳಲ್ಲಿ ವಿಭಾಗಿಸಿದ್ದರು. ಪ್ರತಿ ಆಹಾರದಲ್ಲೂ ಅನೇಕ ಗ್ರಾಮಗಳು ಇರುತ್ತಿದ್ದವು. ಗದಗನ್ನು ಒಳಗೊಂಡಂತೆ ಧಾರವಾಡ, ಬಳ್ಳಾರಿ ಜಿಲ್ಲೆಯ ಪ್ರದೇಶಗಳನ್ನು 'ಶಾತವಾಹನೀಹಾರ' ಎಂದು ಕರೆಲಾಗಿತ್ತು. ಪ್ರಾಯಶಃ ಶಾತವಾಹನರು ಮೂಲತಃ ಈ ಪ್ರದೇಶಕ್ಕೆ ಸೇರಿದವರಿರಬೇಕೆಂದು ಖ್ಯಾತ ಪುರಾತತ್ವ ವಿದ್ವಾಂಸ ಡಾ. ಸುಕ್ತಣಕಾರರು ಅಭಿಪ್ರಾಯ ಪಟ್ಟಿದ್ದಾರೆ.[೮] ಅಲ್ಲದೇ ಇದೇ ಜಿಲ್ಲೆಯ ನರಗುಂದ ತಾಲೂಕಿನ ವಾಸನದಲ್ಲಿ ಶಾತವಾಹನ ದೊರೆ ವಾಸಿಷ್ಟಿಪುತ್ರ ಶ್ರೀ ಪುಳುಮಾವಿಯ ಪ್ರಾಕೃತ ಶಾಸನಗಳು ಲಭ್ಯವಾಗಿದ್ದು, ಮಹಾದೇವ ಚಡಶಿವನ ದೇವಾಯತನ ಹಾಗೂ ಶಿಲ್ಪಿಯೊಬ್ಬನನ್ನು ಉಲ್ಲೇಖಿಸಿದೆ. ಕರ್ನಾಟಕದಲ್ಲಿ ಇವರಗೆ ತಿಳಿದಿರುವ ಅತೀ ಪ್ರಾಚೀನ ಶೈವ ದೇವಾಲಯದ ಉಲ್ಲೇಖವಿದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗ್ರೀಕ್ ಪ್ರವಾಸಿ ಟಾಲೆಮಿಯು (ಕ್ರಿ.ಶ.೧೩೦) ಉಲ್ಲೇಖಿಸಿರುವ ಊರುಗಳಲ್ಲಿ ಈ ಜಿಲ್ಲೆಗೆ ಸಂಬಂಧಿಸಿದವು ಇವೆ. "ಮೊರುಂದ" ಎಂಬುದು ಗದಗ ತಾಲೂಕಿನ ಮುಳಗುಂದವೆಂತಲೂ "ಆಲೋ" ಎಂಬುವುದು ಪ್ರಾಯಶಃ

ಮುಂಡರಗಿ ತಾಲೂಕಿನ ಆಲೂರು ಇದ್ದಿರಬೇಕೆಂದು ವಿದ್ವಾಂಸರು ಗುರುತಿಸಿದ್ದಾರೆ. ಶಾತವಾಹನರ ರಾಜ್ಯದಲ್ಲಿ ಕೈಮಗ್ಗದ ಉದ್ಯಮ ಉನ್ನತಿಯಲ್ಲಿತ್ತೆಂದು ಹೇಳಲಾಗಿದ್ದು, ಆ ಉದ್ಯಮದ ಕೇಂದ್ರಗಳು ಗದಗ ಜಿಲ್ಲೆಯಲ್ಲೂ ಇದ್ದಿರಬೇಕೆಂದು ಶಾತವಾಹನರ ದಾಖಲೆಗಳಲ್ಲಿ ಹಲವು 'ಆಹಾರ'ಗಳು ಉಕ್ತವಾಗಿವೆ. ಆದರೆ ಆ "ಆಹಾರಗಳ" ವ್ಯಾಪಕತೆಯ ಬಗ್ಗೆ ಖಚಿತ ಆಧಾರಗಳಿಲ್ಲ. ಶಾತವಾಹನರ ಕಾಲದಲ್ಲಿದ್ದ ಆಡಳಿತ ಘಟಕಗಳು ಅಗತ್ಯ ಬದಲಾವಣೆಗಳೊಂದಿಗೆ ಬಳಕೆಯಲ್ಲಿದ್ದವೆಂದೇ ಹೇಳಬಹುದು. ಒಟ್ಟಾರೆ ವಿಷಯ, ರಾಷ್ಟ್ರ, ಭೋಗಗಳೆಂಬ ವಿಭಾಗ ಕ್ರಮವು ಇವರ ಕಾಲದಲ್ಲಿತ್ತೆಂದು ಕಂಡುಬರುತ್ತದೆ. ತಮ್ಮ ಆಳ್ವಿಕೆಯ ಸ್ಪಷ್ಟ ಕುರುಹುಗಳನ್ನು ಈ ಗದಗ ಜಿಲ್ಲೆಯಲ್ಲಿ ಬಿಟ್ಟುಹೋದವರು ಈ ಶಾತವಾಹನರು ಎಂದರೆ ತಪ್ಪಾಗಲಾರದು. ಶಾತವಾಹನರ ನಂತರದಲ್ಲಿ ಗದಗ ಪ್ರದೇಶವು ಕೆಲಕಾಲ ಕಂಚಿಯ ಪಲ್ಲವರ ವಶವಾದಂತೆ ತೋರುತ್ತದೆ.

ಮೌರ್ಯ ಮತ್ತು ಶಾತವಾಹನರ ಕಾಲದಲ್ಲಿ ಅವರು ರಾಜ್ಯವನ್ನು ಆಹಾರ ಅಥವಾ ರಾಷ್ಟ್ರಗಳನ್ನಾಗಿ ವಿಂಗಡಿಸಿದ್ದರೆಂಬುವುದು ಸರಿಯಷ್ಟೆ. ಒಂದೊಂದು ಆಹಾರದಲ್ಲೂ ಕನಿಷ್ಟ ನಿಗಮ ಎನಿಸುವ ಒಂದಾದರೂ ಪಟ್ಟಣವಿರುತ್ತಿತ್ತು. ಪ್ರತಿಯೊಂದು ಆಹಾರಕ್ಕೂ ಅಮಾತ್ಯ ಎಂಬ ಮುಖ್ಯಾಧಿಕಾರಿಯಾಗಿ ನೇಮಿತನಾಗಿರುತ್ತಿದ್ದ. ಭಾಂಡಾಗಾರಿಕಾ, ಹೇರಣಿಕ, ಮಹಾಸೇನಾಪತಿ, ಲೇಖಕ, ವಿಬಂಧಕ ಎಂಬುವರು ಕೆಂದ್ರಾಡಳಿತದ ಪ್ರಮುಖ ಅಧಿಕಾರಿಗಳಾಗಿದ್ದರು. ಲಭ್ಯವಿರುವ ಆಧಾರಗಳಿಂದ ಇವರ ರಾಜ್ಯದಲ್ಲಿ ಸುವ್ಯವಸ್ಥಿತವಾದ ಕಾನೂನು ಬದ್ಧವಾದ ಅರ್ಥಶಾಸ್ತ್ರದಲ್ಲಿ ನಿರೂಪಿತವಾದಂತಹ ಆಡಳಿತ ಪದ್ಧತಿ ಇತ್ತೆಂದು ತಿಳಿಯಬಹುದಾಗಿದೆ.

೩.೪ ಬನವಾಸಿಯ ಕದಂಬರ

ಕದಂಬ ರಾಜವಂಶದ ಮಯೂರಶರ್ಮನ ಆಳ್ವಿಕೆಗೆ ಗದಗ ಜಿಲ್ಲೆಯ ಬಹುಭಾಗ ಒಳಪಟ್ಟಿದ್ದಿತ್ತೆಂದೇ ಹೇಳಬಹುದು. ಕದಂಬರ ಆಳ್ವಿಕೆಯ ನೇರ ಕುರುಹುಗಳು ಈ ಜಿಲ್ಲೆಯ ನೈರುತ್ಯ ಗಡಿಯಲ್ಲಿ ವಿಶೇಷವಾಗಿ ಕಂಡುಬಂದಿವೆ. ಕದಂಬರ ಆಳ್ವಿಕೆಯಲ್ಲಿ ವಿಷಯ, ಮಂಡಲ, ರಾಷ್ಟ್ರ ಎಂಬ ವಿಭಾಗಗಳಿದ್ದವು.[೯] ಹಲಸಿಯನ್ನು ಒಳಗೊಂಡಿದ್ದ ನರೇಂದ್ರದ ಪರಿಸರವು ಕದಂಬರ ಕಾಲದ ಸುದ್ಧಿಕುಂದೂರು ವಿಷಯದಲ್ಲಿ ಒಳಗೊಂಡಿತ್ತು. ಕ್ರಿ.ಶ.ಸುಮಾರು ೫೫೦ ರ ವೇಳೆಗೆ ಕದಂಬರ ಆಳ್ವಿಕೆ ಕೊನೆಗೊಂಡು ಬಾದಾಮಿ ಚಾಲುಕ್ಯರ ಆಡಳಿತವು ಈ ಪರಿಸರದ ಮೇಲೆ ಆರಂಭಗೊಂಡಿತು. ಕದಂಬ ರಾಜ್ಯವು ಈಗಿನ ಕರ್ನಾಟಕದ ಬೆಳಗಾವಿ, ಉತ್ತರಕನ್ನಡ, ಬಿಜಾಪೂರ, ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಗೂ ಧಾರವಾಡ, ಹಾಗೂ ಹಾವೇರಿ ಜಿಲ್ಲೆಗಳ ಬಹುಭಾಗಗಳನ್ನು ಒಳಗೊಂಡಂತೆ ವಿಸ್ತಾರವಾಗಿತ್ತು. ಅವರ ಕಾಲದ ಶಾಸನಗಳಲ್ಲಿ ಆಜ್ಞಾಪತಿ, ಸೇನಾಪತಿ, ಮಾಂಡಲಿಕ ಮುಂತಾದ ಆಡಳಿತಾತ್ಮಕ ಅಧಿಕಾರಿ ಸೂಚಕ ಅಧಿಕಾರಿಗಳ ಉಲ್ಲೇಖಗಳು ಕಂಡುಬಂದಿವೆ. ಹಾಗಾಗಿ ಗ್ರಾಮದಿಂದ ರಾಜ್ಯದ ವಿವಿಧ ಹಂತದವರೆಗೆ ಆಡಳಿತವಿತ್ತೆಂದು ಹೇಳಬಹುದು.

೩.೫ ಬಾದಾಮಿ ಚಾಲುಕ್ಯರು

ಬನವಾಸಿ ಕದಂಬರನ್ನೇ ಬದಿಗೊತ್ತಿ ರಾಜಕೀಯ ರಂಗವನ್ನು ಪ್ರವೇಶಿಸಿದ ಬಾದಾಮಿ ಚಾಲುಕ್ಯರು (ಕ್ರಿ.ಶ ೫೦೦ ರಿಂದ ೭೫೭) ವರೆಗೂ ಆಳ್ವಿಕೆ ನಡೆಸಿದ್ದಾರೆ. ಅವರ ಆಳ್ವಿಕೆಯು ಕನ್ನಡನಾಡಿನ ಇತಿಹಾಸದಲ್ಲಿ ಒಂದು ರಚನಾ ಕಾಲವಾಗಿತ್ತು. ಬಾದಾಮಿ ಚಾಲುಕ್ಯರು ಸಲ್ಕಿ ಅಥವಾ ಸಲ್ಲಿಕೆಗೆ ಸಂಬಂದವುಳ್ಳ ಕೃಷಿಕ ಮೂಲದವರೆಂದು ನಂದೀಮಠ ಅವರು ಪ್ರತಿಪಾದಿಸಿದ್ದಾರೆ. ಚಾಲುಕ್ಯರ ಅನೇಕ ಶಾಸನಗಳು ಗದಗ ಜಿಲ್ಲೆಯಲ್ಲಿ ದೊರೆತಿವೆ. ಕ್ರಿಶ. ೬೮೩ರ ಚಾಲುಕ್ಯ ವಿನಯಾದಿತ್ಯನ ಶಾಸನ ಶಿರಹಟ್ಟಿ ಪರಿಸರದ ಲಕ್ಷ್ಮೇಶ್ವರದಲ್ಲಿದ್ದು ಬೆಳ್ವಲ ೩೦೦ರ ಹಡಗೇರಿ ಗ್ರಾಮವನ್ನು ಉಲ್ಲೇಖಿಸುತ್ತದೆ. ಅದೇ ಸ್ಥಳದ ಕ್ರಿ.ಶ. ೭೨೩ರ ಶಾಸನವು ಚಾಲುಕ್ಯ ಅರಸ ವಿನಯಾದಿತ್ಯನದು. ಯುವರಾಜ ಇಮ್ಮಡಿ ವಿಕ್ರಮಾದಿತ್ಯನ ಕ್ರಿ.ಶ. ೭೩೫ ನೇ ಶಾಸನವು ಪುಲಿಗೆರೆ ಮಹಾಜನರನ್ನೇ ಪ್ರಸ್ತಾಪಿಸುತ್ತದೆ.

ವಿಶಾಲವಾದ ಚಾಲುಕ್ಯ ಸಾಮ್ರಾಜ್ಯದಲ್ಲಿ 'ದೇಶ' 'ವಿಷಯ' 'ಭೋಗ' ಎಂಬ ವಿಭಾಗಗಳ ಅನುಕ್ರಮಣಿಕೆಯನ್ನೆ ಕಾಣಬಹುದು. ಚಾಲುಕ್ಯರ ಕಾಲದಲ್ಲಿ ಕರ್ನಾಟಕ ಪ್ರದೇಶದಲ್ಲಿ ಕಂಡುಬರುವ ಮುಖ್ಯ ವಿಷಯಗಳೆಂದರೆ ಬೆಳ್ವಲ, ಕೊಂಡಿ, ಪಾನುಮ್‌ಗಲ್ಲ, ಕೊಂಕಣ, ವನವಾಸಿ, ವಿಷಯಗಳು ಇವುಗಳಲ್ಲಿ ಸಾಕಷ್ಟು ಗ್ರಾಮಗಳು ಗದಗ ಜಿಲ್ಲೆಯಲ್ಲಿರುವುದು ಸರಿಯಷ್ಟೆ, ಕ್ರಿ.ಶ. ೭೫೦ ರಲ್ಲಿ ಇಮ್ಮಡಿ ಕೀರ್ತಿ ವರ್ಮನ ಇನ್ನೊಂದು ತಾಮ್ರಪಠದಲ್ಲಿ ಬೆಳ್ವಲದ ವಿಷಯ ಪ್ರಸ್ತಾಪ ಬಂದಿದ್ದು ಬೆಪ್ಪಟ್ಟೆ, ಕಿಸುಮಂಗಲ್, ಪಣೆ ಬಸ್ಸರು, ಪೆಬ್ಬಸುಳ್ಯ, ಮತ್ತು ಸುಳ್ಯ ಎಂಬ ಸ್ಥಳಗಳ ಉಲ್ಲೇಖ ಕಂಡುಬಂದಿದೆ. ಇವೆಲ್ಲ ಇಂದಿನ ಶಿರಹಟ್ಟಿ ಪರಿಸರದಲ್ಲಿನ ಗ್ರಾಮಗಳೇ ಆಗಿವೆ.[೧೦]

ರಾಜ್ಯ ಪ್ರಭುತ್ವ ಚಾಲುಕ್ಯರಾಜರ ಸರ್ವಸಾಮಾನ್ಯವಾದ ಆಡಳಿತ ಪದ್ಧತಿಯಾಗಿದ್ದಿತು. ರಾಜ್ಯದ ಆಡಳಿತ ರಣರಂಗ ಎರಡರಲ್ಲೂ ರಾಜನ ಪ್ರಮುಖ ಪಾತ್ರವಿದ್ದಿತು. ರಾಜ್ಯ ಅನುವಂಶಿಕವಾಗಿ ತಂದೆಯಿಂದಲೇ ಹಿರಿಯ ಮಗನಿಗೆ ಬರುತ್ತಿತ್ತು. ಆದರೆ ಈ ವಿಷಯದಲ್ಲಿ ಸಂದರ್ಭಕ್ಕನುಗುಣವಾಗಿ ಏರು–ಪೇರುಗಳಾಗುತ್ತಿದ್ದಿದ್ದು ಉಂಟು. ಸತ್ಯಾಶ್ರಯ, ಪ್ರಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ ಭಟ್ಟ ಎಂಬ ಬಿರುದುಗಳಿದ್ದವೆಂದು ತಿಳಿಯುತ್ತದೆ. ಈ ಮನೆತನದ ಅರಸರು ಸಾಮಾನ್ಯವಾಗಿ ಮಹಾಸಂಧಿವಿಗ್ರಹ ಮಹಾಪಟಲಾಧಿಕೃತ ಎಂಬ ಅಧಿಕಾರಿ ವರ್ಗದವರ ಪ್ರಸ್ತಾಪವು ಶಾಸನಗಳಲ್ಲಿ ಉಕ್ತವಾಗಿದೆ. ಇವರು ಅನೇಕ ಶ್ರೇಣಿಯಲ್ಲಿನ ಕೆಳಗಿನ ಮೊದಲು ಮಲ್ಲಿಗಾವುಂಡನು ಗ್ರಾಮದ ಪ್ರಜೆಗಳಿಗೂ ಹಿರಿಯ ಅಧಿಕಾರಿಗಳಿಗೂ ನಡುವಣ ಮುಖ್ಯ ಕೊಂಡಿಯಾಗಿದ್ದನು. ಅವನಂತೆ ಇನ್ನೊಬ್ಬ ಗ್ರಾಮದ ಅಧಿಕಾರಿ ಕರಣಿಕ ಗ್ರಾಮದ ಸಾಂಘಿಕ ಜೀವನಕ್ಕೆ ಸಂಬಂಧಿಸಿದಂತೆ ಕಟ್ಟುಪಾಡುಗಳನ್ನು ರೂಪಿಸುತ್ತಿದ್ದನು. ನಗರ ಎಂಬುದು ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದಂತೆ ವರ್ತಕರಿಗೆ ಶ್ರೇಣಿಯಾಗಿದ್ದಿತು.

ಉದಾ: ತಲ್ಲಿಗರ ಶ್ರೇಣಿ, ಒಕ್ಕಲು ೩೦೦ ಇತ್ಯಾದಿ.

೩.೩ ಮಳಖೇಡದ ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ತರುವಾಯ ರಾಜಕೀಯ ರಂಗವನ್ನು ಪ್ರವೇಶಿಸಿದ, ಮಳಖೇಡ ರಾಷ್ಟ್ರಕೂಟರು ದಕ್ಷಿಣ ಭಾರತದ ಬಹು ಭಾಗದಲ್ಲಿ (ಕ್ರಿ.ಶ ೭೫೭ ರಿಂದ ೯೭೩ ರ ವರೆಗೆ) ಆಳ್ವಿಕೆ ನಡೆಸಿದ್ದಾರೆ. ಇವರ ಸಾಮ್ರಾಜ್ಯವು ಕಾವೇರಿ ನದಿಯಿಂದ ನರ್ಮದಾ ನದಿಯವರೆಗೂ ವಿಸ್ತಾರವಾಗಿತ್ತು. ಅವರು ವ್ಯವಸ್ಥಿತವಾದ ಆಡಳಿತದ ವಿಭಾಗಗಳ ಅನುಕೂಲಕ್ಕಾಗಿ ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ಹಲವು ಮಂಡಲಗಳನ್ನಾಗಿ ವಿಂಗಡಿಸಿದ್ದರು. ಅವರಲ್ಲಿ ಕೆಲವರು ಅರಸರು ನೇಮಕವಾಗಿ ಮತ್ತೆ ಕೆಲವರು ಅನುವಂಶಿಕವಾಗಿ ಆಳುತ್ತಿದ್ದರು. ಶಿರಹಟ್ಟಿ ಪರಿಸರದ ಹೆಬ್ಬಾಳದಲ್ಲಿ ದೊರೆತ ಕ್ರಿ.ಶ. ೯೭೫ ರ ಶಾಸನವು ರಾಷ್ಟ್ರಕೂಟರ ೩ನೇ ಕೃಷ್ಣನ ಆಳ್ವಿಕೆ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ.

ಗದಗ ಜಿಲ್ಲೆಯಲ್ಲಿನ ಸುಮಾರು ೪೦ ಕ್ಕೂ ಹೆಚ್ಚು ಶಾಸನಗಳು ರಾಷ್ಟ್ರಕೂಟರ ಆಳ್ವಿಕೆ ಕಾಲಕ್ಕೆ ಸೇರಿದ ಸು ಕ್ರಿ.ಶ ೮ನೇ ಶತಮಾನದ ಗೋವಿಂದನ ಕಾಲದಿಂದ ೧೦ ನೇ ಶತಮಾನದ ಖೊಟ್ಟಿಗನ ಕಾಲದವರೆಗೂ ವ್ಯಾಪಿಸಿದ್ದು, ಈ ಜಿಲ್ಲೆಯ ಶಿರಹಟ್ಟಿ ಪರಿಸರದ ಲಕ್ಷ್ಮೇಶ್ವರ, ಹೆಬ್ಬಾಳ ಸ್ಥಳಗಳಲ್ಲಿ ಕಂಡುಬಂದಿವೆ. ಇವು ರಾಷ್ಟ್ರಕೂಟ ಸಾಮ್ರಾಟರಾದ ಮುಮ್ಮಡಿ ಗೋವಿಂದ ಮೊದಲು ಅಮೋಘ ವರ್ಷ, ಇಮ್ಮಡಿ ಕೃಷ್ಣ, ನೀರೂಪಮ ನಾಲ್ಕನೇ ಗೋವಿಂದ ಮತ್ತು ಖೊಟ್ಟಿಗ ಇವರ ಆಳ್ವಿಕೆ ಕುರುಹುಗಳಾಗಿವೆ. ಪುಲಿಗೆರೆ ೩೦೦ ಮತ್ತು ಪೆರ್ಬ್ಬಾಳ ೭೦ ಎಂಬ ಪ್ರಾದೇಶಿಕ ಘಟಕಗಳ ಉಲ್ಲೇಖ ರಾಷ್ಟ್ರಕೂಟರ ಕಾಲದ ಶಾಸನಗಳಲ್ಲಿ (ಪ್ರಧಾನವಾಗಿ) ಕಾಣಿಸಿಕೊಂಡಿವೆ. ಬಹು ವಿಸ್ತಾರವಾಗಿದ್ದ ರಾಷ್ಟ್ರಕೂಟ ಸಾಮ್ರಾಜ್ಯವು 'ಮಂಡಲ' 'ದೇಶ' 'ನಾಡು' 'ರಾಷ್ಟ್ರ' 'ವಿಷಯ' ಹಾಗೂ ಬುಕ್ತಿಗಳೆಂದೆ ವಿಭಾಗಿಸಲ್ಪಟ್ಟಿದ್ದವು. ಗ್ರಾಮವು ಕೆಳಹಂತದ ಆಡಳಿತ ಘಟಕವಾಗಿದ್ದಿತು. ಚಾಲುಕ್ಯರಂತೆ ರಾಷ್ಟ್ರಕೂಟರಲ್ಲಿ ಸಂಖ್ಯಾವಾಚಕನೆ ಬಳಕೆ ವಿಶೇಷವಾಗಿತ್ತು. ರಾಷ್ಟ್ರಕೂಟರ ಆಳ್ವಿಕೆಗೆ ಗದಗ ಜಿಲ್ಲೆಯ ಪರಿಸರದಲ್ಲಿ ಸಂಖ್ಯಾಸೂಚಕಗಳು ಅಧಿಕವಾಗಿರುವುದು ಕಂಡುಬರುತ್ತದೆ. ಮುಖ್ಯವಾಗಿ ಬೆಳ್ವಲ ೩೦೦ ಪುಲಿಗೆರೆ ೩೦೦ ಕೂಡಿಸಿದಂತೆ ಎರಡು ಆರನೂರು ಎಂಬ ಪ್ರಯೋಗವು ಕಂಡುಬಂದಿದೆ. ರಾಷ್ಟ್ರಕೂಟರ ಆಡಳಿತದಲ್ಲಿ ರಾಜನೆ ಸಂಪೂರ್ಣ ಅಧಿಕಾರವುಳ್ಳವನು ಆಗಿದ್ದನು. ಅವನ ಸಹಾಯಕ್ಕೆ ಮಹಾಪ್ರಧಾನ ದಂಡನಾಯಕ, ಪುರೋಹಿತ ಮುಂತಾದ ಅಧಿಕಾರಿಗಳಿದ್ದರು. ರಾಷ್ಟ್ರಗಳಿಗೆ-ರಾಷ್ಟ್ರಪತಿ, ವಿಷಯಗಳಿಗೆ-ವಿಷಯಪತಿ, ಭುಕ್ತಿಗಳಿಗೆ-ಭೋಗಪತಿಗಳೆಂಬ ಅಧಿಕಾರಿಗಳನ್ನು ನಿಯೋಜಿಸ ಲಾಗುತ್ತಿತ್ತು. ಪುಲಿಗೆರೆ ೩೦೦, ಪೆರ್ಬ್ಬಾಳ ೭೦ ಎಂಬ ಆಡಳಿತ ಘಟಕಗಳಾಗಿದ್ದವು. ರಾಜನು ತನ್ನ ಅಧಿಕಾರಿಗಳನ್ನು ನೇರವಾಗಿ ನೇಮಿಸುತ್ತಿದ್ದನು.

೩.೭ ಕಲ್ಯಾಣರ ಚಾಲುಕ್ಯರು :

ಗದಗ ಜಿಲ್ಲೆಯಲ್ಲಿ ಕಲ್ಯಾಣರ ಚಾಲುಕ್ಯರ ಕಾಲದ ಶಾಸನಗಳು ಸಾಕಷ್ಟು ಸಂಖ್ಯೆಯಲ್ಲಿಯೇ ಲಭ್ಯವಾಗಿದ್ದು, ಇಮ್ಮಡಿ ತೈಲಪನ ಸುಮಾರು ಕ್ರಿ.ಶ.೯೯೦ರ ಕಾಲದ ಶಾಸನದಿಂದ ಕ್ರಿ.ಶ.೧೧೮೭ರ ನಾಲ್ವಡಿ ಸೋಮೇಶ್ವರ ಆಳ್ವಕೆಯ ಕಾಲದವರೆಗೂ ಅವು ವ್ಯಾಪಿಸಿವೆ. ಶಿರಹಟ್ಟಿ ಪರಿಸರದಲ್ಲಿ ಬೆಳ್ಳಟ್ಟಿ, ಸಾಸರವಾಡ, ತೆಗ್ಗಿನಭಾವನೂರ, ಲಕ್ಷ್ಮೇಶ್ವರ ಮುಂತಾದ ಸ್ಥಳಗಳಿದ್ದು. ಇವು ಇಮ್ಮಡಿ ತೈಲಪ, ಇರುವಬೆಡಂಗ, ಐದನೇಯ ವಿಕ್ರಮಾದಿತ್ಯ, ಇಮ್ಮಡಿ ಜಯಸಿಂಹ, ನಾಲ್ವಡಿ ಸೋಮೇಶ್ವರ, ಜಗದೇಕ ಮಲ್ಲ ಮತ್ತು ಮುಮ್ಮಡಿ ತೈಲಪನ ಆಳ್ವಕೆಯನ್ನೆ ಪ್ರತಿಪಾದಿಸುತ್ತವೆ.[೧೨]

ಕಲ್ಯಾಣದ ಚಾಲುಕ್ಯರ ಅವಧಿಗೆ ಸಂಬಂಧಿಸಿದಂತೆ ಇಂದಿನ ಗದಗ ಜಿಲ್ಲಾ ಪ್ರದೇಶದಲ್ಲಿ ಅನೇಕ ಚಿಕ್ಕ ದೊಡ್ಡ ಪ್ರಾದೇಶಿಕ ವಿಭಾಗಗಳು ಉಲ್ಲೇಖಗೊಂಡಿವೆ ಬೆಳ್ಳಟ್ಟಿ ನಾಡು, ಮುಳಗುಂದ-೧೨, ಬೆಳ್ವಲ ೩೦೦ ಪುಲಿಗೆರೆ ೩೦೦, ಪೆರ್ಬಾಳ ೭೦, ನೊಳಂಬಾಡಿ ೩೨೦೦೦, ಕೊಂಡಿ ೩೦೦೦ ಮುಂತಾದವು ಗದಗ ಜಿಲ್ಲೆಯ ವ್ಯಾಪ್ತಿಯಿಂದ ಹೊರಗಿನವು, ಇವು ಶಾಸನಗಳಲ್ಲಿ ಸಾಂದರ್ಭಿಕವಾಗಿ ಉಕ್ತವಾಗಿವೆ. ಒಟ್ಟಾರೆ ಕಲ್ಯಾಣಿಚಾಲುಕ್ಯರ ಅವಧಿಯಲ್ಲಿ ಗದಗ ಜಿಲ್ಲಾ ಪ್ರದೇಶವು ಹೆಚ್ಚು ಚೈತನ್ಯ ಶೀಲತೆಯನ್ನೆ ಪಡೆದುಕೊಂಡಿತ್ತೆಂಬ ಅಂಶ ವೈವಿಧ್ಯಮಯ ಆಡಳಿತ ಘಟಕಗಳ ಹಿನ್ನಲೆಯಲ್ಲಿ ನೆನಪಿಸಬಹುದು.

ಬಹುವಿಸ್ತಾರವಾಗಿದ್ದ ಕಲ್ಯಾಣಿ ಚಾಲುಕ್ಯರ ರಾಜ್ಯದಲ್ಲಿ ವಿಸ್ತೃತವಾದ ಅಧಿಕಾರವರ್ಗವು ನೆಲೆಗೊಂಡಿತ್ತು. ಪ್ರಜಾಪಾಲನೆ ದುಷ್ಟಶಿಕ್ಷಣ ಶಿಷ್ಟರಕ್ಷಣೆ ರಾಜನ ಆದ್ಯ ಕರ್ತವ್ಯವಾಗಿತ್ತು. ರಾಜನಿಗೆ ಅಡಳಿತದಲ್ಲಿ ಸಹಾಯ ಮಾಡಲು ಒಂದು ಮಂತ್ರಿಮಂಡಲ ಇದ್ದಿತು. ಆದರೆ ಅದರ ಗಾತ್ರ ಸ್ವರೂಪ ಕರ್ತವ್ಯಗಳು ಇತ್ಯಾದಿಗಳ ಬಗ್ಗೆ ಖಚಿತವಾಗಿ ತಿಳಿಯಲು ಸಾಕಷ್ಟು ಆಧಾರಗಳಿಲ್ಲ. ಒಂದೇ ಕಾಲದಲ್ಲಿ ಅನೇಕ ಮಹಾಪ್ರಧಾನರು ಕಂಡುಬರುತ್ತಾರೆ. ಅಲ್ಲದೇ ಒಬ್ಬನೇ ಹಲವು ಅಧಿಕಾರಗಳನ್ನು ಹೊಂದಿದ್ದ ಸಂಗತಿ ಇಮ್ಮಡಿ ಸೋಮೇಶ್ವರನ ಕಾಲದ ಶಾಸನಗಳಿಂದ ಗ್ರಹಿಸಬಹುದು.

೩.೮ ಕಲಚೂರ್ಯರು

ಕ್ರಿ.ಶ. ೧೧೬೦ ರಿಂದ ೧೧೮೫ ಅವಧಿಯಲ್ಲಿ ಕಲಚೂರ್ಯರ ಆಳ್ವಕೆ ಈ ಜಿಲ್ಲೆಯ ಮೇಲೆ ನಡೆದಿದೆ. ಈ ರಾಜ ವಂಶದ ಬಿಜ್ಜಳ, ಸೋಮಿದೇವ, ಸಂಕಮ ಮುಂತಾದವರ ಆಳ್ವಕೆಯ ಅನೇಕ ಶಾಸನಗಳಿದ್ದು. ಗದಗ ತಾಲೂಕಿನ ಗದಗ, ಹುಯಿಲಗೋಳ, ಲಕ್ಕುಂಡಿ, ಕಣವಿ, ಬೆಳವಡ, ಚಿಕ್ಕಹಂದಿಗೋಳ, ಮುಳಗುಂದ, ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರ, ಮುಂತಾದ ಸ್ಥಳಗಳಲ್ಲಿ ಲಭ್ಯವಾಗಿವೆ. ಈ ಅವಧಿಯ ಶಾಸನಗಳಲ್ಲಿ ಹುಲಿಗೆರೆ ೩೦೦ ಎಂಬ ಪ್ರಾದೇಶಿಕ ವಿಭಾಗಗಳು ಉಲ್ಲೇಖಗೊಂಡಿವೆ.

೩.೯ ಹೊಯ್ಸಳರು

ಕಲ್ಯಾಣಿ ಚಾಲುಕ್ಯರ ಅವನತಿಯೊಂದಿಗೆ ಈ ಪ್ರದೇಶಗಳು ಹೊಯ್ಸಳರು ಮತ್ತು ದೇವಗಿರಿಯ ಸೇವುಣರು, ಆಕ್ರಮಣಕ್ಕೆ ಈಡಾದವು. ಅಂತೆಯೇ ಕ್ರಿ.ಶ. ೧೧೯೧ ರಲ್ಲಿ ಸೇವುಣರು ಬಿಲ್ಲಮನ ಶಾಸನ ಕ್ರಿ.ಶ. ೧೧೯೨ ರ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಶಾಸನ ಗದಗ ಪ್ರದೇಶದಲ್ಲಿ ಕಂಡುಬಂದಿದೆ. ಮುಂದೆ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಶಾಸನಗಳು ಗದಗ ತಾಲೂಕಿನಲ್ಲಿ ಕಂಡುಬಂದಿವೆ. ಹೊಯ್ಸಳ ಇಮ್ಮಡಿ ನರಸಿಂಹನ ಶಾಸನ ಶಿರಹಟ್ಟಿ ಪರಿಸರದ ಬೆಳ್ಳಟ್ಟಿಯಲ್ಲಿ ಲಭ್ಯವಾಗಿದೆ, ಬೆಳ್ವಲ ೩೦೦, ಎರಡು ಆರನೂರು ಮುಳಗುಂದ ೧೨ ಎಂಬ ಆಡಳಿತ ಘಟಕಗಳನ್ನೇ ಉಲ್ಲೇಖಿಸುತ್ತದೆ.[೧೩]

೩.೧೦ ವಿಜಯನಗರ ಮತ್ತು ವಿಜಯನಗರೋತ್ತರ

ವಿಜಯನಗರ ಸಾಮ್ರಾಜ್ಯ ಕ್ರಿ.ಶ ೧೩೩೬ ರಲ್ಲಿ ಉದಯವಾಯಿತು. ಈ ಸಾಮ್ರಾಜ್ಯದ ಅರಸರ ಆಳ್ವಿಕೆಯ ಕುರುಹುಗಳು ಗದಗ ಜಿಲ್ಲೆಯಲ್ಲಿ ಕ್ರಿ.ಶ.೧೩೫೩ ರಿಂದಲೇ ದೊರೆಯಲಾರಂಭಿಸುತ್ತವೆ. ವಿಜಯನಗರದ ಪ್ರಸಿದ್ಧ ಅರಸ ಮೊದಲನೇ ದೇವರಾಯನ ಶಾಸನಗಳು ಶಿರಹಟ್ಟಿ ಪರಿಸರದ ಬೆಳ್ಳಟ್ಟಿ, ಸುಗ್ನಳ್ಳಿ, ಲಕ್ಷ್ಮೇಶ್ವರ ಮುಂತಾದ ಸ್ಥಳಗಳಲ್ಲಿವೆ. ಇವುಗಳಲ್ಲಿ ಬಾದಾಮಿಯ ಸೀಮೆ / ಲಕ್ಷುಮಣ ಸೀಮೆ / ಲಕ್ಕುಮಣೇಶ್ವರ ಸೀಮೆ / ಲಕ್ಷುಮೇಶ್ವರ ನಾಡು ೧೨೦, ಹುಲಿಗೆರೆ ನಾಡು, ಗದಗಿನ ಸೀಮೆ, ಹೋಬಳಿ, ಹುಲಿಗೆರೆ ನಾಡು, ಲಕ್ಷ್ಮೇಶ್ವರ ಸೀಮೆ ಸವಣೂರು ಸೀಮೆ, ಹರಿಹರಪುರದ ಸೀಮೆ, ಎಂಬುವು ಶಾಸನಗಳಲ್ಲಿ ಉಕ್ತವಾಗಿವೆ.[೧೪]

ಇಂದಿನಿಂದ ಬಂದಂತೆ ರಾಜನೆ ರಾಜ್ಯದ ಅಧಿಪತಿಯಾಗಿದ್ದನು. ಪರಿಸ್ಥಿತಿಗಳ ಮಾರ್ಪಾಡಿನಿಂದ ರಾಜನು ಸಾಮಂತರು ಅಧಿಕಾರಿಗಳು ನೆರವಿಲ್ಲದೇ ಆಡಳಿತ ನಡೆಸುವುದು ಆಗುತ್ತಿರಲಿಲ್ಲ, ಧೈರ್ಯ ರಕ್ಷಣೆಗಾಗಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ರಾಜ್ಯ ಧರ್ಮವಲಯ ದುಷ್ಟ ಶಿಕ್ಷಕ ಶಿಷ್ಟ ರಕ್ಷಕನು ಆಗಬೇಕಿತ್ತು. ಧಾರ್ಮಿಕ ಸಂಪ್ರದಾಯಗಳಿಗೆ ಕಟ್ಟುಪಾಡುಗಳಿಗೆ ರಾಜನೇ ಬದ್ಧನಾಗಬೇಕಿತ್ತು. ವಿಜಯನಗರ ಸಾಮ್ರಾಜ್ಯ ಬೆಳೆದು ದಕ್ಷಿಣಭಾಗವನ್ನೆಲ್ಲ ತನ್ನ ಅಧೀನಕ್ಕೆ ತೆಗೆದುಕೊಂಡಿದ್ದನು, ಪರಿಣಾಮವಾಗಿ ಸಾಮಂತರಾಜನು ಪಾಳೇಗಾರರ ಸಹಾಯಬೇಕಿತ್ತು. ಸ್ವತಂತ್ರವಾಗಿ ಆಳುವ ಅಧಿಕಾರವುಳ್ಳ ಆ ಪಾಳೆಗಾರರು ನಾಯಕರು ರಾಜನಿಗೆ ಕಪ್ಪ ಕಾಣಿಕೆಗಳನ್ನು ಮತ್ತು ಸೈನ್ಯದ ಸಹಾಯವನ್ನೇ ಸಲ್ಲಿಸಬೇಕಾಗಿತ್ತು. ಹೀಗೆ ಶಿರಹಟ್ಟಿ ಪರಿಸರದಲ್ಲಿ ಬಹು ಪ್ರಾಚೀನ ಕಾಲದಿಂದಲೇ ಪ್ರಸಿದ್ಧ ಆಡಳಿತ ಘಟಕಗಳಿಂದ ಕೂಡಿತ್ತು ಎಂಬ ಅಂಶ ಲಭ್ಯ ಶಾಸನಾಧಾರಗಳಿಂದ ದೃಢಪಡುತ್ತದೆ.

ಹೀಗೆ ಶಿರಹಟ್ಟಿಯು ಸುಮಾರು ೮೦೦ ಕ್ಕೂ ಹೆಚ್ಚು ವರ್ಷಗಳಷ್ಟು ಸಮೃದ್ಧವಾದ ಇತಿಹಾಸವಿದೆ. ಕ್ರಿ.ಶ. ೧೩೪೭ ರಿಂದ ೧೪೮೯ ರ ವರೆಗೆ ಇದು ಬಹುಮನಿ ಅರಸರ ಆಳ್ವಿಕೆಗೆ

ಒಳಪಟ್ಟಿತ್ತು. ನಂತರ ಬಿಜಾಪೂರದಲ್ಲಿ ಆದಿಲ್‌ಶಾಹಿ ರಾಜ್ಯ ತಲೆಯೆತ್ತಿದಾಗ ಶಿರಹಟ್ಟಿಯು ಕ್ರಿ.ಶ. ೧೪೮೯ ರಿಂದ ೧೬೮೬ ರ ವರೆಗೆ ಆದಿಲ್‌ಶಾಹಿಯ ಸರದಾರನಾದ 'ಸಯದ್‌ಮೌಸುಮ್ ಬುಖಾರಿ' ಎನ್ನುವವನ ಜಹಗೀರಾಯಿತು. ಸಾಮಾನ್ಯವಾಗಿ ಇವನನ್ನೇ"ಅಂಕುಶಖಾನ" ಎಂದೇ ಕರೆಯುತ್ತಿದ್ದರು ಮತ್ತು ಇವನ ಮುಂದಿನ ಪಿಳಿಗೆಯವರನ್ನು 'ಅಂಕುಶಖಾನ'ರೆಂದೇ ಕರೆಯುತ್ತಿದ್ದರು.[೧೫] ಈ ಅಂಕುಶ ಖಾನ ವಂಶದ ಐದನೇ ಅಂಕುಶಖಾನನು ಕ್ರಿ.ಶ. ೧೬೦೭ ರಲ್ಲಿ[೧೬] ಅವ್ವಲಿಂಗವ್ವನ ಮಗನಾದ ಸೋಮನಗೌಡನಿಗೆ ಶಿರಹಟ್ಟಿಯ ದೇಶಗತಿಯನ್ನೇ ಉಂಬಳಿಯಾಗಿ ಕೊಟ್ಟಿದ್ದಾನೆ. ಈತನು ಏತಕ್ಕಾಗಿ ಉಂಬಳಿ ಹಾಕಿಕೊಟ್ಟನು ಎಂಬುದಕ್ಕೆ ಈ ಕೆಳಗಿನ ಕಥೆಯೇ ನಿರ್ದೇಶನ.

ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ದೇಸಾಯಿಯವರ ಪೂರ್ವಜರು ನಿಜಾಮ ಪ್ರದೇಶದ "ಸಗರ" ಹಾಗೂ "ಕೆಂಭಾವಿ"ಅವರು ಈ ದೇಸಾಯಿ ಮನೆತನದವಳೇ "ಅವ್ವಲಿಂಗವ್ವ". ಈಕೆ ಶಿರಹಟ್ಟಿ ಫಕೀರಸ್ವಾಮಿಗಳ ಪರಮಭಕ್ತಳು. ಭರಮಗೌಡ ಮತ್ತು ಸೋಮನಗೌಡ ಎಂಬವರು ಆಕೆಯ ಮಕ್ಕಳು. ಅವ್ವಲಿಂಗವ್ವನು ತನ್ನ ಮಗ ಸೋಮನಗೌಡನನ್ನು ಕರೆದುಕೊಂಡು ಶ್ರೀ ಫಕೀರಸ್ವಾಮಿಗಳೊಂದಿಗೆ ಶ್ರೀ ಶೈಲದ ಮಲ್ಲಿಕಾರ್ಜುನನ್ನು ಕಾಣಲು ಯಾತ್ರೆ ಹೊರಡುತ್ತಾಳೆ. ಮಾರ್ಗ ಮಧ್ಯದಲ್ಲಿ ರಾತ್ರಿಯಾಗಿದ್ದರಿಂದ ಯಾತ್ರೆ ಹೊರಟ ಅವರು ಲಕ್ಷ್ಮೇಶ್ವರದ ಅಂಕುಶಖಾನನ ಅರಮನೆಯಲ್ಲಿ ಒಂದು ದಿನ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ.

ಅಂಕುಶಖಾನನು ಎಂದಿನಂತೆ ತನ್ನ ಮಡದಿಯೊಂದಿಗೆ ಚದುರಂಗ ಆಟ ಆಡುತ್ತಿದ್ದಾಗ ಅಂದಿನ ರಾತ್ರಿ ಪ್ರಣತಿಯಲ್ಲಿದ್ದ ತೈಲವು ತೀರಿಹೋಗಿ ದೀಪವು ಕಿರಿದೆನಿಸುತ್ತದೆ. ಸೇವಕರು ಅರಮನೆಯಲ್ಲಿ ಎಣ್ಣೆಯನ್ನು ಹುಡುಕಲು ಎಣ್ಣೆ ಸಿಗುವದಿಲ್ಲ ಆಗ ಅಂಕುಶಖಾನನು "ನನ್ನ ಚದುರಂಗ ಆಟವು ಮುಗಿಯುವವರೆಗೆ ಯಾರು ಈ ಪ್ರಣತಿಗೆ ಎಣ್ಣೆಯನ್ನು ತಂದು ಹಾಕುವರೋ ಅವರಿಗೆ ನನ್ನ ಜಹಗೀರನ್ನು ಇನಾಂ ಕೊಡುವೆ" ಎಂದು ಡಂಗುರ ಸಾರಿಸುವನು. ಶ್ರೀಶೈಲಕ್ಕೆ ಹೊರಟಿದ್ದ ಶ್ರೀ ಫಕೀರಸ್ವಾಮಿಗಳು, ಅವ್ವಲಿಂಗವ್ವ ಮತ್ತು ಆಕೆಯ ಮಗ ಸೋಮನಗೌಡ ಇವರು ಅಂಕುಶಖಾನನ ಅರಮನೆಯಲ್ಲಿ ಆ ದಿನ ರಾತ್ರಿ ಉಳಿದುಕೊಂಡಿದ್ದರು. ಅವರು ಅಂಕುಶಖಾನನ ಸಾರಿದ ಡಂಗುರ ಕೇಳಿಸಿಕೊಂಡರು. ಅವ್ವಲಿಂಗವ್ವನು ಶ್ರೀಶೈಲಕ್ಕೆ ಒಯ್ಯಲೆಂದೇ ಜೊತೆಗೆ ತುಪ್ಪವನ್ನು ತಂದಿದ್ದಳು. ಶ್ರೀ ಫಕೀರೇಶ್ವರರ ಅಪ್ಪಣೆಯಂತೆ ಆಕೆಯು ತುಪ್ಪವನ್ನು ಪ್ರಣತಿಗೆ ಸುರುವಿ ದೀಪ ಬೆಳಗುವಂತೆ ಮಾಡಿದಳು. ಮರುದಿನ ಅಂಕುಶಖಾನನು ಕೊಟ್ಟಮಾತಿನಂತೆ ಅವ್ವಲಿಂಗವ್ವನ ಮಗ ಸೋಮನಗೌಡನಿಗೆ ತನ್ನ ಜಹಗೀರನ್ನು ಇನಾಮು ಕೊಟ್ಟನು. ಅಂಕುಶಖಾನನಿಂದ ದೇಸಗತಿಯನ್ನೇ ಪಡೆದ ಸೋಮನಗೌಡನು-(ಅಂಕುಶ)ಖಾನ್+(ಸೋಮನ)ಗೌಡ=ಖಾನಗೌಡ ಎಂಬ ಆ ಧರ್ಮದ ಸಮನ್ವಯ ಹೆಸರಿನಿಂದ ಶಿರಹಟ್ಟಿಯ ದೇಸಾಯಿಯಾದನು. ಈ ಘಟನೆ ಪವಾಡ ಕಥೆಯಂತೆ

ಕಂಡರೂ ಇತಿಹಾಸ ಒಪ್ಪಿದೆ. ಇದು ನಡೆದಿದ್ದು ಕ್ರಿ.ಶ.೧೬೦೭ ರಲ್ಲಿ ಎಂದು ಇತಿಹಾಸಕಾರರು ಗುರುತಿಸಿದ್ದಾರೆ.[೧೫] ಶಿರಹಟ್ಟಿಯ ದೇಶಗತಿಯನ್ನು ಒಟ್ಟು ೧೫ ಜನ ದೇಸಾಯಿರು ಆಳಿದರು. ಅವರಲ್ಲಿ ಕ್ರಿ.ಶ. ೧೭೪೦ ರಲ್ಲಿ ಆಳಿದ ೬ನೇ ಖಾನಗೌಡನೇ ಕೊನೆಯವನು.

ಕ್ರಿ.ಶ. ೧೬೮೬ ರಲ್ಲಿ ಆದಿಲ್‌ಶಾಹಿಯ ಸಾಮ್ರಾಜ್ಯವು ಅಸ್ತಂಗತವಾದಾಗ ಶಿರಹಟ್ಟಿಯ ದೇಸಾಯಿಗಳು ಸವಣೂರ ನವಾಬ ಅಧೀನಕ್ಕೆ ಒಳಪಟ್ಟರು. ಕ್ರಿ.ಶ. ೧೭೫೬ ರ ವರೆಗೆ ಆಳಿದ ಸವಣೂರು ನವಾಬ (ಅಬ್ದುಲ್ ಹಖೀಮಖಾನ) ಬಹದ್ದೂರನು ಲಕ್ಷ್ಮೇಶ್ವರವನ್ನು ಒಳಗೊಂಡು ೧೧ ವಿಭಾಗಗಳನ್ನು "ಬಾಳಾಜಿರಾವ್ ಪೇಶ್ವೆಗೆ (ಮೂರನೇ ಪೇಶ್ವೆ ೧೭೪೦-೬೧) ಒಪ್ಪಿಸಿದನು" ಇದರಿಂದ ಶಿರಹಟ್ಟಿ ದೇಸಾಯಿಯವರು ತಮ್ಮ ಪೌಜದಾರಿಕೆ ಹಕ್ಕುಗಳನ್ನು ಕಳೆದುಕೊಂಡು ಕೇವಲ ಭೂಮಾಲಿಕರಾಗಿ ಇನಾಮನ್ನು ಅನುಭವಿಸುತ್ತಾ ಶಿರಹಟ್ಟಿಯಲ್ಲಿ ಉಳಿದರು. ಕ್ರಿ.ಶ ೧೭೬೪ ರಲ್ಲಿ ಪೇಶ್ವೆಯವರು ಸಾಂಗಲಿ ಸಂಸ್ಥಾನದ ಶಿರಹಟ್ಟಿಯು ಸೇರಿದಂತೆ ಮಿರಜ ಪ್ರದೇಶದ ೧೧ ವಿಭಾಗಗಳನ್ನು "ಗೋವಿಂದರಾವ್ ಪಟವರ್ಧನ" ಅನ್ನುವ ಸರದಾರನಿಗೆ ಜಹಾಗೀರ ಹಾಕಿಕೊಟ್ಟರು. ಮುಂದೆ ಕ್ರಿ.ಶ ೧೭೭೨ ರಲ್ಲಿ ಗೋವಿಂದ ಭಟ್ಟನ ಮಗ ಚಿಂತಾಮಣಿರಾವನು ಮಿರಜ ಪ್ರಾಂತ್ಯದಲ್ಲಿ ಆಳ್ವಿಕೆಗೆ ಬಂದನು. ಈತನು ಚಿಕ್ಕವನಿದ್ದರಿಂದ ಈತನ ಕಕ್ಕ ಗಂಗಾಧರರಾಯನು ಆಡಳಿತವನ್ನು ನಡೆಸುತ್ತಿದ್ದನು. ಚಿಂತಾಮಣಿ ರಾಯನು ಪ್ರಾಪ್ತವಯಸ್ಕರಾದೊಡನೆ ಗಂಗಾಧರರಾಯನು ಸಿಂಹಾಸನ ಬಿಟ್ಟುಕೊಡಲು ಒಪ್ಪಲಿಲ್ಲ. ಆಗ ಮಿರಜ ಸಂಸ್ಥಾನವು ಕ್ರಿ.ಶ.೧೮೦೧ ರಲ್ಲಿ ಎರಡು ಹೋಳಾಯಿತು. ೫ ಲಕ್ಷ ಉತ್ಪನ್ನದ ಮಿರಜ ಸಂಸ್ಥಾನವು ಗಂಗಾಧರರಾಯನಿಗೆ ಹೋಯಿತು. ಶಿರಹಟ್ಟಿಯನ್ನೊಳಗೊಂಡ ೬ ಲಕ್ಷ ಉತ್ಪನ್ನದ ಸಾಂಗಲಿ ಸಂಸ್ಥಾನ ಚಿಂತಾಮಣಿರಾಯನಿಗೆ ಸೇರಿತು. ಸಾಂಗಲಿ ಸಂಸ್ಥಾನಕ್ಕೆ ಸೇರಿದ ಶಿರಹಟ್ಟಿ ಈ ಭಾಗದ ಆಡಳಿತವನ್ನು "ಬಾಹುಸಾಹೇಬ ಲಾಗು" ಎಂಬಾತನೇ ನಡೆಸುತ್ತಿದ್ದನು.[೧೮]

ಭಾರತ ಸ್ವತಂತ್ರವಾದ ನಂತರ ಕ್ರಿ.ಶ. ೧೯೪೮ ರಲ್ಲಿ ಸಾಂಗಲಿ ಸಂಸ್ಥಾನ ಶಿರಹಟ್ಟಿಯು ಧಾರವಾಡ ಜಿಲ್ಲೆಯಲ್ಲಿ ವಿಲೀನವಾಯಿತು. ಮುಂದೆ ದಿನಾಂಕ ೨೪-೦೮-೧೯೯೭ ರಂದು ಧಾರವಾಡ ಜಿಲ್ಲೆಯು ವಿಕೇಂದ್ರೀಕರಣಗೊಂಡು ಗದಗ ಜಿಲ್ಲೆ ರಚನೆಯಾದ ನಂತರ ಶಿರಹಟ್ಟಿ ತಾಲೂಕು ನೂತನ ಗದಗ ಜಿಲ್ಲೆಗೆ ಸೇರ್ಪಡೆಯಾಯಿತು. ಹೀಗಿದೆ ಶಿರಹಟ್ಟಿಯು ರಾಜಕೀಯವಾಗಿ ನಡೆದುಬಂದ ದಾರಿ.

ಆಡಳಿತದ ವಿಭಾಗಗಳು ಮೌರ್ಯರಿಂದ ಹಿಡಿದು ಬಹುಮನಿ ಸುಲ್ತಾನರ ಅರಸರ ಅಳ್ವಿಕೆ ಕಾಲದ ವರೆಗೂ ಅನೇಕ ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟ ಗದಗ ಜಿಲ್ಲೆಯ ರಾಜಕೀಯ ಸಾಮಾಜಿಕ ಆರ್ಥಿಕ, ಧಾರ್ಮಿಕ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ, ಇವು ಪ್ರಾಚೀನ ನಾಡುಗಳನ್ನೇ ವ್ಯಾಪಿಸಿವೆ. ಕಲ್ಯಾಣರ ಚಾಲುಕ್ಯರ ಅವಧಿಯಲ್ಲಿ ಆಡಳಿತದ ಅನುಕೂಲಕ್ಕಾಗಿ ತಮ್ಮ ಸಾಮ್ರಾಜ್ಯಗಳೂ ಅನೇಕ

ವಿಭಾಗ ಉಪವಿಭಾಗಗಳಲ್ಲಿ ಕಂಡುಬರುತ್ತವೆ. ಇಂದು ರಾಜ್ಯ ಜಿಲ್ಲೆ ತಾಲೂಕು ಗ್ರಾಮ ಹೋಬಳಿಗಳೆಂದು ವಿಭಾಗಿಸಿದಂತೆ ಪ್ರಾಚೀನ ಕಾಲದಲ್ಲಿ ದೇಶವನ್ನು ಪ್ರಾಂತ ಮಂಡಲ, ಕಂಪಣ, ದೇಶ, ವಿಷಯ, ನಾಡು, ಎಂದು ವಿಂಗಡಿಸಿದ ಸಂಗತಿ ಶಾಸನಗಳಲ್ಲಿ ಉಕ್ತವಾಗಿವೆ. ಇಂತಹ ವಿಭಾಗಗಳಲ್ಲಿ ಕುಂತಳದೇಶವು ಒಂದು ಕುಂತಳ ದೇಶದಲ್ಲಿ ಸಮಾವೇಶಗೊಳ್ಳದ ಉಪ ವಿಭಾಗಗಳಾದ ಬನವಾಸಿ, ಅಲಸಗಿ, ಬಾಗಡಗಿ, ಅರಗಂಟಿ, ತದರವಾಡಿ, ಕಿಸಕಾಡು, ಕರಡಿಕಲ್ಲು, ಹಾನಗಲ್ಲು, ಬೆಳ್ವಲ, ಪುಲಿಗೆರೆ ಮತ್ತು ಮಾಸವಾಡಿ ಮುಂತಾದವುಗಳು. ಕೆಲವು ಬಾರಿ ಈ ಆಡಳಿತದ ವಿಭಾಗಗಳನ್ನು ಅರಸು ಮನೆತನದ ಹೆಸರಿನಿಂದ ಕರೆಯಲಾಗಿದೆ. ಉದಾ: ಗಂಗವಾಡಿ, ಸಿಂಧವಾಡಿ, ಕದಂಬ ಮಂಡಲ, ಮುಂತಾದವು, ಈ ಆಡಳಿತ ವಿಭಾಗಳೊಂದಿಗೆ ಸಂಖ್ಯೆಗಳನ್ನು ಜೋಡಿಸಿ ಕರೆಯುವ ಪದ್ಧತಿ ಪ್ರಚಲಿತದಲ್ಲಿತ್ತೆಂದು ತಿಳಿದುಬರುತ್ತದೆ. ಉದಾ: ಗಂಗವಾಡಿ ೯೬೦೦೦, ಪುಲಿಗೆರೆ ೩೦೦, ಮಾಸವಾಡಿ ೧೪೦, ಕಿಸುಕಾಡು ೧೦೦೦, ಹಾನಗಲ್ಲು ೫೦೦, ಬೆಳ್ವಲ ೩೦೦, ಪೆರ್ಬಾಳ ೭೦, ಹೀಗೇ ಅನೇಕ ಮನೆತನಗಳಿದ್ದವು. ಹಳ್ಳಿಗಳನ್ನು ಗುಂಪುಗಳನ್ನಾಗಿ ಮಾಡಿಕೊಂಡು ಆಡಳಿತ ಮಾಡಬೇಕೆಂಬ ವಿಚಾರವನ್ನು ಮನು ತಿಳಿಸಿದ್ದಾನೆ. ಮತ್ತು ಗ್ರಾಮಗಳ ಗುಂಪಿನ ಸಂಖ್ಯೆ ೧೦ ರಿಂಧ ೧೦೦ ಇರಬಹುದೆಂದೇ ಹೇಳಿದ್ದಾನೆ. ಕುಕನೂರಿನ ೩೦ ಗ್ರಾಮಗಳು ವಿಭಾಗಕ್ಕೆ ಮುಖ್ಯ ಸ್ಥಳವಾಗಿತ್ತು ಎಂಬುದು ಅರ್ಥವಾಗುತ್ತದೆ.

ಪುಲಿಗೆರೆ ೩೦೦: ಗದಗ ಜಿಲ್ಲೆಯಲ್ಲಿ ಬರುವ ಪ್ರಾಚೀನ ವಿಭಾಗ ಪುಲಿಗೆರೆ ೩೦೦ ಇದು ೩೦೦ ಗ್ರಾಮಗಳ ಆಢಳಿತ ವಿಭಾಗವಾಗಿದ್ದು, ಕಲ್ಯಾಣರ ಚಾಲುಕ್ಯರ ಕಾಲದ ಮಹತ್ವದ ಸ್ಥಾನ ಪಡೆದಿತ್ತು. ಚಾಲುಕ್ಯ ವಿಕ್ರಮಾದಿತ್ಯನ ರಾಣಿ ಲಕ್ಷ್ಮೀದೇವಿ ಪುಲಿಗೆರೆಯನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ್ದಳು. ಶಾಸನಗಳಿಂದ ಎಂಬ ಅಂಶ ಇದರ ಮೇರೆಗಳನ್ನು ಗುರುತಿಸಲು ಸಾಧ್ಯ, ಎಂ.ಎಂ ಕಲಬುರ್ಗಿಯವರು ಪುಲಿಗೆರೆ ೩೦೦ ಆಡಳಿತ ವಿಭಾಗದ ಸೀಮೆಯನ್ನೇ ತಿಳಿಸುತ್ತಾ, ಪುಲಿಗೆರೆ ೩೦೦ ಉತ್ತರಕ್ಕೆ ಬೆಳ್ವಲ ೩೦೦ ಪಶ್ಚಿಮಕ್ಕೆ ಹಾನಗಲ್ಲಐನ್ನೂರು, ದಕ್ಷಿಣಕ್ಕೆ ಬನವಾಸಿ ಪನ್ನಿರ್ಚ್ಛಾಸಿರ, ಪೂರ್ವಕ್ಕೆ ಮಾಸವಾಡಿ ೧೪೦ ನಾಡುಗಳಿದ್ದವೆಂದು ಉಲ್ಲೇಖಿಸಿದ್ದಾರೆ.[೧೯] ಪುಲಿಗೆರೆ ವಿಭಾಗವು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕ ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಗ್ರಾಮಗಳನ್ನು ಗದಗ, ಕುಂದಗೋಳ ಮತ್ತು ಶಿಗ್ಗಾಂವ ತಾಲೂಕಿನ ಕೆಲ ಗ್ರಾಮಗಳನ್ನು ಒಳಗೊಂಡಿತ್ತು. ವರದಾ ನದಿ ಇದರ ದಕ್ಷಿಣ ಗಡಿ ರೇಖೆಯಾಗಿತ್ತು. ಇದರಲ್ಲಿ ಸಮಾವೇಶಗೊಂಡಂತೆ ಕಾಣುವ ಹಾವೇರಿ, ಬಂಕಾಪೂರ, ಹಾನಗಲ್ಲು, ಬನವಾಸಿ ಪ್ರಾಂತದಲ್ಲಿದ್ದವು. ಸೊರಟೂರು, ಬನ್ನಿಕೊಪ್ಪ, ಬೆಳ್ಳಟ್ಟಿ ಯರಗುಪ್ಪಿ, ಗೋವಿನಕೊಪ್ಪ, ಶಿರಹಟ್ಟಿ, ಗೊಜನೂರು, ಲಕ್ಷ್ಮೇಶ್ವರ, ಶಿಗ್ಗಿ, ಗುಡಗೇರಿ, ಕಳಸ, ಕಾಲಡಿ, ಸವಣೂರು, ಗ್ರಾಮಗಳು ಈ ನಾಡಿನಲ್ಲಿ ಸಮಾವೇಶಗೊಳ್ಳುತ್ತವೆ.

ಪೆರ್ಬಾಳ ೭೦ : ವಿದ್ವಾಂಸರ ಅಭಿಪ್ರಾಯದ ಪ್ರಕಾರ ಇದು ಪುಲಿಗೆರೆ ೩೦೦ ರ ಉಪ ವಿಭಾಗವಾಗಿದೆ. ಲಕ್ಷ್ಮೇಶ್ವರಕ್ಕೆ ಸಮೀಪದಲ್ಲಿರುವ ಹೆಬ್ಬಾಳ ಗ್ರಾಮವೇ ಹಿಂದೆ ೭೦ ಗ್ರಾಮಗಳಿಗೆ ರಾಜಧಾನಿಯಾಗಿ ಪೆರ್ಬಾಳವೆಂಬ ಹೆಸರನ್ನು ಪಡೆದಿತ್ತು.[೨೦]

ಟಿಪ್ಪಣಿಗಳು :

೧) ಕನ್ನಡ ವಿಷಯ ವಿಶ್ವಕೋಶ, ಪು–೭೪೮.

೨) ಅದೇ. ಪು.

೩) "ಸಿಂಗಿರಾಜ ಪುರಾಣ", ಪು–೪೩.

೪) ಕರ್ನಾಟಕ ಚರಿತ್ರೆ ಸಂ–೧, ಪು–೭೮೭.

೫) ಅದೇ.

೬) "ಮೌರ್ಯ ಮತ್ತು ಶಾತವಾಹನ ಯುಗ", ಪು–೧೩.

೭) ಅದೇ.

೮) "ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ", ಪು–೧೯೬–೧೯೭

೯) ಅದೇ.

೧೦) ಅದೇ.

೧೧) ಅದೇ.

೧೨) ಅದೇ.

೧೩) "ಧಾರವಾಡ ಜಿಲ್ಲಾ ಶಾಸನ ಸೂಚಿ", ಪು–೩೬.

೧೪) ಪೂರ್ವೋಕ್ತ, ಪು–೨೦೧

೧೫) ಗೋವಿಂದ ಮೂರ್ತಿ ದೇಸಾಯಿ, ಶಿರಹಟ್ಟಿ : ವರ್ಣರಂಜಿತ ಐತಿಹಾಸಿಕ ಪುಟಗಳು. ಸಂಯುಕ್ತ ಕರ್ನಾಟಕ (ಸಪ್ತಾಹಿಕ ಸೌರಭ), ೪–೨–೧೯೯೬.

೧೬) Gazetteer of Bombay State- Dhawad District P-848, 1958

೧೭) ಅದೇ, ಪು–೮೪೯

೧೮) ಪೂರ್ವೋಕ್ತ, ಸಂಯುಕ್ತ ಕರ್ನಾಟಕ (ಸಾಪ್ತಾಹಿಕ ಸೌರಭ), ೪–೨–೧೯೯೬.

೧೯) "ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ", ಪು–೯೧.

೨೦) "ಆರನೇ ವಿಕ್ರಮಾದಿತ್ಯನ ಶಾಸನಗಳ" ಒಂದು ಅಧ್ಯಯನ, ಪು–೧೦೮

ಅಧ್ಯಾಯ : ೪

ಪ್ರಾಕ್ಚಾರಿತ್ರಿಕ ನೆಲೆಗಳು

೪.೧ ಪೀಠಿಕೆ

೪.೨ ಆದಿ ಹಳೆ ಶಿಲೆಯುಗ ಸಂಸ್ಕೃತಿ

೪.೩ ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

೪.೪ ನೂತನ ಶಿಲಾಯುಗ ಸಂಸ್ಕೃತಿ

೪.೫ ಶಿಲಾ ತಾಮ್ರಯುಗ ಸಂಸ್ಕೃತಿ

೪.೬ ಬೃಹತ್ ಶಿಲಾಯುಗ ಸಂಸ್ಕೃತಿ

೪.೭ ಇತಿಹಾಸ ಆರಂಭಕಾಲದ ಸಂಸ್ಕೃತಿ

ಅಧ್ಯಾಯ – ೪

ಪ್ರಾಕ್ಚಾರಿತ್ರಿಕ ನೆಲೆಗಳು

೪.೧ ಪೀಠಿಕೆ

ಸ್ವಾತಂತ್ರಪೂರ್ವ ಕಾಲದಿಂದಲೂ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಪ್ರಾಚೀನ ಸಂಸ್ಕೃತಿಯ ನೆಲೆಗಳನ್ನು ಕುರಿತು ದೇಶೀಯ ಹಾಗೂ ವಿದೇಶಿಯ ಪುರಾತತ್ವ ಶಾಸ್ತ್ರಜ್ಞರು ಅನೇಕ ಸಂಶೋಧನೆಗಳನ್ನು ಕೈಗೊಂಡಿರುವರು. ಈ ದಿಶೆಯಲ್ಲಿ ರಾಬರ್ಟ ಬ್ರೂಸ್‌ಪೂಟ್, ಕರ್ನಲ್ ಮೆಕೆಂಜಿ ಎಂ.ಎಚ್. ಕೃಷ್ಣ, ಬಿ ಸುಬ್ಬರಾವ್, ಆರ್ ಶೇಷಾದ್ರಿ, ಎಚ್.ಡಿ. ಸಂಕಾಲಿಯಾ, ಆರ್.ಎಸ್. ಪಪ್ಪು ಮೊದಲಾದವರು ಪ್ರಮುಖರಾಗಿದ್ದಾರೆ. ಭಾರತೀಯ ಪುರಾತತ್ವ ಇಲಾಖೆ ಮೈಸೂರು ಪುರಾತತ್ವ ಇಲಾಖೆ ಹಾಗೂ ಪುಣೆಯ ಡೆಕ್ಕನ್ ಕಾಲೇಜ ಮತ್ತು ಕೆಲವು ಸಂಸ್ಥೆಗಳು ಇತಿಹಾಸ ಪೂರ್ವ ಕಾಲದ ನೆಲೆಗಳನ್ನು ಪತ್ತೆ ಹಚ್ಚುವಲ್ಲಿ ಶ್ರಮವಹಿಸಿ ದುಡಿದಿವೆ. ಮದ್ರಾಸಿನ ಬಳಿಯ ಪಲ್ಲಾವರಂ ಎಂಬಲ್ಲಿ ಕ್ರಿ.ಶ ೧೮೬೩ ರಲ್ಲಿ ರಾಬರ್ಟ ಬ್ರೂಸ್‌ಪೂಟ್‌ರವರು ಜೇಡಿಮಣ್ಣಿನ ಗರಸು ನೆಲದಲ್ಲಿ ಮೊದಲ ಬಾರಿಗೆ ಶಿಲಾಯುಗದ ಉಪಕರಣಗಳನ್ನು ಶೋಧಿಸಿದ್ದಾರೆ. ಕರ್ನಾಟಕದಲ್ಲಿಯೂ ಇವರೇ ಮೊದಲ ಬಾರಿಗೆ ಹಳೆಯ ಶೀಲಾಯುಗದ ನೆಲೆಗಳನ್ನು ಗುರುತಿಸುವ ಪ್ರಯತ್ನಮಾಡಿ ಯಶಸ್ವಿಯಾಗಿದ್ದಾರೆ. ಆರ್.ಎಸ್. ಪಪ್ಪು, ಎಸ್.ಬಿ.ದೇವ್, ಆರ್.ಬಿ.ಜೋಷಿ, ಎಸ್.ಎಸ್.ಮಾಳವಾಡ, ಅ.ಸುಂದರ, ರವಿ ಕೋರಿಶೆಟ್ಟರ, ರು.ಮ.ಷಡಕ್ಷರಯ್ಯರವರು ಇತಿಹಾಸ ಪೂರ್ವಕಾಲದ ಬೇರೆ ಬೇರೆ ನೆಲೆಗಳನ್ನು ಗುರುತಿಸಿದ್ದಾರೆ. ಅ.ಸುಂದರ ಅವರು ಉತ್ತರ ಕರ್ನಾಟಕದ ಪ್ರಮುಖ ಪ್ರಾಕ್ಚಾರಿತ್ರಿಕ ನೆಲೆಗಳನ್ನು ಗುರುತಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಿದವರಲ್ಲಿ ಮೊದಲಿಗರು. ಶೈಕ್ಷಣಿಕ ಸಂಸ್ಥೆಗಳಷ್ಟೇ ಉತ್ತಮ ಸಂಶೋಧನೆಯ ಕಾರ್ಯಗಳನ್ನು ನಿರ್ವಹಿಸುತ್ತಿರುವ ಕರ್ನಾಟಕ ಇತಿಹಾಸ ಅಕಾಡೆಮಿ ಹಾಗೂ ಕರ್ನಾಟಕ ಇತಿಹಾಸ ಕಾಂಗ್ರೆಸ್ ಪರಿಷತ್‌ಗಳು ತಮ್ಮ ವಾರ್ಷಿಕ ಸಮ್ಮೇಳನದಲ್ಲಿ ಹೊಸ ಹೊಸ ನೆಲೆಗಳನ್ನು ಪರಿಚಯಿಸಿ ಹಾಗೂ ಅರ್ಥೈಸುವ ಕಾರ್ಯಗಳನ್ನು ಮಾಡಿರುತ್ತಾರೆ.[೧]

ಗದಗ ಜಿಲ್ಲೆಯು ಇತ್ತೀಚೆಗೆ ೧೯೯೭ ರಲ್ಲಿ ಧಾರವಾಡ ಜಿಲ್ಲೆಯಿಂದ ವಿಭಜನೆಗೂಂಡು ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡಿದೆ. ಇದರಲ್ಲಿ ಶಿರಹಟ್ಟಿ, ನರಗುಂದ, ಮುಂಡರಗಿ, ರೋಣ, ಗದಗ ತಾಲೂಕಗಳಿವೆ. ಇಲ್ಲಿನ ಭೂ ಲಕ್ಷಣವು ಮಾನವನು ತನ್ನ ಜೀವನಕ್ರಮಗಳನ್ನು ನಡೆಸಲು ಅವಕಾಶಗಳನ್ನು ಕಲ್ಪಿಸಿ ಕಾಲಮಾನದುದ್ದಕ್ಕೂ ಇಲ್ಲಿ ನೆಲೆಸಿದ್ದನೆಂಬುದಕ್ಕೆ ಹಲವಾರು ಕುರುಹುಗಳನ್ನು ಒದಗಿಸಿದೆ. ಪ್ರಾಚೀನ ಕುರುಹಗಳಿಂದ ಈ ಪ್ರದೇಶದಲ್ಲಿ ಸುಮಾರು ಐದು ಲಕ್ಷ ವರ್ಷಗಳಷ್ಟು

ಹಿಂದೆಯೇ ಮಾನವ ಜೀವಿಸಿದ್ದನೆಂಬ ವಿಷಯ ತಿಳಿಯುತ್ತದೆ. ಒಟ್ಟಾರೆ ಗದಗ ಜಿಲ್ಲೆಯು ತನ್ನದೇ ಆದ ಪ್ರಾಗಿತಿಹಾಸವನ್ನು ಹೊಂದಿದೆ.[೨]

ಪ್ರಾಗಿತಿಹಾಸ ಅದ್ಯಯನದಿಂದ ಶಿರಹಟ್ಟಿ ಹೋಬಳಿಯು ಸಮೃದ್ಧವಾದ ಪ್ರದೇಶವಾಗಿತ್ತೆಂಬ ಅಂಶ ತಿಳಿದುಬರುತ್ತದೆ. ಈ ವರೆಗೆ ಆದಿ ಹಳೆಯಶಿಲಾಯುಗದ ಹತ್ತು ನೆಲೆಗಳು, ಬೃಹತ್ ಶಿಲಾಯುಗದ ಒಂದು ನೆಲೆ ಮತ್ತು ೭ ಗೋರಿನೆಲೆಗಳು ದೊರೆತಿವೆ. ಇತಿಹಾಸ ಆರಂಭಕಾಲಕ್ಕೆ ಸಂಬಂಧಪಟ್ಟಂತೆ ೧೭ ನೆಲೆಗಳು ಕಂಡುಬಂದಿವೆ. ದೊರೆತಿರುವ ನೆಲೆಗಳ ಸಂಖ್ಯೆಗಳ ಆಧಾರದಿಂದ ಸಾಧ್ಯವಾದಷ್ಟು ಮಟ್ಟಿಗೆ ಇಲ್ಲಿನ ಪುರಾತತ್ವದ ಸಾಂಸ್ಕೃತಿಕ ಹಂತಗಳ ಬಗೆಗೆ ತಿಳಿಯುವ ಪ್ರಯತ್ನವನ್ನು ಮಾಡಬಹುದಾಗಿದೆ.[೩]

೪.೨ ಆದಿ ಹಳೇ ಶಿಲಾಯುಗ ಸಂಸ್ಕೃತಿ

ಭೌಗೋಳಿಕವಾಗಿ ಆ ಕಾಲಮಾನದ ಜನರಿಗೆ ಅವಶ್ಯಕವಾಗಿ ಬೇಕಿದ್ದ ಪ್ರಕೃತಿದತ್ತವಾದ ಆಸರೆಯ ಸ್ಥಳಗಳೂ, ವಿವಿಧ ಶಿಲಾಮಾದರಿ, ನೀರಿನಾಸರೆ ಹಾಗೂ ಹವಾಗುಣವು ಪೂರಕವಾಗಿ ಒದಗಿ ಈ ಪ್ರದೇಶವು ನಿವಾಸಕ್ಕೆ ಯೋಗ್ಯವಾಗಿದ್ದಿತ್ತೆಂಬುದು ಗೊತ್ತಾಗುತ್ತದೆ.[೪] ಈ ಪ್ರದೇಶದಲ್ಲಿ ಹಳೆಶಿಲಾಯುಗದ ಮೂರು ಹಂತಗಳ ಸಾಂಸ್ಕೃತಿಕ ಅವಶೇಷಗಳು ದೊರಕದಿದ್ದರೂ ಪೂರ್ವ ಹಂತವಾಗಿ ಆದಿ ಹಳೆಶಿಲಾಯುಗ ಸಂಸ್ಕೃತಿಯು ಮಾತ್ರ ಕಂಡುಬಂದಿರುತ್ತದೆ. ಇತಿಹಾಸ ಪೂರ್ವಕಾಲದ ಮಾನವ ಸಂಸ್ಕೃತಿಯ ನೆಲೆಗಳನ್ನು ಶಿರಹಟ್ಟಿ ಪರಿಸರದಲ್ಲಿ ಗುರುತಿಸಲಾಗಿದೆ. ಇಲ್ಲಿ ಹಳೇಶಿಲಾಯುಗದಲ್ಲಿ ಪ್ರಚಲಿತವಾಗಿದ್ದ ಕ್ವಾರ್ಟಜೈಟಿನ ಕೈಗೊಡಲಿ, ಮಚ್ಚು-ಮುಂತಾದ ಆಯುಧಗಳು ದೊರೆತಿವೆ. ಹಳೆಶಿಲಾಯುಗದ ಕಾಲಕ್ಕೆ ಸೇರಿದ ಒಂದು ನಿವೇಶನ ಶಿರಹಟ್ಟಿ ಪರಿಸರದ ಕೊಂಚಗೇರಿ ದೊಡ್ಡಹಳ್ಳದ ದಡದಲ್ಲಿದೆ. ಇದೇ ತಾಲೂಕಿನ ಜೀರಮಾದಾಪುರ ಹಾಗೂ ನಿಟ್ಟೂರುಗಳಲ್ಲಿ ಶಿಲಾಯುಗದ ನೆಲೆಗಳಿವೆ.

ಇಲ್ಲಿ ದೊರಕಿರುವ ಉಪಕರಣಗಳನ್ನು ಕ್ವಾರ್ಟ್ಸ್, ಮರಳುಗಲ್ಲು ಸಿಸ್ಟ್‌ನ, ವಿವಿಧ ಮಾದರಿ ಹಾಗೂ ಗ್ರಾನೈಟ್ ಮಾದರಿಯ ಶಿಲೆಗಳಿಂದ ರೂಪಿಸಲಾಗಿದೆ. ಈ ಎಲ್ಲ ಮಾದರಿಯ ಶಿಲೆಗಳು ಸ್ಥಳೀಯವಾಗಿಯೇ ದೊರಕುತ್ತಿದ್ದು ಇವುಗಳನ್ನು ಇಲ್ಲಿಯೇ ರೂಪಿಸಿರುವುದು ಸ್ಪಷ್ಟವಾಗುತ್ತದೆ. ಸಿದ್ಧಗೊಳಿಸಿದ ಎಲ್ಲಾ ಉಪಕರಣಗಳನ್ನು ತಾಂತ್ರಿಕತೆಯ ದೃಷ್ಟಿಯಿಂದ ಸೂಕ್ಷ್ಮತೆಯನ್ನು ಗುರುತಿಸಬಹುದಾಗಿದ್ದು ಕೆಲವು ಉಪಕರಣಗಳು ಹೆಚ್ಚು ಸವೆದಿವೆ. ವೈವಿಧ್ಯತೆಯ ತಾಂತ್ರಿಕತೆಯ ಶಿಲೋಪಕರಣಗಳನ್ನು ಬಳಸಲಾಗಿದೆ. ಮುಖ್ಯವಾಗಿ ಕೈಗೊಡಲಿಗಳನ್ನು, ಚಕ್ಕೆ ಹಾಗೂ ಉಂಡೆಕಲ್ಲುಗಳಲ್ಲಿ ರೂಪಿಸಲಾಗಿದೆ. ಅವುಗಳನ್ನು ಉಂಡೆಕಲ್ಲಿನ ಚಪ್ಪಟೆ ಹಾಗೂ ಚಕ್ಕೆ ತೆಗೆದ ಕೈಗೊಡಲಿಗಳೆಂದು ಎರಡು ಮುಖ್ಯ ಭಾಗವಾಗಿ ವಿಭಾಗಿಸಲಾಗಿದೆ. ಈ ಸಂಸ್ಕೃತಿಯ ಅವಶೇಷಗಳು ನಿಟ್ಟೂರು. ಜೀರಮಾದವಪುರ ಹಾಗೂ ಕೊಂಚಿಗೇರಿಯಲ್ಲಿ ದೊರೆತಿವೆ. ಆದರೆ ನಂತರದ ಮಧ್ಯೆ

ಮತ್ತು ಅಂತ್ಯ ಹಳೆಶಿಲಾಯುಗದ ಸಂಸ್ಕೃತಿಯ ಅವಶೇಷಗಳಿಗೆ ಸಂಬಂಧಿಸಿದಂತೆ ಯಾವುದೇ ಕುರುಹುಗಳು ಕಂಡುಬಂದಿರುವುದಿಲ್ಲ. ಈ ಬಗೆಗೆ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

೮.೩ .ಸೂಕ್ಷ್ಮ ಶಿಲಾಯುಗ ಸಂಸ್ಕೃತಿ:

ಇಲ್ಲಿ ಯಾವುದೇ ನೆಲೆಗಳು ದೊರೆತಿರುವದಿಲ್ಲ.

೮.೪. ನೂತನ ಶಿಲಾಯುಗದ ಸಂಸ್ಕೃತಿ

ನೂತನ ಶಿಲಾಯುಗ ಸಂಸ್ಕೃತಿಯು ಈ ಪ್ರದೇಶದಲ್ಲಿ ವೈಶಿಷ್ಟ್ಯ ಪೂರ್ಣವಾಗಿ ವೃದ್ಧಿ ಹೊಂದಿದ್ದಿತ್ತೆಂಬುದು ಗಮನಾರ್ಹ. ಮುಖ್ಯವಾಗಿ ಇಲ್ಲಿನ ಪ್ರಾಕೃತಿಕ ಸಂಪತ್ತು, ಅದರಲ್ಲೂ ಸ್ಥಳೀಯವಾಗಿ ದೊರಕುವ ಶಿಲಾಮಾದರಿ ಹಾಗೂ ವಿವಿಧ ನೀರಿನಆಸರೆಗಳು ನೂತನ ಶಿಲಾಯುಗದ ಮಾನವನು ಇಲ್ಲಿ ತನ್ನ ವಾಸ್ತವ್ಯ ಪಡೆದುಕೊಳ್ಳಲು ಸಹಕಾರಿಯಾಗಿದ್ದವು. ಈ ಪ್ರದೇಶದ ಹೆಚ್ಚಿನ ನೆಲೆಗಳು ಮಸ್ಕಿ, ಬ್ರಹ್ಮಗಿರಿಯ ಮಾದರಿಯ ಮಡಿಕೆ ಮತ್ತು ಶಿಲೋಪಕರಣಗಳನ್ನು ಸಿದ್ಧಗೊಳಸಿ ಬಳಸಿರುವುದನ್ನು ಕಾಣಬಹುದು. ಜೊತೆಗೆ ಕೆಲವು ನಿರ್ದಿಷ್ಟ ನೆಲೆಗಳಲ್ಲಿ ನೂತನ ಶಿಲಾಯುಗದ ಶಿಲಾಯುಧಗಳು ಕಂಡುಬಂದಿದ್ದು ಸಮೃಧ್ಧ ನೆಲೆಗಳು ಇಲ್ಲಿ ಇದ್ದದನ್ನು ದೃಢಪಡಿಸುತ್ತವೆ.[೮] ಜೀರಮಾದವಪುರ, ನೆವೇಭಾವನೂರು, ನಿಟ್ಟೂರು, ಲಕ್ಷ್ಮೇಶ್ವರ, ಸಂಕದಾಳ, ಹುಲ್ಲೂರು, ಹೊಳಲಾಪುರ, ಅಡರಕಟ್ಟಿ ಈ ಪ್ರದೇಶಗಳಲ್ಲಿ ಶಿಲೋಪಕರಣಗಳು ದೊರೆತಿವೆ. ಇಲ್ಲಿ ಒಟ್ಟು ೧೦ ನೆಲೆಗಳನ್ನು ಗುರುತಿಸಲಾಗಿದೆ. ಒಟ್ಟಾರೆ ನೂತನ ಶಿಲಾಯುಗದ ಸಂಸ್ಕೃತಿಯ ಆರಂಭ ಹಂತದಿಂದ ಸಮೃದ್ಧವಾಗಿ ಬೆಳವಣಿಗೆ ಹೊಂದಿದ ಹಂತದವರೆಗೆ ಮುಂದುವರೆಯುವದನ್ನು ಗುರುತಿಸಲು ಸಾಧ್ಯವಾಗಿದೆ.

ನವಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿದ ಉಜ್ಜ ನಯಮಾಡಿದ ಕಲ್ಲಿನ ಕೊಡಲಿ ಮತ್ತು ಇತರೆ ಆಯುಧಗಳು, ಕಂದು ಬಣ್ಣದ ಮಡಕೆಕಲ್ಲು ಹಾಗೂ ಚಿಕ್ಕ ಚಿಕ್ಕ ಕಲ್ಲಿನ ಚಾಕು ಒರೆಗಳು ಮುಂತಾದವುಗಳು ಶಿರಹಟ್ಟಿ ಪರಿಸರದ ಗ್ರಾಮಗಳಲ್ಲಿ ದೊರಕಿವೆ.[೯]

೮.೫ ಶಿಲಾ ತಾಮ್ರಯುಗ ಸಂಸ್ಕೃತಿ :

ಶಿಲಾ ತಾಮ್ರಯುಗ ಸಂಸ್ಕೃತಿ ರೋಣ ತಾಲೂಕಿನಲ್ಲಿ ಮಾತ್ರ ಈ ಹಂತದ ನೆಲೆಗಳು ಕಂಡುಬಂದಿದ್ದು, ಆದರೆ ಶಿರಹಟ್ಟಿ ಪರಿಸರದಲ್ಲಿ ಈ ಹಂತದ ನೆಲೆಗಳು ಕಂಡು ಬರುವದಿಲ್ಲ.

೮.೬.ಬೃಹತ್ ಶಿಲಾಯುಗ ಸಂಸ್ಕೃತಿ:

ಬೃಹತ್ ಶಿಲಾಯುಗ ಸಂಸ್ಕೃತಿಯ ಹಂತದಲ್ಲಿ ಮಾನವನು ಮುಖ್ಯವಾಗಿ ಕಬ್ಬಿಣ ಬಳಕೆಯನ್ನು ರೂಢಿಸಿಕೊಂಡಿದ್ದು ಹಾಗೂ ತನ್ನದೇ ಆದ ರೀತಿಯಲ್ಲಿ ಮಡಿಕೆ, ಮಾದರಿಗಳನ್ನು ರೂಪಿಸಿಕೊಂಡಿದ್ದನು. (ಈ ಸಂಸ್ಕೃತಿಯ ಹಂತದಲ್ಲಿ ಮುಖ್ಯವಾಗಿ ಒಂದು ವಾಸ್ತವ್ಯ ನೆಲೆಯಾದರೆ ಮತ್ತೊಂದು ಗೋರಿ ನೆಲೆಯಾಗಿದೆ). ಶಿರಹಟ್ಟಿ ಪರಿಸರದಲ್ಲಿ ದೊರೆತಿರುವ ಒಟ್ಟು ನೆಲೆಗಳಲ್ಲಿ ಒಂದು

ನೆಲೆ ವಾಸ್ತವ್ಯ ನೆಲೆಯಾದರೆ ಆರು ನೆಲೆಗಳು ಗೋರಿ ನೆಲೆಗಳಾಗಿವೆ. ಇವುಗಳ ಅಧ್ಯಯನವು ಇಲ್ಲಿನ ಬೃಹತ್ ಶಿಲಾಯುಗ ಸಂಸ್ಕೃತಿಯ ಪ್ರಾಮುಖ್ಯತೆಯ ಬಗೆಗೆ ತಿಳಿದುಕೊಳ್ಳಲು ಸಾಧ್ಯವಾಗಿದೆ. ವಾಸ್ತವ್ಯದ ನೆಲೆಗಳಲ್ಲಿ ರೂಢಿ ಮೂಲವಾದಂತೆ ಕಪ್ಪು ಕೆಂಪು ವರ್ಣದ ಮಡಿಕೆ ಭಾಗಗಳು ಕಂಡುಬರುತ್ತವೆ. ಶಿರಹಟ್ಟಿ ಪರಿಸರದ ಇಟಗಿಯಲ್ಲಿ ಮಾತ್ರ ಈ ನೆಲೆ ಕಂಡುಬಂದಿದೆ.

ಬೃಹತ್ ಶಿಲಾಯುಗದ ಜನರ ಭಾರಿ ಗಾತ್ರದ ಕಲ್ಲು ಚಪ್ಪಡಿಗಳಿಂದ ಮಾಡಿದ ಮೇಜಿನಂತೆ ಕಾಣುವ ಕಲ್ಲಿನ ಸಮಾಧಿಗಲ್ಲು ಹಾಗೂ ಶಿಲಾವೃತ್ತಗಳು 'ಹೊಸೂರ' 'ಬೆಳ್ಳಟ್ಟಿ' ತಂಗೋಡ 'ಬೆಳಗಟ್ಟಿ' ಗ್ರಾಮಗಳಲ್ಲಿ ದೊರಕಿವೆ.[೧೦] ಶಿಲೆಯ ಹಲಗೆಗಳನ್ನು ಬಳಸಿ ಮಾಡಿದ ಈ ಬೃಹತ್ ಕಲ್ಲಿನ ಸಮಾಧಿಗಳಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ಪಾತ್ರೆಗಳು, ಮಾನವ ಅಸ್ಥಿಪಂಜರದ ಅವಶೇಷ, ಮಣಿ, ಮಣ್ಣಿನ ಗೊಂಬೆ, ಕಬ್ಬಿಣದ ಆಯುಧಗಳು ದೊರೆತಿವೆ. ಈ ಪ್ರದೇಶದಲ್ಲಿನ ಬೃಹತ್ ಶಿಲಾಯುಗದ ಸಂಸ್ಕೃತಿಯ ಜನರ ಧಾರ್ಮಿಕ ವಿಧಿವಿಧಾನ ಹಾಗೂ ತಮ್ಮ ನಂಬುಗೆಯ ಪ್ರತೀಕಗಳನ್ನು ತಿಳಿಯಲು ಸಹಾಯಕವಾಗಿವೆ.[೧೧] ಗದಗ ಜಿಲ್ಲೆಯಲ್ಲಿ ದೊರೆತಿರುವ ಬೃಹತ್ ಶಿಲಾಯುಗದ ಗೋರಿಗಳ ಅಧ್ಯಯನದಂತೆ ದೇವಿಹಾಳ, ಬೆಳಗಟ್ಟಿ, ಸೋಗಿಹಾಳ ಹೊಸುರುಗಳಲ್ಲಿ ಶಿಲಾವೃತ್ತಗಳಿರುವುದನ್ನು ಕಂಡುಕೊಳ್ಳಬಹುದಾಗಿದೆ. ನಂತರದಲ್ಲಿ ಅಸ್ತಿಪಾತ್ರೆ ದಫನಗಳು ಗೋರಿಗಳನ್ನು ರೋಣ ತಾಲೂಕಿನ ಗೋಗೇರಿ, ಗಜೇಂದ್ರಗಡಗಳಲ್ಲಿ; ಹಾದಿ ಕೋಣೆ ಗೋರಿ ನರಗುಂದ ತಾಲೂಕಿನ ಬೈರನಹಳ್ಳಿಯಲ್ಲಿ ಮತ್ತು ಕಲ್ಮನೆಗಳು ಶಿರಹಟ್ಟಿ ತಾಲೂಕಿನ ಬೆಳ್ಳಟ್ಟಿಯಲ್ಲಿ ಕಂಡುಬಂದಿವೆ.

೪.೭ .ಇತಿಹಾಸ ಆರಂಭ ಕಾಲದ ನೆಲೆಗಳು:

ಮಾನವನ ಜೀವನದ ವಿವಿಧ ಸಂಸ್ಕೃತಿಗಳ ಹಂತದಿಂದ ಲಿಪಿಯ ಬಳಕೆಗೆ ಬಂದ ಹಂತವನ್ನು ಇತಿಹಾಸ ಆರಂಭಕಾಲವೆಂದು ಗುರುತಿಸಬಹುದು. ಈ ಹಂತಕ್ಕೆ ಸಂಬಂಧಿಸಿದ ಹಲವಾರು ನೆಲೆಗಳ ಅಧ್ಯಯನ ಹಾಗೂ ಉತ್ಖನನಗಳು ಈ ಕಾಲದ ಬಗೆಗೆ ಸಾಕಷ್ಟು ಮಾಹಿತಿಗಳನ್ನು ಒದಗಿಸಿವೆ. ಈ ಹಂತದ ಪ್ರಮುಖ ಅವಶೇಷವಾದ ಮಣ್ಣಿನ ಪಾತ್ರೆಗಳು ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಲಾಗಿದೆ. ಪ್ರಮುಖ ಮಣ್ಣಿನ ಪಾತ್ರೆ ಮಾದರಿಗಳೆಂದರೆ ಕೆಲವು ಹೊಳಪುಳ್ಳ ಮೃತ ಪಾತ್ರೆಗಳು, ಅರೆಟೈನ್ ಮಾದರಿ ಮಧ್ಯದ ಜಾಡಿಗಳು, ನಕ್ಷಾಂತಿತ ಪಾತ್ರೆಗಳು, ಕೆಂಪು ಲೇಪನದಡಿ ಬಿಳಿವರ್ಣ ಚಿತ್ರಗಳ ಮಡಿಕೆ ಭಾಗಗಳು ಶಿರಹಟ್ಟಿ ಪರಿಸರದಲ್ಲಿ ಈ ಕೆಳಕಂಡ ಅಡರಕಟ್ಟಿ, ಇಟಗಿ, ಚೌಡಾಳ, ಜೀರಮಾದವಪುರ, ತಂಗೋಡ, ನವೆಭಾವನೂರು, ನಾಗರಮಡವು, ನಿಟ್ಟೂರು, ಬೆಳ್ಳಟ್ಟಿ, ಲಕ್ಷ್ಮೇಶ್ವರ, ಸಂಕದಾಳ, ಹುಲ್ಲೂರು, ಹೊಳಲಾಪುರಗಳಲ್ಲಿ ೧೩ ನೆಲೆಗಳು ಕಂಡುಬಂದಿವೆ.[೧೨]

ಒಟ್ಟಾರೆಯಾಗಿ ಶಿರಹಟ್ಟಿ ಪರಿಸರದಲ್ಲಿ ಪೂರ್ವತಿಹಾಸದ ಕಾಲಮಾನದಿಂದಲೂ ಜನಜೀವನ ಇದ್ದುದನ್ನು ಗುರುತಿಸಲಾಗಿದೆ. ಆದರೆ ಈ ಪ್ರದೇಶದಲ್ಲಿ ಯಾವುದೇ ಒಂದು ಉತ್ಖನನ

ಇದುವರೆಗೆ ನಡೆದಿಲ್ಲ. ಇಲ್ಲಿನ ಪ್ರಾಗೈತಿಹಾಸಿಕ ಮಾನವನ ಸಮೃದ್ಧತೆಯ ಬಗೆಗೆ ತಿಳಿಯಲು ಅತ್ಯಗತ್ಯವಾಗಿ ಉತ್ಖನನ ಕಾರ್ಯ ನಡೆಯಬೇಕಾಗಿದೆ.

ಟಿಪ್ಪಣಿಗಳು:

೧. ಕರ್ನಾಟಕ ಚರಿತ್ರೆ ಸಂ-೧, ಪು-೯೬.
೨. "ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ", ಪು. ೮-೨೦
೩. ಅದೇ ಪು.
೪. "ಕರ್ನಾಟಕ ಪುರಾತತ್ವ ನೆಲೆಗಳು", ಪು ೧೫೩-೧೫೭
೫. ಅದೇ. ಪು.
೬. "ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ಪು. ೧೩
೭. ಅದೇ. ಪು.
೮. "ಕರ್ನಾಟಕ ಗೆಜಿಟಿಯರ್ ಧಾರವಾಡ ಜಿಲ್ಲೆ", ಪು, ೫೩
೯. "ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ", ಪು ೭೯೯-೮೦೦
೧೦. ಪೂರ್ವೋಕ್ತ, ಪು. ೧೮-೧೯.
೧೧. ಕ್ಷೇತ್ರ ಕಾರ್ಯಸಂದರ್ಭದಲ್ಲಿ ದೊರೆತ ಉಪಕರಣಗಳಿಂದ ಇದು ಸ್ಪಷ್ಟವಾಗುತ್ತದೆ.

ಅಧ್ಯಾಯ : ೫

ದೇವಾಲಯ ಮತ್ತು ಶಿಲ್ಪಗಳು

೫.೧ ಶೈವ

೫.೨ ವೈಷ್ಣವ

೫.೩ ಜೈನ ಬಸದಿಗಳು

೫.೪ ಮಠಗಳು

೫.೫ ಶಿಲ್ಪಗಳು

೧. ಶೈವ

೨. ವೈಷ್ಣವ

ಅಧ್ಯಾಯ – ೫

ದೇವಾಲಯ ಮತ್ತು ಶಿಲ್ಪಗಳು

೫.೧ . ಪೀಠಿಕೆ :

ವಸ್ತುವಿನಿಂದ ರಚಿತವಾದ ವಾಸಯೋಗ್ಯವಾದ ಎಲ್ಲಾ ರಚನೆಗಳು ವಾಸ್ತು ರಚನೆ ಎಂದೆನಿಸುತ್ತವೆ. ಮಾನವನ ನಾಗರೀಕತೆಯ ಮಾನದಂಡವಾದ ಈ ವಾಸ್ತು ರಚನೆ ಯುಗಯುಗಾಂತರ ಆತನ ಬೌದ್ಧಿಕ ವಿಕಾಸವನ್ನು ಖಚಿತವಾಗಿ ಚಿತ್ರಿಸುವ ಪ್ರತ್ಯಕ್ಷ ಸಾಧನವಾಗಿದೆ. 'ಮಾನಸಾರ' ಕೃತಿಯು ಬ್ರಹ್ಮನ ನಾಲ್ಕು ಮುಖಗಳಿಂದ ಜನಿಸಿದ ವಿಶ್ವಕರ್ಮ, ಮಯ, ತೃಷ್ಟ ಮತ್ತು ಮನುವಿನ ಪುತ್ರರಾದ ಸ್ತಪತಿ, ಸೂತ್ರಗಾಯಿ, ವರ್ಧಕಿ ಮತ್ತು ತಕ್ಷಕರಿಂದ ವಾಸ್ತು ಕಲೆ ಬೆಳೆಯಿತು ಎಂದು ಉಲ್ಲೇಖಿಸಿದೆ. ವಾಸ್ತು ಪುರುಷನು ಆಕಾಶದಿಂದ ತನ್ನ ಕೈಕಾಲುಗಳನ್ನು ಮಡಿಸಿಕೊಂಡು ಈಶಾನ್ಯಕ್ಕೆ ತಲೆಯನ್ನು ಮಾಡಿ ಭೂಮಿಯ ಮೇಲೆ ಬಿದ್ದಾಗ ಚತುಶ್ಕೋಣ ಆಕಾರವಾಗಿ ವಾಸ್ತು ಮಂಡಲ ನಿರ್ಮಾಣವಾಯಿತೆಂದು ಅವನ ಹೃದಯದಲ್ಲಿ ಬ್ರಹ್ಮ ಇತರ ಅಂಗಗಳಲ್ಲಿ ಎಲ್ಲಾ ದೇವತೆಗಳು ನೆಲೆಸಿದರೆಂದು ಹೇಳುವ ಕಥೆ ಹೊಂದಿದೆ. ದೈವಿಕವಾದ ಶಕ್ತಿಯೊಂದನ್ನು ಈ ಕಲೆಯಲ್ಲಿ ಕಾಣಬೇಕೆಂಬ ಆಶಯವೇ ಆ ಪರಿಕಲ್ಪನೆಗೆ ಮೂಲವಾಗಿದೆ. ಈ ಅಧ್ಯಾಯದಲ್ಲಿ ಶಿರಹಟ್ಟಿ ಪರಿಸರದ ದೇವಾಲಯಗಳ ವಾಸ್ತು ಕಲೆಯನ್ನು ಪರಿಶೀಲಿಸಲಾಗಿದೆ.

ಶಿಲಾಯುಗದ ಮಾನವನು ತನ್ನ ಸುತ್ತಲಿನ ಪ್ರಕೃತಿಯಲ್ಲಾಗುವ ಬದಲಾವಣೆಗಳ ಹಿಂದೆ ಯಾವುದೋ ಒಂದು ಅನಂತ ಮತ್ತು ಅಗೋಚರ ಶಕ್ತಿ ಇದೆ ಎಂದು ನಂಬಿ ಅದಕ್ಕೆ ಒಂದು ರೂಪವನ್ನು ಕೊಟ್ಟನು. ಆ ರೂಪಗಳಿಗೆ ರಕ್ಷಣಾರ್ಥವಾಗಿ ಪ್ರಾರಂಭದಲ್ಲಿ ನೈಸರ್ಗಿಕ ಗುಹಾಲಯಗಳನ್ನು ಬಳಸಿಕೊಂಡ; ತರುವಾಯ ಪ್ರತ್ಯೇಕ ಆಲಯಗಳನ್ನು ನಿರ್ಮಿಸಿಲು ಪ್ರಾರಂಭಿಸಿದನು. ಆ ಪರಿಕಲ್ಪನೆಯೆ ದೇವಾಲಯಗಳ ನಿರ್ಮಾಣಕ್ಕೆ ನಾಂದಿಯಾಯಿತು. ಆರಂಭದಲ್ಲಿ ದೇವಾಲಯವು ದೇವರ ಪ್ರತಿಮೆಯನ್ನು ಪ್ರತಿಷ್ಟಾಪಿಸಲು ಬೇಕಾದ ಒಂದು ಚಿಕ್ಕ ಮಂಟಪದಷ್ಟಿತ್ತು. ಕಾಲಾನುಕ್ರಮದಲ್ಲಿ ಪೂಜಾ ವಿಧಿವಿಧಾನ ಮತ್ತು ಆಚರಣೆಗಳು ಹೆಚ್ಚಿದಂತೆ ಅದಕ್ಕೆ ತಕ್ಕಂತೆ ದೇವಾಲಯವು ವಿಸ್ತೃತ ರೂಪವನ್ನು ಪಡೆಯಲಾರಂಭಿಸಿತು.[೧]

ವಾಸ್ತುಕಲಾ ಪರಂಪರೆಯು ನಿರ್ಮಾಣ, ಬೆಳವಣಿಗೆ ಮತ್ತು ಪ್ರಯೋಗಶೀಲತೆಯ ದೃಷ್ಟಿಯಿಂದ ಕನ್ನಡನಾಡು ನಿಜಕ್ಕೂ ವೈಶಿಷ್ಟ್ಯಪೂರ್ಣವಾಗಿದೆ. ಅದಕ್ಕೆ ಈ ನಾಡಿನ ನೆಲ, ಜಲ, ಸಂಪನ್ಮೂಲಗಳ ಜೊತೆಗೆ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಭೌಗೋಳಿಕ, ರಾಜಕೀಯ ಪರಿಸರ ಮತ್ತು ಜನಪದರ ಹೊಂದಾಣಿಕೆಯು ಮನೋಭೂಮಿಕೆ, ಅಳವಡಿಕೆ ಆಶಯ, ನೆರೆಹೊರೆಯ ಪ್ರದೇಶಗಳೊಂದಿಗೆ ಸಂಬಂಧ-ಸಂಪರ್ಕಗಳ ಪರಿಣಾಮ ಮೊದಲಾದವುಗಳು ಪ್ರಧಾನವೆನಿಸುತ್ತವೆ.

ಹೀಗಾಗಿ ಭಾರತದ ಉಳಿದೆಡೆ ಕಾಣಲಾರದಷ್ಟು ವೈವಿಧ್ಯಮಯ ವಾಸ್ತು ಶೈಲಿಗಳು ಈ ನಾಡಿನಲ್ಲಿ ಕಂಡುಬರುತ್ತವೆ. ಕನ್ನಡನಾಡಿನಲ್ಲಿ ಕ್ರಿಸ್ತಶಕ ಆರಂಭದಲ್ಲಿ ನಿರ್ಮಾಣವಾದ ದೇವಾಲಯಗಳು ಇಂದು ಉಳಿದು ಬಂದಿಲ್ಲ. ಅವುಗಳ ಕುರಿತಾಗಿ ಉತ್ಖನನ ಮತ್ತು ಸಮಕಾಲೀನ ಶಾಸನಗಳಿಂದ ಮಾತ್ರ ಸ್ಪಷ್ಟವಾಗುತ್ತದೆ. ಹೀಗಾಗಿ ಈ ನಾಡಿನಲ್ಲಿ ದೇವಾಲಯಗಳ ವಿವಿಧ ಶೈಲಿ ಮತ್ತು ವಿನ್ಯಾಸಗಳನ್ನು ಅರಿಯಲು ಬಾದಾಮಿ ಚಾಲುಕ್ಯ ಮನೆತನದ ಕಾಲಕ್ಕೆ ಮೊರೆ ಹೋಗಬೇಕಾಗುತ್ತದೆ. ಈ ಕಾಲದಲ್ಲಿ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ ಮೊದಲಾದಡೆಗಳಲ್ಲಿ ಪ್ರಯೋಗ ಮತ್ತು ಸೃಜನ ಶೀಲತೆಯ ಜೊತೆಗೆ ಶಿಲಾ ಸಾಮಗ್ರಿ ಲಭ್ಯತೆ. ಅಕ್ಕ ಪಕ್ಕದ ಪ್ರದೇಶಗಳಿಂದ ಬಂದ ಶಿಲ್ಪಿಗಳ ಕೈಚಳಕ ರಾಜಾಶ್ರಯ, ಧರ್ಮಸ್ಫೂರ್ತಿ, ಸಂಪನ್ಮೂಲಗಳ ಕ್ರೋಢೀಕರಣವೇ ಮೊದಲಾದ ಸಂಗತಿಗಳು ವಿಶಿಷ್ಟ ವಾಸ್ತು ಶೈಲಿ ಮತ್ತು ವಿನ್ಯಾಸಗಳಿಗೆ ಹೆಚ್ಚಿನ ಸ್ಫೂರ್ತಿ ನೀಡಿದವು. ಅಲ್ಲದೇ ಸ್ಥಳೀಯ ಜಾನಪದ ಶೈಲಿಯೊಂದಿಗೆ ಸಂಯೋಜನೆ ಮಾಡಲು ಅನುವಾಯಿತು. ಮಾನ್ಯಖೇಟದ ರಾಷ್ಟ್ರಕೂಟರ ಮನೆತನದ ಕಾಲದಲ್ಲಿ ಹೆಚ್ಚು ಸ್ಫುಟಗೊಂಡು ಅತ್ಯುಚ್ಛ ಅಭಿವ್ಯಕ್ತಿಯನ್ನೇ ಪಡೆಯಿತು. ಆ ಪರಂಪರೆಯನ್ನು ಕಲ್ಯಾಣದ ಚಾಲುಕ್ಯ, ದ್ವಾರಸಮುದ್ರದ ಹೊಯ್ಸಳ, ವಿಜಯನಗರ ಮೊದಲಾದ ಅರಸರು ಮತ್ತು ಸಮಕಾಲಿನ ಮಹಾಮಂಡಳೇಶ್ವರರು, ಮಹಾಸಾಮಂತರ ಮನೆತನಗಳು ಮುಂದುವರೆಸಿದವು.

ದೇವಾಲಯ ವಾಸ್ತು ಕಲೆ ಬೆಳೆಯುತ್ತಾ ಬಂದಂತೆ ಅವುಗಳ ನಿರ್ಮಾಣ ಕುರಿತಂತೆ ಕೃತಿಗಳು ರಚನೆಯಾದವು. ದೇವಾಲಯಗಳನ್ನು ಎಲ್ಲಿ ಕಟ್ಟಬೇಕು, ಹೇಗೆ ಕಟ್ಟಬೇಕು, ಯಾವ ವಿಧಿ ವಿಧಾನಗಳಿರಬೇಕು. ಮೊದಲಾದ ವಿವರಗಳನ್ನು ನಿರ್ಧರಿಸುವ ಶಾಸ್ತ್ರವೇ ಸಿದ್ಧವಾಯಿತು. ಗೃಹಸೂತ್ರ, ಬೃಹತ್ಸಂಹಿತೆ, ಸುಪ್ರಭೇದಾಗಮ, ಕಾಮಿಕಾಗಮ, ಕಾರಣಾಗಮ, ರೌರವಾಗಮ, ಅಜಿತಾಗಮ, ವೈಖಾನಸಾಗಮ, ಕೌಟಲ್ಯನ ಅರ್ಥಶಾಸ್ತ್ರ, ಬಾಣನ ಹರ್ಷಚರಿತ, ರಾಜತರಂಗಿಣಿ, ಮೃಚ್ಛಕಟಿಕ, ಅಮರಕೋಶ ಮೊದಲಾದ ಕೃತಿಗಳಲ್ಲಿ ವಾಸ್ತು ಕಲೆಯ ವಿವರಗಳಿವೆ. ಅಪರಾಜಿತಪೃಚ್ಛಾ, ಸಮಾರಾಂಗಣ ಸೂತ್ರದಾರ, ವಿಶ್ವಕರ್ಮ ಪ್ರಕಾಶ, ಮಾನಸೋಲ್ಲಾಸ, ರೂಪಮಂಡಲ ಮೊದಲಾದ ಕೃತಿಗಳು ಉತ್ತರಭಾರತದ ದೇವಾಲಯಗಳು ರೂಪರೇಷೆಯನ್ನು ಸೂಚಿಸಿವೆ. ಅಂತೆಯೇ ಮಯಮತ, ಮಾನಸಾರ, ಕಾಶಪಶಿಲ್ಪ, ವಿಮಾನಾರ್ಚನಕಲ್ಪ, ಪದ್ಮಸಂಹಿತಾ, ವಾಸ್ತುವಿದ್ಯಾ ಶಿಲ್ಪರತ್ನ ಮೊದಲಾದ ಕೃತಿಗಳು ದಕ್ಷಿಣ ಭಾರತದ ದೇವಾಲಯಗಳ ರೂಪರೇಷೆಗಳನ್ನು ಉಲ್ಲೇಖಿಸಿವೆ. ಈ ಕೃತಿಗಳಲ್ಲಿ ದೇವಾಲಯಗಳನ್ನು ಭೌಗೋಳಿಕ ಪ್ರದೇಶ ರಚನಾ ವಿನ್ಯಾಸ ಶಿಖರದ ಶೈಲಿಯ ಹಿನ್ನೆಲೆಯಲ್ಲಿ ಬೇರೆ ಬೇರೆ ರೀತಿಯಲ್ಲಿ ವರ್ಗೀಕರಿಸಲಾಗಿದೆ. ಕಾಮಿಕಾಗಮ, ಕೌಶ್ಯಪಶಿಲ್ಪ, ಶಿಲ್ಪರತ್ನ ಮೊದಲಾದ ಕೃತಿಗಳಲ್ಲಿ ಹಿಮಾಲಯದಿಂದ ವಿಂಧ್ಯಪರ್ವತಗಳ ವರೆಗಿನ ದೇವಾಲಯಗಳು, ನಾಗರ ಶೈಲಿಯನ್ನು ಒಳಗೊಂಡಿವೆ. ವಿಂಧ್ಯಪರ್ವತದಿಂದ ಕೃಷ್ಣಾನದಿ ತೀರದವರೆಗಿನ ದೇವಾಲಯಗಳು

ವೇಸರ ಶೈಲಿಯವು ಹಾಗೂ ಕೃಷ್ಣಾ ನದಿಯಿಂದ ಕನ್ಯಾಕುಮಾರಿವೆರಗಿನ ದೇವಾಲಯಗಳು ದ್ರಾವಿಡ ಶೈಲಿಯವು ಎಂದು ಭೌಗೋಳಿಕ ಹಿನ್ನಲೆಯಲ್ಲಿ ವರ್ಗೀಕರಿಸಲಾಗಿದೆ. ವಿಮಾನಾರ್ಚನಕಲ್ಪ, ದೀಪ್ತಾಗಮ, ರೌರಾವಾಗಮ, ವಾಯುಮತ ಮೊದಲಾದ ಕೆಲವು ಕೃತಿಗಳಲ್ಲಿ ದೇವಾಲಯಗಳನ್ನು ರಚನಾವಿನ್ಯಾಸದ ಆಧಾರದ ಹಿನ್ನಲೆಯಲ್ಲಿ ವರ್ಗೀಕರಿಸಲಾಗಿದೆ. ಈ ಕೃತಿಗಳಲ್ಲಿ ಬುಡದಿಂದ ತುದಿಯವರೆಗೂ ಚೌಕೋನವಾಗಿರುವುದು ನಾಗರ, ಗ್ರೀವದಿಂದ ಮೇಲಕ್ಕೆ ೬ ಅಥವಾ ೮ ಮುಖಗಳಿರುವುದು ದ್ರಾವಿಡ, ಅದೇ ವೃತ್ತಾಕಾರವಾಗಿರುವುದು ವೇಸರ ಎಂದು ಹೇಳಲಾಗಿದೆ.

ಕನ್ನಡ ನಾಡಿನಲ್ಲಿ ಪ್ರಾದೇಶಿಕ ಭಿನ್ನತೆ, ಪರಸ್ಪರ ಪ್ರಭಾವ, ಪ್ರಾಕೃತಿಕ ಪರಿಸರ, ಕಟ್ಟಡ ಸಾಮಗ್ರಿಗಳ ಅನುಕೂಲ, ಕಾಲಕಾಲಕ್ಕೆ ಪ್ರಭಲವಾಗುತ್ತಿದ್ದ ಬೇರೆ ಬೇರೆ ಧರ್ಮಗಳು, ಜನರ ಅಭಿರುಚಿ, ಅರಸರು, ಮಾಂಡಲೀಕರು, ಅಮಾತ್ಯರು, ವರ್ತಕರು, ಸ್ಥಳೀಯ ಮುಖಂಡರು ಮೊದಲಾದವರ ಪ್ರೋತ್ಸಾಹ, ಆಶ್ರಯ, ಅನುದಾನ, ನಿರ್ಮಾಣದ ಅವಶ್ಯಕತೆ, ಶಿಲ್ಪಿಗಳ ಮನೋಧರ್ಮ ಮತ್ತು ಕೈಚಳಕ ಮೊದಲಾದ ಸಂಗತಿಗಳ ಹಿನ್ನಲೆಯಲ್ಲಿ ದೇವಾಲಯಗಳ ಸ್ಥಳೀಯ ಶೈಲಿ ಮತ್ತು ವಿನ್ಯಾಸವನ್ನು ಬೆಳೆಸಿಕೊಂಡವು. ಅಜಿತಾಗಮ ಕೃತಿಯಲ್ಲಿ ಕಂಠದಿಂದ ಮೇಲಕ್ಕೆ ಅಷ್ಟಾಶ್ರಯವಾಗಿರುವುದು ದ್ರಾವಿಡ ಶೈಲಿಯೆಂದು ಹೇಳಲಾಗಿದೆ. ಮೂಲದಿಂದ ಸ್ತೂಪಿಯ ವರೆಗೆ ೬ ಅಥವಾ ೮ ಕೋನವಾಗಿರುವುದು, ಕೆಳಗೆ ೬ ಅಥವಾ ೮ ಕೋನಗಳು, ಮೇಲ್ಗಡೆ ಆಯತಾಕಾರ ಅಥವಾ ಚತುಸ್ರ, ಗ್ರೀವದಿಂದ ಕೆಳಗೆ ಚತುರಸ್ರವಾಗಿದ್ದು, ಕಂಠದಿಂದ ಮೇಲಕ್ಕೆ ೬ ಅಥವಾ ೮ ಕೋನವಾಗಿರುವುದು ಈ ಶೈಲಿಯ ದೇವಾಲಯಗಳ ಲಕ್ಷಣಗಳಾಗಿವೆ. ಇವುಗಳ ಶಿಖರಗಳು ಮೇಲೆ ಹೋದಂತೆ ಕ್ರಮೇಣ ಸಣ್ಣದಾಗುತ್ತ ಮದ್ಯದಲ್ಲಿ ಅಂತಸ್ತುಗಳಿರುತ್ತವೆ. ಪ್ರತಿಯೊಂದು ಅಂತಸ್ತು ಗರ್ಭಗೃಹದ ಪ್ರತಿರೂಪವಾಗಿರುತ್ತದೆ. ಪ್ರತಿಯೊಂದು ಅಂತಸ್ತನ್ನು ವಿಭಾಗಿಸುವ ದುಂಡು ಕಪೋತುಗಳು ಹಾಗೂ ಮೇಲಂತಸ್ತುಗಳ ಸುತ್ತಲೂ ಇರುವ ಇಕ್ಕಟ್ಟಾದ ತೆರೆದ ಅಂಕಣಗಳು ಈ ಶೈಲಿಯ ದೇವಾಲಯಗಳಲ್ಲಿ ಮುಖ್ಯವಾಗಿ ಕಂಡುಬರುವ ಲಕ್ಷಣಗಳಾಗಿವೆ.[5] ವಿಮಾನದ ಮೇಲ್ಭಾಗ ಶಿಖರದ ಕೇಂದ್ರ ಬಿಂದುವಿನತ್ತ ಬಾಗಿದಂತಿರುವ ಚತುರಸ್ರವಾದ ಲಂಬ ವಿನ್ಯಾಸಗಳಿರುತ್ತವೆ. ಶಿಖರದ ತುದಿಯಲ್ಲಿ ಚಪ್ಪಟೆ, ವೃತ್ತಾಕಾರ ಮತ್ತು ಅಂಚುಗಳಿಂದ ಅರೆಗೋಳವಿನಾಕಾರದಲ್ಲಿ ಖಂಡರಿಸಿದ ಆಮಲಕವಿರುತ್ತದೆ. ಅಜಿತಾಗಮ ಕೃತಿಯಲ್ಲಿ ಕಂಠದಿಂದ ಮೇಲೆಕ್ಕೆ ವೃತ್ತಾಕಾರವಾಗಿರುವುದು ವೇಸರ ಶೈಲಿಯೆಂದು ಹೇಳಲಾಗಿದೆ. ಇದು ನಾಗರ ಮತ್ತು ದ್ರಾವಿಡ ಶೈಲಿಗಳ ಮಿಶ್ರಣದ ಶೈಲಿಯನ್ನೆ ಸೂಚಿಸುತ್ತದೆ. ಫಾಂಶನಾ ಶೈಲಿಯ ದೇವಾಲಯಗಳು ಕಲ್ಯಾಣದ ಚಾಲುಕ್ಯ ಮತ್ತು ಹೊಯ್ಸಳ ಮನೆತನಗಳ ಕಾಲಾವಧಿಯಲ್ಲಿ ಕಂಡು ಬರುತ್ತವೆ. ಅವುಗಳು ಊರ್ಧ್ವಮುಖ ರಚನೆಯಲ್ಲಿ ಅಧಿಷ್ಠಾನ, ಬಿತ್ತಿ, ಪ್ರಸ್ತರಗಳಿದ್ದು, ಮೇಲ್ಕಟ್ಟಡವು ಕಂಠ ಮತ್ತು ಕಪೋತಗಳಿಂದ ಕೂಡಿದ್ದು, ಹಂತ ಹಂತವಾಗಿ ಚಿಕ್ಕದಾಗುತ್ತ ಮೇಲೇರುತ್ತದೆ. ಅಂತ್ಯದಲ್ಲಿ ಗ್ರೀವ ಶಿಖರ, ಸ್ತೂಪಿ ಇರುತ್ತವೆ. ಪ್ರಾರಂಭದಲ್ಲಿ ಈ

ಶೈಲಿಯ ದೇವಾಲಯಗಳನ್ನು ಕದಂಬ ನಾಗರ ಶೈಲಿ ಎಂದು ಗುರುತಿಸಲಾಗುತ್ತಿತ್ತು. ಈಗ ಇವುಗಳನ್ನು ಪಾಂಸನಾ ಶೈಲಿ ಎಂದೇ ಗುರುತಿಸಲಾಗುತ್ತದೆ.

೫.೨ ಶೈವ ದೇವಾಲಯಗಳು

ಸಿಂಧೂ ನಾಗರೀಕತೆಯ ಹರಪ್ಪ ಮೊಹೆಂಜೋದಾರೋ, ಕಾಲಿಬಂಗಾನ್, ಮೊದಲಾದ ನೆಲೆಗಳಲ್ಲಿ ದೊರೆತ ಶಿವಲಿಂಗವನ್ನು ಹೋಲುವ ಕುರುಹುಗಳು ಪಶುಪತಿ ಮುದ್ರಗಳು, ವೈದಿಕ ಸಾಹಿತ್ಯದ ಮಂತ್ರಗಳಲ್ಲಿ ಪ್ರಾಸ್ತಾಪಿತ ರುದ್ರ, ಪಶು, ಶಿವ, ವೈಷ್ಣವ, ಮೀಢ್ಯ, ಕಪರ್ದಿನಿ, ಮೊದಲಾದ ಪದಗಳು ಮಹಾಕಾವ್ಯಗಳು, ಪುರಾಣಗಳು, ಸಾಹಿತ್ಯದಲ್ಲಿ ಪ್ರಸ್ತಾಪಿತ ವಿಚಾರಗಳಿಂದ ಶೈವ ಧರ್ಮದ ಪ್ರಾಚೀನತೆಯನ್ನು ಗುರುತಿಸಬಹುದು. ಆದರೆ ಈ ಧರ್ಮದ ಧಾರ್ಮಿಕ ನಿರ್ಮಾಣಗಳು ಶಾತವಾಹನ, ಚುಟು, ಇಕ್ಷ್ವಾಕು, ಅಭೀರ ಅರಸು ಮೆನತನಗಳ ಆಳ್ವಿಕೆಯ ಕಾಲದಿಂದೀಚೆಗೆ ಕಂಡುಬರುತ್ತವೆ. ಕನ್ನಡ ನಾಡಿನ ಸಂದರ್ಭದಲ್ಲಿ ನರಗುಂದ ತಾಲೂಕಿನ ವಾಸನ ಮತ್ತು ಶಿಕಾರಿಪುರ ತಾಲೂಕಿನ ಮುಳವಳ್ಳಿಯ ಕ್ರಿ.ಶ.ಸುಮಾರು ಮೂರನೆಯ ಶತಮಾನದ ಶಾಸನೋಕ್ತ ಶಿವನ ದೇವಾಲಯಗಳ ಉಲ್ಲೇಖಗಳೇ ಅತ್ಯಂತ ಪ್ರಾಚೀನವಾಗಿವೆ. ತರುವಾಯ ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರ ಆಶ್ರಯ ಪ್ರೋತ್ಸಾಹದಡಿಯಲ್ಲಿ ಈ ಧರ್ಮದ ದೇವಾಲಯಗಳ ನಿರ್ಮಾಣ ಪರಂಪರೆ ಅವಿಚ್ಛಿನ್ನವಾಗಿ ಬೆಳೆದು ಬಂದಿದೆ. ಶಿರಹಟ್ಟಿ ಪರಿಸರದಲ್ಲಿ ಆಳ್ವಿಕೆ ಕೈಗೊಂಡಿದ್ದ ವಿವಿಧ ಅರಸು ಮನೆತನಗಳ ಕಾಲಾವಧಿಯಲ್ಲಿ ನಿರ್ಮಾಣದ ಶೈವ ದೇವಾಲಯಗಳ ವಾಸ್ತು ಕಲೆ ಈ ಕೆಳಗಿನಂತಿದೆ.

ಶಿರಹಟ್ಟಿಯ ಮುರುಗೇಶ್ವರ ಕಲ್ಮಠ

ಇದು ಅವ್ವಲಿಂಗವ್ವನ ಗುಡಿ ಹತ್ತಿರದ್ದು. ಕ್ರಿ.ಶ. ೧೭-೧೮ ನೇ ಶತಮಾನಕ್ಕೆ ಸಂಬಂಧಪಟ್ಟಿದೆ. ಇದರ ತಲವಿನ್ಯಾಸವು ಗರ್ಭಗೃಹ, ತೆರೆದ ಅಂತರಾಳ ಮತ್ತು ಪ್ರಾಂಗಣಗಳನ್ನು ಒಳಗೊಂಡಿದ್ದು. ಕಲ್ಲು ಮತ್ತು ಗಚ್ಚುಗಾರಿಕೆಗಳಿಂದ ನಿರ್ಮಾಣವಾಗಿದೆ. ಸ್ಥಿತಿಯು ಕನಿಷ್ಟವಾಗಿದೆ. ಇದರ ಗರ್ಭಗೃಹವು ಪೂರ್ವಾಭಿಮುಖವಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುಧೇ ಶಾಸನಗಳು ಈ ವರೆಗೆ ದೊರೆತಿಲ್ಲ. ಹೀಗಾಗಿ ಇದರ ನಿರ್ಮಾತೃರ ಕುರಿತು ಸ್ಪಷ್ಟವಿಲ್ಲ. ಆದರೆ ಇದರ ವಾಸ್ತು ಲಕ್ಷಣಗಳನ್ನು ಪರಿಶೀಲಿಸಿದರೆ ಇದು ಕ್ರಿ.ಶ. ಸುಮಾರು. ೧೭-೧೮ ನೇ ಶತಮಾನದಲ್ಲಿ ನಿರ್ಮಾಣವಾಗಿರುವುದು ಸ್ಪಷ್ಟವಾಗುತ್ತದೆ.

ಗರ್ಭಗೃಹವು ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಒಂದು ಗದ್ದುಗೆ ಇದೆ. ದ್ವಾರಬಂದವು ಸರಳವಾಗಿದೆ. ತೆರೆದ ಪ್ರಾಂಗಣವು ಎತ್ತರದ ಮಟ್ಟದಲ್ಲಿ ನಿರ್ಮಾಣವಾಗಿದೆ. ಇದು ಎಂಟು ಸ್ತಂಭಗಳನ್ನು ಹೊಂದಿದೆ. ಅರ್ಧಮಂಟಪದ ಮುಂಭಾಗದಲ್ಲಿ ತೆರೆದ ಅಂಗಳವಿದೆ. ಇದರಲ್ಲಿ ಎರಡು ಕಂಬಗಳಿವೆ ಇವು ಸೂರನ್ನು ಆಧರಿಸಿವೆ. ಶಿಖರ ಅಧಿಷ್ಟಾನ ಭಾಗಗಳು ದೇವಾಲಯಕ್ಕಿಲ್ಲ. ಇದು ಚಿತ್ರದುರ್ಗದ ಮುರುಘರಾಜೇಂದ್ರ ಮಠದ ಶಾಖೆ ಎಂದು ಸ್ಥಳೀಯರು ಹೇಳುತ್ತಾರೆ.

ದೇವಾಲಯದ ಈ ಮಠವನ್ನು ಕಲ್ಲು ಮತ್ತು ಗಚ್ಚುಗಾರೆಗಳಿಂದ ನಿರ್ಮಿಸಿರುವರು. ಕಲ್ಮಠದ ಪ್ರಾಂಗಣವನ್ನು ಗಿಡ್ಡನೆಯ ದ್ವಾರದ ಮೂಲಕ ಪ್ರವೇಶಿಸಬಹುದು. ಪ್ರಾಂಗಣದ ಉತ್ತರಭಾಗದಲ್ಲಿಯೂ ಬಾಗಿಲಿದೆ. ಪಶ್ಚಿಮದ ಪ್ರಾಂಗಣ ಅಥವಾ ಅಂಗಳದ ಭಾಗಕ್ಕೆ ಗೋಡೆಯಿಲ್ಲ ಇಲ್ಲಿ ಒಬ್ಬ ಸ್ವಾಮಿಗಳು ಕೆಲವು ದಿನಗಳವರೆಗೆ ವಾಸಿಸಿದ್ದರೆಂಬುದಾಗಿ ಸ್ಥಳೀಯರು ಹೇಳುವರು.

ಹೆಬ್ಬಾಳದ ರಾಮಲಿಂಗ ಮತ್ತು ಸೋಮಲಿಂಗ

ಈ ದೇವಾಲಯವು ಊರಶಾಲೆಯ ಪಕ್ಕದಲ್ಲಿ ಇದೆ. ಇದು ಕ್ರಿ.ಶ. ೧೨-೧೩ ನೇ ಶತಮಾನಕ್ಕೆ ಸಂಬಂಧಿಸಿದೆ. ಇದರ ಗರ್ಭಗೃಹ ಪಶ್ಚಿಮಾಭಿಮುಖವಾಗಿದೆ. ಇದರ ತಳವಿನ್ಯಾಸವು ಚೌಕಾಕಾರದ ಎರಡು ಕೋಣೆಗಳನ್ನು ಚಿಕ್ಕಕಲ್ಲುಗಳಿಂದ ಮತ್ತು ಅರ್ಧಭಾಗದಷ್ಟು ಗೋಡೆಯನ್ನು ನಿರ್ಮಿಸಲಾಗಿದೆ. ಇದರಲ್ಲಿ ಕಪ್ಪುಶಿಲೆಯ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಸ್ಥಿತಿಯು ಕನಿಷ್ಟವಾಗಿದೆ. ಈ ಊರು ಪ್ರಾಚೀನವಾಗಿದ್ದು, ಇಲ್ಲಿ ರಾಷ್ಟ್ರಕೂಟರ ಕಾಲದ ಶಾಸನವಿದೆ. ಕ್ರಿ.ಶ ೯೭೫ ರ ತೇದಿಯ ಈ ಶಾಸನ ರಾಷ್ಟ್ರಕೂಟ ಅರಸ ಎರಡನೇ ಕೃಷ್ಣನ ಕಾಲದಲ್ಲಿ ಬುಜ್ಜಬ್ಬರಸಿಯು ಶಿವದೇವಾಲಯ ನಿರ್ಮಿಸಿ ಅದಕ್ಕೆ ಭೂಮಿಯನ್ನು ದಾನ ನೀಡಿದ ವಿಷಯವನ್ನು ದಾಖಲಿಸಿದೆ.[೩]

ಗರ್ಭಗೃಹವು ಚೌಕಾಕಾರದ ಕೋಣೆಯನ್ನು ಅರ್ಧಭಾಗದಷ್ಟು ಗೋಡೆಯನ್ನು ನಿರ್ಮಿಸಿ ಅದರಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿರುವ ಎರಡು ಲಿಂಗಗಳಿವೆ. ಗಂಗ ಅರಸು ಮನೆತನದ ಮಾರಸಿಂಹನ ಅಜ್ಜಿ ಬುಜ್ಜಬ್ಬರಸಿಯು ಇಲ್ಲಿ ಒಂದು ಕೆರೆಯನ್ನು ನಿರ್ಮಿಸಿ ತೂಬನ್ನು ಅಳವಡಿಸಿದ ಉಲ್ಲೇಖವು ಶಾಸನದಲ್ಲಿದೆ. ಆದರೆ ಇಂದು ಯಾವ ಕೆರೆಯೂ ಉಳಿದು ಬಂದಿಲ್ಲ. ಊರಿನಲ್ಲಿ ಮುಕ್ತೇಶ್ವರ, ಮೌನೇಶ್ವರ ಮತ್ತು ಬನಶಂಕರಿ ಗುಡಿಗಳಿವೆ ಕೆಲವು ವೀರಗಲ್ಲು ಮತ್ತು ಕ್ರಿ.ಶ. ೧೦-೧೧ ನೇ ಶತಮಾನಕ್ಕೆ ಸೇರಬಹುದಾದ ಕೆಲವು ವಾಸ್ತು ಅವಶೇಷಗಳು ಊರಿನಲ್ಲಿರುವುದನ್ನು ಕಾಣಬಹುದು. ಈ ಊರು ಶಿಲ್ಪಗಳಿಗೆ ಪ್ರಸಿದ್ಧಿಯನ್ನು ಪಡೆದಿದೆ. ಮರದ ಕೆತ್ತನೆಗಳು, ಭಾಗಿಲು, ಬಾಗಿಲ ಚೌಕಟ್ಟು, ದೇವರ ವಾಹನ, ಮುಂತಾದವುಗಳನ್ನು ಕಲಾತ್ಮಕವಾಗಿ ತಯಾರಿಸುವುದರಲ್ಲಿ ಇಲ್ಲಿಯ ಶಿಲ್ಪಿಗಳು ಹೆಸರುವಾಸಿಯಾಗಿದ್ದಾರೆ.

ಹೊಸೂರಿನ ರಾಮಲಿಂಗ ಮತ್ತು ಸೋಮಲಿಂಗ

ಈ ದೇವಾಲಯವು ಊರಿನ ಮಧ್ಯೆ ವಡವಿ ರಸ್ತೆಯಲ್ಲಿದೆ. ಇದು ಕ್ರಿ.ಶ. ೧೯ ನೇ ಶತಮಾನಕ್ಕೆ ಸಂಬಂಧಪಟ್ಟಿದ್ದು. ಇದರ ಗರ್ಭಗೃಹವು ಪೂರ್ವಾಭಿಮುಖವಾಗಿರುವ ಇದರ ಗರ್ಭಗೃಹದಲ್ಲಿ ಕಪ್ಪು ಶಿಲೆಯ ಶಿವಲಿಂಗವನ್ನು ಪ್ರತಿಷ್ಠಾಪಿಸಿರುವರು. ತೆರೆದ ಮುಖಮಂಟಪಗಳನ್ನು ಒಳಗೊಂಡು ಕಟ್ಟಿಗೆ, ಕಲ್ಲು, ತಗಡಿನ ಶೀಟುಗಳಿಂದ ನಿರ್ಮಿಸಿರುತ್ತಾರೆ. ಸ್ಥಿತಿಯು ಕನಿಷ್ಠವಾಗಿದೆ. ಈ ದೇವಾಲಯಕ್ಕೆ ಸಂಬಂದಿಸಿದಂತೆ, ಸ್ಥಳೀಯ ಕಣಕವಾಡವರ ಹೊಲದಲ್ಲಿ ಕ್ರಿ.ಶ. ೧೬೮೮ ರ ಅಪೂರ್ಣ ಶಾಸನವಿದ್ದು ಹಾವನೂರು ಲಖಮಗೌಡ ಹಾಗೂ ವಡವಿಯ ನಾಯಕ ಗೌಡಾದಿಗಳನ್ನು ಕುರಿತು ಉಲ್ಲೇಖಿಸಿದೆ.[೪] ಇದೇ ಸ್ಥಳದಲ್ಲಿದ್ದ ದೇವಾಲಯವನ್ನು ನವೀಕರಿಸಿ ಇದನ್ನು ಕಟ್ಟಿಗೆ ಮಡಿಗೆ

ದೇವಾಲಯವನ್ನಾಗಿಸಿದೆ. ಗರ್ಭಗೃಹದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಶಿವಲಿಂಗ ಹಾಗೂ ಅದರ ಮುಂದೆ ನಂದಿ ಶಿಲ್ಪ ಇದೆ. ಬಾಗಿಲವಾಡವು ಸರಳ ರಚನೆಯಲ್ಲಿದೆ.

ಮಂಟಪದ ಭಾಗವನ್ನು ಎರಡು ಭಾಗಗಳನ್ನಾಗಿಸುವಂತೆ ಅರ್ಧಭಾಗವನ್ನು ಎತ್ತರದಲ್ಲಿ ನಿರ್ಮಿಸಲಾಗಿದೆ. ಅಲ್ಲಿ ಮರದ ಎರಡು ಸರಳ ಕಂಬಗಳು ಅದರ ಮುಂಭಾಗದಲ್ಲಿಯೂ ಎರಡು ಸರಳ ಕಂಬಗಳಿವೆ. ಗೋಡೆಗಳಲ್ಲಿಯೂ ಮರದ ಅರ್ಧಗಂಬಗಳಿವೆ. ದೇವಾಲಯದ ಸೂರಿಗೆ ಮರದ ತೊಲೆಯನ್ನು ಬಳಸಿರುವುರು. ಮಂಟಪದ ಮುಂಭಾಗಕ್ಕೆ ಇತ್ತೀಚಿಗೆ ತಗಡನ್ನು ಬಳಸಿದ್ದಾರೆ.

ಈ ದೇವಾಲಯದ ಸಮೀಪ ಗಜಲಕ್ಷ್ಮೀ ಉಬ್ಬು ಶಿಲ್ಪ, ಆಂಜನೇಯ, ಗಣಪತಿ ಮತ್ತು ಕೆಲವು ನಾಗರ ಶಿಲ್ಪಗಳಿವೆ. ಕಲ್ಯಾಣ ಚಾಲುಕ್ಯ ಶೈಲಿಯ ಕಂಬಗಳು ಮತ್ತು ದೇವಾಲಯದ ವಾಸ್ತು ಅವಶೇಷಗಳನ್ನು ಕಾಣಬಹುದು.

ವರವಿ ಗ್ರಾಮದ ಮೌನೇಶ್ವರ ದೇವಾಲಯ

ಈ ದೇವಾಲಯವು ಊರಿನ ಪೂರ್ವದಿಕ್ಕಿನ ಮಜ್ಜೂರು ರಸ್ತೆಯಲ್ಲಿದೆ. ಇದು ಕ್ರಿ.ಶ ೧೭-೧೮ ನೇ ಶತಮಾನಕ್ಕೆ ಸಂಬಂದಪಟ್ಟಿದ್ದು. ಇದರ ತಲವಿನ್ಯಾಸವು ಗರ್ಭಗೃಹ, ಅಂತರಾಳ ಮತ್ತು ತೆರೆದ ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಇದನ್ನು ಕಲ್ಲು ಹಾಗೂ ಹೊಳಪು ಕಲ್ಲು. (ಟೈಲ್ಸ್) ನಿಂದ ಜೀರ್ಣೋದ್ಧಾರ ಮಾಡಿದ್ದಾರೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಈ ಭಾಗವನ್ನು ಸಾಕಷ್ಟು ನವೀಕರಿಸಿರುವರು. ಹೊಳಪು ಕಲ್ಲುಗಳನ್ನು ಗೋಡೆ ಹಾಗೂ ನೆಲಕ್ಕೆ ಅಳವಡಿಸಲಾಗಿದೆ. ಗರ್ಭಗೃಹದ ಬಾಗಿಲು ಅತ್ಯಂತ ಕಿರಿದಾಗಿದೆ. ಶಿವಲಿಂಗವನ್ನು ಮೌನೇಶ್ವರ ಎಂದು ಸ್ಥಳೀಯರು ಕರೆಯುತ್ತಾರೆ. ಅಂತರಾಳವು ಗರ್ಭಗೃಹದ ಮುಂಭಾಗದಲ್ಲಿದ್ದು ಇದನ್ನು ಸಹ ನವೀಕರಿಸಲಾಗಿದ್ದು, ಈ ಕಾರಣದಿಂದ ಪ್ರಾಚೀನ ಅಂಶಗಳು ಗೋಚರಿಸುತ್ತಿಲ್ಲ. ಅಂತರಾಳಕ್ಕೂ ಸಹ ಚಿಕ್ಕದಾದ ದ್ವಾರವಿದೆ. ಅಂತರಾಳದ ಮುಂದಿನ ಭಾಗವನ್ನು ತೆರೆದ ನವರಂಗ ಅಥವಾ ಮುಖ ಮಂಟಪ ಅಥವಾ ಮಹಾಮಂಟಪವೆಂದು ಹೆಸರಿಸಬಹುದು. ಇದರಲ್ಲಿ ಕಮಾನಿನ ಆಕಾರದಲ್ಲಿರುವ ಕಂಬಗಳು ಸೂರನ್ನು ಎತ್ತಿ ಹಿಡಿದಿವೆ. ಈ ಕಮಾನುಗಳು ಇಂಡೋ-ಇಸ್ಲಾಮಿಕ್ ವಾಸ್ತು ರಚನೆಯಿಂದ ಪ್ರೇರೇಪಿತವಾಗಿವೆ. ಮಂಟಪದ ಭಾಗವನ್ನು ಸಹ ಸಾಕಷ್ಟು ನವೀಕರಿಸಿದ್ದಾರೆ. ಎರಡು ಮೆಟ್ಟಿಲುಗಳ ಮೂಲಕ ಈ ಭಾಗವನ್ನು ಪ್ರವೇಶಿಸಬಹುದು. ಈ ದೇವಾಲಯಕ್ಕೆ ಗುಮ್ಮಟ (ಗ್ಲೋಬ್) ಆಕಾರದ ಶಿಖರವಿದೆ. ಅದರ ಪಕ್ಕದಲ್ಲಿ ಕಿರು ಗೋಲಗಳ ಅಲಂಕರಣೆಯನ್ನು ಕಾಣಬಹುದು. ಗುಡಿಯ ಮುಂದೆ ಒಂದು ಕಿರು ಕಲಶವಿರುವ ಮಂಟಪದಲ್ಲಿ ಬಸವಣ್ಣನನ್ನು (ಶಿವನವಾಹನ) ಪ್ರತಿಷ್ಠಾಪಿಸಿದ್ದಾರೆ. ಮುಖ್ಯ ದೇವಾಲಯ ದಕ್ಷಿಣಕ್ಕೆ ಎಡಬದಿಗೆ ದೇವಾಲಯವಿದ್ದು ಅದರಲ್ಲಿ ಶಿವಲಿಂಗವನ್ನು ಇರಿಸಲಾಗಿದೆ. ಅದರ ಹಿಂಭಾಗದಲ್ಲಿ ವಿರುಪಾಕ್ಷ ಗುಡಿ ಇದ್ದು, ಗರ್ಭಗೃಹ ಅರ್ಧಮಂಟಪಗಳಿವೆ. ಅರ್ಧಮಂಟಪದಲ್ಲಿ ಎರಡು ಕಂಬಗಳಿವೆ. ಮುಖ್ಯ ದೇವಾಲಯದ

ಹಿಂಬದಿಯಲ್ಲಿ ಕಛೇರಿ ಮತ್ತು ಕೊಠಡಿಗಳಿವೆ, ಸುತ್ತಲೂ ಪ್ರಾಂಗಣದ ಗೋಡೆಯಿದೆ. ಈ ಸಂಕೀರ್ಣದಲ್ಲಿಯೇ ಭಕ್ತಾದಿಗಳು ಉಳಿದುಕೊಳ್ಳಲು ಕೊಠಡಿಗಳನ್ನು ನಿರ್ಮಿಸಲಾಗಿದೆ. ಸಂಕೀರ್ಣಕ್ಕೆ ಪೂರ್ವದಲ್ಲಿರುವ ಮುಖ್ಯದ್ವಾರ ಹಾಗೂ ಉತ್ತರದಲ್ಲಿರುವ ಮತ್ತೊಂದು ದ್ವಾರದಿಂದ ಗುಡಿಯ ಸಮುಚ್ಚಯವನ್ನು ಪ್ರವೇಶಿಸಬಹುದು.

ದೇವಾಲಯದ ಸಮುಚ್ಚಯದ ಪಕ್ಕದಲ್ಲಿಯೇ ಕಿರು ಹಳ್ಳವಿದೆ. ಇದನ್ನು ವರವಿ ಹಳ್ಳವೆಂದು ಸ್ಥಳೀಯರು ಕರೆಯುತ್ತಾರೆ. ಈ ಹಳ್ಳದ ಬಳಿಯ ಒಂದು ತೀರ್ಥದಿಂದ (ಅಂಬಲಿಹೊಂಡ) ನೀರು ಸದಾ ಜಿನುಗುತ್ತಿರುವುದು ಗಮನಾರ್ಹ. ಗಂಗೆಯೇ ಕಾಶಿಯಿಂದ ಇಲ್ಲಿಗೆ ಹರಿದುಬರುತ್ತಾಳೆಂಬುದು ಸ್ಥಳೀಯರ ನಂಬಿಕೆ. ಈ ದೇವಾಲಯದ ಸಮೀಪವೇ ಕಾಳಿಕಾದೇವಿ ಗುಡಿ ಇದೆ. ಇದರಲ್ಲಿ ಕಾಳಿಕಾದೇವಿಯ ಮೂರ್ತಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಇದು ವಿಶ್ವಕರ್ಮ ಸಮಾಜದವರ ಪವಿತ್ರ ಯಾತ್ರಾ ಸ್ಥಳ.[೫] ಇಲ್ಲಿಯ ಬಂಡೆಯ ಮೇಲೆ ಕುರಿಗಳ ಹೆಜ್ಜೆಗಳಿವೆ. ಮೌನೇಶ್ವರರು ಕುರಿಗಳನ್ನು ಮೇಯಿಸುತ್ತಿದ್ದು ಅವುಗಳ ಹಜ್ಜೆಯ ಗುರುತುಗಳೆಂದು ಈಗಲೂ ತೋರಿಸುತ್ತಾರೆ.[೬] ನೋಟದಲ್ಲಿ ಗುಡಿ ಮಸೀದಿಯಂತಿದ್ದರೂ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಹಿಂದೂ ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ಪವಿತ್ರ ಭೂಮಿಯಿದು. ಅಂಬಲಿಹೊಂಡ, ಕುರಿಯ ಹಜ್ಜೆ, ಹಳ್ಳ, ಗವಿಗಳು ಇಲ್ಲಿನ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು.

ವರವಿಯ ಕಾಳಿಕಾದೇವಿ ದೇವಾಲಯವು ಮೌನೇಶ್ವರನ ದೇವಾಲಯದ ಪಕ್ಕದ ಗುಡ್ಡದ ಮೇಲೆ ಇದೆ. ಇದು ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಕಾಳಿಕಾದೇವಿಯ ಮೂರ್ತಿಶಿಲ್ಪವಿದ್ದು. ಇದರ ಸ್ಥಿತಿಯು ಉತ್ತಮವಾಗಿದೆ. ಇದು ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ.

ವರವಿಯ ವಿರುಪಾಕ್ಷೇಶ್ವರ ದೇವಾಲಯ ಇದು ಮೌನೇಶ್ವರ ಗುಡಿಯ ಆವರಣದಲ್ಲಿ ದಕ್ಷಿಣಾಭಿಮುಖವಾಗಿ ನಿರ್ಮಾಣಗೊಂಡಿದೆ. ಇದರಲ್ಲಿ ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ವಿರುಪಾಕ್ಷೇಶ್ವರನ ಮೂರ್ತಿಶಿಲ್ಪವಿದೆ. ಮುಖಮಂಟಪವು ಎಂಟು ಕಂಬಗಳನ್ನು ಒಳಗೊಂಡಿದ್ದು. ಇವು ಚಚ್ಚೌಕಾಕಾರವಾಗಿವೆ.

ರಣತೂರಿನ ಈಶ್ವರ ದೇವಾಲಯ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು. ಇದು ಈ ಊರಿನ ಪ್ರಮುಖ ದೇವಾಲಯ. ಇದನ್ನು ಅಧಿಷ್ಠಾನದ ಮೇಲೆ ನಿರ್ಮಾಣ ಮಾಡಲಾಗಿದ್ದು. ಮೇಲ್ಭಾಗದಲ್ಲಿ ಶಿಖರವಿದೆ. ಗರ್ಭಗೃಹ, ಅಂತರಾಳ ಮತ್ತು ಮುಖಮಂಟಗಳನ್ನು ಈ ದೇವಾಲಯಗಳಲ್ಲಿ ಕಾಣಬಹುದು. ಗರ್ಭಗೃಹದಲ್ಲಿ ನಂದಿ, ಈಶ್ವರನ ಮೂರ್ತಿಶಿಲ್ಪಗಳಿವೆ. ನವರಂಗದಲ್ಲಿ ನಾಲ್ಕು ಕಲ್ಲಿನ ಕಂಬಗಳಿದ್ದು ಮೇಲ್ಭಾಗದಲ್ಲಿ ನಾಗಶಿಲ್ಪದ ಭುವನೇಶ್ವರಿಯನ್ನು ಒಳಗೊಂಡಿದ್ದು, ಬಾಗಿಲವಾಡವು ಸರಳವಾಗಿದೆ.

ತೆಗ್ಗಿನಬಾವನೂರಿನ ಈಶ್ವರ ದೇವಾಲಯ

ಕ್ರಿ.ಶ. ೧೨-೧೩ ನೇ ಶತಮಾನದಲ್ಲಿ ನಿರ್ಮಿಸಲಾದ ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಗರ್ಭಗೃಹ ನವರಂಗಳಿಂದ ಕೂಡಿದ ಈ ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಿರುವರು.

ಪ್ರಾಚೀನ ದೇವಾಲಯದ ಅವಶೇಷಗಳು ದೇವಾಲದಯ ಬಳಿ ಕಾಣಸಿಗುತ್ತವೆ. ಹಾಗೇಯೇ ಗರ್ಭಗೃಹದಲ್ಲಿ ಪ್ರಾಚೀನ ಕಾಲದ ಶಿವಲಿಂಗವನ್ನು ಸ್ಥಾಪಿಸಲಾಗಿದೆ. ಗರ್ಭಗೃಹದಲ್ಲಿನ ಲಿಂಗದ ಹಿಂಭಾಗದ ಗೋಡೆಗೆ ನಾಗರಕಲ್ಲನ್ನು ಇರಿಸಲಾಗಿದೆ.

ಪ್ರಾಚೀನ ವಾಸ್ತು ಅವಶೇಷಗಳು ದೇವಾಲಯದ ಮುಂಬದಿ ಮತ್ತು ಹಿಂಬದಿಗಳಲ್ಲಿವೆ ಪ್ರಾಚೀನ ನಂದಿ ಶಿಲ್ಪ ಹಾಗೂ ಒಂದು ಮೂರ್ತಿ ಶಿಲ್ಪವು ಪದರುಗಳ ನಡುವೆ ಬಿದ್ದಿರುವದನ್ನು ಕಾಣಬಹುದು. ನವರಂಗದ ದಕ್ಷಿಣಭಾಗದಲ್ಲಿ ಶಾಸನವಿದೆ. ಶಾಸನವು ಕಲ್ಯಾಣ ಚಾಲುಕ್ಯ ಅರಸ ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು ಅದರ ತೇದಿಯು ಕ್ರಿ.ಶ. ೧೧೧೯. ಇದು ಬಾನಲೂರು ಮಲ್ಲಗಾವುಂಡನಿಂದ ಗಂಗರಾಶಿ ದೇವರಿಗೆ ಭೂ ದಾನ ನೀಡಿದ ವಿಷಯವನ್ನು ದಾಖಲಿಸಿದೆ.[೭] ಈ ಹಿಂದೆ ಇದ್ದ ಕಲ್ಮೇಶ್ವರ ದೇವಾಲಯ ಶಿಥಿಲವಾಗಿದ್ದರಿಂದ ಅಲ್ಲಿ ನೂತನ ದೇವಾಲಯವನ್ನು ನಿರ್ಮಿಸಿದ್ದರಬೇಕು. ಸದರಿ ಸ್ಥಳದಲ್ಲಿಯೇ ಅನೇಕ ವಾಸ್ತು ಅವಶೇಷಗಳು ಇರುವುದರಿಂದ ಅವು ಕಲ್ಮೇಶ್ವರ ದೇವಾಲಯಕ್ಕೆ ಸಂಬಂಧಿಸಿದ್ದರಬೇಕೆಂದು ಅಭಿಪ್ರಾಯ ಪಡಬಹುದು.

ಜಲ್ಲಿಗೇರಿಯ ಕಲ್ಲಮಲ್ಲಪ್ಪ ದೇವಾಲಯ

ಈ ದೇವಾಲಯವು ಊರಿನ ಮಧ್ಯದಲ್ಲಿದ್ದು ಪೂರ್ವಾಭಿಮುಖವಾಗಿದೆ. ಇದು ಕ್ರಿ.ಶ. ೧೮ ನೇ ಶತಮಾನಕ್ಕೆ ಸಂಬಂಧಿಸಿರಬಹುದು. ತೆರೆದ ಅಂಗಳವಿರುವ ಗರ್ಭಗೃಹವಿದ್ದು ಇದನ್ನು ಬಿಡಿಗಲ್ಲು ಮತ್ತು ನಯಗೊಳಿಸಿದ ಕಲ್ಲುಗಳಿಂದ ನಿರ್ಮಿಸಿರುವರು.

ಕಲ್ಲಮಲ್ಲಪ್ಪ ಗುಡಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಗರ್ಭಗೃಹ ಮಾತ್ರವಿದ್ದು, ಗರ್ಭಗೃಹದ ಭಿತ್ತಿಗಳನ್ನು ಬಿಡಿಗಲ್ಲುಗಳಿಂದ ರಚಿಸಲಾಗಿದೆ. ಬಾಗಿಲವಾಡಕ್ಕೆ ನಯಗೊಳಿಸಿದ ಕಲ್ಲನ್ನು ಬಳಸಿರುವರು. ಗುಡಿಗೆ ಛಾವಣಿ ಇರುವುದಿಲ್ಲ. ಗರ್ಭಗೃಹದ ನೆಲಮಟ್ಟದಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿರುವರು. ಈ ಗುಡಿಯ ಪಕ್ಕದಲ್ಲಿ ಇಂತಹುದೇ ರಚನೆ ಇದ್ದು ಅದರಲ್ಲಿ ಕೆಲವು ನಾಗಶಿಲ್ಪಗಳು ಹಾಗೂ ಬಸವನ ಶಿಲ್ಪಗಳನ್ನು ಇರಿಸಲಾಗಿದೆ. ಛಾವಣಿಗೆ ಸಹ ಬಿಡಿಗಲ್ಲುಗಳನ್ನು ಬಳಸಿದ್ದಾರೆ. ಈ ದೇವಾಲಯದ ದ್ವಾರವು ವಿಸ್ತಾರವಾಗಿದೆ.

ಛಬ್ಬಿಯ ಭೋಗೇಶ್ವರ (ಈಶ್ವರ) ದೇವಾಲಯ

ಈ ದೇವಾಲಯವು ಹನುಮಂತ ದೇವರ ಗುಡಿಯ ಪಕ್ಕದಲ್ಲಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಕ್ರಿ.ಶ. ೧೨-೧೩ನೇ ಶತಮಾನಕ್ಕೆ ಸಂಬಂದಿಸಿರಬಹುದು. ಗರ್ಭಗೃಹ, ಅಂತರಾಳ, ಮುಖಮಂಟಪಗಳಿರುವ ಈ ದೇಗುಲವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಿರುವರು. ಇದರ ಸ್ಥಿತಿಯು ಸಾಧಾರಣವಾಗಿದೆ. ಗರ್ಭಗೃಹದ ಬಾಗಿಲವಾಡ ಮತ್ತು ಅದರ ಲಲಾಟವು ಸರಳವಾಗಿದೆ. ಇದರಲ್ಲಿ ಗಜಲಕ್ಷ್ಮಿ ಅಥವಾ ಯಾವುದೇ ದೇವತೆಗಳ ಉಬ್ಬು ಶಿಲ್ಪಗಳಿರುವುದಿಲ್ಲ. ಗರ್ಭಗೃಹದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಶಿವಲಿಂಗ ಹಾಗೂ ಅದರ ಮುಂದೆ ನಂದಿಯ ಶಿಲ್ಪವಿದ್ದು, ಭಿತ್ತಿಗೆ ಹೊಂದಿಕೊಂಡಂತೆ ಕೆಲವು ಶಿಲ್ಪಗಳಿವೆ. ಅವುಗಳಲ್ಲಿರುವ ದೇವತೆಗಳು ಯಾವುದೆಂದು ನಿಖರವಾಗಿ ತಿಳಿದುಬರುವದಿಲ್ಲ. ಇದು ಬಹಳ ಸರಳವಾಗಿದ್ದು ಬಾಗಿಲ ಇಕ್ಕೆಲಗಳಲ್ಲಿ ಒಂದೇ ಸಾಲಿನಲ್ಲಿರುವಂತೆ ಮೂರು ಕಿಂಡಿಗಳಿರುವ ಜಾಲಂಧ್ರಗಳಿವೆ. ಅಂತರಾಳದ ಮುಂಭಾಗದಲ್ಲಿ ಆಯತಾಕಾರದ ತೆರೆದ ಮಂಟಪವಿದ್ದು, ಅದಕ್ಕೆ ಹೆಂಚುಗಳನ್ನು ಹೊದಿಸಲಾಗಿದೆ. ಈ ಭಾಗದ ಭಿತ್ತಿಯ ಕೋಷ್ಟಗಳಲ್ಲಿ ಕ್ರಮವಾಗಿ ಬಲ ಮತ್ತು ಎಡ

ಬದಿಗಳಲ್ಲಿ ಸೂರ್ಯನ ಪಾಣಿ ಪೀಠ ಹಾಗೂ ಲಿಂಗವಿದೆ. ಕೋಷ್ಟಕದ ಕೆಳಭಾಗದಲ್ಲಿ ಅಧಿಷ್ಟಾನವನ್ನು ಕಾಣಬಹುದು. ಅಧಿಷ್ಟಾನದ ಭಾಗವು ಮಣ್ಣಲ್ಲಿ ಮುಚ್ಚಿರುವುದರಿಂದ ಅಧಿಷ್ಟಾನದ ಭಾಗಗಳು ಕಾಣುವುದಿಲ್ಲ. ದೇವಾಲಯಕ್ಕೆ ಶಿಖರವಿಲ್ಲ.

ಛಬ್ಬಿಯಲ್ಲಿ ಅಲ್ಲಲ್ಲಿ ಕೆಲವು ವಾಸ್ತು ಅವಶೇಷಗಳು ಕಾಣಸಿಗುತ್ತವೆ. ಶಿರಹಟ್ಟಿಯ ಬೆಳ್ಳಟ್ಟಿ ರಸ್ತೆಯಲ್ಲಿ ಎಡಬದಿಯ ಒಂದು ನಿವೇಶನದಲ್ಲಿ ಜೈನ ತೀರ್ಥಂಕರ ಮೂರ್ತಿ ಶಿಲ್ಪಗಳು ಬಿದ್ದಿವೆ. ಆ ಭಾಗದಲ್ಲಿಯೇ ದೇವಾಲಯದ ವಾಸ್ತು ಅವಶೇಷಗಳನ್ನು ಸಹ ಕಾಣಬಹುದು. ಬಹುಶಃ ಛಬ್ಬಿ ಎಂಬ ಊರು ಪ್ರಾಚೀನ ಕಾಲದ ಜೈನ ಕೇಂದ್ರಗಳಾಗಿರುವ ಸಾಧ್ಯತೆಗಳಿವೆ. ಪ್ರಸ್ತುತ ಈ ಊರಿನಲ್ಲಿ ಯಾವ ಜೈನ ಬಸದಿಗಳು ಉಳಿದಿರುವದಿಲ್ಲ.

ಛಬ್ಬಿಯ ಮಾನಜ್ಜನವರ (ಮೌನೇಶ್ವರ) ದೇವಾಲಯ

ಇದು ಊರ ಪಶ್ಚಿಮದ ಗುಡ್ಡದ ಮೇಲೆ ಇದೆ. ಪೂರ್ವಾಭಿಮುಖವಾಗಿ ನಿರ್ಮಿಸಿರುವ, ಇದರ ಕಾಲಮಾನ ಕ್ರಿ.ಶ. ೧೮-೧೯ ನೇ ಶತಮಾನದ್ದು. ಇದರಲ್ಲಿ ಗರ್ಭಗೃಹ, ತೆರೆದ ಪ್ರಾಂಗಣಗಳಿವೆ. ಈ ದೇವಾಲಯದ ಸ್ಥಿತಿಯು ಕನಿಷ್ಠವಾಗಿದ್ದು, ಇದರ ಪಕ್ಕದ ಗರ್ಭಗುಡಿಯಲ್ಲಿ ಶಿವಲಿಂಗವು ಸರಿ ಸುಮಾರು ೧ಅಡಿ ಎತ್ತರವಿದ್ದು; ಲಿಂಗದ ಜಲಹರಿಯು ಎಡಕ್ಕಿದೆ. ಶಿವಲಿಂಗದ ಮುಂದೆ ನಂದಿಯ ೨ಅಡಿ ಎತ್ತರವಿದ್ದು, ಇದರ ಮುಖಭಾಗ ಭಗ್ನವಾಗಿದ್ದು, ಕಮಾನಿನ ಆಕಾರದ ರಚನೆಯ ಒಳಭಾಗದಲ್ಲಿ ಹೂ ಬಳ್ಳಿಗಳ ಅಲಂಕರಣೆಗಳು ಆಕರ್ಷಕವಾಗಿ ಗೋಚರಿಸುತ್ತವೆ.

ಊರ ಪಶ್ಚಿಮಕ್ಕೆ ಸುಮಾರು ಒಂದು ಕಿ.ಮಿ ದೂರದಲ್ಲಿರುವ ಗುಡ್ಡದಲ್ಲಿ ಒಂದೇ ಕಟ್ಟಡದಲ್ಲಿ ಎರಡು ಕೋಣೆಯ ಎರಡು ದೇವಾಲಯಗಳಿವೆ. ಇದ್ದನ್ನು ಮಾನಜ್ಜನವರ ಮಠ ಎಂದು ಕರೆಯುತ್ತಾರೆ. ಬಲಭಾಗದಲ್ಲಿರುವ ಗುಡಿಯಲ್ಲಿ ಪ್ರಾಚೀನಕಾಲದ ಕಲ್ಯಾಣ ಚಾಲುಕ್ಯ ಶೈಲಿಯ ಶಿವಲಿಂಗವಿದೆ. ದೇವಾಲಯದ ಮೇಲೆ ಪಿರಮಿಡ್ ಆಕಾರದ ಶಿಖರ ಭಾಗ ಹಾಗೂ ಗೋಲಾಕಾರದ. ಸ್ತೂಪಿಯನ್ನು ಸಿಮೆಂಟಿನಿಂದ ಕಟ್ಟಲಾಗಿದೆ. ಅದರ ಮುಂದಿರುವ ಮರದ ಕೆಳಗೆ ಇತ್ತೀಚಿಗೆ ನಂದಿಶಿಲ್ಪವನ್ನು ನಿರ್ಮಿಸಿರುವರು. ಎರಡೂ ಗುಡಿಗಳು ಒಂದೇ ಪ್ರಾಂಗಣವನ್ನು ಹೊಂದಿವೆ. ಈ ದೇವಾಲಯದ ಪಕ್ಕದಲ್ಲಿ ಹೊಂಡವಿದ್ದು, ಇದಕ್ಕೆ ಬೆಟ್ಟದ ಬಂಡೆಗಳ ನಡುವಿನಿಂದ ನೀರು ಹರಿಯುವುದು. ಕಲ್ಲುಗಳ ನಡುವೆ ನೀರಿನ ವರತೆ ಇದೆ, ಆ ನೀರು ವರ್ಷಪೂರ್ತಿ ಬತ್ತುವದಿಲವೆಂದು ಸ್ಥಳಿಯರು ಹೇಳುತ್ತಾರೆ. ಹೆಚ್ಚುವರಿಯಾದ ನೀರು ಕಿರು ಹಳ್ಳಕ್ಕೆ ಹರಿಯುತ್ತದೆ.

ಶಿರಹಟ್ಟಿಯ ಅಪ್ಪಲಿಂಗಪ್ಪನ ಗುಡಿ

ಈ ದೇವಾಲಯವು ಶಿರಹಟ್ಟಿಯ ಜಿಲ್ಲಾ ಪಂಚಾಯತ ಕಛೇರಿ ಹತ್ತಿರವಿದ್ದು, ಕ್ರಿ.ಶ. ೧೭-೧೮ ನೇ ಶತಮಾನಕ್ಕೆ ಸಂಬಂಧಿಸಿದೆ ಇದು ಉತ್ತರಾಭಿಮುಖವಾಗಿ ಗರ್ಭಗೃಹಹೊಂದಿದ್ದು. ಇದರ ತಲವಿನ್ಯಾಸವು ಗರ್ಭಗೃಹ, ಮುಖಮಂಟಪ, ನವರಂಗಗಳನ್ನು ಒಳಗೊಂಡಿರುವುದು. ಇದನ್ನು ಕಪ್ಪು ಶಿಲೆ, ಗ್ರಾನೈಟ್ ಶಿಲೆ, ಕಬ್ಬಿಣ, ಸರಳಿನ ಜಾಲಾಂದ್ರಗಳಿಂದ ನಿರ್ಮಿಸಿದ್ದಾರೆ.

ಅಪ್ಪಲಿಂಗವ್ವೆಯು ಲಕ್ಷ್ಮೇಶ್ವರ ದೇಶಗತಿಯ ಸಂಸ್ಥಾಪಕಿಯಾಗಿದ್ದು, ತನ್ನ ಮರಣಾನಂತರ ಸಮಾಧಿಗೆಂದು ಕಟ್ಟಿಸಿದ ಕಟ್ಟಡವಾಗಿತ್ತು. ಆದರೆ ಮರಣಾನಂತರ ಅವಳ ಶವವನ್ನು ಇಲ್ಲಿ ಹೂಳಲಿಲ್ಲವೆಂಬುದು ಸ್ಥಳಿಯರ ಅನಿಸಿಕೆ. ಗರ್ಭಗೃಹದ ಮುಂದಿನ ಭಾಗವು ವಿಶಾಲವಾಗಿದ್ದು ಅಲಂಕೃತವಾದ ಕಂಬಗಳಿಂದ ನಿರ್ಮಾಣವಾಗಿದೆ. ಒಳಭಾಗದಲ್ಲಿ ತಿರುಗುಣಿ ಯಂತ್ರದಿಂದ ರಚಿಸಿದ ಕಲ್ಯಾಣ ಚಾಲುಕ್ಯ ಶೈಲಿಯ ಕಂಬಗಳು ಹಾಗೂ ನಡುವಿನಲ್ಲಿ ಒಂದು ಸಮಾಧಿ ಇರುವುದನ್ನು ನೋಡಬಹುದು. ಈ ಭಾಗಕ್ಕೆ ಪೂರ್ವದಿಂದಲೂ ಪ್ರವೇಶವಿರುವುದನ್ನು ಕಾಣಬಹುದು. ಪೂರ್ವದ ಬಾಗಿಲಲ್ಲಿ ಅತ್ಯಂತ ಕಲಾತ್ಮಕವಾದ ದ್ವಾರಶಾಖೆ, ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪಗಳ ಕೆತ್ತನೆಗಳನ್ನು ಕಾಣಬಹುದು. ಇಲ್ಲಿ ಎರಡು ಮೆಟ್ಟಿಲುಗಳಿವೆ. ಕಟ್ಟಡದ ಪೂರ್ವ ಹಾಗೂ ಪಶ್ಚಿಮದ ಹೊರಭಾಗಗಳಲ್ಲಿ ಎಂಟು ಕಂಬಗಳ ಸಾಲುಗಳುಳ್ಳ ಉದ್ದನೆಯ ತೆರೆದ ಮಂಟಪವಿದೆ.

ಉತ್ತರ ಭಾಗದ ಮೆಟ್ಟಿಲುಗಳ ಮೂಲಕ ಮಂಟಪ ಭಾಗಕ್ಕೆ ಪ್ರವೇಶ ಪಡೆಯಬಹುದು. ಈ ಕಟ್ಟಡದ ಕಂಬಗಳ ರಚನೆ, ವಿನ್ಯಾಸವನ್ನು ನೋಡಿದರೆ ದೇವಾಲಯದಂತೆ ಕಂಡುಬರುವುದು, ಆದರೆ ಅರಮನೆಯಂತೆಯೂ ಈ ಕಟ್ಟಡದ ಕೆಲವು ಭಾಗಗಳನ್ನು ವಿನ್ಯಾಸಗೊಳಿಸಿದ್ದಾರೆ. ಪ್ರವೇಶದ ಭಾಗವನ್ನು ಎತ್ತರಿಸಿದ ಜಗಲಿಯ ಮೇಲೆ ನಿರ್ಮಿಸಲಾಗಿದೆ. ಮುಖ ಮಂಟಪದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ತೆರೆದ ಕೋಣೆ ಅಥವಾ ಮಂಟಪದ ಭಾಗದಂತಿರುವ ಎರಡು ಕೋಣೆಗಳಿವೆ. ಹೊರಭಾಗದಲ್ಲಿ ಸುಂದರ ಕೆತ್ತನೆಗಳುಳ್ಳ ಅನೇಕ ಧಾರ್ಮಿಕ ಶಿಲ್ಪಗಳಿವೆ. (ಭುವನೇಶ್ವರಿ) ಸೂರಿನ ಭಾಗದಲ್ಲಿ ಕಮಲ, ಹೂವು, ಸರ್ಪಾಕೃತಿಯ ಕೆತ್ತನೆಗಳಿದ್ದು, ಮಾಡಿನ ಭಾಗದಲ್ಲಿಯೂ ಸುಂದರ ಕೆತ್ತನೆಗಳಿವೆ.[8] ಇದು ತಿರುಗುಣಿಯಿಂದ ರಚಿಸಿದ ಸುಂದರವಾದ ನಾಲ್ಕು ಕಂಬಗಳಿಂದಾಗಿದೆ. ಪೂರ್ವದ ಗೋಡೆಯಲ್ಲಿ ಕಮಾನಿನ ರಚನೆಯುಳ್ಳ ಕೋಷ್ಟವಿರುವುದು. ಈ ಭಾಗದಲ್ಲಿ ಗರ್ಭದಂತಿರುವ ಭಾಗವನ್ನು ಪ್ರವೇಶಿಸಬಹುದು. ಗರ್ಭಗೃಹದ ಮುಖ್ಯದ್ವಾರದ ಲಲಾಟದಲ್ಲಿ ಶಿವಲಿಂಗ ಅದರ ಹಿಂದೆ ಸರ್ಪದ ಉಬ್ಬು ಶಿಲ್ಪಗಳಿವೆ. ಬಾಗಿಲವಾಡವು ಅಲಂಕೃತ ಕೆತ್ತನೆಗಳಿಂದ ಕೂಡಿ ಅಲಂಕೃತವಾಗಿದೆ. ಅದರ ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳಿದ್ದು, ಚಾಮರ ಧಾರಣೆಯ ಉಬ್ಬು ಶಿಲ್ಪ ಹಾಗೂ ಇನ್ನಿತರೆ ಸೂಕ್ಷ್ಮ ಕೆತ್ತನೆಗಳಿವೆ. ಮುಖ್ಯದ್ವಾರದ ಎರಡೂ ಬದಿಗಳಲ್ಲಿ ಎರಡೂ ಕಡೆ ದ್ವಾರದಂತೆ ಕಾಣುತ್ತದೆ. ಎಡಬದಿಯ ಕೊಠಡಿಯ ಭಾಗವನ್ನು ದೊಡ್ಡ ಕೋಷ್ಠದಂತೆ ರೂಪಿಸಿರುವರು. ಬಲಬದಿಯ ದ್ವಾರದಲ್ಲಿ ಮೆಟ್ಟಿಲುಗಳ ಮೂಲಕ ಕಟ್ಟಡದ ಮೇಲ್ಭಾಗವನ್ನು ತಲುಪಬಹುದು. ಈ ಎರಡೂ ದ್ವಾರಗಳ ಲಲಾಟಗಳಲ್ಲಿ ಗಣಪತಿಯ ಉಬ್ಬು ಶಿಲ್ಪಗಳಿವೆ. ದೂರದಿಂದ ನೋಡಿದರೆ ಇವೆರಡೂ ಗರ್ಭಗೃಹದಂತೆ ಕಾಣುವವು. ಪೂರ್ವಭಾಗದ ಮಂಟಪ ಅಥವಾ ಪಡಸಾಲೆಯನ್ನು ಸಾರ್ವಜನಿಕರು ಅತಿಕ್ರಮಿಸಿದ್ದಾರೆ. ಪಶ್ಚಿಮ ಭಾಗವು ತೆರೆದಿದ್ದು ಅತಿಕ್ರಮಣವಾಗಿಲ್ಲ ಕಟ್ಟಡಕ್ಕೆ ಅಧಿಷ್ಠಾನ ಹಾಗೂ ಪ್ರಸ್ತರ ಭಾಗವಿರುತ್ತದೆ. ಆದರೆ ಶಿಖರ ಭಾಗವಿಲ್ಲ

ಕಟ್ಟಡದ ಮೇಲ್ಭಾಗದಲ್ಲಿ ಹುಲ್ಲು ಮತ್ತು ಗಿಡಗಂಟಿಗಳು ಬೆಳೆದು ಮಳೆಗಾಲದಲ್ಲಿ ಸೋರುವುದು. ಈ ಸುಂದರ ಸ್ಮಾರಕ ಅತ್ಯಂತ ಅಪಾಯಕಾರಿ ಸ್ಥಿತಿಯನ್ನು ತಲುಪಿರುವುದು ಅತ್ಯಂತ ದುರಂತವೇ ಸರಿ.

ಈ ಸ್ಮಾರಕದ ಪೂರ್ವಕ್ಕೆ ಪಕ್ಕದಲ್ಲಿಯೇ ಕಲ್ಲಿನಿಂದ ರಚಿಸಿದ ಒಂದು ಕಟ್ಟಡವಿರುವುದು. ಇದರಲ್ಲಿ ಗರ್ಭಗೃಹ ಮತ್ತು ಅರ್ಧ ಮಂಟಪದ ಭಾಗವಿದ್ದು, ಇದರ ಪಶ್ಚಿಮ ಗೋಡೆಯಲ್ಲಿ ಕಮಾನಿನ ದ್ವಾರವಿದೆ. ಅವ್ವಲಿಂಗವ್ವನ ಗುಡಿಯಿಂದ ಈ ಬಾಗಿಲ ಮೂಲಕ ಪ್ರವೇಶ ಮಾಡಬಹುದು. ಅರ್ಧಮಂಟಪದ ಭಾಗದಲ್ಲಿ ಎರಡು ಕಲ್ಲಿನ ಕಂಬಗಳಿವೆ. ಗುಡಿಗೆ ಅಧಿಷ್ಠಾನ ಭಾಗವದ್ದು ಶಿಖರ ಭಾಗವಿಲ್ಲ, ಗರ್ಭಗೃಹದ ಬಾಗಿಲವಾಡವು ಸರಳವಾಗಿರುವುದು. ಈ ಕಟ್ಟಡಗಳು ಸುಮಾರು ೩೦೦ ವರ್ಷಗಳ ಹಿಂದೆ ರಚಿಸಲಾಯಿತೆಂದು ಅಭಿಪ್ರಾಯಪಡಲಾಗಿದೆ. ಶೈಲಿಯ ದೃಷ್ಟಿಯಿಂದ ಇದು ಪ್ರಾಚೀನ ಕಾಲದ್ದೆಂದು ಭಾಸವಾಗುವದು. ಈ ಎರಡೂ ಸ್ಮಾರಕಗಳನ್ನು ರಕ್ಷಿಸುವುದು ಇಂದು ಅಗತ್ಯವಾಗಿದೆ.

ತಂಗೋಡದ ಕಲ್ಲಮಠ (ಕಲ್ಮಠ) ದೇವಾಲಯ

ಈ ದೇವಾಲಯವು ಇಟಗಿ ರಸ್ತೆಯ ಬಲಬದಿಗೆ ಇದೆ. ಇದು ಪೂರ್ವಾಭಿಮುಖ ವಾಗಿದ್ದು ಕ್ರಿ.ಶ. ೧೨-೧೩ ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ಆಯತಾಕಾರದ ತಲವಿನ್ಯಾಸ, ಗರ್ಭಗೃಹವನ್ನು ಹಾಗೂ ಮುಖಮಂಟಪಗಳಿರುವ ಈ ದೇಗುಲಕ್ಕೆ ಇಟ್ಟಿಗೆ ಗ್ರಾನೈಟ ಶಿಲೆಗಳನ್ನು ಬಳಸಿದ್ದಾರೆ. ಇಲ್ಲಿ ಉದ್ದನೆಯ ಸಾಲು ಮಂಟಪವಿದ್ದು ಇದು ಮಠವಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದು ಆಯತಾಕಾರದ ತಲವಿನ್ಯಾಸವನ್ನು ಹೊಂದಿದ್ದು. ಮುಂಭಾಗದಲ್ಲಿ ಎರಡು ಸಾಲುಗಳಲ್ಲಿ ತಲಾ ನಾಲ್ಕು ಕಂಬಗಳಿರುವ ಮುಖಮಂಟಪವಿದೆ. ಮಂಟಪದ ಕಂಬಗಳು, ಸರಳವಾಗಿದ್ದು ಚೌಕಾಕಾರದ ಪೀಠ ಮತ್ತು ಆರು ಭಾಗ ಮತ್ತು ಅದರ ಮೇಲೆ ಚೌಕಾಕಾರದ ಭಾಗಗಳಿವೆ. ಮಂಟಪದ ಮಧ್ಯಭಾಗದಲ್ಲಿ ಒಂದು ಪ್ರವೇಶ ದ್ವಾರವಿದ್ದು ಅದರ ಮೂಲಕ ಹಿಂಭಾಗದ ಕೋಣೆಯನ್ನು ಪ್ರವೇಶಿಸಬಹುದು. ಸಾಮಾನ್ಯವಾಗಿ ದೇವಾಲಯಗಳಲ್ಲಿ ಇದು ಗರ್ಭಗೃಹ ವಾಗಿರುತ್ತದೆ. ಆದರೆ ಇದು ಉದ್ದನೆಯ ಸಭಾಂಗಣದಂತೆ ಕಾಣುವದು. ಮಂಟಪದ ಪೂರ್ವ ಮತ್ತು ಪಶ್ಚಿಮ ಭಾಗದ ಭಿತ್ತಿಗಳು ಮುಂಚಾಚಿವೆ. ಗರ್ಭಗೃಹದಲ್ಲಿರುವ ಗೋಡೆಗಳಲ್ಲಿ ಜಾಲಾಂಧ್ರಗಳಿವೆ. ಮಂಟಪದಲ್ಲಿರುವ ಎರಡು ಕಂಬಗಳು ರಾಷ್ಟ್ರಕೂಟ ಶೈಲಿಯಲ್ಲಿ ಮತ್ತೆರಡು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿವೆ. ಮಂಟಪದ ಮುಂಭಾಗದಲ್ಲಿ ಒಂದು ಪಾಣಿಪೀಠವಿದೆ. ಪೂರ್ವ ಮತು ಪಶ್ಚಿಮ ಭಿತ್ತಿಯಲ್ಲಿ ಇಸ್ಲಾಮಿಕ್ ಶೈಲಿಯ ಕಮಾನಿನ ಅಲಂಕರಣೆಯ ತಲಾ ಒಂದು ಗೂಡು ಕಾಣುತ್ತಿದ್ದು, ಎತ್ತರವಾದ ಅಧಿಷ್ಠಾನವಿರುವುದು. ಇನ್ನುಳಿದ ಶಿಖರಭಾಗ ವಿರುವದಿಲ್ಲ. ಕಟ್ಟಡದ ಪಕ್ಕದಲ್ಲಿಯೇ ಸ್ವತಂತ್ರವಾಗಿರುವ ಕೆಲವು ಕೊಠಡಿಗಳಲ್ಲಿ ಮೂರು ಶಿಲ್ಪಗಳಿವೆ ಕಟ್ಟಡದ ಮುಂಭಾಗದಲ್ಲಿ ಕೆಲವು ಮೃತ್ಪಾತ್ರೆಗಳ ಚೂರುಗಳು ದೊರೆತಿವೆ. ಕಟ್ಟಡ ನಿರ್ಮಾಣಕ್ಕೆ ಗ್ರಾನೈಟ್ ಶಿಲೆಯನ್ನು ಬಳಸಿದ್ದಾರೆ. ಇದನ್ನು ಮಠ ಅಥವಾ ಪಾಠಶಾಲೆಯನ್ನಾಗಿ ಉಪಯೋಗಿಸಲಾಗಿದೆ.

ದೇವಿಹಾಳ (ಶ್ರೀಮಂತಗಡ)ದ ಹೊಳಲಮ್ಮ ದೇವಿ

ದೇವಿಹಾಳ ಗ್ರಾಮದ ಪಶ್ಚಿಮ ಭಾಗದಲ್ಲಿ ಎತ್ತರವಾದ ಗುಡ್ಡದಮೇಲೆ ಇರುವ ಕೋಟೆಯೊಳಗೆ ಹೊಳಲಮ್ಮನ ದೇವಾಲಯವಿದೆ. ಇದು ಪೂರ್ವಾಭಿಮುಖವಾಗಿದ್ದು. ಇದನ್ನು ಬಣ್ಣಗಳಿಂದ ಅಲಂಕೃತಗೊಳಿಸಿರುತ್ತಾರೆ. ಇದರ ತಲವಿನ್ಯಾಸವು ಗರ್ಭಗೃಹ, ಅಂತರಾಳ ಮತ್ತು ನವರಂಗ ಹಾಗೂ ಪ್ರಾಂಗಣವನ್ನು ಒಳಗೊಂಡಿದ್ದು, ಇದು ಕ್ರಿ.ಶ. ೧೭-೧೮ ನೇ ಶತಮಾನದಲ್ಲಿ ಹೊಳಪುಕಲ್ಲು ಮತ್ತು ಗಾರೆಯ ಶಿಲೆಗಳಿಂದ ನಿರ್ಮಿಸಲಾಗಿದೆ. ಗುಡಿಯಲ್ಲಿ ಗರ್ಭಗೃಹ, ಅಂತರಾಳ, ಮೇಲು ವೇದಿಕೆಯುಳ್ಳ ನವರಂಗ ಮತ್ತು ಪ್ರಾಂಗಣಗಳಿವೆ. ಗರ್ಭಗೃಹದಲ್ಲಿ ಪ್ರಾಚೀನ ಹೊಳಲಮ್ಮನ ಮೂರ್ತಿಯನ್ನು ಪ್ರತಿಷ್ಠಾಪಿಸಿರುವರು. ಈ ಮೂರ್ತಿಯು ವಿಜಯನಗರೋತ್ತರ ಶೈಲಿಯಲ್ಲಿದ್ದು, ಆದಿಲಕ್ಷ್ಮಿಯ ಅವತಾರವೆಂದು ಕರೆಯುತ್ತಾರೆ. ಆದರೆ ಮೂರ್ತಿಯು ಕಾಳಸ್ವರೂಪದ್ದಾಗಿದ್ದು, ದೇವಿಯನ್ನು ವಸ್ತ್ರ ಮತ್ತು ಹೂವುಗಳಿಂದ ಅಲಂಕರಿಸಿರುವುದರಿಂದ ಅದರ ಮೂಲಸ್ವರೂಪ ಕಾಣುವುದಿಲ್ಲ. ಗರ್ಭಗೃಹದ ಭಿತ್ತಿ ಹಾಗೂ ನೆಲವನ್ನು ಹೊಳಪು ಕಲ್ಲು (ಟೈಲ್ಸ್)ಗಳಿಂದ ನವೀಕರಿಸಲಾಗಿದೆ. ದ್ವಾರದ ಬಾಗಿಲವಾಡವು ಸರಳವಾಗಿದೆ. ಗರ್ಭಗೃಹ ಮುಂಭಾಗದಲ್ಲಿರುವ ಅಂತರಾಳವನ್ನು ಸಹಿತ ನವೀಕರಿಸಲಾಗಿದೆ.

ಇಲ್ಲಿ ಕಣಶಿಲೆಯ ನಾಲ್ಕು ದೊಡ್ಡ ಕಂಬಗಳಿವೆ ಈ ಕಂಬಗಳು ಭುವನೇಶ್ವರಿಯನ್ನು ಆಧರಿಸಿವೆ ಇವುಗಳ ಪಕ್ಕದಲ್ಲಿ ಗಾತ್ರದಲ್ಲಿ ಕಿರಿದಾದ ನಾಲ್ಕು ಕಂಬಗಳಿವೆ ಈ ಕಂಬಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿವೆ ಇದರ ಮುಧ್ಯದಲ್ಲಿ ಕಣಶಿಲೆಯನ್ನು ಬಳಸಿದ ವೇದಿಕೆ ಇದೆ. ನವರಂಗದ ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ಪ್ರವೇಶ ದ್ವಾರವಿದ್ದು. ಮುಖ್ಯ ಪ್ರವೇಶ ದ್ವಾರವು ಪೂರ್ವಾಭಿಮುಖವಾಗಿದೆ. ಪ್ರವೇಶ ದ್ವಾರದ ಮೇಲೆ ಚಾಮುಂಡಿ ಮತ್ತು ಇತರ ಪರಿವಾರ ದೇವತೆಗಳ ಗಾರೆಯ ವರ್ಣ ಲೇಪಿತ ಶಿಲ್ಪಗಳನ್ನು ಇರಿಸಿದ್ದಾರೆ. ಇಡೀ ದೇವಾಲಯವು ಎತ್ತರವಾದ ಕಟ್ಟೆಯ ಮೇಲಿದೆ. ಆಧುನಿಕ ಶಿಖರವು ದೇವಾಲಯಕ್ಕೆ ಇರುವುದರಿಂದ, ಮೂಲ ವಾಸ್ತು ಶೈಲಿಯು ಕಂಡು ಬರುವದಿಲ್ಲ. ಮುಖ್ಯ ದೇವಾಲಯಗಳ ಪಕ್ಕದಲ್ಲಿ ಇತರೆ ದೇವತೆಗಳ ಗುಡಿಗಳಿವೆ. ಅದರಲ್ಲಿ ಈಶ್ವರನ ಗುಡಿಯು ಪ್ರಮುಖವಾಗಿದೆ. ಈ ಗುಡಿಯನ್ನು ಸಹಿತ ನವೀಕರಿಸಿದ್ದಾರೆ. ಇವುಗಳ ಪಕ್ಕದ್ದಲ್ಲಿ ದೇವಾಲಯದ ಪರಿಚಾರಕರ ಹಾಗೂ ಭಕ್ತಾದಿಗಳು ತಂಗಲು ವಸತಿ ಗೃಹಗಳು ಮತ್ತು ಕೊಠಡಿಗಳು ಇವೆ, ಇದಕ್ಕೆ ಸಂಬಂಧಿಸಿದ ಕಲ್ಯಾಣ ಮಂಟಪವೂ ಇದೆ. ಪ್ರಸ್ತುತ ಕೋಟೆಯನ್ನು ಛತ್ರಪತಿ ಶಿವಾಜಿಯು ನಿರ್ಮಿಸಿದನೆಂದು ಹೊಳಲಮ್ಮ ದೇವಿಯ ಛತ್ರಪತಿ ಶಿವಾಜಿಯ ಆರಾಧ್ಯ ದೇವತೆಯಾಗಿದ್ದಳೆಂದು ತಿಳಿದು ಬರುವುದು. ದೇವಿಹಾಳದ ಸುತ್ತಮುತ್ತಲಿನ ಪ್ರದೇಶವು ರಣದುಲ್ಲಾ ಖಾನ್ ಎಂಬ ಮುಸ್ಲಿಂ ಅರಸನ ಅಧೀನದಲ್ಲಿತ್ತು. ಇವನು ಗುಡ್ಡದ ಮೇಲೆ ಶಿಥಿಲಾವಸ್ಥೆಯಲ್ಲಿದ್ದ ಗುಡ್ಡದಮ್ಮನ ದೇವಾಲಯವನ್ನು ಕೆಡವಿ ತನ್ನ ಸಂಪತ್ತನ್ನು ನೆಲದಲ್ಲಿ ರಹಸ್ಯವಾಗಿ ಇಟ್ಟನು. ಆಕ್ರಮಣಕಾರರಿಗೆ ಈ ಸಂಪತ್ತು ದೊರೆಯದಂತೆ ಮಾಡಿ ಪ್ರಾಚೀನ ದೇವಾಲಯವಿದ್ದ ಸ್ಥಳದಲ್ಲಿ

ಒಂದು ಹೊಸ ದೇವಾಲಯ ನಿರ್ಮಿಸಿ ಅದರಲ್ಲಿ ಮೂರ್ತಿಯನ್ನು ಸ್ಥಾಪಿಸಿ ಹೊಳಲಮ್ಮ ಎಂದು ಹೆಸರಿಸಿದ ತನ್ನ ಸಂಪತ್ತಿಗೆ ಈ ದೇವತೆಯನ್ನು ರಕ್ಷಿಸುವ ಸಲುವಾಗಿ ಸ್ಥಾಪಿಸಿದನೆಂದೂ, ಆತ ತನ್ನ ಸಂಪತ್ತನ್ನು ತೆಗೆದುಕೊಳ್ಳಬೇಕೆನ್ನುವಾಗ ಹೊಳ್ಳಮ್ಮ (ಹೊರಳಮ್ಮ) ಎಂದಾಕ್ಷಣ ದೇವತೆಯು ಹೊರಳ ನೆಲಮನೆಯಲ್ಲಿರುವ ಸಂಪತ್ತಿರುವ ಸ್ಥಳಕ್ಕೆ ಹೋಗಲು ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಔರಂಗಜೇಬನ ಸೆರೆಯಲ್ಲಿದ್ದ ಶಿವಾಜಿಯು ಕನಸಿನಲ್ಲಿ ಹೊಳಲಮ್ಮ ದೇವಿ ಧ್ಯಾನ ಮಾಡುವಂತೆ ಪ್ರೇರೇಪಣೆಯಾಯಿತು. ಸೆರೆಯಿಂದ ಬಿಡುಗಡೆಯಾದ ಬಳಿಕ ದೇವಿಯು ಅವನಿಗೆ ಖಡ್ಗವನ್ನು ನೀಡಿ ರಣದುಲ್ಲಾಖಾನನ ಸಂಪತ್ತನ್ನು ಕಾಯುವ ಕೆಲಸಕ್ಕೆ ಗುರಿ ಮಾಡಿದ್ದರಿಂದ ಅವನನ್ನು ಬಲಿತೆಗೆದುಕೊಳ್ಳುವಂತೆ ಆಶೀರ್ವದಿಸಿದಳು. ಅದಕ್ಕೆ ಅನುಗುಣವಾಗಿ ಶಿವಾಜಿಯು ರಣದುಲ್ಲಾಖಾನನ ಮೇಲೆ ದಾಳಮಾಡಿ ಅವನನ್ನು ಕೊಂದು, ಅವನ ಸಂಸ್ಥಾನವನ್ನು ವಶಪಡಿಸಿಕೊಂಡು ಬೆಟ್ಟದ ಮೇಲೆ ವಿಜಯ ಪತಾಕೆಯನ್ನು ಹಾರಿಸಿದನು. ದೇವಿಯ ಆಜ್ಞಾನುಸಾರ ನೆಲಮನೆಯ ಸಂಪತ್ತನ್ನು ತೆಗೆದು ಅದನ್ನು ಮುಚ್ಚಿಸಿ ಆ ಸ್ಥಳದಲ್ಲಿ ಈಗ ಇರುವ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಸಿದ ಎಂದು ಹೇಳಲಾಗುವುದು. ದೇವಿಹಾಳದಲ್ಲಿ ನೆಲೆಸುವದಕ್ಕಾಗಿ, ಈ ಪೂರ್ವದಲ್ಲಿ ನಿರ್ಮಿಸಿದ ಕೋಟೆಗಳಾದ ಸಿಂಹಗಡ, ಪುರುಷಗಡ, ಗಜೇಂದ್ರಗಡ ಮತ್ತು ನಾಗೇಂದ್ರಗಡಗಳಂತೆ ಇಲ್ಲಿ "ಹಂತಗಡ" ಎಂಬ ಕೋಟೆಯನ್ನು ಶಿವಾಜಿ ಕಟ್ಟಿಸಿದನು. ಇಲ್ಲಿ ಉಳಿದೆಲ್ಲ ಕೋಟೆಗಳಗಿಂತ ಹೆಚ್ಚು ಸಂಪತ್ತನ್ನು ಇರಿಸಿದ್ದರಿಂದ ಅವನ ಗುರುಗಳಾದ ಶ್ರೀ ರಾಮದಾಸರು ಈ ಕೋಟೆಗೆ "ಶ್ರೀಮಂತಗಡ" ಎಂದು ಹೆಸರಿಟ್ಟರು.

ಈ ಕೋಟೆ ಸುಮಾರು ೨೫ ಎಕರೆಯಷ್ಟು ವಿಶಾಲವಾಗಿದ್ದು, ಉತ್ತರ ದಿಕ್ಕಿಗೆ ಮುಖ್ಯ ದ್ವಾರವಿದೆ ಕೋಟೆಯನ್ನು ಏರಲು ಅನುಕೂಲವಾಗಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ, ಕೋಟೆ ಗೋಡೆಯು ೨೫ ಅಡಿ ಎತ್ತರ ೧೨ ಅಡಿ ಅಗಲವಿದೆ. ಇಲ್ಲಿ ಹುಡೇವುಗಳಿವೆ, ಇದನ್ನು ಶಿವಾಜಿ ಸ್ಥಾಪಸಿದ ಎನ್ನಲಾಗುತ್ತದೆ. ಕೋಟೆಯ ಸುತ್ತಲೂ ಕಳ್ಳಗಿಂಡಿಗಳಿವೆ, ರಣದುಲ್ಲಾಖಾನನ ಕೇಂದ್ರ ಸ್ಥಳವಾದ ಇಂದಿನ ರಣತೂರ ಗ್ರಾಮವನ್ನು ಬೆಟ್ಟದ ಮೇಲಿಂದ ನೋಡಬಹುದು. ಈ ಪ್ರದೇಶದಲ್ಲಿ ಶಿವಾಜಿಗೂ ಮತ್ತು ರಣಾದುಲ್ಲಾಖಾನನಿಗೂ ಯುದ್ಧ ನಡೆಯಿತೆಂದು ಹೇಳಲಾಗುತ್ತದೆ. ಇಲ್ಲಿರುವ ರಣಗಟ್ಟೆಯಮ್ಮನ ದಿಬ್ಬ ಇರುವುದರಿಂದ ಇದು ರಣಭೂಮಿ ಎಂದು ಹೆಸರು ಹೇಳುತ್ತಾರೆ. ಈ ಕಾರಣದಿಂದಾಗಿಯೇ ಈ ಊರಿಗೆ ರಣತೂರ ಎಂದು ಹೆಸರು ಬಂದಿರಬಹುದು. ಕೋಟೆಯಲ್ಲಿ ಮದ್ದು ಗುಂಡುಗಳನ್ನು ತಯಾರಿಸುತ್ತಿದ್ದರು ಎನ್ನಲಾಗಿದೆ. ಕೋಟೆಯಲ್ಲಿ ಐದು ಪ್ರಸಿದ್ಧ ಹೊಂಡಗಳಿವೆ ಅವುಗಳು ಸ್ನಾನದ ಹೊಂಡ, ಆನೆಯ ಹೊಂಡ, ಮದ್ದಿನ ಹೊಂಡ, ಮುಟ್ಟುದೋಷ ಹೊಂಡ ಮತ್ತು ಮುಸರಿ ಹೊಂಡ, ಬೇಸಿಗೆ ಕಾಲದಲ್ಲಿ ಇಲ್ಲಿಯ ನೀರು ಬತ್ತುವದಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ.

ಗುಡಿಯ ಕಂಬವೊಂದರಲ್ಲಿರುವ ಶಾಸನವು ಕ್ರಿ.ಶ. ೧೩ ನೇ ಶತಮಾನಕ್ಕೆ ಸೇರಿದೆ ಅದು ಕೆಲವು ದೇವರಿಗೆ ಭೂಮಿ ದಾನ ನೀಡಿದುದನ್ನು ಉಲ್ಲೇಖಸುವುದು. ಇನ್ನೊಂದು ಕಂಬದಲ್ಲಿರುವ ಶಾಸನವು ತ್ರುಟಿತ ಹಾಗೂ ಅಸ್ಪಷ್ಟವಾಗಿದೆ.

ಬೆಳ್ಳಟ್ಟಿ (ಕವಲಟ್ಟಿ)ಯ ಹನುಮಂತ ದೇವಾಲಯ

ಈ ದೇವಾಲಯವು ಮಾಚೇನಹಳ್ಳಿ ರಸ್ತೆಯ ಪಕ್ಕದಲ್ಲಿದ್ದು. ಇದು ದಕ್ಷಿಣಾಭಿಮುಖ ವಾಗಿ ಗರ್ಭಗೃಹವನ್ನು ಒಳಗೊಂಡಿದೆ. ಇದು ಕ್ರಿ.ಶ. ೧೭-೧೮ ನೇ ಶತಮಾನದಲ್ಲಿ ನಿರ್ಮಿಸಲ್ಪಟ್ಟಿದೆ. ಇದನ್ನು ಕಪ್ಪು ಶಿಲೆಗಳಿಂದ ನಿರ್ಮಿಸಿದ್ದಾರೆ. ಇದರ ಸ್ಥಿತಿಯು ಸಾಧಾರಣವಾಗಿದೆ. ಇದರ ಯಾವುದೇ ಜನವಸತಿ ಕಂಡುಬರುವದಿಲ್ಲ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಹನುಮಂತನ ಶಿಲ್ಪ ಮೂರ್ತಿಯನ್ನು ಇರಿಸಲಾಗಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದೆ. ಗರ್ಭಗುಡಿಯ ಒಳಗೆ ಶಾಸನವಿದ್ದು, ಇದು ಕಲ್ಯಾಣಚಾಲುಕ್ಯರ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ ಕ್ರಿ.ಶ. ೧೧೧೨ ರ ಶಾಸನವು ಯಾದವ ವಂಶದ ಮಹಾಮಂಡಳೇಶ್ವರ ಪೆರ್ಮಾಡಿ ಅರಸರ ವಿನಂತಿಯ ಮೇರೆಗೆ ಪೆರ್ಗಡೆ ಚಾವಿಸೆಟ್ಟಿಯು ಕಪಿಲೇಶ್ವರರಿಗೆ ಭೂದಾನ ನೀಡಿದ ವಿಷಯವನ್ನು ದಾಖಲಿಸಿದೆ. ಈ ಗುಡಿಯ ಮುಂದೆ ವೀರಗಲ್ಲು ಇದೆ.

ವೈಷ್ಣವ ದೇವಾಲಯಗಳು

ವೈದಿಕ ಯುಗದ ಸಾಹಿತ್ಯದಲ್ಲಿ ಈ ಧರ್ಮದ ಉಲ್ಲೆಖಗಳಿದ್ದು, ಆ ಕಾಲದಲ್ಲಿ ಇದರ ಧಾರ್ಮಿಕ ನಿರ್ಮಾಣಗಳಿದ್ದ ಬಗ್ಗೆ ಸ್ಪಷ್ಟತೆಯಿಲ್ಲ. ಹೀಗಾಗಿ ಕನ್ನಡನಾಡಿನ ಸಂದರ್ಭದಲ್ಲಿ ಶಾತವಾಹನ ಮತ್ತು ಸಮಕಾಲೀನ ಮನೆತನ ಬನವಾಸಿ ಕದಂಬರು, ತಲನಾಡಿನ, ಗಂಗರು, ಬಾದಾಮಿ ಚಾಲುಕ್ಯರು, ಮಳೆಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಮತ್ತು ಕಲಚೂರಿಯರು, ದ್ವಾರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಈ ಧಾರ್ಮಿಕ ಆಚಾರ್ಯರಿಗೆ ಆಶ್ರಯ, ಪ್ರೋತ್ಸಾಹ ನೀಡುವದರ ಮೂಲಕ ಧಾರ್ಮಿಕ ನಿರ್ಮಾಣಗಳ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿವೆ. ಶಿರಹಟ್ಟಿ ಪರಿಸರದಲ್ಲಿ ನಿರ್ಮಾಣದ ವೈಷ್ಣವ ಧರ್ಮದ ದೇವಾಲಯಗಳ ವಾಸ್ತುಕಲೆಯು ಈ ಕೆಳಗಿನಂತಿವೆ.

ಶಿರಹಟ್ಟಿಯ ಲಕ್ಷ್ಮಿನಾರಾಯಣ ದೇವಾಲಯ:

ಈ ದೇವಾಲಯವು ವಿಶಿಷ್ಟವಾಗಿದೆ. ಗರ್ಭಗೃಹ ಮತ್ತು ಅದರ ಮುಂಭಾಗದಲ್ಲಿ ಅರ್ಧಮಂಟಪವಿದೆ. ಇವೆರಡರ ಮುಂಭಾಗದಲ್ಲಿ ನವರಂಗದಂತಹ ವಿಶಾಲವಾದ ಅಂಗಣವುಳ್ಳ ಮಂಟಪ ಭಾಗವಿದ್ದು ಇದನ್ನು ಗರ್ಭಗೃಹ ಮತ್ತು ಅರ್ಧ ಮಂಟಪದ ಭಾಗಗಳನ್ನು ಕಲ್ಲಿನಿಂದ ರಚಿಸಿದ್ದಾರೆ. ಇದು ಹಿಂದೂ ಮುಸ್ಲಿಂ ಶೈಲಿಯ ಗೋಪುರವನ್ನು ಹೊಂದಿದೆ. ಇದು ಕ್ರಿ.ಶ. ೧೭-೧೮ ನೇ ಶತಮಾನ ಇದನ್ನು ಅಮೃತ ಶಿಲೆ, ಕಲ್ಲು, ಮರಗಳಿಂದ ನಿರ್ಮಿಸಲ್ಪಟ್ಟಿದೆ. ಇದರ ಸ್ಥಿತಿಯು ಉತ್ತಮವಾಗಿದೆ. ಇದರಲ್ಲಿ ಲಕ್ಷ್ಮಿನಾರಾಯಣ ಅಮೃತಶಿಲೆಯ ಮೂರ್ತಿ ಶಿಲ್ಪವನ್ನು ಕಟ್ಟೆಯ ಮೇಲೆ ಪ್ರತಿಷ್ಠಾಪಿಸಿದ್ದಾರೆ. ಇದು ನವೀಕರಣಕ್ಕೆ ಒಳಗಾಗಿದೆ. ಈ ದೇವಾಲಯವನ್ನು ಪೂರ್ವದಿಂದ

ಪ್ರವೇಶಿಸಬಹುದು. ಮದ್ಯದ ಅಂಗಳ (ನವರಂಗ) ಭಾಗವನ್ನು ಕಲ್ಲಿನಿಂದ ಹಾಗೂ ಹೆಚ್ಚಾಗಿ ಮರವನ್ನು ಬಳಸಿ ರಚಿಸಿದ್ದಾರೆ. ಇಲ್ಲಿ ಪೂರ್ವ ಮತ್ತು ಪಶ್ಚಿಮದಲ್ಲಿ ತಲಾ ಎರಡು ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ತಲಾ ಮೂರು ಬಾಗಿಲುಗಳು ಇವೆ. ಅದಿಷ್ಠಾನ ನೆಲ ಹಾಸಿಗೆಗೆ ಕಲ್ಲನ್ನು ಬಳಸಲಾಗಿದೆ. ಉಳಿದಂತೆ ಎಲ್ಲವೂ ಮರದ ರಚನೆಗಳಾಗಿವೆ. ಅಂಗಳದಲ್ಲಿ ವಿಶಿಷ್ಟವಾದ ಕಮಾನಿನ ರಚನೆಯುಳ್ಳ ಕೋಷ್ಠಕವನ್ನು ಕಿರುಗುಡಿಯಂತೆ ನಿರ್ಮಿಸಿ ಅದರಲ್ಲಿ ಗರುಡನ ಮೂರ್ತಿಯನ್ನು ಇರಿಸಿದ್ದಾರೆ. ದೇವಾಲಯಕ್ಕೆ ಆಧುನಿಕ ಶಿಖರವಿದೆ. ಅಂಗಳದ ಮೇಲ್ಭಾಗದಲ್ಲಿ ಬಾಲ್ಕನಿ ಇದೆ. ದೇವಾಲಯವು ಕೋಟೆಯ (ವಾಡೆಯ) ಒಳಗೆ ಇರುತ್ತದೆ.[೧೧]

ಲಕ್ಷ್ಮಿನಾರಾಯಣ ದೇವಾಲಯದ ಸುತ್ತಲೂ ಅನೇಕ ಮನೆಗಳಿವೆ. ಶಿರಹಟ್ಟಿಯು ಪ್ರಾಚೀನ ಕಾಲದಿಂದ ತನ್ನದೇ ಆದ ಸ್ಥಾನವನ್ನು ಹೊಂದಿದೆ. ಇದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿ ದ.ರಾ. ಬೇಂದ್ರೆ ಅವರು ಹುಟ್ಟೂರು ಅಂಕುಶಖಾನ್ ಅಥವಾ ಖಾನಗೌಡರು ಇಲ್ಲಿಯ ಕೋಟೆಯನ್ನು ನಿರ್ಮಿಸಿದನೆಂದು ಅಭಿಪ್ರಾಯ ಪಡಲಾಗಿದೆ. ಕೋಟೆಯ ಭಾಗಗಳು ಮಾತ್ರ ಕಾಣಿಸುತ್ತವೆ.

ಶಿರಹಟ್ಟಿ ಪರಿಸರದ ದೇವಾಲಯಗಳ ವಾಸ್ತುಕಲೆಯ ಅವಲೋಕನ

ಶಿರಹಟ್ಟಿ ಪರಿಸರದ ಪ್ರಮುಖ ಗ್ರಾಮಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಅಲ್ಲಿ ರಾಷ್ಟ್ರಕೂಟರ ಕಾಲದಿಂದ ಸುಮಾರು ೧೮ ನೇಯ ಶತಮಾನದವರೆಗೂ ದೇವಾಲಯಗಳು ನಿರ್ಮಿಸಲ್ಪಟ್ಟಿರುವುದು ಕಂಡುಬರುತ್ತದೆ. ಈ ದೇವಾಲಯಗಳು ಈ ಪರಿಸರದ ಆಳ್ವಿಕೆ ನಡೆಸಿದ ಬಾದಾಮಿ ಚಾಲುಕ್ಯರಿಂದ ಸಂಸ್ಥಾನಗಳ ಆಳ್ವಿಕೆಯ ಕಾಲದಲ್ಲೂ ಆಸ್ತಿಯ ಮತ್ತು ದಾನದತ್ತಿ ಪಡೆದು ಬೆಳವಣಿಗೆ ಹೊಂದಿರುವುದು ಈ ಪರಿಸರದ ಶಾಸನಗಳಿಂದ ತಿಳಿದುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದ ದೇವಾಲಯ ಈ ಪರಿಸರದಲ್ಲಿ ಕಂಡುಬಂದಿಲ್ಲವಾದರೂ ಲಕ್ಷ್ಮೇಶ್ವರದ ಕ್ರಿ.ಶ.೬೮೩ ರ ವಿನಯಾದಿತ್ಯನ ಶಂಖಬಸದಿಯ ಗೋಡೆ ಶಾಸನವು ಶಂಖಜಿನಾಲಯಕ್ಕೆ ಬೆಳ್ವಲ ಮುನ್ನೂರು ಹಡಗಲಿ ಗ್ರಾಮವನ್ನು ದಾನ ಮಾಡಿರುವದನ್ನು ಉಲ್ಲೇಖಿಸುತ್ತದೆ. ಶಿರಹಟ್ಟಿ ಪರಿಸರದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಧಾರ್ಮಿಕ ದೃಷ್ಟಿಯಿಂದ ನೋಡಿದಾಗ ಶೈವ ಸಂಪ್ರದಾಯ ದೇವಾಲಯಗಳೇ ಹೆಚ್ಚಾಗಿ ಕಂಡುಬರುತ್ತವೆ. ಈ ಪರಿಸರದಲ್ಲಿ. ಹೆಚ್ಚಿನ ಪ್ರಮಾಣದ ದೇವಾಲಯಗಳು ಭಿನ್ನಗೊಂಡಿವೆ. ಕೆಲವು ದೇವಾಲಯಗಳು ಸ್ಥಳೀಯ ಶೈಲಿಯಲ್ಲಿ ಜೀರ್ಣೋದ್ಧಾರಗೊಂಡಿವೆ. ಹೆಚ್ಚಿನ ಪ್ರಮಾಣದ ದೇವಾಲಯಗಳು ಕಪ್ಪು ಮಿಶ್ರಿತ ಬಿಳಿಛಾಯೆಯ ಬಳಪದ ಶಿಲೆಯಲ್ಲಿ ನಿರ್ಮಿಸಲ್ಪಟ್ಟಿವೆ. ಆಯಾ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಸಿಗುವ ಶಿಲೆಯನ್ನು ಹೆಚ್ಚಾಗಿ ಬಳಸಿದ್ದಾರೆ. ಕೆಲವು ದೇವಾಲಯಗಳಿಗೆ ಇಟ್ಟಿಗೆಯನ್ನು ಇತ್ತೀಚೆಗೆ ಜೀರ್ಣೋದ್ಧಾರದ ಸಂದರ್ಭದಲ್ಲಿ ಬಳಸಿರುವರು. ಷಡ್ವರ್ಗ ಕ್ರಮದ ದೇವಾಲಯಗಳಲ್ಲಿ ಅಧಿಷ್ಠಾನವು ಮೊದಲನೇ ಭಾಗ. ಒಟ್ಟು ದೇವಾಲಯಕ್ಕೆ ಆಧಾರವಾಗಿ ನಿರ್ಮಿಸಿದ ಭಿತ್ತಿಯ ಕೆಳಭಾಗದಲ್ಲಿರುವ ಭಾಗವೇ ಅಧಿಷ್ಠಾನ. ಶಿರಹಟ್ಟಿ ಪರಿಸರದಲ್ಲಿನ ಹೆಚ್ಚಿನ ಪ್ರಮಾಣದ ದೇವಾಲಯಗಳ ಅಧಿಷ್ಠಾನಗಳು ನೆಲದಲ್ಲಿ ಮುಚ್ಚಲ್ಪಟ್ಟಿವೆ. ಕೆಲವು

ದೇವಾಲಯಗಳ ಅಧಿಷ್ಠಾನವು ಮಾತ್ರ ಕಂಡುಬರುತ್ತದೆ. ಷಡ್ವರ್ಗ ಕ್ರಮದ ದೇವಾಲಯಗಳಲ್ಲಿ ಎರಡನೇಯ ಭಾಗವಾದ ಭಿತ್ತಿಯ ಅಧಿಷ್ಠಾನ ಮತ್ತು ಪ್ರಸ್ತರದ ನಡುವೆ ಇರುವುದು. ದೇವಾಲಯಗಳಲ್ಲಿ ಎರಡು ಬಗೆಯ ಬಿತ್ತಿಯನ್ನು ಕಾಣಬಹುದು. ಮೊದಲನೇ ಬಗೆಯ ಬಿತ್ತಿಯು ಸರಳವಾಗಿ, ನಿರಾಲಂಕೃತವಾಗಿದೆ. ಎರಡನೆಯ ಬಗೆಯ ಬಿತ್ತಿಯಲ್ಲಿ ಕುಡ್ಯ ಸ್ತಂಭಗಳು, ಭದ್ರ, ಸಲಿಲಾಂತರಗಳ ದೇವಕೋಷ್ಟಗಳ ಅಲಂಕಾರ ಕಂಡುಬರುತ್ತವೆ. ಷಡ್ವರ್ಗ ಕ್ರಮದ ದೇವಾಲಯಗಳಲ್ಲಿ ಮೂರನೇ ಭಾಗವಾದ ಪ್ರಸ್ತರವು ಭಿತ್ತಿಯ ಅಂತ್ಯದಿಂದ ಮೇಲ್ಕಟ್ಟಡದ ಪ್ರಾರಂಭದವರೆಗಿನ ಭಾಗವಾಗಿರುವುದು. ಷಡ್ವರ್ಗ ಕ್ರಮದ ದೇವಾಲಯಗಳಲ್ಲಿ ಪ್ರಸ್ತರದ ನಂತರ ಬರುವ ಗ್ರೀವ, ಸ್ತೂಪಿ, ಕಳಸ ಈ ಮೂರು ಭಾಗಕ್ಕೆ ಶಿಖರವೆಂದು ಕರೆಯಲಾಗುತ್ತದೆ. ಲಕ್ಷ್ಮೇಶ್ವರ, ಮುಳಗುಂದಗಳಲ್ಲಿ ಪ್ರಾಚೀನ ಶಿಖರಗಳು ಕಂಡುಬರುತ್ತವೆ. ಶಿರಹಟ್ಟಿಯ ಪರಿಸರದ ಮೌನೇಶ್ವರ ದೇವಾಲಯ, ಛಬ್ಬಿಯ ಭೋಗೇಶ್ವರ ದೇವಾಲಯದ ಶಿವಲಿಂಗಕ್ಕೆ ಅಭಿಷೇಕಮಾಡಿದ ನೀರು ಹೊರಗೆ ಹರಿದು ಹೋಗಲು ಒಳಭಿತ್ತಿಯ ಕೆಳ ಅಂತ್ಯದಲ್ಲಿ ಅಂದರೆ ನೆಲಮಟ್ಟದಲ್ಲಿ ಒಂದು ನಾಳವನ್ನು ಮಾಡಿರುತ್ತಾರೆ. ಈ ನಾಳಕ್ಕೆ ಜಲ ಪ್ರಣಾಳ ಅಥವಾ ವಾರಿಮಾರ್ಗ ಅಥವಾ ಅಂಬು ಮಾರ್ಗ ಎಂದು ಕರೆಯಲಾಗುತ್ತದೆ. ಈ ಪರಿಸರದ ಹೊಳೆಇಟಗಿಯ ಈಶ್ವರ ದೇವಾಲಯದ ಮುಖಮಂಟಪದ ಸುತ್ತಲೂ ಕೂಡುವ ಕಕ್ಷಾಸನಗಳನ್ನು ಹೊಂದಿರುತ್ತದೆ. ಶಿರಹಟ್ಟಿ ಪರಿಸರದ ಶಿರಹಟ್ಟಿಯ ಅವ್ವಲಿಂಗವ್ವನ ಗುಡಿ, ವರವಿಯ ಮೌನೇಶ್ವರನ ದೇವಾಲಯಗಳಲ್ಲಿ ಕಮಾನಿನ ಆಕಾರದ ಕಂಬಗಳು, ತಿರುಗುಣಿ ಯಂತ್ರದಿಂದ ರಚಿತವಾಗಿವೆ. ಕೆಲವು ಗ್ರಾಮದ ದೇವಾಲಯದ ಸ್ತಂಭಗಳು ಚೌಕಾಕಾರವಾಗಿವೆ. ದೇವಾಲಯದ ಮಂಟಪದ ಮಧ್ಯದ ಒಳಮುಖಕ್ಕೆ ವಿತಾನವೆಂದು ಮತ್ತು ಅದರಲ್ಲಿ ಅಲಂಕರಣಕ್ಕೆ ವಿತನಾಲಂಕಾರವೆಂದು ಕರೆಯುತ್ತಾರೆ. ಈ ಪರಿಸರದ ವರವಿಯ ಮೌನೇಶ್ವರ ದೇವಾಲಯ, ಶಿರಹಟ್ಟಿಯ ಅವ್ವಲಿಂಗವ್ವನ ಗುಡಿ, ರಣತೂರಿನ ಈಶ್ವರ ದೇವಾಲಯಗಳಲ್ಲಿ ನವರಂಗ ವಿತಾನವು ಪದ್ಮಾಲಂಕಾದಿಂದ ಕೂಡಿವೆ. ಶಿರಹಟ್ಟಿಯ ಅವ್ವಲಿಂಗವ್ವನ ದೇವಾಲಯವು ಗರ್ಭಗೃಹ, ನವರಂಗ ಇತ್ಯಾದಿಗಳು ದ್ವಾರಬಂಧವನ್ನೇ ಒಳಗೊಂಡಿರುತ್ತವೆ. ಇದು ಲಲಾಟ ಪಟ್ಟಿ, ಉತ್ತರಾಂಗ, ಪೇದ್ಯಾಪಿಂಡ, ದ್ವಾರಶಾಖೆ, ಚಂದ್ರಶಿಲಾ ಅಂಗಗಳಿಂದ ಕೂಡಿರುತ್ತವೆ.

೫.೩ ಶಿರಹಟ್ಟಿ ಪರಿಸರದ ಮಠಗಳು

ಆದಿಮಾನವನ ಬುದ್ಧಿಶಕ್ತಿ ವಿಕಾಸಗೊಳ್ಳುವಪೂರ್ವದಲ್ಲಿ ದೇವರು, ಧರ್ಮಗಳ ಪರಿಕಲ್ಪನೆ ಬಂದಿರಲಿಲ್ಲ. ಇತರೆ ಪ್ರಾಣಿಗಳಂತೆ ಅವನೂ ಕೂಡ ಬೇಟೆಯಾಡುತ್ತಾ ಗಡ್ಡೆ-ಗೆಣಸು ತಿಂದು ಗುಹೆಗಳಲ್ಲಿ ಮರದ ಪೊಟರಿನಲ್ಲಿ ಜೀವಿಸುತ್ತಿದ್ದ. ಹೀಗೆ ಎಷ್ಟೋ ವರ್ಷಗಳು ಗತಿಸಿದ ನಂತರ ಈ ಸೃಷ್ಟಿಯಲ್ಲಿ ಅಗೋಚರವಾದ ಯಾವುದೋ ಒಂದು ಬಗೆಯ ಅದ್ಭುತ ಶಕ್ತಿಯಿದೆ ಎಂಬುದು ಅವನ ಗಮನಕ್ಕೆ ಬಂದಾಗ ಧರ್ಮ-ದೇವರುಗಳ ಪರಿಕಲ್ಪನೆ ಬೆಳೆದು ಬರಲು ಕಾರಣವಾಯಿತು.

ಗುಹೆಯಲ್ಲಿದ್ದವನು ಹೊರ ಬಂದು ಗುಡಿಸಲು ಕಟ್ಟಿಕೊಂಡನು. ತಾನು ಭಯ-ಭಕ್ತಿಯಿಂದ ಆರಾಧಿಸುವ ದೇವರಿಗೂ ತನ್ನಂತೆ ನಾಲ್ಕುಕಲ್ಲಿನ ಒಂದು ಸೂರನ್ನು ನಿರ್ಮಿಸಿದನು. ಕಾಲಕ್ರಮೇಣ ಅದನ್ನು ಕಲಾಕೃತಿಯಿಂದ ಸುಂದರಗೊಳಿಸಿ ಭವ್ಯದೇವಾಲಯವನ್ನೇ ಮಾಡಿದನು. ಧರ್ಮ-ದೇವರ ಬಗೆಗೆ ಜ್ಞಾನವನ್ನು ನೀಡುವಂತ ತಪಸ್ವಿಗಳಿಗೆ, ಯೋಗಿಗಳಿಗೆ, ಗುರುಗಳಿಗೆ ಆಶ್ರಮ- ಮಠಗಳನ್ನು ಕಟ್ಟಿಕೊಟ್ಟು ಧನ ದಾನ್ಯ ಭೂಮಿಯನ್ನು ದಾನ ಹಾಕಿಕೊಟ್ಟನು. ಹೀಗೆ ಬೆಳೆದು ಬಂದಿರುವ ಮಠ, ಮಂದಿರ ದೇವಾಲಯಗಳು ನಮ್ಮ ಪ್ರಾಚೀನ ಸಂಸ್ಕೃತಿಯ ಪ್ರತೀಕಗಳಾಗಿವೆ. ಅಂತಹ ಪ್ರಾಚೀನ ಸಂಸ್ಕೃತಿಯ ಇತಿಹಾಸ ಹೊಂದಿರುವ ಮಠಗಳೆಂದರೆ, ಶಿರಹಟ್ಟಿಯ ಶ್ರೀ ಜಗದ್ಗುರು ಫಕೀರರೇಶ್ವರ ಮಠ, ವರವಿಯ ಶ್ರೀ ಮೌನೇಶ್ವರ ಮಠ, ಬೆಳ್ಳಟ್ಟಿಯ ಶ್ರೀ ರಾಮಲಿಂಗೇಶ್ವರ ಮಠ, ಹೆಬ್ಬಾಳದ ಶ್ರೀ ಹಾಲಸ್ವಾಮಿ ಮಠ, ಹೊಳೆ ಇಟಗಿಯ ಮತ್ತು ಹೆಬ್ಬಾಳದ ವಿರಕ್ತ ಮಠ, ಸಂಕದಾಳದ ಶ್ರೀ ಮುಳ್ಳುಗದ್ದಿಗೆ ಪವಾಡಮಠ, ಬನ್ನಿಕೊಪ್ಪದ ಶ್ರೀ ಸುಜ್ಞಾನ ದೇವರ ಮಠ ಮುಂತಾದ ಅನೇಕ ಮಠಗಳು ಅಸ್ತಿತ್ವದಲ್ಲಿ ಇದ್ದು ಅನ್ನದಾಸೋಹ ಹಾಗೂ ವಿದ್ಯಾದಾನ ಮಾಡುತ್ತಾ ಮುಂದುವರೆದುಕೊಂಡು ಬಂದಿವೆ.

ಹೀಗೆ ಮಠ ಎಂಬ ಶಬ್ದಕ್ಕೆ ಹತ್ತು-ಹಲವು ಅರ್ಥಗಳು ಕಂಡುಬಂದರೂ ಮುಖ್ಯವಾಗಿ "ಮಠ" ಎಂಬುದರ ಮೂಲ ಅರ್ಥ ಸನ್ಯಾಸಿಗಳು ವಾಸಿಸುವ ಕುಠೀರ, ಅದು ತಪಸ್ಸಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ, ಕ್ರಮೇಣ ಆಶ್ರಮ, ಗುರುಮನೆ, ಗುರುಕುಲಗಳಾಗಿ ಕಾಲಕಳೆದಂತೆ ವಿದ್ಯೆ ಪ್ರಸಾದ-ಜ್ಞಾನ ಪ್ರಸಾದ ಕೇಂದ್ರಗಳಾಗಿ ಬೆಳೆದವು. "ಹಿರಿಯರಿದ್ದರೆ ಮನೆ ಗುರುವಿದ್ದರೆ ಮಠ" ಎಂಬ ಗಾದೆ ಮಾತು ಕೂಡ ಇದನ್ನೇ ಸೂಚಿಸುವುದು. ಒಂದು ಸಂಸಾರದ ಸೂತ್ರಧಾರಿಯಾಗಿ ಮನೆಗೊಬ್ಬ ಹಿರಿಯನಿದ್ದಂತೆ ಸಮಾಜದ ಸೂತ್ರಧಾರಿಯಾಗಿ ಮಠದಲ್ಲಿ ಗುರು ಇರುತ್ತಿದ್ದನು. ಅಜ್ಞಾನವನ್ನು ಕಳೆದು ಜ್ಞಾನವನ್ನು ನೀಡುವ ಗುರು ಸಾಕ್ಷಾತ್ ಪ್ರತಿರೂಪವೇ ಆಗಿದ್ದನು. 'ಮಠ' ಎಂದರೆ ಗುರುವಿನಿಂದ ವಿದ್ಯೆಯನ್ನು ಪಡೆಯುವ ಪಾಠಶಾಲೆಯು, ಗುರುಶಿಷ್ಯರ ವಾಸಸ್ಥಾನವೂ ಆಗಿತ್ತು. ಪ್ರಾಚೀನ ಕಾಲದಲ್ಲಿ ಮಠಗಳು ಶಿಕ್ಷಣ ನೀಡುವ ಕೇಂದ್ರಗಳಾಗಿದ್ದವು. ಈಗಲೂ ಸಹಿತ ನಾಡಿನ ಹಲವಾರು ಮಠಗಳು ಶಿಕ್ಷಣ ಕೇಂದ್ರಗಳಾಗಿರುವುದನ್ನು ಕಾಣುತ್ತೇವೆ. ಹೀಗೆ ಶಿರಹಟ್ಟಿ ಪರಿಸರದ ಪ್ರಮುಖ ಮಠಗಳ ಪರಿಚಯ ಈ ಕೆಳಗಿನಂತಿದೆ.

ಶಿರಹಟ್ಟಿಯ ಶ್ರೀ ಜಗದ್ಗುರು ಫಕೀರರೇಶ್ವರ ಮಠ

ಈ ಮಠವು ಊರಿನ ಉತ್ತರಕ್ಕೆ ಪೂರ್ವಾಭಿಮುಖವಾಗಿದೆ. ಕ್ರಿ.ಶ. ೧೭-೧೮ ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು. (ಗದ್ದುಗೆ) ಗರ್ಭಗೃಹ, ತೆರೆದ ಮಂಟಪ, ಮತ್ತು ಪ್ರಾಂಗಣಗಳಿವೆ. ಗ್ರಾನೈಟ್ ಶಿಲೆ, ಕಲ್ಲು, ಕಬ್ಬಿಣದ ಸರಳುಗಳಿಂದ ನಿರ್ಮಾಣ ಮಾಡಿರುವರು. ಫಕೀರಸ್ವಾಮಿ ಮಠವು ಕಲ್ಲಿನಿಂದ ಕಟ್ಟಲ್ಪಟ್ಟಿದ್ದು ಇದರಲ್ಲಿ ಮಠದ ಪರಂಪರೆಯ ಆರು ಫಕೀರಸ್ವಾಮಿಗಳ ಗದ್ದುಗೆಗಳಿವೆ.

ಅವುಗಳನ್ನು ಕಲ್ಲಿನಿಂದ ಕಟ್ಟಲ್ಪಟ್ಟಿವೆ. ಇವುಗಳನ್ನು ಸುಮಾರು ೧೭೧೮ ರಿಂದ ೧೭೬೩ ರಲ್ಲಿ ಕಟ್ಟಿರಬಹುದು. ಇಂಡೋ-ಇಸ್ಲಾಮಿಕ್ ಶೈಲಿಯ ಕಮಾನಿನ ಕಂಬಗಳು ಅವುಗಳಿಗೆ ಸೂರನ್ನು ಇತ್ತೀಚಿಗೆ ಗ್ರಾನೈಟ್ ಕಲ್ಲಿನಿಂದ ಹೊದಿಸಲಾಗಿದೆ. ಗುಮ್ಮಟಾಕಾರ ಹೋಲುವ ಪ್ರಸ್ತರ ಭಾಗದ ಮೇಲಿದೆ. ಮಂಟಪದ ಕೆಳಭಾಗದಲ್ಲಿ ಗದ್ದುಗೆಯನ್ನು ದಕ್ಷಿಣದಲ್ಲಿರುವ ದ್ವಾರದ ಮೂಲಕ ಪ್ರವೇಶಿಸಿ ಕಿರಿದಾದ ಮೆಟ್ಟಲುಗಳಿಂದ ತಲುಪಬಹುದು. ಮೇಲಿರುವ ಸಭಾಂಗಣದ ಮಧ್ಯೆ ಕಬ್ಬಿಣದ ಸಲಾಕೆಗಳನ್ನು ತೆರೆದ ಭಾಗದಲ್ಲಿ ಅಲ್ಲಿಂದಲೇ ಗದ್ದುಗೆಯ ದರ್ಶನವನ್ನು ಮಾಡಲು ಅನುಕೂಲ ಕಲ್ಪಿಸಿರುವರು. ಇದರ ಪಕ್ಕದಲ್ಲಿಯ ಮೆಟ್ಟಿಲುಗಳ ಮೂಲಕ ಪೂಜಾರಿಗಳು ಪ್ರವೇಶಿಸುತ್ತಾರೆ. ಗೋಡೆಯಲ್ಲಿ ಜಾಲಾಂದ್ರಗಳನ್ನು ಮಾಡಿದ್ದಾರೆ. ಎತ್ತರದ ಅಧಿಷ್ಠಾನ ಅಥವಾ ಜಗಲಿಯ ಮೇಲಿರುವ ಈ ಸ್ಮಾರಕದಲ್ಲಿ ನಿತ್ಯ ಪೂಜೆಗಳು ನಡೆಯುತ್ತವೆ. ಮುಖ್ಯ ಗದ್ದುಗೆಯ ಹಿಂಬದಿಯ ಪ್ರಸ್ತರದಲ್ಲಿ ಬೋದಿಗೆಯ ಅಲಂಕರಣೆಯನ್ನು ಕಾಣಬಹುದು. ಫಕೀರಸ್ವಾಮಿಗಳು ಸಾಲಿನಲ್ಲಿಯ ಕೊನೆಯ ಗದ್ದುಗೆಯ ತೆರೆದ ಮೂಲಕ ಪ್ರವೇಶ ವಿದ್ದು ಎಲ್ಲವೂ ಎತ್ತರದ ಅದಿಷ್ಠಾನದ ಮೇಲೆ ನಿರ್ಮಿಸಿರುವರು. ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಕಮಾನಿನ ಆಕಾರದಂತೆ ಇರುವ ಭವ್ಯವಾದ ಪ್ರವೇಶದ್ವಾರಗಳಿವೆ. ಗದ್ದುಗೆಗಳ ಸುತ್ತಲೂ ಭಕ್ತಾದಿಗಳಿಗೆ ತಂಗಲು ವಸತಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ಅದೇ ಸಾಲಿನಲ್ಲಿ ಮಠದ ಕಾರ್ಯಾಲಯ ಹಾಗೂ ಪೀಠದಲ್ಲಿರುವ ಸ್ವಾಮಿಗಳು ವಾಸಿಸಲು ಗೃಹವಿದೆ. ಪೂರ್ವ ಭಾಗದಿಂದಲೂ ಮಠವನ್ನು ಪ್ರವೇಶಿಸಬಹುದು. ಹಿಂದೂ-ಮುಸ್ಲಿಮ್ ಐಕ್ಯತೆಯನ್ನು ಸಾರುವ ಈ ಮಠದ ಪರಂಪರೆಯು ಅತ್ಯಂತ ಗಮನಾರ್ಹವಾದದು. ಇಂದಿನ ಆಚರಣೆ ಮತ್ತು ಮಠದ ವಾಸ್ತು ಶೈಲಿಯಲ್ಲಿಯೂ ಈ ಐಕ್ಯತೆಯನ್ನು ಕಾಣಬಹುದು. ಈ ಮಠವು ಸಾಂಸ್ಕೃತಿಕವಾಗಿಯೂ ಕಾರ್ಯನಿರ್ವಹಿಸುತ್ತಲಿದೆ. ಪ್ರಸ್ತುತ ಮಠವು ಸುಮಾರು ೩೦೦ ವರ್ಷಗಳಷ್ಟು ಪ್ರಾಚೀನವಾದುದೆಂದು ಅಭಿಪ್ರಾಯ ಪಡಲಾಗಿದೆ. ಮಠದಲ್ಲಿರುವ ಒಂದು ಶಾಸನವು ಮಠವನ್ನು ಫಕೀರ ಚೆನ್ನವೀರಸ್ವಾಮಿಯವರಿಗೆ ಕ್ರಿ.ಶ. ೧೭೭೭ ರಲ್ಲಿ ದಾನಬಿಟ್ಟ ವಿಷಯವನ್ನು ಉಲ್ಲೇಖಿಸಿದೆ. ಇನ್ನೊಂದು ಶಾಸನವು ಕಲಕೇರಿಯ ಚನ್ನಪ್ಪನಿಗೆ ಗೌಡನ ತಮ್ಮನು ಸೋಗಿವಾಳ ಗ್ರಾಮದ ಅರ್ಧ ಭಾಗವನ್ನು ಕ್ರಿ.ಶ. ೧೭೬೩ ರಲ್ಲಿ ಮಾರಿದ ಅಂಶವನ್ನು ದಾಖಲಿಸಿದೆ. ಈ ಮಠದ ಉಳಿದ ಪೀಠಾಧೀಶ್ವರರು ಸವಣೂರು ನವಾಬರಿಂದ ಮೈಸೂರು, ದೊರೆಯಿಂದ, ಭಕ್ತ ಜನ ಭಕ್ತಿಯ ಕಾಣಿಕೆಯೆಂದು ಶಿರಪೇಚು, ಪೂಚೆ, ರತ್ನದಹಾರ, ಆನೆ, ಒಂಟೆ, ಮೇಣೆ, ಇನ್ನಿತರ ಅನೇಕ ಬಿರುದಾವಳಿ, ದಾನ ದತ್ತಿಗಳನ್ನು ಪಡೆದರು. ಉದಾಹರಣೆಗೆ ಐದನೇ ಪಟ್ಟದ ಎರಡನೆಯ ಶಿವಯೋಗಿ ಸ್ವಾಮಿಗಳಿಗೆ ಮೈಸೂರು ಮಹಾರಾಜರು ಬರೆಸಿ ಅರ್ಪಿಸಿದ ದಾನ ಪತ್ರವಿದೆ. ಇದು ಹಿಂದೂಸ್ತಾನಿಯಲ್ಲಿ ಮೊಹರು ಇರುತ್ತದೆ.

ಶಿರಹಟ್ಟಿಯ ಶ್ರೀ ಜಗದ್ಗುರು ಫಕೀರರೇಶ್ವರ ಮಠವನ್ನು ಜಗದ್ಗುರು ಫಕೀರಚನ್ನವೀರರು ಸ್ಥಾಪಿಸಿದರು. ಇದು ಹಿಂದೂ ಹಾಗೂ ಮುಸ್ಲಿಂ ಬಾಂಧವರ ಐಕ್ಯತೆಯ ಸಂಕೇತವಿದ್ದು ಮೂಲ ಕರ್ತೃಗಳನ್ನು ಬಿಟ್ಟು ಈ ಮಠಕ್ಕೆ ಇದುವರೆಗೂ ೧೩ . ಜನ

ಮಹಾಸ್ವಾಮಿಗಳಾಗಿದ್ದಾರೆ. ಚನ್ನವೀರ ಸ್ವಾಮಿಗಳ, ಸಿದ್ರಾಮ ಸ್ವಾಮಿಗಳು, ಶಿವಯೋಗಿ ಸ್ವಾಮಿಗಳು ಎಂಬ ೩ ಹೆಸರುಗಳ ಕತೃಗಳು ತಿಳಿಸಿದಂತೆ ಫಕೀರನಾಮದ ಮುಂದೆ ಅನುಕ್ರಮವಾಗಿ ಪೀಠಾಧೀಶ್ವರರಿಗೆ ಬರುತ್ತವೆ. ಇಲ್ಲಿ ಪ್ರತಿ ವರ್ಷ ವೈಶಾಖ ಹುಣ್ಣಿಮೆ ದಿನದಂದು ಜಾತ್ರೆಯು ನಡೆಯುವದು. ಜಾತ್ರೆಯ ಸಮಯದಲ್ಲಿ ಮಹಾಸ್ವಾಮಿಗಳವರು ಮೊಹಮ್ಮದೀಯರ ಉಡುಪನ್ನು ಧರಿಸುವರು ಜಾತ್ರೆಯಲ್ಲಿ ಸಹಸ್ರಾರು ಜನರು ಭಾಗವಹಿಸುತ್ತಾರೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನಗಳು, ಕಾರ್ತಿಕಮಾಸದಲ್ಲಿ ದೀಪೋತ್ಸವ ಇವೇ ಮುಂತಾದ ಕಾರ್ಯಕ್ರಮಗಳು ಈ ಮಠದ ಆಶ್ರಯದಲ್ಲಿ ಜರುಗುತ್ತವೆ. ಈ ಮಠವು ಒಂದು ಸ್ವತಂತ್ರ ಮಠವಾಗಿದ್ದು. ಜಿಲ್ಲೆಯಲ್ಲಿ ಅಲ್ಲದೇ ಇತರೆ ಕಡೆಗಳಲ್ಲಿ ಅನೇಕ ಶಾಖಾ ಮಠಗಳನ್ನು ಹೊಂದಿದೆ. ಈ ಮಠವು ವೀರಶೈವ ಮಠವಾಗಿ ಪರಿಣಮಿಸಿದೆ.[೧೩]

ವರವಿಯ ಶ್ರೀ ಮೌನೇಶ್ವರ ಮಠ

ವರವಿ ಕ್ಷೇತ್ರದ ಮೊದಲನೇಯ ಜಗದ್ಗುರು ಶ್ರೀ. ಶರಬೇಂದ್ರ ಸ್ವಾಮಿಗಳು, ಎರಡನೆಯವರು ಶ್ರೀ ವಿರೂಪಾಕ್ಷ ಸ್ವಾಮಿಗಳು, ಮೂರನೆಯವರು ಶ್ರೀ ಮಾನಯ್ಯ ಸ್ವಾಮಿಗಳು, ನಾಲ್ಕನೆಯವರು ಹಾಗೂ ಈಗಿನ ಪೀಠಾಧಿಪತಿಗಳಾದ ಶ್ರೀ ವಿರೂಪಾಕ್ಷಸ್ವಾಮಿಗಳು ಈ ಮಠದ ಕಾರ್ಯಕಲಾಪಗಳನ್ನು ಸಾಗಿಸಿಕೊಂಡು ಬಂದಿದ್ದಾರೆ. ಈ ಮಠಕ್ಕೆ ಟ್ರಸ್ಟ ಕಮೀಟಿ ಇದ್ದು, ಇದು ೧೯೭೧ ರಲ್ಲಿ ಸ್ಥಾಪನೆಯಾಯಿತು. ಈ ಕಮಿಟಿಯ ವ್ಯಾಪ್ತಿಯಲ್ಲಿ ವಿಶ್ವಕರ್ಮ ಸಂಪ್ರದಾಯಕ್ಕೆ ಸೇರಿರುವ ಮೌನೇಶ್ವರ ದೇವಸ್ಥಾನವಿದೆ. ರಥಸಪ್ತಮಿ ದಿವಸ ಸಾಮೂಹಿಕ ಜವುಳ, ಉಪನಯನ, ಹಾಗೂ ವಿವಾಹಗಳು ಇದರ ಆಶ್ರಯದಲ್ಲಿ ನಡೆಯುತ್ತವೆ. ಇದೇ ದಿವಸ ಮೌನೇಶ್ವರರ ಉತ್ಸವವು ಜರುಗುತ್ತದೆ. ನವರಾತ್ರಿಯಲ್ಲಿ ದಿಪೋತ್ಸವವನ್ನು ಆಚರಿಸಿ ವಿಜಯದಶಮಿ ದಿನ ಸಮಾಜ ಬಾಂಧವರು ಸೇರಿ ಬನ್ನಿಮುಡಿಯುವ ಹಬ್ಬವನ್ನು ಆಚರಿಸುತ್ತಾರೆ. ಪ್ರತಿ ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ಆಚರಿಸುತ್ತಾರೆ. ಈ ಕಮಿಟಿ ಆಶ್ರಯದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಣೆ ಮಾಡಲಾಗುತ್ತದೆ.

ಬೆಳ್ಳಟ್ಟಿಯ ಶ್ರೀ ರಾಮಲಿಂಗೇಶ್ವರ ಮಠ

ಈ ದೇವಾಲಯವು ಗ್ರಾಮದ ಕೆರೆಯ ದಂಡೆಯಮೇಲಿದೆ. ಇದು ಪೂರ್ವಾಭಿಮುಖ ವಾಗಿದೆ. ಇದು ಕ್ರಿ.ಶ. ೧೭-೧೮ ನೇ ಶತಮಾನದಲ್ಲಿ ನಿರ್ಮಿಸಲ್ಪಟ್ಟಿದೆ. ತಲವಿನ್ಯಾಸವು ಗರ್ಭಗೃಹ ತೆರೆದ ಅರ್ಧಮಂಟಪ, ನವರಂಗ ಹಾಗೂ ಹಜಾರಗಳನ್ನು ಒಳಗೊಂಡಿದೆ. ಇದನ್ನು ಗಾರೆ ಕಲ್ಲುಗಳಿಂದ ನಿರ್ಮಿಸಲಾಗಿದೆ. ಇದರ ಸ್ಥಿತಿಯು ಸಾಧಾರಣವಾಗಿದೆ. ಬೆಳ್ಳಟ್ಟಿಯಿಂದ ಶಿರಹಟ್ಟಿಗೆ ಹೋಗುವ ಮಾರ್ಗದ ಬಲಬದಿಯ ಗುಡ್ಡದಲ್ಲಿ ಈ ದೇವಾಲಯವನ್ನು ರಾಮಲಿಂಗೇಶ್ವರ ಮಠವೆಂದು ಕರೆಯುತ್ತಾರೆ. ಸ್ವಾಭಾವಿಕ ಗುಡ್ಡದ ಕಲ್ಲು ಗವಿಯ ಬಂಡೆಗಳ ನಡುವೆ ಗರ್ಭಗೃಹದಂತಹ ನೈಸರ್ಗಿಕ ರಚನೆ ಇದ್ದು ಅದರಲ್ಲಿ ಪ್ರಾಚೀನ ಕಾಲದ ಶಿವಲಿಂಗವಿದೆ. ಇದು

ಶೈಲಿಯ ದೃಷ್ಟಿಯಿಂದ ಗರ್ಭಗೃಹದಲ್ಲಿ ಕ್ರಿ.ಶ. ಸುಮಾರು. ೧೦ ನೇ ಶತಮಾನದ ಬೃಹತ್ತಾದ ಶಿವಲಿಂಗವಿದೆ. ಸೇರಬಹುದಾಗಿದೆ. ಗರ್ಭಗೃಹ ಭಾಗದ ಮುಂದೆ ತೆರೆದ ಅರ್ದ ಮಂಟಪ, ನವರಂಗ, ಹಾಗೂ ಅದರ ಮುಂದೆ ತೆರೆದ ಮಂಟಪವಿದೆ. ಈ ದೇವಾಲಯದಲ್ಲಿಯೇ ೧೧ ನೇ ಶತಮಾನದ ದ್ವಾರಪಾಲಕ ಮತ್ತು ಗಣಪತಿಯ ಶಿಲ್ಪಗಳಿವೆ. ರಾಮಲಿಂಗ ಮಠದ ಪಕ್ಕದಲ್ಲಿಯೇ ಕ್ರಿ.ಶ. ೧೭-೧೮ ನೇ ಶತಮಾನದಲ್ಲಿ ನಿರ್ಮಿಸಿರಬಹುದಾದ ಎರಡು ಗರ್ಭಗೃಹಗಳಿರುವ ಗುಡಿಗಳಿವೆ. ಒಂದು ಗರ್ಭಗೃಹದಲ್ಲಿ ಓರ್ವ ಸ್ವಾಮಿಗಳ ಮೂರ್ತಿಶಿಲ್ಪವಿದೆ. ಅದರ ಪಕ್ಕದ ಗರ್ಭಗೃಹ ಖಾಲಿಯಾಗಿದೆ, ಇದಕ್ಕೆ ಶಿಖರವಿಲ್ಲ. ಈ ಮಠದಲ್ಲಿ ವಿದ್ಯಾರ್ಥಿಗಳಿಗೆ ವಾಸಸ್ಥಾನವಿದೆ. ಮುಖ್ಯ ದೇವಾಲಯಕ್ಕೆ ಹೋಗುವ ಬಲಬದಿಯಲ್ಲಿ ರೇಣುಕ ಎಲ್ಲಮ್ಮನ ದೇವಾಲಯವಿದ್ದು ಇದರ ಹೊರಭಿತ್ತಿ ಮತ್ತು ಆವರಣದಲ್ಲಿ ಕೆಲವು ಉಬ್ಬು ಶಿಲ್ಪಗಳು ಮತ್ತು ಬಿಡಿ ಶಿಲ್ಪಗಳಿವೆ. ದೇವಾಲಯವನ್ನು ಸಾಕಷ್ಟು ನವೀಕರಿಸಿರುವುದರಿಂದ ಪ್ರಾಚೀನ ಕುರುಹುಗಳು ಕಂಡು ಬರುವುದಿಲ್ಲ. ಬೆಳ್ಳಟ್ಟಿಯಲ್ಲಿ ಹಲವಾರು ಶಾಸನಗಳಿರುವದಾಗಿ ವರದಿಯಾಗಿದೆ. ಆದರೆ ಇಂದು ಕೆಲವು ಮಾತ್ರ ಲಭ್ಯವಾಗಿವೆ. ಬೆಳ್ಳಟ್ಟಿ, ಬೆಳಗಟ್ಟಿ ಮತ್ತು ಕಪಲಟ್ಟಿ ಎಂಬ ಮೂರು ಗ್ರಾಮಗಳು ಸೇರಿ ಬೆಳ್ಳಟ್ಟಿ ಎಂಬುದಾಗಿದೆ. ಜೋಗಿ ಬಂಡೆಯ ಮೇಲಿನ ಕ್ರಿ.ಶ. ೯೯೦ ರ ಶಾಸನವು ಅತ್ಯಂತ ಪ್ರಾಚೀನವಾಗಿದ್ದು. ಆರು ಪರ್ಗಡೆ ಅಮ್ಮವರ್ಮನು ಬೆಳ್ಳಟ್ಟಿಗಣದ ಬಸದಿ ನಿರ್ಮಿಸಿದನೆಂದು ತಿಳಿಸುವುದು. ಕ್ರಿ.ಶ. ೧೨ ನೇ ಶತಮಾನದ ಯಲ್ಲಮ್ಮ ದೇವಾಲಯ ಗೋಡೆಯ ವೀರಗಲ್ಲು ಶಾಸನವು ತ್ರುಟಿತಗೊಂಡು ಅಸ್ಪಷ್ಟವಾಗಿದೆ. ಹೊಯ್ಸಳರ ಅರಸ ಇಮ್ಮಡಿ ನರಸಿಂಹನ ಕಾಲದ ಶಾಸನವು. ಮಾಧವ ದೇವರ ಪ್ರತಿಷ್ಠಾಪನೆಮಾಡಿ, ದಾನ ನೀಡಿದ ವಿಷಯವನ್ನು ದಾಖಲಿಸಿದೆ. ಕ್ರಿ.ಶ. ೧೫ ನೇ ಶತಮಾನದ ಶಾಸನವು ಮಲ್ಲಿಕಾರ್ಜುನ ದೇವಾಲಯದ ಭೂಮಿಯ ಸೀಮಾ ವಿವರಗಳನ್ನು ನೀಡುವದು. ಮತ್ತೊಂದು ಶಾಸನವು ಕ್ರಿ.ಶ. ಸುಮಾರು ೧೬ ನೇ ಶತಮಾನಕ್ಕೆ ಸೇರಿದ್ದು ಇದು ಬಂಡಿವಾಡೆಯ ನಾಯಕಾದಿಗಳು ಸವಣೂರು ಸೀಮೆಯಲ್ಲಿ ಭೂದಾನ ಬಿಟ್ಟ ವಿಷಯವನ್ನು ತಿಳಸುತ್ತದೆ. ಊರ ಗುಡ್ಡದ ಬಳಿ ಇರುವ ಬಸದಿಯು ಬೆಳ್ಳಟ್ಟಿ ಗಣದ ಬಸದಿಯಾಗಿದೆ. ಈ ಬಸದಿಯನ್ನು ಪೂರ್ಣವಾಗಿ ನವೀಕರಿಸಿರುವುದರಿಂದ ಪ್ರಾಚೀನ ಕುರುಹುಗಳು ಉಳಿದಿಲ್ಲ. ಇಲ್ಲಿ ತೀರ್ಥಂಕರರ ಕೆಲವು ಮೂರ್ತಿಶಿಲ್ಪಗಳಿವೆ. ಇವು ಅತಿ ತ್ರುಟಿತವಾಗಿರುವುದರಿಂದ ಯಾವ ತೀರ್ಥಂಕರರ ಶಿಲ್ಪಗಳು ಎಂಬುವುದು ಸ್ಪಷ್ಟವಿಲ್ಲ.

ಪ್ರಸ್ತುತ ಈ ಮಠದ ಪೀಠಾಧಿಪತಿಗಳು ಶ್ರೀ ಬಸವರಾಜ ಮಹಾಸ್ವಾಮಿಗಳು ಆಗಿದ್ದಾರೆ. ಇಲ್ಲಿ ಪ್ರತಿನಿತ್ಯ ಅನ್ನದಾಸೋಹಗಳು ಇರುವುದರಿಂದ ಇಲ್ಲಿ ವಸತಿ ಯೋಜನೆಗಳದ್ದು ವಿದ್ಯಾರ್ಥಿಗಳಿಗೆ ಇಲ್ಲಿ ವಿದ್ಯಾರ್ಥಿನಿಲಯಗಳು ಇರುತ್ತವೆ. ಅಡಿಗೆ ಕೋಣೆ, ಕಲ್ಯಾಣ ಮಂಟಪ ಇವೆ. ಮುಖ್ಯವಾಗಿ ಮೂಲ ಕತೃಗಳಾದ ಶ್ರೀ ಫಕೀರೇಶ್ವರರ ಗದ್ದುಗೆ ಇದೆ. ಹಾಗೂ ಶ್ರೀ ಫಕೀರೇಶ್ವರರೇ ನಿರ್ಮಾಣ ಮಾಡಿದ ಹೊಂಡವು ಸಹಿತ ಇದೆ. ಇಲ್ಲಿ ಈ ಮಠದ ಹಿಂದೆ ಸಿದ್ಧರ ಪಡಿ ಇದೆ. ಮುಂದೆ ಗಂಗಾಳಕಲ್ಲು ಇದೆ. ಇಂತಹ ಎಲ್ಲಾ ವೈಶಿಷ್ಟ್ಯಗಳನ್ನು ಈ ಮಠ ಹೊಂದಿದೆ.

ಹೊಳೆ ಇಟಗಿಯ ವಿರಕ್ತಮಠ :

ಮಡಿವಾಳ ಸ್ವಾಮಿಗಳು ಈ ಮಠಕ್ಕೆ ಪ್ರಸ್ತುತ ಪೀಠಾಧಿಪತಿಗಳು. ಮಠದಲ್ಲಿ ನಾಗಭೂಷಣಸ್ವಾಮಿಗಳ ಮೂಲ ಕರ್ತೃ ಗದ್ದುಗೆ ಇದೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನಗಳು, ಕಾರ್ತಿಕಮಾಸದಲ್ಲಿ ದೀಪೋತ್ಸವ, ಕಾರ್ಯಕ್ರಮಗಳು ಜರುಗುತ್ತವೆ. ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಊರಿನ ಜನರು ಭಾಗವಹಿಸುತ್ತಾರೆ. ಇಲ್ಲಿ ನಡೆಯುವ ಸಾಮೂಹಿಕ ಮದುವೆ ನಂತರ ಊಟದ ವ್ಯವಸ್ಥೆಕೂಡ ಕಲ್ಪಿಸಿರುತ್ತಾರೆ.

೫.೪ ಶಿಲ್ಪಗಳು

ಅರವತ್ನಾಲ್ಕು ಕಲೆಗಳಲ್ಲಿ ಶಿಲ್ಪಕಲೆಯೂ ಒಂದಾಗಿದೆ. ಶಿಲ್ಪಕಲೆ ಮತ್ತು ಮಾನವನ ಮಧ್ಯದಲ್ಲಿ ಅತೀ ನಿಕಟವಾದ ಸಂಬಂಧವಿದ್ದು, ಅದು ಪ್ರಾಚೀನ ಕಾಲದಿಂದ ಇಂದಿಗೂ ಮುಂದುವರೆದಿದೆ. ಸಮಕಾಲೀನ ಜನರ ಆಸೆ-ಆತಂಕಗಳು, ಧ್ಯೇಯ-ಸಾಧನೆಗಳು, ಜೀವನ ಮಾರ್ಗಗಳು ಮೊದಲಾದ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಇಂದು ಉಳಿದು ಬಂದಿರುವ ಶಿಲ್ಪಾವಶೇಷಗಳಿಂದ ಕಣ್ಣಿಗೆ ಗೋಚರಿಸುತ್ತವೆ. ಪ್ರಪಂಚದ ಪ್ರಧಾನ ಶಿಲ್ಪ ಮಾರ್ಗಗಳ ಬೆಳವಣಿಗೆಯನ್ನು ಐತಿಹಾಸಿಕ ದೃಷ್ಟಿಯಿಂದ ನೋಡುವದಾದರೆ ಒಂದೊಂದಕ್ಕೂ ಪ್ರತ್ಯೇಕವಾದ ಮೂಲತತ್ವ ಮತ್ತು ಗುರಿ ಇರುವಂತೆ ತೋರುತ್ತದೆ. ಭಾರತೀಯ ಶಿಲ್ಪದ ಪ್ರಧಾನತತ್ವವೆಂದರೆ ಅದು ಆಧ್ಯಾತ್ಮಿಕ ಸಾಧನೆ ಹೀಗಾಗಿ ಇಲ್ಲಿಯ ಎಲ್ಲ ಶಿಲ್ಪಗಳೂ ಸಮಕಾಲೀನ ಧಾರ್ಮಿಕ ಮನೋಭಾವನೆ ಯನ್ನು ಪ್ರತಿಬಿಂಬಿಸುತ್ತವೆ.[೭೬]

ಪ್ರಪಂಚದಲ್ಲಿ ಭಾರತೀಯ ಶಿಲ್ಪಕಲೆಯ ಪ್ರಾರಂಭವು ಪ್ರಾಚೀನತಮವೆಂದು ತೋರುತ್ತದೆ. ಶಿಲಾಯುಗದ ಮಾನವನು ಪ್ರಕೃತಿಯಲ್ಲಾಗುವ ಬದಲಾವಣೆಗಳ ಹಿಂದೆ ಯಾವುದೋ ಒಂದು ಅಗೋಚರವಾದ ಶಕ್ತಿಯಿದೆ ಎಂದು ನಂಬಿ, ಅವುಗಳಿಗೆ ಸಂಕೇತ ಮೂರ್ತಿ, ಮನುಷ್ಯಾ ಕಾರದ ರೂಪಗಳನ್ನು ಕೊಟ್ಟು ಪೂಜಿಸತೊಡಗಿದನು. ಸಿಂಧೂ ನಾಗರೀಕತೆಯ ನೆಲೆಗಳ ಉತ್ಖನನ ಗಳಲ್ಲಿ ದೊರೆತ ಕೆಲವು ಶಿಲ್ಪಾವಶೇಷಗಳು ಬಹು ಉನ್ನತಮಟ್ಟದ ಶಿಲ್ಪಜ್ಞಾನವನ್ನು ಪರಿಚಯಿಸಿವೆ. ಅಷ್ಟು ಉನ್ನತಮಟ್ಟಕ್ಕೇರಿದ ಆ ಶಿಲ್ಪಜ್ಞಾನದ ಆರಂಭ ಇನ್ನೂ ಸಹಸ್ರಾರು ವರ್ಷಗಳ ಪ್ರಾಚೀನವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ವೈದಿಕ ಸಂಸ್ಕೃತಿಯಲ್ಲಿ ಸಾರ್ವಜನಿಕವಾಗಿ ಶಿಲ್ಪಗಳ ಆರಾಧನೆ ಪ್ರಚಲಿತದಲ್ಲಿರಲಿಲ್ಲ. ಕಾಲಾಂತರದಲ್ಲಿ ಆರ್ಯರು ದ್ರಾವಿಡರ ದೈವಗಳನ್ನು ಪರಿಗ್ರಹಿಸಿ ಅವಕ್ಕೆಲ್ಲ ಒಂದೊಂದು ರೂಪವನ್ನು ವಹಿಸಿಕೊಟ್ಟರು.

ಭಾರತದ ಚಾರಿತ್ರಿಕ ಯುಗದಲ್ಲಿ ಪ್ರಪ್ರಥಮ ಶಿಲ್ಪವೆಂದರೆ ಅದು ಮೌರ್ಯರ ಕಾಲದ್ದಾಗಿದ್ದು. ಶುಂಗ ಮನೆತನದ ಕಾಲದಲ್ಲಿ ಶಿಲ್ಪ ರಚನೆಯು ಪ್ರಾಚೀನ ಶೈಲಿಯನ್ನು ಕಳೆದುಕೊಂಡು ಸಮರ್ಥ ರೂಪವನ್ನು ಪಡೆದುಕೊಂಡಿತು. ಕುಶಾನ ಮನೆತನದ ಆಶ್ರಯದಲ್ಲಿ ಗಾಂಧಾರ ಕಲೆಯು ಸಮ ಕಾಲೀನ ಗ್ರೀಕ್ ಮತ್ತು ಬೌದ್ಧ ಕಲೆಗಳ ಮಿಶ್ರಣವನ್ನು ಪಡೆಯಿತು. ಆ

ಕಾಲದ ಮಥುರಾದ ಶಿಲ್ಪಕಲೆಯು ಬಾರ್ಹುತ್ ಮತ್ತು ಸಾಂಚಿಯ ಶಿಲ್ಪಕಲಾ ಪರಂಪರೆಯನ್ನು ಮುಂದುವರೆಸಿತು. ಗುಪ್ತ ಮನೆತನದ ಕಾಲದಲ್ಲಿ ಹಲವು ಶಿಲ್ಪಶೈಲಿಗಳು ಸಂಗಮಿಸಿ ದೃಢವಾದ ಭಾರತೀಯ ಶಿಲ್ಪದ ಅಭಿವ್ಯಕ್ತಿಯು ಸಾದ್ಯವಾಯಿತು. ಈ ಕಾಲದ ಶಿಲ್ಪಗಳ ಅಂಗೋಪಾಂಗಳು ಪ್ರಾಮಾಣಗಳಲ್ಲಿ ಸಂತುಲನೆ, ದೇಹದಲ್ಲಿ ನಾವೀನ್ಯತೆ, ಗಾಂಭೀರ್ಯಭಾವ ನವರಸಗಳು ಮತ್ತು ಪ್ರಶಾಂತತೆ ಅಭಿವ್ಯಕ್ತಿ ವ್ಯಕ್ತವಾಯಿತು. ಹೀಗೆ ಭಾರತೀಯ ಶಿಲ್ಪಕಲೆಯು ವಿವಿಧ ಅರಸು ಮನೆತನಗಳ ಆಶ್ರಯದಲ್ಲಿ ಸಮಕಾಲೀನ ಆಚಾರ-ವಿಚಾರಗಳು, ನಂಬಿಕೆ-ಸಂಪ್ರದಾಯಗಳ ಪರಿಕಲ್ಪನೆಯಲ್ಲಿ ವಿಶಿಷ್ಟ ಲಕ್ಷಣ ಗಳೊಂದಿಗೆ ಬೆಳೆದು ಉನ್ನತ ಸ್ಥಾನವನ್ನೇ ಪಡೆಯುತ್ತ ಬಂದಿದೆ. ಈ ನಾಡಿನಲ್ಲಿ ಆಳ್ವಿಕೆ ಕೈಗೊಂಡಿದ್ದ ಪ್ರತಿಯೊಂದು ಅರಸು ಮನೆತನಗಳು ಸಮಕಾಲಿನ ವಿವಿಧ ಧರ್ಮಗಳಿಗೆ ಆಶ್ರಯ ನೀಡಿ ಆಯಾ ಧರ್ಮದ ಶಿಲ್ಪಗಳು ಬೆಳೆದು ಬರಲು ಕಾರಣವಾಗಿವೆ.

ಭಂಗಿ, ಮುದ್ರೆ, ಆಯುಧಗಳು ಇವು ಶಿಲ್ಪಗಳ ಮೂರು ಪ್ರಧಾನ ಲಕ್ಷಣಗಳಾಗಿವೆ. ಭಂಗಿ ಮತ್ತು ಆಯುಧಗಳನ್ನು ಮುದ್ರೆಗಳಲ್ಲಿಯೇ ನಿರ್ಧರಿಸುವುದರಿಂದ ಮುದ್ರೆಗಳು ಬಹು ಮುಖ್ಯ ವಾಗಿವೆ. ಗಾಂಧಾರ ಕಲೆಯ ಪ್ರಭಾವದಿಂದ ಕ್ರಿ.ಶ. ಸುಮಾರು ೨-೩ ನೇ ಶತಮಾನದಲ್ಲಿ ದಕ್ಷಿಣ ಭಾರತದ ಶಿಲ್ಪಗಳಲ್ಲಿ ಮುದ್ರೆಗಳ ಬಳಕೆ ವಿಶೇಷವಾಗಿ ಹರಡಿದಂತೆ ತೋರುವುದು. ಶಿಲ್ಪಗಳಲ್ಲಿ ಅಭಯ ಮುದ್ರೆ ವರದ ಮುದ್ರೆ, ಅಹೂಯವರಮುದ್ರೆ, ಸಿಂಹಕರಣ ಮುದ್ರೆ, ಕಟಕಮುದ್ರೆ, ಗಜಹಸ್ತ, ಡೋಲಕರಂ, ಡಮರುಗಹಸ್ತ, ಆಲಿಂಗನ ಹಸ್ತ, ಊರು ಹಸ್ತ, ಬೀಷ್ಮಯ ಮುದ್ರೆ, ಅರ್ಧಚಂದ್ರಮುದ್ರೆ, ಜ್ಞಾನ ಮುದ್ರೆ, ಭೂ ಸ್ಪರ್ಶ ಮುದ್ರೆ ಮತ್ತು ಆಜಾನಾಲಂಬಬಾಹು ಮುದ್ರೆಗಳನ್ನು ಗುರುತಿಸಬಹುದು. ದಾಕ್ಷಿಣಾತ್ಯ ಶಿಲ್ಪಶಾಸ್ತ್ರಗಳು ಶಿಲ್ಪಗಳಲ್ಲಿ ಸ್ತಾನಕ, ಆಸೀನ, ಮತ್ತು ಶಯನ ಎಂಬ ಮೂರು ಪ್ರಕಾರಗಳನ್ನು ಉಲ್ಲೇಖಿಸಿದೆ.ಅವುಗಳಲ್ಲಿ ಯಾನಕ ಎಂಬ ಮತ್ತೊಂದು ಪ್ರಭೇದವನ್ನು ಸೇರಿಸಬಹುದು. ಸ್ಥಾನಕ ಭಂಗಿಯಲ್ಲಿ ಸಮ ಭಂಗಿ, ದ್ವಿಭಂಗಿ, ತ್ರಿಭಂಗಿ, ಅತೀಭಂಗಿ ನೃತ್ಯ ಮೊದಲಾದ ಪ್ರಕಾರಗಳಿವೆ ಆಸೀನ ಭಂಗಿಯಲ್ಲಿ ಯೋಗಾಸನ, ಅನಂತಾಸನ, ಸಿಂಹಾಸನ, ಭದ್ರಾಸನ, ವಿಮಲಾಸನ, ಪದ್ಮಾಸನ, ಅಲಿಡಾಸನ, ವೀರಾಸನ, ಸುಖಾಸನ, ಸವ್ಯಲಲಿತಾಸನ, ವಾಮಲಲಿತಾಸನ, ಮೊದಲಾದ ಪ್ರಕಾರಗಳಿವೆ. ಜೈನ ಶಿಲ್ಪಗಳು ಸಾಮಾನ್ಯವಾಗಿ ಪರ್ಯಾಂಕಾಸನ, ಪದ್ಮಾಸನ, ಕಾಲೋತಸ್ಸರ್ಗ ಭಂಗಿಗಳಲ್ಲಿ ಕಂಡುಬರುತ್ತವೆ.

ಸ್ವಾತಿಕ, ವೀರ, ಶಾಂತ ಶಿಲ್ಪಗಳಲ್ಲಿ ಎರಡು ಇಲ್ಲವೇ ನಾಲ್ಕು ಕೈಗಳಿರುತ್ತವೆ. ಲಾಜಸ, ತಾಮಸ ಶಿಲ್ಪಗಳಲ್ಲಿ ಆರರಿಂದ ಎಂಟು ಕೈಗಳಿರುತ್ತವೆ. ಉಗ್ರ, ಸಂಹಾರ, ತಾಮಸ ಶಿಲ್ಪಗಳಲ್ಲಿ ೧೦,೧೨,೧೬,೧೦೦ ಕೈಗಳಿರುತ್ತವೆ. ಶಿಲ್ಪಗಳಲ್ಲಿ ಶಂಖ, ಚಕ್ರ, ಗದೆ, ತ್ರಿಶೂಲ, ಡಮರು, ಶೂಲ, ಟಂಕ, ಪಾಶ, ಖಡ್ಗ, ಧನಸ್ಸು, ಬಾಣ, ಅಂಕುಶ, ವಜ್ರ, ಶಕ್ತಿ, ಪರುಷ, ನೇಗಿಲು ಅಗ್ನಿ ಮೊದಲಾದ ಆಯುಧಗಳು ಪ್ರಮುಖವಾಗಿರುತ್ತವೆ. ಶಿಲ್ಪಗಳಲ್ಲಿ ಸಾಮಾನ್ಯವಾಗಿ ಕಿರೀಟಮುಕುಟ, ಜಟಮುಕುಟ,

ಜಟಾಬಂಧ, ಜಟಾಭಾರ, ಶಿಖಾಮಣಿ, ಉದರ ಬಂಧ, ಕಟೀ ಸೂತ್ರ, ಬಾಹು ಬಂಧ, ಕಂಕಣ, ಮಣಿಬಂಧ, ವೈಜಯಂತಿ, ಪ್ರಭಾಮಂಡಲ ರತ್ನ ಪಟ್ಟ ಕೊರಳ ಸರಗಳು, ಬೆರಳ ಉಂಗುರುಗಳು ಮೊದಲಾದ ಪ್ರಕಾರದ ವಸ್ತ್ರಾಭರಣಗಳಾಗಿರುತ್ತವೆ. ಆಯಾ ದೇವ ದೇವತೆಗಳಿಗೆ ವಾಹನಗಳನ್ನು ಕಲ್ಪಿಸುವುದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಶಿವನಿಗೆ ನಂದಿ, ಮೈಲಾರಲಿಂಗನಿಗೆ ಕುದುರೆ, ಬ್ರಹ್ಮನಿಗೆ ಹಂಸ, ವಿಷ್ಣುವಿಗೆ ಗರುಡ, ಗಣಪತಿಗೆ ಮೂಶಕ, ಕಾರ್ತಿಕೇಯನಿಗೆ ನವಿಲು, ದತ್ತಾತ್ರೇಯನಿಗೆ ನಾಯಿ, ಮಹಿಷಾಸುರ ಮರ್ಧಿನಿಗೆ ಸಿಂಹ, ಸರಸ್ವತಿಗೆ ನವಿಲು, ಲಕ್ಷ್ಮಿಗೆ ಪದ್ಮ, ಕೌಮಾರಿಗೆ ಮಯೂರ, ವೈಷ್ಣವಿಗೆ ಗರುಡ, ಇಂದ್ರಾಣಿಗೆ ಗಜ, ಮಹೇಶ್ವರಿಗೆ ನಂದಿ, ಚಾಮುಂಡಿಗೆ ನಂದಿ ಹೀಗೆ ಮೊದಲಾದ ವಾಹನಗಳಿರುತ್ತವೆ. ಶಿರಹಟ್ಟಿ ಪರಿಸರದಲ್ಲಿ ಶೈವ, ವೈಷ್ಣವ ಧರ್ಮಧ ಅನೇಕ ಶಿಲ್ಪಗಳು ಕಂಡುಬಂದಿವೆ. ಅವುಗಳ ಪ್ರತಿಮಾ ಲಕ್ಷಣಗಳು ಈ ಕೆಳಗಿನಂತಿವೆ. ಆದರೆ ಈ ಪರಿಸರದಲ್ಲಿ ಜೈನ ಶಿಲ್ಪಗಳು ಅಷ್ಟಾಗಿ ಕಂಡುಬರುವದಿಲ್ಲ.

೩.೭ ಶೈವ ಶಿಲ್ಪಗಳು

ಸಿಂಧೂ ನಾಗರೀಕತೆಯ ಹರಪ್ಪ, ಮಹೆಂಜೋದಾರ ಮತ್ತು ಕಾಲಿಬಂಗಾನ ನೆಲೆಗಳಲ್ಲಿ ದೊರೆತ ಹಲವು ಮುದ್ರೆಗಳ ಮೇಲಿರುವ ಪಶುಪತಿ ಶಿವನ ಚಿತ್ರಗಳು ಶೈವ ಪರಂಪರೆಯ ಶಿಲ್ಪಕಲೆಯ ಪ್ರಾಚೀನತೆ ದೃಷ್ಟಿಯಿಂದ ಮಹತ್ವದ್ದೆನಿಸುತ್ತವೆ. ಇದರಿಂದ ಆ ಸಂಸ್ಕೃತಿಯಲ್ಲಿ ಶಿವಾರಾಧನೆ ಪ್ರಚಲಿತದಲ್ಲಿತ್ತೆಂಬುದು ಸ್ಪಷ್ಟವಾಗುತ್ತದೆ. ವೈದ್ಯಕೀಯ ಸಂಸ್ಕೃತಿಯ ಸಾಹಿತ್ಯಗಳಲ್ಲಿಯೂ ಶಿವನ ಉಲ್ಲೇಖಗಳಿವೆ. ಕನ್ನಡ ನಾಡಿನಲ್ಲಿ ಬಾದಾಮಿ ಚಾಲುಕ್ಯ ಮನೆತನದ ಕಾಲದಿಂದೀಚೆಗೆ ಶೈವ ಧರ್ಮವು ಉಚ್ಛ್ರಾಯ ಸ್ಥಿತಿಯೆಡೆಗೆ ಮುನ್ನಡೆಯಿತು. ರಾಷ್ಟ್ರಕೂಟ ಕಲ್ಯಾಣದ ಚಾಲುಕ್ಯ, ಹೊಯ್ಸಳ ವಿಜಯನಗರ, ಮೊದಲಾದ ಮನೆತಗಳ ಆಶ್ರಯ, ಪ್ರೋತ್ಸಾಹದ ಅಡಿಯಲ್ಲಿ ಶೈವ ಶಿಲ್ಪ ಬೆಳವಣಿಗೆಯನ್ನು ಸಮಕಾಲೀನ ಶಿಲ್ಪಾ ಅವಶೇಷಗಳಿಂದ ಕಂಡುಕೊಳ್ಳಬಹುದು.[೧೪] ಶಿರಹಟ್ಟಿ ಪರಿಸರದ ವಿವಿಧ ಗ್ರಾಮಗಳಲ್ಲಿ ಕಂಡು ಬಂದಿರುವ ಕೆಲವು ಶೈವಧರ್ಮದ ಶಿಲ್ಪಗಳು ಕೆಳಗಿನಂತಿವೆ.

<u>ಶಿವಲಿಂಗಗಳು</u> : ಹೊಳೆಇಟಗಿಯ ಪಾಂಡುರಂಗ ದೇವಾಲಯದ ಆವರಣದಲ್ಲಿ ದೊರೆತ ಶಿವಲಿಂಗವು ೧೩ ನೇ ಶತಮಾನಕ್ಕೆ ಸಂಬಂಧಪಟ್ಟಿದ್ದು, ಇದನ್ನು ಕಪ್ಪು ಶಿಲೆಯಿಂದ ನಿರ್ಮಿಸಲಾಗಿದೆ. ಇದು ೬೦ ಸೆಂ ಮೀ ಎತ್ತರವಾಗಿದೆ. ಇದಕ್ಕೆ ಜಲಹರಿ ಮತ್ತು ಬ್ರಹ್ಮಸೂತ್ರವನ್ನು ಒಳಗೊಂಡಿದೆ. ಸಾಸರವಾಡದ ಪೂರ್ವದಿಕ್ಕಿನಲ್ಲಿ ಈಶ್ವರ ದೇವಾಲಯವಿದ್ದು ಇದರಲ್ಲಿ ಶಿವಲಿಂಗವನ್ನು ಇರಿಸಲಾಗಿದೆ. ಇದು ೧೪ ನೇ ಶತಮಾನಕ್ಕೆ ಸಂಬಂಧಪಟ್ಟಿದ್ದು. ಇದರ ಅಕ್ಕಪಕ್ಕದಲ್ಲಿ ಮುಳ್ಳಿನ ಗಿಡಗಂಟಿಗಳು ಬೆಳೆದಿರುತ್ತವೆ. ಶಿಲ್ಪಗಳು ಅನಾಥವಾಗಿ ಬಿದ್ದಿರುತ್ತವೆ. ಇದು ೩೭X೨೦ ಅಳತೆಯನ್ನು ಹೊಂದಿದ್ದು ನೋಡುವುದಕ್ಕೆ ಸುಂದರವಾದ ಶಿವಲಿಂಗವಿದು.

ಛಬ್ಬಿಯ ಪಶ್ಚಿಮ ದಿಕ್ಕಿನಲ್ಲಿ ಮೌನೇಶ್ವರ ದೇವಾಲಯವಿದೆ. ಇದರ ಗರ್ಭಗೃಹದಲ್ಲಿ ೨೫ ಸೆಂ.ಮೀ. ಎತ್ತರವಾದ ಶಿವಲಿಂಗವಿದೆ. ಇದಕ್ಕೆ ಬ್ರಹ್ಮಸೂತ್ರವನ್ನು ಸ್ಪಷ್ಟವಾಗಿ ರೇಖಿಸಿದ್ದು. ಇಲ್ಲಿ ಪಾಣಿವಾಟವು, ಜಲನಾಳವೂ ಸ್ಪಷ್ಟವಾಗಿವೆ. ಇದು ಕಪ್ಪು ಶಿಲೆಗಳಲ್ಲಿ ನಿರ್ಮಿತವಾಗಿದ್ದು ಇದು ೧೪ ನೇ ಶತಮಾನದ ಶಿವಲಿಂಗವಾಗಿದೆ. ಛಬ್ಬಿಯ ಭೋಗೇಶ್ವರ ದೇವಾಲಯದಲ್ಲಿ ಶಿವಲಿಂಗ ಮತ್ತು ನಂದಿ ಶಿಲ್ಪವಿದ್ದು ಇವು ಕಪ್ಪು ಶಿಲೆಗಳಿಂದ ನಿರ್ಮಿತವಾಗಿವೆ. ಇದಕ್ಕೆ ಬ್ರಹ್ಮಸೂತ್ರ, ಜಲನಾಳ, ಪಾಣಿವಟ್ಟವು ಸ್ಪಷ್ಟವಾಗಿವೆ. ಇದು ೧೩ ನೇ ಶತಮಾನಕ್ಕೆ ಸಂಬಂಧಿಸಿದುದು.

ವರವಿಯ ಪಶ್ಚಿಮಕ್ಕೆ ಅಂಬಲಿಹೊಂಡವಿದ್ದು. ಹೊಂಡದ ಕಟ್ಟೆಯ ಮೇಲೆ ३೦ ಸೆಂ.ಮೀ. ಎತ್ತರವಾದ ಶಿವಲಿಂಗವಿದ್ದು ಇದು ಕಪ್ಪು ಶಿಲೆಯಿಂದ ನಿರ್ಮಿತವಾಗಿದೆ. ಇದರ ಜಲನಾಳ, ಪಾಣಿವಟ್ಟವು ಮತ್ತು ಬ್ರಹ್ಮಸೂತ್ರವು ಸ್ಪಷ್ಟವಾಗಿಲ್ಲ (ಭಗ್ನವಾಗಿದೆ) ಇದು ೧೩ನೇ ಶತಮಾನದ ಕಾಲಕ್ಕೆ ಸಂಭಂದಪಟ್ಟಿದ್ದಾಗಿದೆ. ವರವಿ ಮೌನೇಶ್ವರ ಮಠದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ಇದಕ್ಕೆ ಮೌನೇಶ್ವರ ಎಂದು ಕರೆಯುತ್ತಾರೆ. ಶಿವಲಿಂಗದಮೇಲೆ ಮೌನೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇದು ಕೊಡಲಿ, ಶಂಖುಗಳನ್ನು ಹೊಂದಿದ್ದು. ಜಲನಾಳ ಪಾನಬಟ್ಟಲುಗಳನ್ನು ಹೊಂದಿರುತ್ತವೆ. ಇದೇ ಗುಡಿಯಮುಂದೆ ಇದರ ಅಭಿಮುಖವಾಗಿ ನಂದಿಯ ಶಿಲ್ಪವಿದೆ.

ಇದೇ ಗ್ರಾಮದ ಮೌನೇಶ್ವರ ಮಠದ ಮುಂದಿನ ಹಳ್ಳದ ಪಕ್ಕದ ಗುಡ್ಡದ ಮೇಲೆ ಕಾಳಿಕಾದೇವಾಲಯವಿದ್ದು ಇದರ ಗರ್ಭಗುಡಿಯಲ್ಲಿ ಕಾಳಿಯ ಶಿಲ್ಪವಿದೆ. ಇದು ೧೨೦X೪೦ ಸೆಂಮೀ. ಪ್ರಮಾಣಹೊಂದಿದ್ದು, ನಾಲ್ಕು ಕೈಗಳಿದ್ದು ಆಯುಧಗಳು ಅಸ್ಪಷ್ಟವಾಗಿವೆ. ಜಟಾಮುಕುಟ ಕರ್ಣಕುಂಡಲ ಕಂಠಹಾರ, ಮಣಿಸರ, ಯಜ್ಞೋಪವೀತ ಮುಂತಾದ ಆಭರಣಗಳಿಂದ ಹಾಗೂ ಶಿರದ ಸುತ್ತಲೂ ಪ್ರಭಾಮಂಡಲವಿದ್ದು. ಮೇಲ್ಭಾದಲ್ಲಿ ಕೀರ್ತಿಮುಖದ ಅಲಂಕಾರವಿದೆ. ಗರ್ಭ ಗುಡಿಯನ್ನು ಹೊಳಪುಶಿಲೆಗಳಿಂದ ಆಧುನಿಕರಿಸಲಾಗಿದೆ.

ಸಾಸರವಾಡದ ಈಶ್ವರ ದೇವಾಲಯದಲ್ಲಿ ಸುಂದರವಾದ ಕಲಾಕೃತಿಯನ್ನು ಹೊಂದಿದ ನಂದಿ ಶಿಲ್ಪವಿದೆ. ಇದರ ಎದುರಿಗೆ ಶಿವಲಿಂಗವಿದ್ದು, ಇದು ಕಪ್ಪು ಶಿಲೆಗಳಿಂದ ಸುಂದರವಾದ ಜಲನಾಳ, ಪಾಣಿವಟ್ಟವು ಸ್ಪಷ್ಟವಾಗಿ ರಚಿಸಲ್ಪಟ್ಟಿವೆ. ಇದರ ಕಾಲಮಾನ ೧೪ ನೇ ಶತಮಾನಕ್ಕೆ ಸಂಬಂಧಿಸಿದುದು.

ಹೆಬ್ಬಾಳ ಗ್ರಾಮದ ಸೋಮಲಿಂಗ ಮತ್ತು ರಾಮಲಿಂಗ ದೇವಸ್ಥಾನದ ಗರ್ಭಗುಡಿಯಲ್ಲಿ ಚಾಲುಕ್ಯ ಶೈಲಿಯ ಎರಡು ಶಿವಲಿಂಗಗಳಿದ್ದು ಇವು ಕಪ್ಪು ಶಿಲೆಗಳಿಂದ ನಿರ್ಮಿಸಿದೆ. ಇವುಗಳನ್ನು ಸ್ಪಷ್ಟವಾಗಿ ಜಲನಾಳ ಪಾಣಿವಟ್ಟವನ್ನು ಹೊಂದಿದೆ. ಮಾರುತಿ, ರಾಮಲಿಂಗ, ಸೋಮನಾಥ, ದ್ಯಾಮವ್ವ, ಮುಕ್ತೇಶ್ವರ, ಮೌನೇಶ್ವರ, ಬನಶಂಕರಿ ಮುಂತಾದ ದೇವಾಲಯಗಳಿವೆ. ಹೆಬ್ಬಾಳದ ಊರ ಹೊರಗೆ ಬನಶಂಕರಿ ದೇವಾಲಯವಿದ್ದು ಇದು ಸುಮಾರು ४ ಅಡಿ ಎತ್ತರವಿರುವ

ಸ್ಥಾನಿಕ ವಿಗ್ರಹವಾಗಿದ್ದು ಶೂಲ, ಖಡ್ಗ, ಡಮರು ಮತ್ತು ಕಪಾಲಗಳನ್ನು ನಾಲ್ಕು ಹಸ್ತಗಳಲ್ಲಿ ಹೊಂದಿದೆ. ಇದರ ಪೀಠದಲ್ಲಿ ವರಾಹ, ಶಿವ, ಚೇಳುಗಳನ್ನು ಬಿಡಿಸಲಾಗಿದೆ.

ಕಪಲಟ್ಟಿ ಗ್ರಾಮದ ಹನುಮಾನ ದೇವಾಲಯಲ್ಲಿ ಎಡಗಡೆಗೆ ಸಪ್ತಮಾತ್ರಿಕೆ ಶಿಲ್ಪವಿದ್ದು ಇದು ಸುಮಾರು ೪೮X೨೫ ಸೆಂ.ಮೀ.ಪ್ರಮಾಣ ಹೊಂದಿದ್ದು, ಇದು ಸವ್ಯಲಲಿತಾಸನದಲ್ಲಿ ಆಸೀನರಾಗಿದ್ದು ಜಟಾಮುಕುಟ, ಕರ್ಣಕುಂಡಲ, ಕಂಠಹಾರ, ಮಣಿಸರ, ಯಜ್ಞೋಪವೀತ, ತೋಳುಬಂದಿ, ಕೈಕಡಕ, ಕಾಲ್ಗಡಗ, ಇತ್ಯಾದಿ ಆಭರಣಗಳನ್ನು ಹೊಂದಿದ್ದು ಇದು ಕಪ್ಪು ಶಿಲೆಗಳಿಂದ ನಿರ್ಮಿತವಾಗಿವೆ. ಇದು ೧೨ ನೇ ಶತಮಾನಕ್ಕೆ ಸಂಬಂದಿಸಿದ್ದಾಗಿದೆ. ಇವುಗಳ ಸ್ಥತಿ ಕನಿಷ್ಟವಾಗಿದೆ. ಭಗ್ನಗೊಂಡ ಮಾತೃಕೆಯಲ್ಲಿ ವರಾಹಿ, ಇಂದ್ರಾಣಿ, ಚಾಮುಂಡಿ ಶಿಲ್ಪಗಳು ಮಾತ್ರ ಕಂಡು ಬರುತ್ತಿದ್ದು ಉಳಿದವುಗಳು ಸ್ಪಷ್ಟವಾಗಿ ಕಂಡು ಬರುತ್ತಿಲ್ಲ.

ಬೆಳ್ಳಟ್ಟಿ ಗ್ರಾಮದ ರೇಣುಕಾದೇವಿಯ ದೇವಾಲಯದ ಎಡಭಾಗದ ಗೊಡೆಯಲ್ಲಿ ಮಹಿಷಮರ್ಧಿನಿ ಶಿಲ್ಪವಿದೆ. ಇದು ೧೨ ನೇ ಶತಮಾನಕ್ಕೆ ಸಂಭಂದಿಸಿದ್ದಾಗಿದೆ. ೧೬೦X೬೫ ಸೆಂ.ಮೀ.ಪ್ರಮಾಣವಾಗಿರುವ ಇದು ೮ ಕೈಗಳನ್ನು ಹೊಂದಿದೆ. ಹಿಂದಿನಿಂದ ಕ್ರಮವಾಗಿ ಬಲ ಮತ್ತು ಎಡಕೈಗಳಲ್ಲಿ ಚಕ್ರ, ಶಂಕ, ಬಾಣ, ಬಿಲ್ಲು, ಖಡ್ಗ, ಡಮರುಗಳನ್ನು ಮುಂದಿನ ಬಲಗೈಯಲ್ಲಿ ತ್ರಿಶೂಲ ಹಿಡಿದು ಎಡಗೈಯಿಂದ ಕೋಣನ ಶಿರಹಿಡಿದು ಇರಿಯುತ್ತಿದ್ದಾಳೆ ಎಡ ಕಾಲಿನಿಂದ ಮಹಿಷಿಯನ್ನು ಮೆಟ್ಟಿನಿಂತಿದ್ದು ಅವಳ ವಾಹನವು ಸಿಂಹವು ಮಹಿಷನ ಮೇಲೆ ಎರಗಿದಂತೆ ಕೆತ್ತಲಾಗಿದೆ. ಶಿಲ್ಪವು ಕಿರೀಟ, ಮುಕುಟ, ಕರ್ಣಾಭರಣ, ಕಂಠಾಭರಣ, ರತ್ನಾಪಟ್ಟಿಕೆ ಬಳೆಗಳನ್ನು ಧರಿಸಿದ್ದು ಭಯಂಕರ ರೂಪದಲ್ಲಿದೆ. ಇದೇ ಭಾಗದ ರೇಣುಕಾದೇವಿ ದೇವಾಲಯದ ಬಲಭಾಗದ ಗೋಡೆಯ ಮೇಲೆ ಸಪ್ತಮಾತೃಕೆ ಶಿಲ್ಪಪಟ್ಟಿಕೆ ಇದ್ದು. ಇದರ ಕಾಲಮಾನ ೧೩ ನೇ ಶತಮಾನವಾಗಿದ್ದು. ಇವರು ಸವ್ಯಲಿತಾಸನದಲ್ಲಿ ಆಸೀನರಾಗಿದ್ದು ಎರಡು ಕೈಗಳನ್ನು ಹೊಂದಿದ್ದು ಆದರೆ ಇದು ಕನಿಷ್ಠ ಸ್ಥಿತಿಯಲ್ಲಿದೆ.

ರಣತೂರು ಗ್ರಾಮದ ಈಶ್ವರ ದೇವಸ್ಥಾನದಲ್ಲಿ ನಂದಿ ಮತ್ತು ಶಿವಲಿಂಗ ಶಿಲ್ಪವಿದ್ದು ಇವು ೧೩ ನೇ ಶತಮಾನಕ್ಕೆ ಸಂಬಂಧಿಸಿವೆ. ಶಿವಲಿಂಗವು ಜಲನಾಳ ಮತ್ತು ಪಾಣಿವಟ್ಟಗಳನ್ನು ಕಪ್ಪು ಶಿಲೆಯಿಂದ ಕಡೆದಿರುವರು. ಹಾಗೂ ನಂದಿಯ ಕೊರಳಲ್ಲಿ ಘಂಟೆಯ ಸರ ಗಗ್ಗರ, ಹಣಿಪಟ್ಟಿ, ಮುಂತಾದ ಆಭರಣಗಳನ್ನು ಹೊಂದಿದ್ದು ನಂದಿಯು ತನ್ನ ಮುಂದಿನ ಎರಡು ಕಾಲುಗಳನ್ನು ಮಡಿಚಿಕೊಂಡಿದ್ದು, ಹಿಂದಿನ ಕಾಲುಗಳನ್ನು ಹೊಟ್ಟೆಯ ಕೆಳಗೆ ಎಳೆದುಕೊಂಡು ಕೂತಿದೆ.

ಹೊಳೆಇಟಗಿ ಗ್ರಾಮದಲ್ಲಿ ಪೂರ್ವ ದಿಕ್ಕಿಗೆ ಇರುವ ತುಂಗಾನದಿಯ ದಂಡೆಯ ಮೇಲೆ ಬಯಲಿನಲ್ಲಿ ಶಿಬಾರ ಕಟ್ಟೆಯ ಪಕ್ಕದಲ್ಲಿ ಪಾರ್ವತಿ ಶಿಲ್ಪವಿದೆ ಪಾರ್ವತಿಗೆ ನಾಲ್ಕು ಕೈಗಳಿದ್ದು ಕೈಗಳಲ್ಲಿ ಡಮರು, ತ್ರಿಶೂಲ, ಖಡ್ಗ, ಪಾನಪಾತ್ರೆಗಳನ್ನು ಹಿಡಿದಿರುವ ಪದ್ಮಾಸನದಲ್ಲಿ ಆಸೀನಳಾಗಿದ್ದಾಳೆ.

ಛಬ್ಬಿ ಗ್ರಾಮದಲ್ಲಿ ಮತ್ತು ರಣತೂರ ಗ್ರಾಮದಲ್ಲಿಯೂ ಸಹಿತ ಪಾರ್ವತಿ ಶಿಲ್ಪವಿದ್ದು ನಾಲ್ಕು ಕೈಗಳನ್ನು ಹೊಂದಿ ಕೈಗಳಲ್ಲಿ ಡಮರು, ತ್ರಿಶೂಲ, ಖಡ್ಗ ಮತ್ತು ಪಾಣಪಾತ್ರೆಗಳನ್ನು ಹಿಡಿದಿರುವಳು. ಇದೆ ಗ್ರಾಮದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು, ಇದರ ಕಾಲಮಾನ ೧೦ ನೇ ಶತಮಾನ ೧೬೫X೭೨ ಸೆಂ.ಮೀ. ವಿಸ್ತಾರವನ್ನು ಹೊಂದಿದ್ದು ಎರಡು ಕೈಗಳನ್ನು ಹೊಂದಿದ್ದು, ಪದ್ಮಾಸನದಲ್ಲಿ ಆಸೀನಳಾಗಿದ್ದು, ಇಕ್ಕೆಲಗಳಲ್ಲಿ ನಿಂತಿರುವ ಆನೆಗಳು ಸೊಂಡಿಲಿನಿಂದ ಅಬಿಷೇಕ ಮಾಡುವ ಪ್ರಭಾವಳಿಯಲ್ಲಿ ನವಗ್ರಹ ಶಿಲ್ಪಗಳಿವೆ.

ದೇವಿಹಾಳ ಗ್ರಾಮದ ಬಳಿಯ ಗುಡ್ಡದಮೇಲಿನ ಕೋಟೆಯೇ ಶ್ರೀಮಂತಗಡ ಈ ಕೋಟೆಯ ಆರಾಧ್ಯ ದೇವತೆ ಶ್ರೀ ಹೊಳಲಮ್ಮದೇವಿ, ಈ ವಿಗ್ರಹವು ಆರು ಅಡಿ ಎತ್ತರವಿದ್ದು ಕಲಾತ್ಮಕವಾಗಿದೆ. ಶಂಖ, ಪದ್ಮ, ಹಿಡಿದಿದ್ದಾಳೆ. ದೇವಿಗೆ ಎಂಟು ಕೈಗಳಿವೆ ದೇವಿಯನ್ನು ವಸ್ತ್ರ, ಹೂವುಗಳಿಂದ ಅಲಂಕರಿಸಿರುವುದರಿಂದ ಮೂಲ ಸ್ವರೂಪ ಗೋಚರಿಸುವುದಿಲ್ಲ. ಇದರ ಕಾಲಮಾನ ೧೭-೧೮ ನೇ ಶತಮಾನ, ವಿಜಯನಗರೋತ್ತರ ಶೈಲಿಯಲ್ಲಿದೆ. ಪ್ರವೇಶ ದ್ವಾರದ ಮೇಲೆ ಚಾಮುಂಡಿ ಮತ್ತು ಇತರೆ ಪರಿವಾರ ದೇವತೆಗಳ ಗಾರೆಯ ವರ್ಣಲೇಪಿತ ಶಿಲ್ಪಗಳನ್ನು ಇರಿಸಲಾಗಿದೆ. ಮುಖ್ಯ ದೇವಾಲಯದ ಪಕ್ಕದಲ್ಲಿಯೇ ಈಶ್ವರ ಗುಡಿ ಇದ್ದು ಇಲ್ಲಿ ಶಿವಲಿಂಗ ಮತ್ತು ನಂದಿಯ ವಿಗ್ರಹಗಳು ಕಲಾತ್ಮಕವಾಗಿವೆ. ಜಲನಾಳ ಮತ್ತು ಪಾಣಿಬಟ್ಟಲುಗಳಿದ್ದು ಕಪ್ಪು ಶಿಲೆಯಲ್ಲಿವೆ.

ನಾಗ ಶಿಲ್ಪಗಳು

ವರವಿ ದೇವಸ್ಥಾನದ ಮುಂದೆ ಆಲದ ಮರದ ಕೆಳಗೆ ಪಶ್ಚಿಮಾಬಿಮುಖವಾಗಿ ೬೦ ಸೆಂ.ಮೀ. ಎತ್ತರದ ಸುಂದರವಾದ ಐದು ಹೆಡೆಯ ನಾಗದೇವನ ಶಿಲ್ಪಗಳು ಇವೆ. ಛಬ್ಬಿ ಗ್ರಾಮದ ಹುನುಮಾನದೇವಾಲಯ ಎದುರಿಗೆ ಈ ನಾಗಶಿಲ್ಪಗಳನ್ನು ಪ್ರತಿಷ್ಠಾಪಸಿಲಾಗಿದೆ. ಇದೇ ರೀತಿ ಹೊಳೆಇಟಗಿ ಗ್ರಾಮದಲ್ಲಯೂ ಸಹಿತ ಈ ನಾಗರಶಿಲ್ಪಗಳನ್ನು ಸ್ಥಾಪಿಸಲಾಗಿದೆ. ಇವೆಲ್ಲವುಗಳನ್ನು ಐದು ಹೆಡೆಯ ನಾಗದೇವ ಶಿಲ್ಪಗಳು ಇವೆ. ದೇಹಭಾಗ ಮಾನವ ಆಕಾದಲ್ಲಿದ್ದು ಕೆಳಭಾಗ ನಾಗಬಾಲ ಆಕಾರದಲ್ಲಿದೆ. ಕೀರ್ತಿಮುಕುಟ, ಕರ್ಣಕುಂಡಲ, ಯಜ್ಞೋಪವೀತ, ಮುಂತಾದ ಆಭರಣ ಧರಿಸಿದ್ದು ಬಲ ಮತ್ತು ಎಡಕೈಗಳಲ್ಲಿ ಖಡ್ಗ, ಡಾಲುಗಳಿವೆ.

೫.೮ ವೈಷ್ಣವ ಶಿಲ್ಪಗಳು

ವೈಷ್ಣವ ಧರ್ಮದ ಭಾಗವತ ಪಂಥದ ಅನುಯಾಯಿಗಳು ಕ್ರಿಸ್ತ ಪೂರ್ವಯುಗದ ಕೊನೆಯ ಮತ್ತು ಕ್ರಿಸ್ತಾನಂತರದ ಮೊದಲು ಕೆಲವು ಶತಮಾನಗಳಲ್ಲಿ ವೃಷ್ಣಿಕುಲದ ಪಂಚವೀರರನ್ನು ಮೂರ್ತಿರೂಪದಿಂದ ಆರಾಧಿಸುತ್ತಿದ್ದರೆಂಬ ವಿಚಾರ ಸಮಕಾಲೀನ ಶಾಸನಾದಿ ಪುರಾತತ್ವ ಕುರುಹುಗಳಿಂದ ಸ್ಪಷ್ಟವಾಗುತ್ತದೆ.[೫] ಋಗ್ವೇದದ ವಿಷ್ಣುವು ಶತಪಥ ಬ್ರಾಹ್ಮಣರ ನಾರಾಯಣನು ಕ್ರಿ. ಪೂ. ಸುಮಾರು ೭ನೇ ಶತಮಾದಲ್ಲಾಗಲಿ ಭಾಗವತ ಪಂಥದ ವಾಸುದೇವನೊಂದಿಗೆ

ಸಮೀಕರಿಸಲ್ಪಟ್ಟಿದ್ದರು. ದಕ್ಷಿಣ ಭಾರತದಲ್ಲಿ ಕ್ರಿ. ಪೂ ಸುಮಾರು ೨ ನೇ ಶತಮಾನದಿಂದ ಕ್ರಿಸ್ತ ಶಕ ಸುಮಾರು ೫ ನೇ ಶತಮಾನದ ವರೆಗೆ ಪಂಚವೀರರ ಆರಾಧನೆ ಪ್ರಚಲಿತದಲ್ಲಿತ್ತು. ಬನವಾಸಿ ಕದಂಬ, ತಲಕಾಡಿನ ಗಂಗರ ಕಾಲಕ್ಕಾಗಲೇ ಕನ್ನಡನಾಡಿನಲ್ಲಿ ವೈಷ್ಣವ ಧರ್ಮವು ವ್ಯಾಪಕವಾಗಿ ಪ್ರಚಾರದಲ್ಲಿತ್ತು. ಮುಂದೆ ಬಂದ ಅರಸ ಮನೆತನಗಳು ಈ ಧರ್ಮ ಮತ್ತು ವಿಷ್ಣುವಿನ ಪೂಜೆಯನ್ನು ಪೋಷಿಸಿರುವದು ಸಮಕಾಲಿನ ಸಾಹಿತ್ತಿಕ ಮತ್ತು ಶಾಸನಾದಿ ಪುರಾತತ್ವ ಕುರುಹುಗಳಿಂದ ಸ್ಪಷ್ಟವಾಗುತ್ತದೆ. ಶಿರಹಟ್ಟಿ ಪರಿಸರದ ವಿವಿಧ ಗ್ರಾಮಗಳಲ್ಲಿ ಕಂಡು ಬಂದಿರುವ ವೈಷ್ಣವ ಧರ್ಮದ ಶಿಲ್ಪಗಳು ಈ ಕೆಳಗಿನಂತಿವೆ.

ಹನುಮಾನ ಶಿಲ್ಪಗಳು

ಇದು ಛಬ್ಬಿ ಹನುಂತನ ದೇವಾಲಯದ ಎದುರಿಗೆ ಈ ಶಿಲ್ಪವನ್ನು ಇಟ್ಟಿದ್ದಾರೆ. ಇದು ಭಗ್ನಗೊಂಡಿದ್ದರಿಂದ ಇದು ಪೂಜೆಗೆ ಒಳಪಡುವದಿಲ್ಲ. ಇದು ೧೫ ನೇ ಶತಮಾನಕ್ಕೆ ಸಂಬಂಧಿಸಿರಬಹುದು ಇದು ೧೨೦X೬೦ ಸೆಂ.ಮೀ. ಅಳತೆಯನ್ನು ಹೊಂದಿದೆ. ಇದಕ್ಕೆ ೨ ಕೈಗಳಿವೆ. ಕರ್ಣಕುಂಡಲ, ಕಂಟಿಹಾರ, ಮಣಿಸರ, ಕೈಗಡಗ, ಕಾಲ್ಗಡಗ, ಆಭರಣಗಳನ್ನು ಹೊಂದಿದೆ. ಇದು ಕಪ್ಪು ಶಿಲೆ ಮಾದ್ಯಮದಿಂದ ನಿರ್ಮಿತವಾಗಿದೆ. ಹನುಮಾನ ಬಲಗೈ ಆಭಯಮುದ್ರೆಯಲ್ಲಿದೆ. ಎಡಗೈ ಸೊಂಟದ ಮೇಲೆ ಇಟ್ಟಿದ್ದಾನೆ. ತಲೆಯಲ್ಲಿ ಬಟ್ಟು ಇದೆ. ಇದು ಹೊಳೆ ಇಟಗಿ ಊರಿನ ಮದ್ಯದಲ್ಲಿ ಇದೆ. ಇದು ಕಾಲಮಾನ. ೧೬ ನೇ ಶತಮಾನ ಇದು ವೀರಸಾನ ಭಂಗಿಯ ಇದೆ. ಇದರ ಪ್ರಮಾಣ ೧೬೫X೮೫ ಸೆಂ.ಮೀ. ಅಳತೆಯನ್ನು ಹೊಂದಿದೆ ಆಭರಣಗಳೆಂದರೆ ಕರ್ಣಕುಂಡಲ, ಕಂಠಹಾರ, ಮಣಿಸರ, ಕೈಗಡಗ, ಕಾಲ್ಗಡಗ, ಇತ್ಯಾದಿ ಇದು ಕಪ್ಪು ಶಿಲೆಯಿಂದ ನಿರ್ಮಾಣವಾಗಿದೆ. ದ್ವಿಭುಜನಾಗಿರುವ ಹನುಮಾನ ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈ ಸೊಂಟದ ಮೇಲೆ ಇಟ್ಟಿದ್ದಾನೆ. ತಲೆಯಲ್ಲಿ ಬಟ್ಟು ಇದೆ.

ಸೂರ್ಯನಾರಾಯಣ ಶಿಲ್ಪದ ಪೀಠ

ಇದು ಭೋಗೇಶ್ವರ ದೇವಾಲಯದ ಎಡಭಾಗಕ್ಕೆ ಅಂಟಿಕೊಂಡಂತೆ ಸ್ಥಾಪಿಸಲಾಗಿದೆ. ಇದು ೧೨ ನೇ ಶತಮಾನಕ್ಕೆ ಸಂಬಂಧಿಸಿದೆ. ಇದರಲ್ಲಿ ೭ ಕುದುರೆಗಳು ದೇವರ ಮುಂಭಾಗದಲ್ಲಿರುತ್ತವೆ. ಪೀಠದ ಶಿಲ್ಪ ನಾಶವಾಗಿದೆ.

ಟಿಪ್ಪಣಿ

೧) "ಶಿಗ್ಗಾಂವ ಪ್ರದೇಶದ ಪುರಾತತ್ತ್ವ", ಪು. ೭೬-೮೪

೨) ಅದೇ. ಪು. ೭೮-೭೯

೩) ದಾ.ಜಿ.ಶಾ.ಸೂ.ಸಂ.ಸಿ. ೯೧ ಪು. ೩೯ : EI,IV,PP. ೩೫೦-೫೬

೪) ದಾ.ಜಿ.ಶಾ.ಸೂ.ಸಂ.ಸಿ. ೯೨ ಪು.ಸ. ೯೨

೫) ಕಪೋತಗಿರಿ ಪು. ೯೦-೯೩

೬) ಶ್ರೀ ಮೌನೇಶ್ವರ ವಚನಸುದೆ ಪು. ೨

೭) ಧಾ.ಜಿ.ಶಾ.ಸೂಚಿಯಲ್ಲಿ ಸಂಖ್ಯೆ-೪ ಪು.೩೬

೮) ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ ಪು. [illegible]

೯) ಧಾ.ಜಿ.ಶಾ.ಸೂ.ಸಂ.ಸಿ. ೫, ಪು.೩೬

೧೦) ಧಾ.ಜಿ.ಶಾ.ಸೂ.ಸಂ.ಸಿ. ೭, ಪು.೩೬-೩೯

೧೧) ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ, ಪು. [illegible]

೧೨) "ಧಾರವಾಡ ಜಿಲ್ಲೆ ಗ್ಯಾಜಿಟಿಯರ್" ಪು.೨೧೦

೧೩) ಶಿಗ್ಗಾಂವ ಪ್ರದೇಶದ ಪುರಾತತ್ತ್ವ, ಪು. ೭೬-೮೪

೧೪) ಅದೇ, ಪು. ೧೫೮-೧೫೯

೧೫) "ಬಾದಾಮಿ ಮತ್ತು ವೈಷ್ಣವ ಧರ್ಮ", ಕರ್ನಾಟಕ ಭಾರತಿ ಸಂ. ೨೧/೩-೪ ಪು-೧೦೭.

ಅಧ್ಯಾಯ : ೩

ಶಾಸನಗಳು

ಅಧ್ಯಾಯ – ೩

ಶಾಸನಗಳು

೩.೧ ಪೀಠಿಕೆ

ಶಾಸನ ಎಂಬ ಪದಕ್ಕೆ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು, ಎಂಬರ್ಥಗಳಿವೆ.[೧] ಕಾಲಾಂತರದಲ್ಲಿ ಅದರ ವ್ಯಾಪ್ತಿಯೊಳಗೆ ವಿವಿಧ ಸಂಕೀರ್ಣ ವಿಷಯಗಳು ಸಂಸರ್ಗವಾಗಿ ವಿಶಾಲಾರ್ಥವನ್ನು ಪಡೆಯಿತು. ಡಿ.ಸಿ. ಸರ್ಕಾರ್ ಅವರು "ಯಾವುದಾದರೊಂದು ಪದಾರ್ಥದ ಮೇಲೆ ಕೊರೆದ ಯಾವುದೇ ಬರಹವು ಶಾಸನ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಜೆ. ಎಫ್. ಫ್ಲೀಟ್ ಅವರು "ಶಾಸನಗಳು" ಬಹು ಸಂದರ್ಭಗಳಲ್ಲಿ, ಅಧಿಕೃತ ಲಕ್ಷಣವುಳ್ಳ ಸಾರ್ವಜನಿಕ ಸ್ವರೂಪವುಳ್ಳ ಸರಳವಾದ ಅಥವಾ ಸಂಕೀರ್ಣವಾದ ಸಂಗತಿಗಳನ್ನು ನಿರೂಪಿಸುವ, ದಿನಾಂಕವಿರುವ ಅಥವಾ ಇಲ್ಲದಿರುವ ಮತ್ತು ತಾವು ಪ್ರಸ್ತಾಪಿಸುವ ವಿಷಯಗಳ ಕುರಿತು ಶಾಶ್ವತವಾದ ದಾಖಲೆಗಳಾಗಬೇಕೆಂದು ಉದ್ದಿಷ್ಟವಾದ ಪ್ರಕಟನೆಗಳು" ಎಂದು ಶಾಸನಗಳು ಲಕ್ಷಣಗಳನ್ನು ಸಮರ್ಪಕವಾಗಿ ನಿರೂಪಿಸಿದ್ದಾರೆ. ಈ ಅಭಿಪ್ರಾಯಗಳ ಹಿನ್ನಲೆಯಲ್ಲಿ ಶಾಸನಗಳು ಗಟ್ಟಿಯಾದ ವಸ್ತುಗಳ ಮೇಲೆ ಕೊರೆದ, ವಿಶೇಷತಃ ಸಾರ್ವಜನಿಕ ಸ್ವರೂಪವನ್ನೊಳಗೊಂಡ ಸಾರ್ವತ್ರಿಕ ಅವಗಾಹನೆಗೆ ಉದ್ದಿಷ್ಟ ವಾದವುಗಳೆಂದು ಸ್ಪಷ್ಟವಾಗುತ್ತದೆ.[೨]

ಪ್ರಾರಂಭದಲ್ಲಿ ಅರಸನ ಆಜ್ಞೆಗಳನ್ನು ಪ್ರಜೆಗಳಿಗೆ ತಿಳಿಸುವುದು ಮತ್ತು ದೇಶದಲ್ಲಿ ಪ್ರಚಾರಿಕರೀಸುವುದೇ ಶಾಸನ ನಿರ್ಮಾಣದ ಮುಖ್ಯೋದ್ದೇಶವಾಗಿತ್ತು. ತರುವಾಯ ತಾನು ಕೈಗೊಂಡ ಕಾರ್ಯ ಚಿರಸ್ಥಾಯಿಯಾಗಿರಬೇಕು, ಪ್ರಜೆಗಳ ಮನಸ್ಸಿನಲ್ಲಿ ಸರ್ವದಾ ಇರಬೇಕು, ತಾನು ವಿವಿಧ ಚಟುವಟಿಕೆಗಳಿಗೆ ಮಾಡಿದ ದಾನ ಮತ್ತು ತತ್ಸಂಬಂಧಿ ಕಟ್ಟಳೆಗಳು ಅವಿಚ್ಛಿನ್ನವಾಗಿ ಮುನ್ನಡೆದುಕೊಂಡು ಬರಬೇಕೆಂಬ ಹಂಬಲ–ಆಶಯವೇ ಶಾಸನ ನಿರ್ಮಾಣಕ್ಕೆ ಪ್ರಧಾನೋದ್ದೇಶವಾಯಿತು. ಕಾಲಾನುಕ್ರಮದಲ್ಲಿ ಆಡಳಿತ, ಪ್ರಭುತ್ವ, ಆಜ್ಞೆ, ಅಪ್ಪಣೆ, ಕಾನೂನು, ಕಟ್ಟಳೆ, ವಿಧಿ, ನಿಗ್ರಹ, ಹಿಡಿತ, ಶಿಲಾಲೇಖ, ತಾಮ್ರಲೇಖ, ದಾಖಲೆ, ಶಿಕ್ಷೆ, ದಂಡನೆ, ಶಾಸ್ತಿ, ಒಪ್ಪಂದ, ಕರಾರು ಎಂಬಿತ್ಯಾದಿ ವ್ಯಾಪಕ ಅರ್ಥವನ್ನು ಪಡೆದುಕೊಂಡಿತು. ಶಾಸನಗಳನ್ನು ವ್ಯವಸ್ಥಿತವಾದ ಅಧ್ಯಯನದ ಅನುಕೂಲಕ್ಕಾಗಿ ನಿರ್ಮಾತೃ ವಿಷಯ, ಭಾಷೆ, ರಾಜವಂಶ, ಧರ್ಮಾಧಾರಿತವಾಗಿ ವರ್ಗೀಕರಿಸಬಹುದು.

ಪ್ರಾಚೀನ ಧರ್ಮಶಾಸ್ತ್ರಗಳು, ಸ್ಮೃತಿಗಳು, ಶುಕ್ರನೀತಿಸಾರ, ಕೌಟಲ್ಯನ ಅರ್ಥಶಾಸ್ತ್ರ, ಕ್ಷೇಮೇಂದ್ರ ವ್ಯಾಸದಾಸನ ಲೋಕಪ್ರಕಾಶ, ಲೇಖಪಂಚಾಶಿಖಾ, ಲೇಖಪದ್ಧತಿ ಮೊದಲಾದ ಕೆಲವು ಕೃತಿಗಳು ಶಾಸನಗಳ ರಚನೆ, ಸಿದ್ಧತೆ ಮತ್ತು ಸಂರಕ್ಷಣೆಯ ಕುರಿತಾದ ಉಪಯುಕ್ತ ಸಲಹೆ–

ಸೂಚನೆಗಳನ್ನು ನಿರ್ದೇಶಿಸುತ್ತವೆ. ಇವುಗಳ ಸಿದ್ಧತೆಯಲ್ಲಿ ಸಾಮಾನ್ಯವಾಗಿ ಕೃತಿಕಾರ, ಲಿಪಿಕಾರ ಮತ್ತು ಶಿಲ್ಪಿ ಪ್ರಮುಖ ಪಾತ್ರವಹಿಸುತ್ತಿದ್ದರು. ದಾನ ಶಾಸನಗಳಲ್ಲಿ ವಿಷಯ ನಿರೂಪಣೆ ಸ್ಥೂಲವಾಗಿ ಪೀಠಿಕೆ, ಪ್ರಕಟನೆ ಮತ್ತು ಮುಕ್ತಾಯ ಎಂಬ ಮೂರು ಹಂತಗಳಲ್ಲಿರುತ್ತದೆ. ಪೀಠಿಕೆಯಲ್ಲಿ ಮಂಗಳವಾಚಕ, ಪ್ರಾರ್ಥನಾಪದ್ಯ, ಶಾಸನದ ದಾತೃಗಳ ವಂಶಾವಳಿ, ದಾನಕ್ಕೆ ಸಂಬಂಧಿಸಿದಂತೆ ಆದೇಶ, ದಾನ ಮಾಡಿದ ಕಾಲ, ಪ್ರಕಟನೆಯಲ್ಲಿ ದಾನದ ಸ್ಪಷ್ಟೀಕರಣ, ದಾನಿಯ ಹೆಸರು, ದಾನ ಮಾಡಿದ ಉದ್ದೇಶ ಮತ್ತು ಸಂದರ್ಭ, ದಾನವಿತ್ತ ಭೂಮಿಯ ಚಕಬಂದಿ, ಮುಕ್ತಾಯದಲ್ಲಿ ಫಲಶ್ರುತ ಪದ್ಯ/ಗದ್ಯ, ಶಾಸನವನ್ನು ಕಂಡರಿಸಿದವರ ಉಲ್ಲೇಖ, ಸಾಕ್ಷಿದಾರರ ಮಾಹಿತಿ, ಅರಸನ ಒಪ್ಪಿಗೆ ಕುರಿತು ಹಸ್ತಾಕ್ಷರದ ರುಜುವಾತು ಅಂಶಗಳಿರುತ್ತವೆ. ಈ ಅಧ್ಯಾಯದಲ್ಲಿ ಶಿರಹಟ್ಟಿ ಪರಿಸರದ ಶಾಸನಗಳಿಂದ ಸ್ಪಷ್ಟವಾಗುವ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವಿಚಾರಗಳನ್ನು ನಿರೂಪಿಸಲಾಗುವುದು.

೬.೨ ಶಿರಹಟ್ಟಿಯ ಹೋಬಳಿಯ ಶಾಸನಗಳ ಸಾಂಸ್ಕೃತಿಕ ಮಹತ್ವ

ಪ್ರಸ್ತುತ ಪ್ರಬಂಧದಲ್ಲಿ ಆಯ್ದುಕೊಂಡ ಹಳ್ಳಿಗಳಲ್ಲಿ ದೊರೆತ ಶಾಸನಗಳ ಉಲ್ಲೇಖಗಳನ್ವಯ ಬಾದಾಮಿ ಚಾಲುಕ್ಯರು ಮೊಟ್ಟಮೊದಲು ಕಂಡುಬರುವ ರಾಜ ಮನೆತನವಾಗಿದೆ. ಇವರ ಕಾಲದಲ್ಲಿನ ಅರಸನಾದ ಇಮ್ಮಡಿ ಪುಲಕೇಶಿ, ವಿನಯಾದಿತ್ಯ, ವಿಜಯಾದಿತ್ಯ, ಎರಡನೇ ವಿಕ್ರಮಾದಿತ್ಯನ ಶಾಸನಗಳು ದೊರಕಿವೆ. ಬಾದಾಮಿ ಚಾಲುಕ್ಯರ ನಂತರ ಕಂಡು ಬರುವ ಶಾಸನಗಳೆಂದರೆ ರಾಷ್ಟ್ರಕೂಟ ಮೂರನೇ ಗೋವಿಂದ, ಎರಡನೇ ಕೃಷ್ಣ, ಅಮೋಘವರ್ಷ, ಗಂಗಮಾರಸಿಂಹ ಶಾಸನಗಳು ದೊರಕಿವೆ. ನಂತರ ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿದಂತೆ ಎರಡನೇ ಸೋಮೇಶ್ವರ, ಆರನೇ ವಿಕ್ರಮಾದಿತ್ಯ, ಮೂರನೇ ಸೋಮೇಶ್ವರ, ಎರಡನೇ ಜಗದೇಕಮಲ್ಲ ಹಾಗೂ ನಾಲ್ಕನೇ ಸೋಮೇಶ್ವರನ ಶಾಸನಗಳು ಪ್ರಮುಖವಾಗಿವೆ. ಕಲ್ಯಾಣರ ಕಲಚೂರಿಗಳ ಅರಸರಿಗೆ ಸೇರಿದ ಶಾಸನಗಳು ದೊರೆತಿವೆ. ಶಿರಹಟ್ಟಿ ಪರಿಸರದಲ್ಲಿ ಇವರೆಗೆ ೨೦ ಶಾಸನಗಳು ಲಭ್ಯವಾಗಿವೆ. ಇವುಗಳಲ್ಲಿ ರಾಜಕೀಯ, ಆಡಳಿತ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ದೇವಾಲಯಗಳ ನಿರ್ಮಾಣ, ಶಿಲ್ಪಗಳ ಪ್ರತಿಷ್ಟಾಪನೆ, ಭೂದಾನ, ವೀರಮರಣ, ಮಾಸ್ತಿಮರಣ, ವ್ಯಕ್ತಿ ಗ್ರಾಮಗಳ ಹೆಸರುಗಳು ಮೊದಲಾದ ವಿಷಯಗಳಿವೆ. ಈ ಎಲ್ಲಾ ಶಾಸನಗಳಿಂದ ಲಭ್ಯವಿರುವ ವಿವರಣೆಗಳನ್ನು ವಸ್ತುನಿಷ್ಟವಾದ ವಿಮರ್ಶಾತ್ಮಕ ಅಧ್ಯಯನದೊಂದಿಗೆ ಅವುಗಳ ರಾಜಕೀಯ, ಆಡಳಿತ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮಹತ್ವವನ್ನು ವಿಶ್ಲೇಷಿಸಲು ಯತ್ನಿಸಲಾಗಿದೆ.

೨.೩ ಧಾರ್ಮಿಕ

ಭಾರತದಲ್ಲಿ ಮೂಡಿ ಬೆಳೆದು ಬಂದಿರುವ ಶೈವ, ವೈಷ್ಣವ ಭೌದ್ಧ, ಜೈನ, ಅಜೀವಿಕ, ಮೊದಲಾದ ಧರ್ಮಗಳು ಸ್ಥಳೀಯ ಸಂಸ್ಕೃತಿ ಮತ್ತು ನಾಗರೀಕತೆಗಳನ್ನು ಸಮೃದ್ಧವಾಗಿಸಿವೆ. ಅವು ಕನ್ನಡ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯೊಂದಿಗೂ ಹಾಸುಹೊಕ್ಕಾಗಿವೆ. ಈ ನಾಡಿನಲ್ಲಿ ಆಳ್ವಿಕೆ ಕೈಗೊಂಡಿದ್ದ ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಮೊದಲಾದ ಅರಸರು, ಮಹಾಮಂಡಳೇಶ್ವರ, ಮಹಾ ಸಾಮಂತ, ಪ್ರಭುಗಾವುಂಡ, ಗಾವುಂಡರ, ಪೋಷಣೆಯಲ್ಲಿ ಧರ್ಮಗಳು

ಜಯಂತಿ ಯಸ್ಯಾವದತೋಽಪಿ ಭಾರತೀ
ವಿಭೂತಯಸ್ತೀರ್ಥ ಕೃತೋಽಪಿ ನೈಕ್ರಿತೇ
ಶಿವಾಯ ಧಾತ್ರೇ ಸುಗತಾಯ ವಿಷ್ಣವೇ
ಜಿನಾಯ ತಸ್ಮೈ ಸಕಳಾತ್ಮನೇ ನಮಃ ॥

ಎಂದು ಅವಿಚ್ಛಿನ್ನವಾಗಿ ಬೆಳೆದುಬಂದಿವೆ.[೩] ಕಾಲಾಂತರದಲ್ಲಿ ಧರ್ಮಗಳ ಪರಸ್ಪರ ವಲಯಗಳ ವಿಸ್ತಾರ, ಮತಾಂತರ, ಧರ್ಮಪ್ರಚಾರ, ದೇವಾಲಯಗಳ ರೂಪಾಂತರ, ನಾಶ ಮೊದಲಾದ ಕಾರಣಗಳಿಂದ ಮತೀಯ ಘರ್ಷಣೆಗಳು ಸಂಭವಿಸಿದರೂ[೪] ಚತುಸ್ಸಮಯದೀಪಕರಾದ ಅರಸರು ಪರಸ್ಪರ ಧರ್ಮೀಯರಲ್ಲಿ ಅನ್ಯೋನ್ಯತೆಯನ್ನು ಕಲ್ಪಿಸುತ್ತಲೇ ಬಂದಿದ್ದಾರೆ. ಇದು ಅಂದಿನ ಶಾಸನ ಮತ್ತು ಸಾಹಿತ್ಯಕ ಕುರುಹುಗಳಿಂದ ಮನದಟ್ಟಾಗುತ್ತದೆ. ಅದೇನಿದ್ದರೂ ಆ ಧರ್ಮಗಳು ಸ್ಥಳೀಯ ಸಂಸ್ಕೃತಿ, ಸಾಹಿತ್ಯ, ವಾಸ್ತು, ಶಿಲ್ಪ ಮೊದಲಾದ ಕ್ಷೇತ್ರಗಳಲ್ಲಿ ಸಲ್ಲಿಸಿದ ಕೊಡುಗೆಗಳು ಧರ್ಮಗಳು ಸ್ಥಳೀಯ ಶಾಸನಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. **ಶೈವಧರ್ಮ**

ಭಾರತದ ಪ್ರಾಚೀನ ಧರ್ಮಗಳಲ್ಲಿ ಶೈವ ಧರ್ಮವೂ ಒಂದು. ಸಿಂಧೂ ಸಂಸ್ಕೃತಿಯ ಹರಪ್ಪ, ಮೊಹೊಂಜೋದಾರೋ ನೆಲಗಳಲ್ಲಿ (ಕ್ರಿ.ಪೂ.ಸುಮಾರು ೩೦೦೦-೧೭೫೦) ದೇವತೆಗಳ ಚಿತ್ರಗಳಿರುವ ಮುದ್ರಿಕೆಗಳು, ಶಿವಲಿಂಗಾಕಾರದ ಕುರುಹುಗಳು ದೊರೆತಿವೆ. ಈ ನಾಗರೀಕತೆಯ ಮುದ್ರೆಗಳ ಮೇಲಿರುವ ಚಿತ್ರಗಳಲ್ಲಿ ಒಂದನ್ನು ಪಶುಪತಿಯೆಂದು ಗುರುತಿಸಲಾಗಿದೆ. ಪಶುಪತಿಯ ಸುತ್ತಲೂ ಮತ್ತು ಪಾದಪೀಠದ ಕೆಳಗೆ ಆನೆ, ಹುಲಿ, ಖಡ್ಗಮೃಗ, ಕೋಣ ಜಿಂಕೆಗಳು ಸುತ್ತುವರಿದಿವೆ. ಇವುಗಳನ್ನು ಪರಿಶೀಲಿಸಿದಾಗ ಮಹಾಯೋಗಿ ಪಶುಪತಿ ಶಿವನ ಪ್ರಾಚೀನ ಪ್ರತಿನಿಧಿ. ಎಂದು ಸರ್. ಜಾನ್ ಮಾರ್ಷಲ್ ಅವರು ಅಭಿಪ್ರಾಯಪಟ್ಟಿದ್ದಾರೆ. ಋಗ್ವೇದದಲ್ಲಿ ರುದ್ರನ ದುಷ್ಟಶಕ್ತಿಗಳಿಗೆ ಅಧಿಪತಿ ಎಂಬಂತೆ ಚಿತ್ರಿಸಲಾಗಿದೆ. ರುದ್ರ ಎಂದರೆ ಗರ್ಜಿಸುವವನು ಎಂದರ್ಥ ಮುಂದೆ ಶಿವನಿಗೆ ಅನ್ವಯಿಸಲಾದ ಅನೇಕ ಲಕ್ಷಣಗಳನ್ನು ರುದ್ರನಿಗೆ ಅನ್ವಯಿಸಿ ಹೇಳಲಾಗಿದೆ. ರುದ್ರನ ವಾಸಸ್ಥಾನ

ಪರ್ವತಗಳಲ್ಲಿ. ಅವನು ಜಟೆಯನ್ನು ಎತ್ತಿ ಕಟ್ಟಿದ್ದು, ಚರ್ಮವನ್ನು ಧರಿಸಿದ್ದಾನೆ. ಸ್ವಭಾವತಃ ಭಯಂಕರನಾಗಿದ್ದು ನಂತರ ಮಂಗಳಕರ ಅಥವಾ ಶಿವನಾಗಲೆಂದು ಪ್ರಾರ್ಥಿಸಿರುವುದು ಕಂಡುಬರುತ್ತದೆ. ಶೈವ ಧರ್ಮದಲ್ಲಿ ಕಾಲಾಂತರದಲ್ಲಿ ಪಾಶುಪತ, ಕಾಪಾಲಿಕ, ಕಾಳಾಮುಖ, ಕೌಳ ಮತ್ತು ವೀರಶೈವ ಪಂಥಗಳುಂಟಾದವು. ಮೂಲತಃ ಈ ಪಂಥಗಳ ಉದ್ದೇಶ ಒಂದೇಯಾದರೂ ಇವುಗಳ ಆಚಾರ-ವಿಚಾರಗಳು, ತತ್ವ ಸಿದ್ಧಾಂತಗಳು, ದರ್ಶನ, ನಂಬಿಕೆ-ಸಂಪ್ರದಾಯಗಳಲ್ಲಿ ವ್ಯತ್ಯಾಸಗಳು ಗೋಚರಿಸುತ್ತವೆ."

ಶೈವ-ವೀರಶೈವ ದೇವಾಲಯಗಳಿಗೆ ದತ್ತಿ, ದಾನ, ಬಿಟ್ಟ ಸಂಗತಿಗಳನ್ನು ಶಾಸನಗಳು ನಿರೂಪಿಸುತ್ತವೆ. ಬೆಳ್ಳಟ್ಟಿಯ ಹನುಮಂತದೇವರ ಗುಡಿಯು ಕ್ರಿ.ಶ. ೧೧೨೨ ರ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಶಾಸನದಲ್ಲಿ ಯಾದವ ವಂಶದ ಮಹಾಮಂಡಳೇಶ್ವರ ಪೆರ್ಮಾಡಿ ಅರಸರ ವಿನಂತಿಯ ಮೇರೆಗೆ ಪೆರ್ಗಡೆ ಚಾವಿಸೆಟ್ಟಿಯು ಕಪಿಲೇಶ್ವರ ದೇವರಿಗೆ ದತ್ತಿ ಬಿಡುತ್ತಾನೆ. ಈ ಭಾಗದ ಮಹಾಮಂಡಳೇಶ್ವರ ಪೆರ್ಮಾಡಿಯೇ ಯಾದವನಾಗಿದ್ದಾನೆ. ಶಿವಾಜಿಯ ಪೂರ್ವಜರು ಸೊರಟೂರು ಭಾಗದವರಾಗಿದ್ದು ಅವರು ಯಾದವ ಮನೆತನದವರೆಂದು ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ. ಈ ಪೇರ್ಮಾಡಿಯು ಈ ಹಿಂದೆ ಹೇಳಿದ ಡಂಬಳದ ಶಾಸನೋಕ್ತ ಯಾದವ ಮಲ್ಲುಗಿಯು ಶಿವಾಜಿಯ ಪೂರ್ವಿಕರಿರಬೇಕೆನಿಸುತ್ತದೆ. ಇಲ್ಲಿ ಯಾದವ ಮನೆತನದ ಶಾಖೆಯೊಂದು ಆಳುತ್ತಿತ್ತೆಂಬುದಕ್ಕೆ ಈ ಎರಡು ಶಾಸನಗಳು ಆಧಾರಗಳಾಗಿ ನಿಲ್ಲುತ್ತವೆ. ಪೆರ್ಮಾಡಿಯು ಶಿವಭಕ್ತರಾದ್ದುದನ್ನು ಮೇಲಿನ ಶಾಸನ ನಿರೂಪಿಸುತ್ತದೆ.

ದೇವಿಹಾಳದ ಹೊಳಲಮ್ಮನ ಗುಡಿಯ ಕಂಬದ ಮೇಲಿರುವ ೧೬ನೇ ಶತಮಾನದ ಕಲ್ಯಾಣದ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಶಾಸನದಲ್ಲಿ ಕೆಲವು ದೇವರಿಗೆ ನೀಡಿದ ಭೂದಾನದ ಉಲ್ಲೇಖವಿದೆ. ಈ ಶಾಸನವು ತುಂಬಾ ತ್ರುಟಿತವಾಗಿರುವದರಿಂದ ಶಾಸನೋಕ್ತ ದೇವಾಲಯಗಳು ಮತ್ತು ದಾನದ ವಿವರಗಳು ಅಸ್ಪಷ್ಟವಾಗಿವೆ. ಇದೇ ಗುಡಿಯ ಇನ್ನೊಂದು ಕಂಬದಲ್ಲಿನ ೧೨ನೇ ಶತಮಾನದ ಶಾಸನವು ಕಲ್ಯಾಣದ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಬಗ್ಗೆ ತಿಳಿಸುತ್ತದೆ. ಆದರೆ ಈ ಶಾಸನವು ತ್ರುಟಿತಗೊಂಡಿರುವದರಿಂದ ವಿವರಗಳು ಲಭ್ಯವಿಲ್ಲ. ಬೆಳ್ಳಟ್ಟಿಯ ಅಕ್ಕೂರವರ ಮನೆಯ ಹಿತ್ತಲಿನ ಸುಮಾರು ೧೫ ನೇ ಶತಮಾನದ ತುಂಡು ಶಾಸನದಲ್ಲಿ ಮಲ್ಲಿಕಾರ್ಜುನ ದೇವಾಲಯದ ಭೂಮಿಯ ಸೀಮಾದ ಉಲ್ಲೇಖ ಮಾತ್ರ ಗೋಚರಿಸುತ್ತದೆ. ಬೆಳ್ಳಟ್ಟಿಯ ಚಿನಿವಾಲದ ಹೊಲದ ಶಾಸನವು ಬಂಡಿವಾಡಿ ನಾಯಕಾದಿಗಳಿಂದ ಸವಣೂರು ಸೀಮೆಯಲ್ಲಿ ಭೂದಾನ ಮಾಡಿದ ಉಲ್ಲೇಖವಿದೆ. ಶಿರಹಟ್ಟಿಯ ಫಕೀರಸ್ವಾಮಿ ಮಠದ ಶಾಸನವು ತ್ರುಟಿತವಾಗಿದ್ದು. ಇದರಲ್ಲಿ ಚನ್ನವೀರ ಸ್ವಾಮಿಯವರಿಗೆ ದಾನ ಬಿಟ್ಟ ಉಲ್ಲೇಖವಿದೆ. ಸಾಸರವಾಡದ ಹನುಮಂತ ದೇವರ ಗುಡಿಯ ಎದುರಿನಲ್ಲಿರುವ ಕ್ರಿ.ಶ. ೧೦೫೭ರ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ಸೋಮೇಶ್ವರನ ಒಂದನೇ

ಇಂದ್ರಕೇಶಿ ಅರಸನ ವಿನಂತಿಯ ಮೇರೆಗೆ ಮಸಣಯ್ಯ ನಾಯಕನಿಂದ ಉತ್ತರೇಶ್ವರ ದೇವಾಲಯದ ನಿರ್ಮಾಣ ಹಾಗೂ ಸಾಶಿರಾರವೇ ಗ್ರಾಮದಾನದ ಉಲ್ಲೇಖವಿದೆ. ಹೆಬ್ಬಾಳದ ಹನುಮಂತದೇವರ ಗುಡಿಯ ಎದುರು ದೊರೆತ ಕ್ರಿ.ಶ. ೯೭೫ರ ಶಾಸನದಲ್ಲಿ ರಾಷ್ಟ್ರಕೂಟರ ಎರಡನೆಯ ಕೃಷ್ಣನ ಮಹಾಸಾಮಂತ ಮಾರಸಿಂಹನ ಅಜ್ಜಿ ಜುಬ್ಬ ಅರಸಿಯು ಶಿವ ದೇವಾಲಯವನ್ನು ನಿರ್ಮಿಸಿ ಹಾಗೂ ಭೂದಾನ ಮಾಡಿದ ಉಲ್ಲೇಖವಿದೆ. ತೆಗ್ಗಿನಭಾವನೂರಿನ ಕಲ್ಮೇಶ್ವರ ದೇವಾಲಯದಲ್ಲಿರುವ ಶಾಸನವು ಕ್ರಿ.ಶ. ೧೧೧೯ರ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಶಾಸನದಲ್ಲಿ ಭಾನಲೂರ ಮಲ್ಲಗಾವುಂಡನು ಗಂಗರಾಶಿ ದೇವರಿಗೆ ಭೂಮಿದಾನ ಬಿಟ್ಟ ವಿವರಗಳಿವೆ. ಬನ್ನಿಕೊಪ್ಪದ ಕಬಾಡಿಯವರ ಮನೆ ಹತ್ತಿರದಲ್ಲಿರುವ ಶಾಸನದಲ್ಲಿ ಖಾನಪ್ಪಗೌಡನು ವೀರಭದ್ರ ದೇವಾಲಯವನ್ನು ನಿರ್ಮಿಸಿದ ವಿವರಗಳಿವೆ. ಕ್ರಿ.ಶ. ೯೭೫ರ ರಾಷ್ಟ್ರಕೂಟರ ಎರಡನೆಯ ಕೃಷ್ಣನ ಗಂಗ ಮಾರಸಿಂಹನ ಶಾಸನದಲ್ಲಿ ಈ ಗ್ರಾಮದ ಹೆಸರು ಹೆಬ್ಬಾಳ ಎಂದು ಕಂಡುಬರುತ್ತದೆ. ಹೆಬ್ಬಾಳ್-ಆಳ್ A Superior Man, ETC (ಮಹೋತ್ಸಾಹ, ಮಹೋಧ್ಯಮ, ಮಹೋಚ್ಛ್ರಯ, ಮಹಾಮನಸ್) ಎಂಬ ಅರ್ಥವನ್ನು ಸೂಚಿಸುತ್ತದೆ. ಸ್ಥಳೀಯರ ಹೇಳಿಕೆಯಂತೆ ಈ ಹೆಬ್ಬಾಳ ಗ್ರಾಮವು ನ್ಯಾಯ ವಿತರಿಸುವ ಪ್ರಮುಖ ಊರಾಗಿತ್ತು. ಹಿರಿದಾದ ಹೆಬ್ಬಾಗಿಲನ್ನು ಹೊಂದಿದ ಕಾರಣದಿಂದಾಗಿ ಹೆಬ್ಬಾಳ ಎಂಬ ಹೆಸರು ರೂಢಿಗೆ ಬಂದಿದೆ ಎಂಬ ಅಭಿಪ್ರಾಯವೂ ಇದೆ. ಕ್ರಿ.ಶ. ಸುಮಾರು ೬೦೦ರ ಶಾಸನದಲ್ಲಿ ಬಾದಾಮಿ ಚಾಲುಕ್ಯ ದೊರೆ ಇಮ್ಮಡಿ ಪುಲಕೇಶಿಯ ಸಂಸ್ಕೃತ ಶಾಸನವೇ ಲಕ್ಷ್ಮೇಶ್ವರದ ಅತ್ಯಂತ ಪ್ರಾಚೀನ ಶಾಸನ. ಈ ಸಂಸ್ಕೃತ ಶಾಸನದಲ್ಲಿ "ಪುಲಿಗೇರಿ" ಎಂಬ ರೂಪ ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯ ಅರಸನಾದ ಭುವನೈಕ ಮಲ್ಲನ ಆಡಳಿತದಲ್ಲಿ ಮಹಾಸಾಮಂತನಾದ ಜಯಕೇಶಿ ಅರಸನು ಪುರಗೇರಿ ರಾಷ್ಟ್ರಕೂಟನಾಗಿದ್ದನು. ಒಮ್ಮೆ ಜಯಕೇಶಿ ಅರಸನು ಪುಲಿಗೇರಿಯ ಪೆರಮಾಡಿ ಬಸದಿಗೆ ದರ್ಶನಾರ್ಥಿಯಾಗಿ ಹೋದಾಗ ಅಲ್ಲಿಯ ಸ್ಥಾನಾಚಾರ್ಯರಾದ ತ್ರಿಭುವನ ಪಂಡಿತರ ಬೇಡಿಕೆಯಂತೆ ಪುಲಿಗೇರಿಯನ್ನು ಪುಲಿಗೆರೆ ಪುರವೆಂದು ಪರಿವರ್ತಿಸಿದನು ಅಂದಿನಿಂದ ಪುಲಿಗೆರೆಯನ್ನು ಪುಲಿಗೆರೆಪುರವೆಂದೇ ಕರೆಯಲಾರಂಭಿಸಿದರೆಂದು ಶಾಸನವು ಸಾರಿದೆ. ಈ ಪುಲಿಗೆರೆ ಪ್ರದೇಶವು ಪುಲಿಗೆರೆ ೩೦೦ ಎಂಬ ಆಡಳಿತದ ವಿಭಾಗವಿದ್ದಿತು. ಇದರ ಉತ್ತರದ ನರೆಯ ಪ್ರಾಂತದ ಹೆಸರು ಬೆಳ್ವಲ ೩೦೦ ಇವೆರಡು ಒಂದಕ್ಕೊಂದು ಹೊಂದಿಕೊಂಡಿದ್ದರಿಂದ ಅನೇಕ ಶಾಸನಗಳಲ್ಲಿ ಇವರೆಡು ಜೊತೆ ಜೊತೆಯಾಗಿಯೇ ಹೆಸರಿಸಲ್ಪಟ್ಟಿದೆ. ಇವೆರಡಕ್ಕೂ ಸೇರಿ ಎರಡುನೂರು ಅಂದರೆ ೩೦೦ ಪ್ರಾಂತಗಳ ಆರನೂರುರ ಪ್ರಾಂತ ಎಂಬ ಹೆಸರು ಉಂಟಾಯಿತಲ್ಲದೇ ಎಷ್ಟೋಸಲ ಈ ಆರನೂರರ ಪ್ರಾಂತವು ಒಂದೇ ಆಡಳಿತದ ವಿಭಾಗವೆಂಬರ್ಥದ ಉಲ್ಲೇಖಗಳು ದೊರೆಯುತ್ತವೆ. ಹೀಗೆ ಶಿರಹಟ್ಟಿ ಪರಿಸರದ ಶಾಸನಗಳಲ್ಲಿರುವ ಶೈವ ಧರ್ಮದ ವಿವಿಧ ಚಟುವಟಿಕೆಗಳು ಪ್ರಚಲಿತದಲ್ಲಿದ್ದವೆಂಬ ಉಲ್ಲೇಖಗಳು ದೃಢಪಡಿಸುತ್ತವೆ.[೬]

ಇಂದ್ರಕೇಶಿ ಅರಸನ ವಿನಂತಿಯ ಮೇರೆಗೆ ಮಸಣಯ್ಯ ನಾಯಕನಿಂದ ಉತ್ತರೇಶ್ವರ ದೇವಾಲಯದ ನಿರ್ಮಾಣ ಹಾಗೂ ಸಾಶಿರಾರವೇ ಗ್ರಾಮದಾನದ ಉಲ್ಲೇಖವಿದೆ. ಹೆಬ್ಬಾಳದ ಹನುಮಂತದೇವರ ಗುಡಿಯ ಎದುರು ದೊರೆತ ಕ್ರಿ.ಶ. ೯೭೫ರ ಶಾಸನದಲ್ಲಿ ರಾಷ್ಟ್ರಕೂಟರ ಎರಡನೆಯ ಕೃಷ್ಣನ ಮಹಾಸಾಮಂತ ಮಾರಸಿಂಹನ ಅಜ್ಜಿ ಜುಬ್ಬ ಅರಸಿಯು ಶಿವ ದೇವಾಲಯವನ್ನು ನಿರ್ಮಿಸಿ ಹಾಗೂ ಭೂದಾನ ಮಾಡಿದ ಉಲ್ಲೇಖವಿದೆ. ತೆಗ್ಗಿನಭಾವನೂರಿನ ಕಲ್ಮೇಶ್ವರ ದೇವಾಲಯದಲ್ಲಿರುವ ಶಾಸನವು ಕ್ರಿ.ಶ. ೧೧೧೯ರ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಶಾಸನದಲ್ಲಿ ಭಾನಲೂರ ಮಲ್ಲಗಾವುಂಡನು ಗಂಗರಾಶಿ ದೇವರಿಗೆ ಭೂಮಿದಾನ ಬಿಟ್ಟ ವಿವರಗಳಿವೆ. ಬನ್ನಿಕೊಪ್ಪದ ಕಬಾಡಿಯವರ ಮನೆ ಹತ್ತಿರದಲ್ಲಿರುವ ಶಾಸನದಲ್ಲಿ ಖಾನಪ್ಪಗೌಡನು ವೀರಭದ್ರ ದೇವಾಲಯವನ್ನು ನಿರ್ಮಿಸಿದ ವಿವರಗಳಿವೆ. ಕ್ರಿ.ಶ. ೯೭೫ರ ರಾಷ್ಟ್ರಕೂಟರ ಎರಡನೆಯ ಕೃಷ್ಣನ ಗಂಗ ಮಾರಸಿಂಹನ ಶಾಸನದಲ್ಲಿ ಈ ಗ್ರಾಮದ ಹೆಸರು ಹೆಬ್ಬಾಳ ಎಂದು ಕಂಡುಬರುತ್ತದೆ. ಹೆಬ್ಬಾಳ್-ಆಳ್ A Superior Man, ETC (ಮಹೋತ್ಸಾಹ, ಮಹೋಧ್ಯಮ, ಮಹೋಚ್ಚ್ರಯ, ಮಹಾಮನಸ್) ಎಂಬ ಅರ್ಥವನ್ನು ಸೂಚಿಸುತ್ತದೆ. ಸ್ಥಳೀಯರ ಹೇಳಿಕೆಯಂತೆ ಈ ಹೆಬ್ಬಾಳ ಗ್ರಾಮವು ನ್ಯಾಯ ವಿತರಿಸುವ ಪ್ರಮುಖ ಊರಾಗಿತ್ತು. ಹಿರಿದಾದ ಹೆಬ್ಬಾಗಿಲನ್ನು ಹೊಂದಿದ ಕಾರಣದಿಂದಾಗಿ ಹೆಬ್ಬಾಳ ಎಂಬ ಹೆಸರು ರೂಢಿಗೆ ಬಂದಿದೆ ಎಂಬ ಅಭಿಪ್ರಾಯವೂ ಇದೆ. ಕ್ರಿ.ಶ. ಸುಮಾರು ೬೦೦ರ ಶಾಸನದಲ್ಲಿ ಬಾದಾಮಿ ಚಾಲುಕ್ಯ ದೊರೆ ಇಮ್ಮಡಿ ಪುಲಕೇಶಿಯ ಸಂಸ್ಕೃತ ಶಾಸನವೇ ಲಕ್ಷ್ಮೇಶ್ವರದ ಅತ್ಯಂತ ಪ್ರಾಚೀನ ಶಾಸನ. ಈ ಸಂಸ್ಕೃತ ಶಾಸನದಲ್ಲಿ "ಪುಲಿಗೇರಿ" ಎಂಬ ರೂಪ ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯ ಅರಸನಾದ ಭುವನೈಕ ಮಲ್ಲನ ಆಡಳಿತದಲ್ಲಿ ಮಹಾಸಾಮಂತನಾದ ಜಯಕೇಶಿ ಅರಸನು ಪುರಗೇರಿ ರಾಷ್ಟ್ರಕೂಟನಾಗಿದ್ದನು. ಒಮ್ಮೆ ಜಯಕೇಶಿ ಅರಸನು ಪುಲಿಗೇರಿಯ ಪೆರಮಾಡಿ ಬಸದಿಗೆ ದರ್ಶನಾರ್ಥಿಯಾಗಿ ಹೋದಾಗ ಅಲ್ಲಿಯ ಸ್ಥಾನಾಚಾರ್ಯರಾದ ತ್ರಿಭುವನ ಪಂಡಿತರ ಬೇಡಿಕೆಯಂತೆ ಪುಲಿಗೇರಿಯನ್ನು ಪುಲಿಗೆರೆ ಪುರವೆಂದು ಪರಿವರ್ತಿಸಿದನು ಅಂದಿನಿಂದ ಪುಲಿಗೆರೆಯನ್ನು ಪುಲಿಗೆರೆಪುರವೆಂದೇ ಕರೆಯಲಾರಂಭಿಸಿದರೆಂದು ಶಾಸನವು ಸಾರಿದೆ. ಈ ಪುಲಿಗೆರೆ ಪ್ರದೇಶವು ಪುಲಿಗೆರೆ ೩೦೦ ಎಂಬ ಆಡಳಿತದ ವಿಭಾಗವಿದ್ದಿತು. ಇದರ ಉತ್ತರದ ನರೆಯ ಪ್ರಾಂತದ ಹೆಸರು ಬೆಳ್ವಲ ೩೦೦ ಇವೆರಡು ಒಂದಕ್ಕೊಂದು ಹೊಂದಿಕೊಂಡಿದ್ದರಿಂದ ಅನೇಕ ಶಾಸನಗಳಲ್ಲಿ ಇವರೆಡು ಜೊತೆ ಜೊತೆಯಾಗಿಯೇ ಹೆಸರಿಸಲ್ಪಟ್ಟಿದೆ. ಇವೆರಡಕ್ಕೂ ಸೇರಿ ಎರಡುನೂರು ಅಂದರೆ ೩೦೦ ಪ್ರಾಂತಗಳ ಆರನೂರುರ ಪ್ರಾಂತ ಎಂಬ ಹೆಸರು ಉಂಟಾಯಿತಲ್ಲದೇ ಎಷ್ಟೋಸಲ ಈ ಆರನೂರರ ಪ್ರಾಂತವು ಒಂದೇ ಆಡಳಿತದ ವಿಭಾಗವೆಂಬರ್ಥದ ಉಲ್ಲೇಖಗಳು ದೊರೆಯುತ್ತವೆ. ಹೀಗೆ ಶಿರಹಟ್ಟಿ ಪರಿಸರದ ಶಾಸನಗಳಲ್ಲಿರುವ ಶೈವ ಧರ್ಮದ ವಿವಿಧ ಚಟುವಟಿಕೆಗಳು ಪ್ರಚಲಿತದಲ್ಲಿದ್ದವೆಂಬ ಉಲ್ಲೇಖಗಳು ದೃಢಪಡಿಸುತ್ತವೆ.[೬]

೨. **ವೈಷ್ಣವ ಧರ್ಮ:** ಭಾರತದ ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವೂ ಒಂದು. ವೈದಿಕ ಯುಗದಿಂದ ಇಂದಿನವರೆಗೂ ಭಾರತದಲ್ಲಿ ವಿಷ್ಣುಉಪಾಸನೆ ಜನಪ್ರೀಯವಾಗಿ ಬೆಳೆದುಬಂದಿದೆ. ಈ ಧರ್ಮವೂ ಭಕ್ತಿ ಪ್ರಧಾನ ಧರ್ಮವೆಂದು ಪ್ರಸಿದ್ಧಿಯಾಗಿದೆ. ಋಗ್ವೇದ ಸಂಹಿತೆಯಲ್ಲಿ ಪ್ರಪ್ರಥಮವಾಗಿ ವಿಷ್ಣುವಿನ ಪ್ರಸ್ತಾಪ ಬಂದಿದೆ. ಈ ಧರ್ಮದಲ್ಲಿ ವಿಷ್ಣುವನ್ನೇ ಪರಮೋಚ್ಛ ದೈವವೆಂದು ಪರಿಗಣಿಸಿದ್ದು ಆದರೆ ಈತನನ್ನು ವಿವಿಧ ರೂಪಗಳು ಮತ್ತು ಅವತಾರಗಳಲ್ಲಿ ಆರಾಧಿಸುತ್ತಿದ್ದ ತಮ್ಮದೇ ಆದ ಸಿದ್ಧಾಂತವನ್ನೊಳಗೊಂಡ ಭಾಗವತ ಮತ್ತು ವೈಖಾನಸಾಗಮ ಎಂಬೆರಡು ಪಂಥಗಳಿದ್ದವು. ಅವು ಸಮಕಾಲೀನ ಪರಿಸರಕ್ಕನುಗುಣವಾಗಿ ತಮ್ಮ ತತ್ವ, ದರ್ಶನ, ಆಚರಣೆ, ಚಿಂತನೆಗಳಲ್ಲಿ ಬಲಸಂವರ್ಧಿಸಿಕೊಂಡು ಬದಲಾದ ಸಾಂಸ್ಕೃತಿಕ ಪರಿಸರಕ್ಕೆ ಒಗ್ಗಿಕೊಂಡು ಇಂದಿಗೂ ಅಸ್ತಿತ್ವದಲ್ಲಿವೆ.[೬]

ಶಿರಹಟ್ಟಿ ಪರಿಸರದಲ್ಲಿ ದೂರೆತಿರುವ ವೈಷ್ಣವ ಧರ್ಮದ ಶಾಸನಗಳು ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುತ್ತವೆ 'ಬೆಳ್ಳಟ್ಟಿ' ಗ್ರಾಮದ ಮಾನಪ್ಪ ಪತ್ತಾರರ ಹಿತ್ತಲದಲ್ಲಿರುವ ಶಾಸನವು ಹೊಯ್ಸಳ-II ನೇಯ ನರಸಿಂಹನ ಕಾಲದಾಗಿದ್ದು, ಅದರಲ್ಲಿ ಮೂಲಿಗಗೌಡನು ಬ್ರಹ್ಮಪುರಿಯಲ್ಲಿ ಮಾಧವ ದೇವರನ್ನು ಸ್ಥಾಪಿಸಿ ಭೂದಾನ ಬಿಟ್ಟ ವಿವರಗಳು ಕಂಡುಬರುತ್ತವೆ. ಈ ಶಾಸನವು ಶಿರಹಟ್ಟಿ ಪರಿಸರದಲ್ಲಿ ವೈಷ್ಣವ ಧರ್ಮವು ಪ್ರಚಲಿತವಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ.

೩. **ಜೈನಧರ್ಮ:** ಭಾರತದ ಪ್ರಾಚೀನ ಧರ್ಮಗಳಲ್ಲಿ ಜೈನ ಧರ್ಮವೂ ಒಂದಾಗಿದೆ. ಸಿಂಧೂ ನಾಗರಿಕತೆಯ ಕೆಲವು ನೆಲೆಗಳಲ್ಲಿ ಈ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಾವಶೇಷಗಳು ದೊರೆತಿವೆ. ವೈದಿಕ ಮತ್ತು ಬೌದ್ಧ ಧರ್ಮಗಳ ಸಮಕಾಲೀನ ಸಾಹಿತ್ಯಗಳಲ್ಲಿಯೂ ಈ ಧರ್ಮದ ಉಲ್ಲೇಖಗಳಿವೆ. ಈ ಧರ್ಮದಲ್ಲಿ ೨೪ ತೀರ್ಥಂಕರರ ಪರಿಕಲ್ಪನೆಯಿದೆ. ಇವರು ಕಾಲಾಂತರದಲ್ಲಿ ಜನ್ಮವೆತ್ತಿ ತಮ್ಮ ದಿವ್ಯತ್ವದ ಮೂಲಕ ಕೇವಲಜ್ಞಾನವನ್ನು ಪಡೆದು ಭವಸಾಗರದಲ್ಲಿ ಮುಳುಗಿ ಧರ್ಮವನ್ನೇ ಮರೆತ ಜೀವಾತ್ಮರಿಗೆ ಆತ್ಮ ಕಲ್ಯಾಣದ ಮಾರ್ಗವನ್ನು ಉಪದೇಶಿಸಿ ಸನ್ಮಾರ್ಗದ ದಾರಿ ತೋರಿಸುತ್ತಾ ಜೈನ ಧರ್ಮವನ್ನು ಪುನರುಜ್ಜೀವನ ಗೊಳಿಸಿದ್ದಾರೆ. ಕ್ರಿ.ಪೂ. ಸುಮಾರು ೩ನೆಯ ಶತಮಾನದಲ್ಲಿ ಅಂತಿಮ ಶ್ರುತಕೇವಲಿ ಭದ್ರಬಾಹು ಮತ್ತು ಈತನ ಪ್ರಧಾನ ಶಿಷ್ಯ ನಂದ ಮನೆತನದ ಚಂದ್ರಗುಪ್ತನ ಮೂಲಕ ಆಶ್ರಯ ಮತ್ತು ಪ್ರೋತ್ಸಾಹಗಳಿಂದ ಜನಪ್ರೀಯನಾದನು. ಈ ಧರ್ಮದಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಪಂಥಗಳಿದ್ದವು. ಕನ್ನಡ ನಾಡಿನಲ್ಲಿ ದಿಗಂಬರ ಮತ್ತು ಯಾಪನೀಯ ಪಂಥಗಳೇ ಪ್ರದಾನವಾಗಿವೆ.[೭]

ಬೆಳ್ಳಟ್ಟಿ ಗ್ರಾಮದ ಸಮೀಪ ಗುಡ್ಡದಮೇಲೆ ಜೋಗಿ ಬಂಡೆಯ ಕ್ರಿ.ಶ. ೯೬೦ರ ಶಾಸನದಲ್ಲಿ ಅಜ್ಜಯ್ಯನ ಪೆರ್ಗಡೆ ಆಯತವರ್ಮನು 'ಬೆಳ್ಳಟ್ಟಿಯಲ್ಲಿ ಗಣದ ಬಸದಿ' ಕಟ್ಟಿಸಿದ ಮಾಹಿತಿ ಇದೆ. ಇದು ಪ್ರಾಯಸಃ ಯಾಪನೀಯ ಸಂಘದ ಯಾವುದೋ ಒಂದು ಗಣವಾಗಿರುವುದು ಈ

ಶಾಸನವು ಕ್ರಿ.ಶ. ೧೦ ನೇಯ ಶತಮಾನದ ಸುಮಾರಿಗೆ ಈ ಭಾಗದಲ್ಲಿ ಯಾಪನೀಯ ಶಾಖೆ ಜನಪ್ರೀಯವಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ.

ಆ. ಇಸ್ಲಾಂ ಧರ್ಮ: ಶಿರಹಟ್ಟಿ ಪರಿಸರದಲ್ಲಿ ಇಸ್ಲಾಂ ಧರ್ಮವು ಪ್ರಚಲಿತವಾಗಿತ್ತೆಂದು ಇಲ್ಲಿ ದೊರೆತ ಶಾಸನಗಳು ಮತ್ತು ಸ್ಮಾರಕಗಳು ಮುಖ್ಯ ಆಧಾರಗಳಾಗಿವೆ. ಶಿರಹಟ್ಟಿಯ ಮಹೆಬೂಬ ಸುಬಾನಿ ದರ್ಗಾದಲ್ಲಿರುವ ೧೮ನೇ ಶತಮಾನದ ಶಾಸನವು ಮಮ್ಮದ ರೀಜಾ ಎಂಬುವನು ಮಸೀದಿ ದುರಸ್ತಿಗೊಳಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಇನ್ನೊಂದು ಶಾಸನವು ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಪಠ್ಯವನ್ನು ಮತ್ತು ಈ ಶಾಸನವನ್ನು ಬರೆದ ಮಮ್ಮದ ಅಲಿಯ ಹೆಸರು ಹಾಗೂ ಆ.ಹಿ.೧೧೧೨ ಎಂಬ ತೇದಿಯನ್ನು ಉಲ್ಲೇಖಿಸುತ್ತದೆ.

೬.೪ ಸಾಮಾಜಿಕ

ಒಂದು ಸಮಾಜದ ಸ್ಥಿರತೆ-ಅಸ್ಥಿರತೆ, ಪರಿವರ್ತನೆಯ ರೀತಿ ಮತ್ತು ಅಗಾಧತೆ, ಸ್ವಂತಿಕೆಯ ಅಳವು-ಉಳವು ಮೊದಲಾದವುಗಳು ಅದರ ಸಾಂಸ್ಕೃತಿಕ ಸಂಪತ್ತಿನ ಆಳ-ಎತ್ತರಳನ್ನು, ವಿಸ್ತಾರ-ವ್ಯಾಪ್ತಿಯನ್ನು,ಪ್ರೌಢಿಮೆ-ಪ್ರಭುದ್ಧತೆಯನ್ನು ಅವಲಂಬಿಸಿರುತ್ತದೆ. ಈ ನಿಟ್ಟಿನಲ್ಲಿ ಸಮಕಾಲೀನ ಸಾಹಿತ್ಯಿಕ ಮತ್ತು ಶಾಸನಾದಿ ಪುರಾತತ್ವ ಕುರುಹುಗಳು ಆಯಾ ಕಾಲದ ಸಾಮಾಜಿಕ ವ್ಯವಸ್ಥೆಯ ವಿವಿಧ ಮುಖಗಳನ್ನು ಸ್ಪಷ್ಟವಾಗಿ ಗುರುತಿಸಲು ಪ್ರತ್ಯಕ್ಷ ಮತ್ತು ಪರೋಕ್ಷ ಆಕರಗಳಿವೆ. ಶಿರಹಟ್ಟಿ ಪರಿಸರದ ಶಾಸನಗಳ ಹಿನ್ನಲೆಯಲ್ಲಿ ಈ ಪರಿಸರದ ಸಾಮಾಜಿಕ ವ್ಯವಸ್ಥೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಪ್ರಾಚೀನ ಭಾರತದ ಸಂದರ್ಭದಲ್ಲಿ ವ್ಯಕ್ತಿಗಳನ್ನು ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅವರು ಕೈಗೊಳ್ಳುವ ಉದ್ಯೋಗ ಮತ್ತು ವೃತ್ತಿಗಳ ಹಿನ್ನೆಲೆಯಲ್ಲಿ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರ ಎಂಬ ಸಾಹಿತ್ಯಿಕ ಕುರುಹುಗಳಿಂದ ಮನದಟ್ಟಾಗುತ್ತದೆ.[೯] ಕಾಲಕ್ರಮೇಣ ಬೇರೆ ಬೇರೆ ವರ್ಣದವರು ಬೇರೆ ಬೇರೆಯವರ ವೃತ್ತಿಗಳನ್ನವಲಂಬಿಸಿದ್ದರು. ಇದರ ಫಲವಾಗಿ ಬೇರೆ ಬೇರೆ ಜಾತಿಗಳು ಅಸ್ಥಿತ್ವಕ್ಕೆ ಬಂದವು. ಅಲ್ಲದೇ ಪ್ರತಿಯೊಂದು ಜಾತಿಯಲ್ಲಿ ಹಲವು ಉಪಜಾತಿಗಳೂ (ವೃತ್ತಿ, ಪಂಗಡ, ಗೋತ್ರ, ಇತ್ಯಾದಿ) ಕಾಣಿಸಿಕೊಂಡವು. ಕನ್ನಡ ನಾಡಿನ ಸಂದರ್ಭದಲ್ಲಿ ಚಾತುರ್ವರ್ಣ ವ್ಯವಸ್ಥೆಯ ಪರಿಪಾಲನೆ ಮೇಲ್ನೋಟಕ್ಕೆ ಕಂಡುಬಂದರೂ ಪರಸ್ಪರರು ವೃತ್ತಿಗಳನ್ನವಲಂಬಿಸಲು ನಿರ್ಬಂಧಗಳಿರಲಿಲ್ಲ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಬ್ರಾಹ್ಮಣರಿಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳಿದ್ದವು. ಮನುಸ್ಮೃತಿಯಲ್ಲಿ ಅಧ್ಯಾಪನ, ಅಧ್ಯಯನ ಯಜ್ಞ ಮಾಡುವುದು ಮತ್ತು ಯಜ್ಞ ಮಾಡಿಸುವುದು, ದಾನ ಕೊಡುವುದು ಮತ್ತು ಸ್ವೀಕರಿಸುವುದು. ಬ್ರಾಹ್ಮಣರ ೬ ಕರ್ಮಗಳೆಂದು ಹೇಳಲಾಗಿದೆ.[೧೦] ಹೀಗೆ ಷಟ್ಕರ್ಮ ನಿರತರಾಗಿದ್ದ ಮತ್ತು ರಾಜಕೀಯ ಧಾರ್ಮಿಕ, ಸಾಮಾಜಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರಿತಿಷ್ಠರಾಗಿದ್ದ ಅವರನ್ನು ಕ್ಷತ್ರೀಯ,

ವೈಶ್ಯ ಮತ್ತು ಶೂದ್ರರು ಗೌರವಿಸುತ್ತಿದ್ದರಲ್ಲದೇ ಅವರು ವಿದ್ಯಾಭ್ಯಾಸವನ್ನು ಮುಂದುವರಿಸಲೆಂದು ದಾನದತ್ತಿಗಳನ್ನು (ಬ್ರಹ್ಮದೇಯ, ಬ್ರಹ್ಮಪುರಿ,ಅಗ್ರಹಾರ ಇತ್ಯಾದಿ) ನೀಡುತ್ತಿದ್ದ ವಿಚಾರ ಸಮಕಾಲೀನ ಶಾಸನ ಮತ್ತು ಸಾಹಿತ್ಯಿಕ ಕುರುಹುಗಳಿಂದ ಸ್ಪಷ್ಟವಾಗುತ್ತದೆ. ಶಿರಹಟ್ಟಿ ಪರಿಸರದ ಶಾಸನಗಳಲ್ಲಿ ಬೆಳ್ಳಟ್ಟಿ ಹೊಯ್ಸಳ ೨ ನೇಯ ನರಸಿಂಹನದಾಗಿದ್ದು. ಅದರಲ್ಲಿ ಮಲ್ಲಿ ಗಾವುಂಡನು ಬ್ರಹ್ಮಪುರಿಯಲ್ಲಿ ಮಾದವ ದೇವರನ್ನು ಸ್ಥಾಪಿಸಿ ಭೂದಾನ ಬಿಟ್ಟ ವಿವರಗಳನ್ನು ಸ್ಪಷ್ಟಪಡಿಸುತ್ತವೆ.

ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ಷತ್ರಿಯರನ್ನು ಬ್ರಾಹ್ಮಣರ ತರುವಾಯ ಸ್ಥಾನದಲ್ಲಿ ಗುರುತಿಸಲಾಗುತ್ತಿತ್ತು. ಕನ್ನಡ ನಾಡಿನಲ್ಲಿ ಆಳ್ವಿಕೆ ಕೈಗೊಂಡಿದ್ದ ಆಳರಸಾದಿಗಳು ತಮ್ಮನ್ನು ಕ್ಷತ್ರಿಯರೆಂದು ಕರೆದುಕೊಂಡಿದ್ದರು. ಹಾಗೆ ಕರೆದುಕೊಳ್ಳುವುದರಲ್ಲಿ ಅಂತಹ ಉತ್ಸಾಹ ತೋರಿಲ್ಲ. ಶಿರಹಟ್ಟಿ ಪರಿಸರದಲ್ಲಿ ಕ್ಷತ್ರಿಯರನ್ನು ಪ್ರತ್ಯೇಕವಾಗಿ ಗುರುತಿಸುವ ಶಾಸನ ಉಲ್ಲೇಖಗಳು ಲಭ್ಯವಿಲ್ಲ. ಆದರೂ ಆಳರಸಾದಿ ಆಡಳಿತ ವರ್ಗದವರನ್ನು ಕ್ಷತ್ರಿಯರೆಂದು ಪರಿಗಣಿಸಬಹುದು.[೧೧]

ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ವೈಶ್ಯರನ್ನು ಕ್ಷತ್ರಿಯರ ತರುವಾಯದ ಸ್ಥಾನದಲ್ಲಿ ಗುರುತಿಸಲಾಗುತ್ತಿತ್ತು. ಮನುಸ್ಮೃತಿಯಲ್ಲಿ ಪಶುಪಾಲನೆ, ದಾನ ಕೊಡುವುದು, ಯಜ್ಞ ಮಾಡುವುದು ಮತ್ತು ಅಧ್ಯಯನ ಮಾಡುವುದು, ನೆಲ-ಜಲಗಳಲ್ಲಿ ವ್ಯಾಪಾರ ಮಾಡುವುದು, ಬಡ್ಡಿಸಾಲ ಕೊಡುವುದು, ಮತ್ತು ಕೃಷಿಯಲ್ಲಿ ತೊಡಗುವುದು ವೈಶ್ಯರ ಕರ್ತವ್ಯಗಳೆಂದು ಹೇಳಲಾಗಿದೆ.[೧೨] ಕನ್ನಡನಾಡಿನ ಸಂದರ್ಭದಲ್ಲಿ ವ್ಯಾಪಾರಿಗಳು ತಮ್ಮನ್ನು ವೈಶ್ಯರೆಂದು ಕರೆದುಕೊಂಡಿಲ್ಲ. ಆದರೂ ಈ ಮೇಲಿನ ಕರ್ತವ್ಯಗಳನ್ನು ಮೈಗೂಡಿಸಿಕೊಂಡುವರನ್ನು ಸಾಮಾನ್ಯವಾಗಿ ವೈಶ್ಯರೆಂದೇ ಗುರುತಿಸಲಾಗಿದೆ.

ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರರನ್ನು ವೈಶ್ಯರ ತರುವಾಯ ಸ್ಥಾನದಲ್ಲಿ ಗುರುತಿಸಲಾಗುತ್ತಿತ್ತು. ಮನುಸ್ಮೃತಿಯಲ್ಲಿ ಬ್ರಹ್ಮನು, ಬ್ರಾಹ್ಮಣ, ಕ್ಷತ್ರಿಯ, ಮತ್ತು ವೈಶ್ಯರ ನಿಸ್ವಾರ್ಥಸೇವೆ ಮಾಡಿಕೊಂಡಿರುವುದೇ ಶೂದ್ರರರ ಕರ್ತವ್ಯವೆಂದು ಆದೇಶಿಸಿದ್ದಾನೆಂದು ಹೇಳಲಾಗಿದೆ.[೧೩] ಶಿರಹಟ್ಟಿ ಪರಿಸರದ ಶಾಸನಗಳಲ್ಲಿ ಇವರನ್ನು ಪ್ರತ್ಯೇಕವಾಗಿ ಗುರುತಿಸುವ ಉಲ್ಲೇಖಗಳು ದೊರೆಯುವದಿಲ್ಲ. ಆದರೂ ಸಮಕಾಲೀನ ಸೈನ್ಯ ಪಡೆಗಳಲ್ಲಿ ದೇವಾಲಯಗಳ ನಿರ್ಮಾಣ, ಶಿಲ್ಪ ಮತ್ತು ಶಾಸನಗಳ ಕಂಡರಣೆ ಒಕ್ಕಲುತನ ಮೊದಲಾದ ಚಟುವಟಿಕೆಗಳಲ್ಲಿ ಇವರ ಸೇವೆಯನ್ನು ಮರೆಯುವಂತಿಲ್ಲ.

೭.೫ ಸ್ತ್ರೀಯರ ಸ್ಥಾನಮಾನ.

ಭಾರತೀಯ ಸಂಸ್ಕೃತಿಯುದ್ದಕ್ಕೂ ಸ್ತ್ರೀಯರನ್ನು ಗೌರವಿಸುತ್ತ ಬಂದಿರುವುದು ಸಮಕಾಲೀನ ಸಾಹಿತ್ಯಿಕ ಮತ್ತು ಶಾಸನಾದಿ ಪುರಾತತ್ವ ಕುರುಹುಗಳು ದೃಡಪಡಿಸುತ್ತವೆ. ಸ್ತ್ರೀಯರಲ್ಲಿ ಕೆಲವರು ಸ್ಥಾನಬಲದಿಂದ ಪ್ರಾಮುಖ್ಯತೆ ಪಡೆದರೇ, ಇನ್ನೂ ಕೆಲವರು ಸ್ವ-ಕಾರ್ಯಬಲದಿಂದ

ಪ್ರಾಮುಖ್ಯತೆ ಪಡೆದಿದ್ದಾರೆ. ಕನ್ನಡ ನಾಡಿನ ಸಂದರ್ಭದಲ್ಲಿ ಸ್ತ್ರೀಯರು ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಾಧನೆಗೈದಿದ್ದಾರೆ.[೧೮] ಹೆಬ್ಬಾಳದ ಕ್ರಿ.ಶ. ೯೨೫ ರ ಶಾಸನದಲ್ಲಿ ಮಾರಸಿಂಹನ ಅಜ್ಜಿಯಾದ ಜುಬ್ಬಬ್ಬರಸಿಯಿಂದ ಶಿವಾದೇವಾಲಯ ನಿರ್ಮಾಣ ಹಾಗೂ ಭೂದಾನ ವಿಷಯ ತಿಳಿಸುತ್ತದೆ. ಹೀಗೆ ಶಿರಹಟ್ಟಿಯ ಪರಸರದ ಕೆಲವು ಶಾಸನಗಳಲ್ಲಿ ಸ್ತ್ರೀಯರ ಉಲ್ಲೇಖಗಳಿವೆ.

೨.೩ ಸಾಹಿತ್ಯಿಕ

ವೇದಗಳ ಕಾಲದಿಂದಲೂ ಸಾಹಿತ್ಯಕ್ಕೆ ಸಮಾಜದಲ್ಲಿ ಸಾಕಷ್ಟು ಪ್ರೊತ್ಸಾಹ ನೀಡಿರುವುದು ಕಂಡುಬರುತ್ತದೆ. ಕನ್ನಡ ನಾಡಿನ ಅನೇಕ ಶಾಸನಗಳಲ್ಲಿ ಪಂಡಿತರ, ವಿದ್ವಜ್ಜನರ ಉಲ್ಲೇಖಗಳು ಗೋಚರಿಸುತ್ತವೆ. ಚಿಕ್ಕಸವಣೂರಿನ ೧೮ ನೇ ಶತಮಾನದ ಶಾಸನದಲ್ಲಿ ಈ ಕೆಳಗಿನ ಕವಿತೆಯ ಉಲ್ಲೇಖವಿದೆ. ಮಕ್ಕಳ ಆಟದಲ್ಲಿಯ ಹಾಡು ಇದ್ದಂತೆ ತೋರುತ್ತದೆ. ('ಬನ್ನಿಕೊಪ್ಪದ') ಖಾನಪ್ಪಗೌಡನಿಂದ ವೀರಭದ್ರ ದೇವಾಲಯದ ಕೋಶದ ನಿರ್ಮಾಣ. ಇದರಿಂದ ಸಾಹಿತ್ಯವು ಇತ್ತೆಂದು ಸ್ಪಷ್ಟಪಡಿಸುತ್ತದೆ. ಶಿರಹಟ್ಟಿ ಪರಿಸರದಲ್ಲಿ ಕೆಲವು ಶಾಸನಗಳಲ್ಲಿ ಸ್ತ್ರೀಯರ ಉಲ್ಲೇಖಗಳಿವೆ.

೩.೨ ಆರ್ಥಿಕ

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆ ಸ್ಥಳೀಯ ಪ್ರಾಕೃತಿಕ ಸಂಪತ್ತು ಮೂಲಭೂತ ಸೌಕರ್ಯಗಳು ಮತ್ತು ಜನರ ದುಡಿಮೆಯನ್ನು ಅವಲಂಬಿಸಿರುತ್ತದೆ. ಈ ವ್ಯವಸ್ಥೆಗನುಗುಣವಾಗಿ ಆ ಪ್ರದೇಶದ ಜನರ ಜೀವನ ವಿಧಾನ ನಿರ್ಧರಿತವಾಗುತ್ತದೆ. ಈ ನಿಟ್ಟಿನಲ್ಲಿ ಸಾಹಿತ್ಯಿಕ ಮತ್ತು ಶಾಸನಾದಿ ಪುರಾತತ್ವ ಕುರುಹುಗಳು ಸಮಕಾಲೀನ ಆರ್ಥಿಕ ವ್ಯವಸ್ಥೆಯನ್ನರಿಯಲು ವಿಫುಲವಾದ ಸಾಮಗ್ರಿಯನ್ನೊದಗಿಸುತ್ತದೆ. ಶಿರಹಟ್ಟಿ ಪರಿಸರದ ಶಾಸನಗಳ ಹಿನ್ನಲೆಯಲ್ಲಿ ಸ್ಥಳೀಯ ಆರ್ಥಿಕ ವ್ಯವಸ್ಥೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಸಮಕಾಲೀನ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಭೂಮಿ ಪ್ರಮುಖ ಸ್ಥಾನ ಪಡೆದಿತ್ತು ಶಿರಹಟ್ಟಿ ಪರಿಸರದ ಬಹುತೇಕ ಶಾಸನಗಳೆಲ್ಲವೂ ಭೂದಾನಕ್ಕೆ ಸಂಬಂಧಿಸಿವೆ. ಇದರಿಂದಾಗಿ ದಾನವಾಗಿ ಕೊಡುವ ವಸ್ತುಗಳಲ್ಲಿ ಭೂಮಿ ಶ್ರೇಷ್ಟವಾದ ವಸ್ತುವಾಗಿತ್ತೆಂಬುದು ಮನದಟ್ಟಾಗುತ್ತದೆ. ಅಲ್ಲದೇ ಅಂದು ವ್ಯವಸಾಯವೇ ಜೀವನೋಪಾಯದ ಪ್ರಮುಖ ಉದ್ಯೋಗವಾಗಿತ್ತೆಂಬ ವಿಚಾರ ಸ್ಪಷ್ಟವಾಗುತ್ತದೆ. ವ್ಯವಸಾಯ ಮಾಡುತ್ತಿದ್ದ ರೈತರನ್ನು ಒಕ್ಕಲ ಮಕ್ಕಳು ಎಂದೇ ಕರೆಯಲಾಗುತ್ತಿತ್ತು. ಈ ಪರಿಸರದಲ್ಲಿ ಒಣ ಬೇಸಾಯ ಭೂಮಿ ಮತ್ತು ನೀರಾವರಿ ಬೇಸಾಯ ಭೂಮಿಗಳೆರಡೂ ಕಂಡುಬರುತ್ತವೆ. ಇದನ್ನೇ ಸಮಕಾಲಿನ ಶಾಸನಗಳಲ್ಲಿ ಕ್ರಮವಾಗಿ ಬೆದ್ದಲೆ ಭೂಮಿ ಮತ್ತು ಗದ್ದೆ ಎಂದು ಕರೆಯಲಾಗಿದೆ. ಈ ಪರಿಸರದಲ್ಲಿ ಶಾಸನೋಕ್ತ ಗದ್ದೆ ಮತ್ತು ತೋಟಗಳಿದ್ದ ಭೂಮಿಗಳು ನೀರಾವರಿ ವ್ಯವಸ್ಥೆಯನ್ನು ಪಡೆದಿದ್ದವು. ಕನ್ನಡ ನಾಡಿನಲ್ಲಿ ಕ್ರಿ.ಶ.

ಸುಮಾರು ೬ನೇಯ ಶತಮಾನದಿಂದ ೧೦ನೆಯ ಶತಮಾನದ ವರೆಗೂ ಕೃಷಿ ವಿಸ್ತರಣೆ ಚಟುವಟಿಕೆಗಳು ವಿಶೇಷವಾಗಿ ಜರುಗಿವೆ. ಇದನ್ನು ಸಮಕಾಲೀನ ಗೋಸಾಸಗಲ್ಲು ಶಾಸನಗಳು ಮತ್ತು ಅವುಗಳನ್ನು ನಿಲ್ಲಿಸುತ್ತಿದ್ದ ಪರಿಕಲ್ಪನೆ ಪರೋಕ್ಷವಾಗಿ ದೃಡಪಡಿಸುತ್ತವೆ.

ಈ ಪರಿಸರದ ಬೆಳ್ಳಟ್ಟಿ ವ್ಯಾಪಾರ ಮಧ್ಯವರ್ತಿ ಸ್ಥಳವಾಗಿದೆ. ಇದು ಬಹುದೊಡ್ಡ ವ್ಯಾಪಾರ ಕೇಂದ್ರ. ಒಕ್ಕುಲುತನದಿಂದ ಪ್ರಸಿದ್ಧ ಶೇಂಗಾ ಬೆಳೆಯ ತಾಣ ತುಂಗಭದ್ರಾ ನದಿ ದಡದಿಂದ ಹಿಡಿದು ಐವತ್ತು ಗ್ರಾಮಗಳವರೆಗೆ ಸಂಪರ್ಕವಿರುವ ಕೇಂದ್ರಬಿಂದುವಾಗಿತ್ತು. ಹಾಗೂ ಬನ್ನಿಕೊಪ್ಪವು ಈ ಹಿಂದೆ ಗಾಜಿನ ಬೆಳೆ ತಯಾರಿಸುವ ಕೇಂದ್ರವಾಗಿತ್ತು, ಬೃಹತ್ ನೀರಾವರಿ ಕಬ್ಬು ಬೆಳೆಗಾರರ ತಾಣ ಮತ್ತು ಹಿಂದೆ ಇದು ಬೆಲ್ಲ ತಯಾರಿಸುವ ದೊಡ್ಡ ಕೇಂದ್ರವಾಗಿತ್ತು.

ಖನೀಜ, ಅರಣ್ಯ, ಔಷಧ, ಪಶುಪಕ್ಷಿ, ಸಂಪತ್ತುಳ್ಳ ಕಪ್ಪತ್ತಗುಡ್ಡ (ಎಪ್ಪತ್ತು ಗಿರಿ ನೋಡುವದಕ್ಕಿಂತ ಕಪ್ಪತ್ತಗಿರಿ ನೋಡು) ಜಿಲ್ಲೆಯ ಶಿರಹಟ್ಟಿ, ಗದಗ ಮುಂಡರಗಿ ತಾಲೂಕು ಕ್ಷೇತ್ರಗಳಲ್ಲಿ ವಿಸ್ತರಿಸಿದೆ. ಶಿರಹಟ್ಟಿಯ ಭಾಗ ವಿಶೇಷವಾಗಿದೆ. ಇಲ್ಲಿ ಮ್ಯಾಂನೀಜ್ (ಕಬ್ಬಿಣ) ಬಂಗಾರ, ಸತುವು, ತಾಮ್ರ, ಮುಂತಾದ ಖನಿಜ ಸಂಪತ್ತು ದೊರೆಯುತ್ತವೆ. ಮಜ್ಜೂರಿನಲ್ಲಿ, ಬಿಳಿಮಣ್ಣಿನ ಖಣಿ ಔಷಧ ವನಸ್ಪತಿಗಳು ಸಹಸ್ರ ಪೂವಿ (ಸಹಸ್ರ ವರ್ಷ) ಶತಪೂವಿ (ನೂರು ವರ್ಷ) ಹುದಿಗಿಟ್ಟ ಔಷಧಗಳು ಇವೆ. ಇಲ್ಲಿ ಕೆಲವು ಅಂತರ್ಜಲಗಳು ಅವು ಭೂಮಿಯಲ್ಲಿ ಲುಮಾ, ಖನಿಜ, ವನಸ್ಪತಿ, ಗಿಡಗಳು ಬೇರಿನ ಮುಖಾಂತರ ಹೊರಗೆ ಬರುತ್ತಿದ್ದು, ಅದರಿಂದ ಕ್ಯಾನ್ಸರ, ಕ್ಷಯರೋಗ, ಕುಷ್ಟರೋಗ, ಮುಂತಾದ ರೋಗಗಳು ವಾಸಿಯಾಗುವ ಶಕ್ತಿ ಈ ಜಲದಲ್ಲಿದೆ. ಈ ಪರಿಸರದಲ್ಲಿ ಅರ್ಧಭಾಗ ಶೇಂಗಾ ಬೆಳೆ ಉಳಿದರ್ಧ ಭಾಗ ಹತ್ತಿ, ಗೋದಿ, ಕಡಲೆ, ಮೆಣಸಿನಕಾಯಿ, ಉಳ್ಳಾಗಡ್ಡಿ, ಬಿಳಿಜೋಳ, ಬೆಳೆಯುತ್ತಾರೆ. ಪರಿಸರದ ಪೂರ್ವಭಾಗ ತುಂಗಭದ್ರಾ ದಂಡೆ ಇಟಗಿ, ಸಾಸಲವಾಡ, ಹೆಬ್ಬಾಳದ, ಜನರು ಚಿಕ್ಕ ಆಣೆಕಟ್ಟು ಕೆರೆಯ ಜಲಾಶಯಗಳಿಂದ ನೀರಾವರಿ ಮಾಡುತ್ತಾರೆ.

ಬೆಳಗಟ್ಟಿ ಎಂಬ ಗ್ರಾಮದ ಪಕ್ಕದ ಕಾಲಗಡಗಿ (ಬಳಪ, ಬೆಣ್ಣೆಕಲ್ಲು) ಕಲ್ಲಿನ ಗುಡ್ಡದ ಖಣಿ ಇದ್ದು ಇಲ್ಲಿ ಕಲ್ಲಿನ ಗಡುಗೆ, ಮಡಿಕೆ, ಹಂಚು ತಯಾರಿಕೆ ಇದ್ದು, ಹೊರ ರಾಜ್ಯಗಳಿಗೆ ಕಳಸುವ ಮಾದರಿ ಕೈಗಾರಿಕಾ ಕೇಂದ್ರವಿದೆ. ಹಬ್ಬಾಳದಲ್ಲಿ ಬಡಿಗೇರ, ಪತ್ತಾರ, ಅಕ್ಕಸಾಲಿಗ ಮನೆತನದವರ ಪ್ರಮುಖ ವ್ಯಾಪಾರವೆಂದರೆ ಕಲ್ಲಿನ ವಿಗ್ರಹಗಳನ್ನು ಮತ್ತು ಶಿಲ್ಪ ಕೆತ್ತನೆಮಾಡಿ ಅವುಗಳನ್ನು ೧ ಲಕ್ಷದಿಂದ ೫ ಲಕ್ಷದವರೆಗೂ ಮಾರಾಟಮಾಡುತ್ತಾರೆ. ಈ ಪರಿಸರವು ಶಿಲ್ಪ ಕಲಾಕಾರರಿಗೆ ಪ್ರಸಿದ್ಧವಾಗಿದೆ. ಇಟಗಿಯು ರಾಜ್ಯದ ಪ್ರಮುಖ ಸ್ಥಳಗಳಿಗೆ ಮರಳನ್ನು (ಹೊಳೆ ಉಸುಗು) ಸಂಗ್ರಹಿಸಿ ವಿತರಿಸುವ ಕೇಂದ್ರವಾಗಿದೆ. ಪರಿಸರದಲ್ಲಿ ಕಲೆವು ಗುಡ್ಡ ಬೆಟ್ಟಗಳಲ್ಲಿ ಶಿಲೆಗಳು ಇರುವುದರಿಂದ ಕಲ್ಲು ಹಾಗೂ ಖಡಿ, ಪಾವಡರ್ ತಯಾರಿಸುವ ಕ್ರೇಶರ್ ಯಂತ್ರಗಳಿವೆ. ಆಂಧ್ರಪ್ರದೇಶ, ತಮಿಳುನಾಡಿನ ಅನೇಕ ಜನ ಇಲ್ಲಿ ನೆಲೆಸಿ, ಈ ಕೆಲಸದಿಂದ ಜೀವನ ಸಾಗಿಸುತ್ತಿದ್ದಾರೆ ಶಿರಹಟ್ಟಿ ಪರಿಸರದ

ಪರಸಾಪುರದಲ್ಲಿ ಬೃಹತ್ ಪ್ರಮಾಣದ ವಿದ್ಯುತ್ ಕಂಬಗಳನ್ನು ತಯಾರಿಸುವ ಕಾರ್ಖಾನೆ ಇದ್ದು, (ಇದಕ್ಕೆ ಬೇಕಾಗುವ ಸಂಪನ್ಮೂಲಗಳು ಇಲ್ಲಿಯೇ ಲಭ್ಯವಾಗುತ್ತವೆ) ರಾಜಸ್ಥಾನ, ಮಧ್ಯಪ್ರದೇಶ, ತಮಿಳುನಾಡು, ಆಂಧ್ರಪ್ರದೇಶದವರೆಗೆ ಈ ಕಂಬಗಳ ಸರಬರಾಜು ನೆಡೆಯುತ್ತದೆ. ಇಂದು ಫ್ಯಾನುಗಳ ಮುಖಾಂತರ ಗಾಳಿವಿದ್ಯುತ ತಯಾರಿಸುವ ಪ್ರಮುಖ ಸ್ಥಳವಾಗಿದೆ.[೧೬]

ಗುಡಿ ಕೈಗಾರಿಕೆಗಳಿಂದ ಮಹಿಳೆಯರು ತಮ್ಮ ಆರ್ಥಿಕ ಪರಿಸ್ಥಿತಿಯನ್ನೇ ಸುಧಾರಿಸಿಕೊಳ್ಳುವರು. ಶಿರಹಟ್ಟಿ, ಮಾಗಡಿ, ಹೆಬ್ಬಾಳ ಹಾಗೂ ಬೆಳ್ಳಟ್ಟಿಯಲ್ಲಿ ಎಣ್ಣೆಯ ಗಿರಣಿಗಳಿವೆ. ನೇಕಾರಿಕೆಯು ಪ್ರಮುಖ ಉದ್ಯೋಗ. ಬಡಿಗತನ, ಕಮ್ಮಾರಿಕೆ, ಚಮ್ಮಾರಿಕೆ, ಕುಂಬಾರಿಕೆ ಮೊದಲಾದ ಗ್ರಾಮೀಣ ಕೈಗಾರಿಕೆಗಳು ಹುಟ್ಟು ಸಾವಿನ ಮಧ್ಯೆ ಉಸಿರಾಡುತ್ತಾ ಮುಂದುವರೆದಿದೆ.

ಕುರಿ ಸಾಕಾಣಿಕೆ ಪ್ರಮುಖ ಉದ್ಯೋಗ ಶಿರಹಟ್ಟಿ, ಬಟ್ಟೂರು, ಛಬ್ಬಿ ಗ್ರಾಮಗಳಲ್ಲಿ ಉಣ್ಣೆ ಉತ್ಪಾದನಾ ಸಹಕಾರಿ ಸಂಘಗಳಿವೆ. ಹಾಲು ಉತ್ಪಾದಕರಿಂದ ಹಾಗೂ ಕೋಳಿ ಸಾಕಾಣಿಕೆ, ರೇಷ್ಮೇ ಸಾಕಾಣಿಕೆ ಈ ಕಾಯಕಗಳು ಪ್ರಗಥಿ ಪಥದಿಲ್ಲವೆ. ಶಿರಹಟ್ಟಿ ಪರಿಸರವು ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ರಂಗಗಳಲ್ಲಿ ತನ್ನದೇ ಆದ ಮಹತ್ವವನ್ನೇ ಪಡೆದುಕೊಳ್ಳುತ್ತ ಯಶಸ್ಸು ಹೊಂದಿದೆ. ಕೃಷಿ, ಕೈಗಾರಿಕೆ, ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿಪರ ದಾಪುಗಾಲು ಹಾಕಿ ಸಾಗುತ್ತಿದೆ. ಪಂಚಾಯತಿ ರಾಜ್ಯ ವ್ಯವಸ್ಥೆಯು ಪ್ರತಿ ಗ್ರಾಮಗಳ ಆರ್ಥಿಕತೆಯಲ್ಲಿ ಸುಧಾರಿಸುತ್ತವೆ. ಹಳ್ಳಿಗಳು ಹಿಂದಿಗಿಂತ ಇಂದು ಆರ್ಥಿಕವಾಗಿ ಪ್ರಬಲಗೊಂಡಿವೆ. ಸಂಗೀತ, ಕಲೆ, ಸಾಹಿತ್ಯದಲ್ಲೂ ಅಮೂಲ್ಯ ಕೊಡುಗೆ ನೀಡಿವೆ. ಕ್ರೀಡಾರಂಗ, ಪ್ರಕಾಶನ ಸಂಸ್ಥೆ, ಪತ್ರಿಕೋದ್ಯಮ ಮುಂತಾದವುಗಳಿಂದ ಹಿರಿಮೆಯನ್ನೇ ಗಳಿಸಿವೆ.[೧೭]

ಕನ್ನಡನಾಡಿನಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ಕಾಲಾವಧಿಗಳಲ್ಲಿ ಪ್ರಚಲಿತದಲ್ಲಿದ್ದ ಹಲವು ಬಗೆಯ ನಾಣ್ಯಗಳು (ಗದ್ಯಾಣ, ಪಣ, ಅಡ್ಡ, ಹಾಗ, ವೀಸ, ಬೇಳೆ, ಕಾಕಿಣಿ, ನಿಷ್ಕ, ಸುವರ್ಣ, ದಾರಣ, ದಮ್ಮ, ದಿನಾರ, ಪುಷ್ಪ, ಸಲಿಕೆ, ಗುಳಿಕೆ, ಚೌಲ, ದಾರಣಿ, ಗಾವಲಿ, ಕಾಣಿ, ವಲ, ಒನ್ನು, ಕಾಸು, ಕಳಂಜು, ಮುಂಜಾಡಿ ಅಕ್ಕಂ ಇತ್ಯಾದಿ) ಶಿರಹಟ್ಟಿ ಪರಸರದಲ್ಲಿ ಬಳಕೆಯಲ್ಲಿದ್ದವು ಅವುಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನೇ ಕಮ್ಮಟ, ಅಚ್ಚಿನ ಟಂಕಸಾಲೆ ಎಂದೇ ಕರೆಯಲಾಗುತ್ತಿತ್ತು. ತಮ್ಮನ್ನು ವಿಶ್ವಕರ್ಮರೆಂದೇ ಕರೆದುಕೊಳ್ಳುತ್ತಿದ್ದ ಅರ್ಕಸಾಲಿಗರು ಅಂಥಹ ಕಮ್ಮಟಗಳಲ್ಲಿ ಕಾರ್ಯ ನಿರ್ವಹಿಸಿದ್ದರು.[೧೮]

ಹೀಗೆ ಶಿರಹಟ್ಟಿ ಪರಿಸರದ ಶಾಸನಗಳು, ಸಮಕಾಲಿನ ರಾಜಕೀಯ, ಆಡಳಿತ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ, ವಾಸ್ತುಕಲೆ, ಶಿಲ್ಪಕಲೆ ಮೊದಲಾದ ಕ್ಷೇತ್ರಗಳ ವಿವಿಧ ಮುಖಗಳ ಪುನರಾವಲೋಕನಕ್ಕೆ ಬಹು ಮಹತ್ವದ ವಿವರಣೆಗಳನ್ನೇ ಕೊಡುತ್ತದೆ. ಹೀಗಾಗಿ ಈ ಶಾಸನಗಳು ಶಿರಹಟ್ಟಿ ಪರಿಸರದ ಮಹತ್ವವನ್ನೇ ತಿಳಿಸುತ್ತವೆ.

ಟಿಪ್ಪಣಿಗಳು :

೧) "ಕನ್ನಡ ಶಾಸನಗಳ ಸಾಂಸ್ಕೃತಿಕ ಅದ್ಯಯನ", ಪು. ೫೧

೨) "ಶಾಸನ ಶಾಸ್ತ್ರ", ಪು ೩೮-೩೯

೩) "ಪೂರ್ವೋಕ್ತ", ಪು. ೫೨

೪) "ಮಾರ್ಗ ಸಂ-೩", ಪು. ೧೪-೫೫.

೫) "ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ", ಪು. ೧೩-೧೭.

೬) "ಧಾರವಾಡ ಜಿಲ್ಲಾ ಶಾಸನ ಸೂಚಿ", ಪು-೩೬-೩೯

೭) "ವಿಷ್ಣುಕಲ್ಟ ಇನ್ ಕರ್ನಾಟಕ", ಪು. ೧೦

೮) ಶಿಗ್ಗಾಂವ ಪ್ರದೇಶದ ಪುರಾತತ್ವ ಪು. ೨೮೬ ರಿಂದ ೨೯೦.

೯) "ಕನ್ನಡ ಶಾಸನಗಳ ಸಂಸ್ಕೃತ ಅಧ್ಯಯನ" ಪು- ೪೩೦ ರಿಂದ ೪೩೧.

೧೦) ಮನುಸ್ಮೃತಿ, ಪ.ಸ. ೮೯. ಪು. ೨೦.

೧೧) ಅದೇ

೧೨) ಅದೇ.

೧೩) ಅದೇ.

೧೪) "ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ" ,ಪು.ಸ ೭ ರಿಂದ ೮

೧೫) ಲಕ್ಕುಂಡಿ ಉತ್ಸವ, ಸ್ಮರಣ ಸಂಚಿಕೆ, ಪುಟ ೮೫ ರಿಂದ ೮೭.

೧೬) "ಕಪೋತಗಿರಿ", ಪು. ೯೨ ರಿಂದ ೯೩

೧೭) "ಪೂರ್ವೋಕ್ತ", ಪು. ೩೮೯.

ಅಧ್ಯಾಯ : ೭

ಸಾಂಸ್ಕೃತಿಕ ಚಿತ್ರಣ

೭.೧ ಜಾತ್ರೆಗಳು

೭.೨ ಉತ್ಸವಗಳು

೭.೩ ಆಚರಣೆಗಳು

೭.೪ ನಂಬಿಕೆಗಳು

೭.೫ ನಾಟಕ ಕಲೆ

೭.೬ ಶಿಲಾ ಸ್ಮಾರಕಗಳು

ಅಧ್ಯಾಯ – ೭

ಸಾಂಸ್ಕೃತಿಕ ಚಿತ್ರಣ

೭.೧ ಜಾತ್ರೆಗಳು

ಸಾಮಾನ್ಯವಾಗಿ ಪ್ರತಿವರ್ಷ ಸುಗ್ಗಿಯ ಕಾಲದಲ್ಲಿ ಗ್ರಾಮದೇವತೆಗಳಿಗೆ ಜನರು ತಮ್ಮ ಭಕ್ತಿ ಗೌರವವನ್ನು ಸಲ್ಲಿಸುವ ಸಲುವಾಗಿ ಜಾತ್ರೆಗಳನ್ನು ನಡೆಸುವುದು ಸ್ವಾಭಾವಿಕವಾಗಿ ಕಂಡು ಬರುತ್ತವೆ. ಹಿಂದೂಗಳ ದೇವಸ್ಥಾನಗಳಲ್ಲಿ, ಮುಸಲ್ಮಾನರ ದರ್ಗಾಗಳಲ್ಲಿ ಹಾಗೂ ಇತರೆ ಪವಿತ್ರ ಪೂಜಾ ಸ್ಥಳಗಳಲ್ಲಿ ಜನರು ವಾರ್ಷಿಕ ಉತ್ಸವಗಳನ್ನು ಏರ್ಪಡಿಸುವರು. ಹಳ್ಳಿ ಪಟ್ಟಣಗಳೆಂಬ, ಜಾತಿ ಮತಗಳೆಂಬ ಬೇಧ ಭಾವವಿಲ್ಲದೇ ಸ್ತ್ರೀ ಪುರುಷರು ಜಾತ್ರೆಗಳಲ್ಲಿ ಭಾಗವಹಿಸುವುದು ಒಂದು ವೈಶಿಷ್ಟ್ಯವಾಗಿದೆ. ಜಾತ್ರೆಗಳು ಸಾಮಾಜಿಕ ಜೀವನದ ಒಂದು ಪ್ರಧಾನ ಅಂಶವಾಗಿದ್ದು, ಇದರಲ್ಲಿ ಪಾಲ್ಗೊಳ್ಳುವ ಜನರಿಗೆ ಮನರಂಜೆಯನ್ನೇ ಒದಗಿಸುತ್ತದೆ. ಜಾತ್ರೆಯ ಸಮಯದಲ್ಲಿ ಉತ್ಸವ ಮೂರ್ತಿಯನ್ನೆ ರಥದಲ್ಲಿ ಇರಿಸಿ ಎಳೆದು ಅಥವಾ ಪಲ್ಲಕ್ಕಿಯಲ್ಲಿಟ್ಟು ಹೊತ್ತು ತಂದು ವಾದ್ಯಗಳ ಮೂಲಕ ಮೆರವಣಿಗೆ ಹೋಗುವರು. ಇದೇ ಸಂದರ್ಭದಲ್ಲಿ ಕೆಲವು ಕಡೆ ದನದ ಜಾತ್ರೆಯು ನಡೆಯುತ್ತದೆ. ಜಾತ್ರೆಗಳು ಗ್ರಾಮೀಣ ಜನರಿಗೆ ತಾವು ಉತ್ಪಾದಿಸಿದ ಸರಕುಗಳನ್ನು ಮಾರಾಟ ಮಾಡಲು ಹಾಗೂ ತಮಗೆ ಬೇಕಾದ ಪಾತ್ರೆ, ಪರಡಿ, ಬಳೆ, ಬಟ್ಟೆ ಬರೆ ಮುಂತಾದ ಸರಕುಗಳನ್ನು ಕೊಳ್ಳಲು ಅವಕಾಶವನ್ನು ಕಲ್ಪಿಸುತ್ತದೆ. ಮುಸ್ಲಿಂ ಸಂತರ ಸ್ಮರಣಾರ್ಥವಾಗಿ ಉರುಸುಗಳು ನಡೆಯುತ್ತವೆ. ಶಿರಹಟ್ಟಿ ಪರಿಸರದಲ್ಲಿ ನಡೆಯುವ ಪ್ರಮುಖ ಜಾತ್ರೆ ಮತ್ತು ಉರುಸುಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಈ ಶಿರಹಟ್ಟಿ ಪರಿಸರದಲ್ಲಿ ಪ್ರಮುಖವಾಗಿ ಶ್ರೀ ಜಗದ್ಗುರು ಫಕೀರಸ್ವಾಮಿಗಳ ಜಾತ್ರೆ, ವರವಿಯ ಮೌನೇಶ್ವರ ಜಾತ್ರೆ, ರಣತೂರಿನ ಮಾರುತಿದೇವರ ಜಾತ್ರೆ, ಸಾಸರವಾಡದ ಗಡ್ಡಿ ಬಸವೇಶ್ವರ ಜಾತ್ರೆ, ದ್ಯಾಮವ್ವನ ಜಾತ್ರೆ, ಹೊಳೆಇಟಗಿಯ ದ್ಯಾಮವ್ವನ ಜಾತ್ರೆ, ಸಂಗಮೇಶ್ವರ ಜಾತ್ರೆ, ವೆಂಕಟೇಶ್ವರ ಜಾತ್ರೆ, ಗೋವಿನಕೊಪ್ಪದ ಮಾರುತಿದೇವರ ಜಾತ್ರೆ, ಗಾಳೆಮ್ಮನ ಜಾತ್ರೆ, ಕೋಗನೂರಿನ ಕರಿಯಮ್ಮನ ಜಾತ್ರೆ, ನಾರಾಯಣಪುರದ ಬಸವೇಶ್ವರ ಜಾತ್ರೆ, ಛಬ್ಬಿ ಬೂಗೇಶ್ವರ ಜಾತ್ರೆ, ಹೆಬ್ಬಾಳದ ಹಾಲೇಶ್ವರ ಮಠದ ಜಾತ್ರೆಗಳು ಪ್ರಮುಖವಾಗಿವೆ.

೧. ಶಿರಹಟ್ಟಿಯ ಶ್ರೀ ಜಗದ್ಗುರು ಫಕೀರರೇಶ್ವರ ಮಠ

ಈ ಮಠದ ಜಾತ್ರೆಯು ಮೇ ೧೫ ವೈಶಾಖ ನಕ್ಷತ್ರದ ದಿವಸ ಅಂದರೆ ಆಗಿ ಹುಣ್ಣಿಮೆ ದಿವಸದಂದು ಶ್ರೀ ಜಗದ್ಗುರು ಫಕೀರರೇಶ್ವರ ಸ್ವಾಮಿಗಳ ಜಾತ್ರೆ ಪ್ರತಿ ವರ್ಷದಂತೆ ಈ ವರ್ಷವೂ ವಿಜೃಂಭಣೆಯಿಂದ ನೆರವೇರಿತು.[೧] ಈ ಮಠದ ಸಾಮರಸ್ಯ ಹಿಂದೂ ಮುಸ್ಲಿಮರು ಬೇದ

ಭಾವವಿಲ್ಲದೇ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಮುಸ್ಲಿಮರ ಓಣಿಯಲ್ಲಿನ ಮೆಹಬೂಬ ಸುಬಾನಿ ದರ್ಗಾ ಅದರದೇ ಆದ ಇತಿಹಾಸವನ್ನು ಒಳಗೊಂಡಿದೆ. ಹುಣ್ಣಿಮೆ ದಿವಸ ನಡೆಯುವ ರಥೋತ್ಸವದ ಕಳಸವನ್ನು ಮೊದಲ ಐದು ದಿವಸದಲ್ಲಿ ಕಳಸಾರೋಹಣ ಮಾಡುತ್ತಾರೆ ನಂತರ ೩-೪ ದಿವಸಕ್ಕೆ ರಥವನ್ನು ಹಸಿರು ಬಿಳಿ ಕೆಂಪು ಬಣ್ಣಗಳಿಂದ ಕೂಡಿದ ಧ್ವಜದ ಪಟಾಕಿಗಳನ್ನು ರಥಕ್ಕೆ ಕಟ್ಟುತ್ತಾರೆ. ಮತ್ತು ಅದಕ್ಕೆ ತೆಂಗಿನಗರಿ, ಬಾಳೆಗೊನೆ ಮತ್ತು ಹೂವಿನ ಸರಗಳಿಂದ ಅಲಂಕರಿಸುತ್ತಾರೆ. ಇಲ್ಲಿ ವಿಷೇಶವೆಂದರೆ ರಥಕ್ಕೆ ಕಳಸ ಇಡುವುದನ್ನು ಪೀಠಾಧಿಪತಿಗಳು ನೋಡಬಾರದು ಎಂಬ ಆಚರಣೆ ಇದೆ ಅದಕ್ಕಾಗಿ ಒಂದು ದಿವಸ ಮೊದಲೆ ಫಕೀರಸ್ವಾಮಿಗಳು ಶಿರಹಟ್ಟಿ ನಗರವನ್ನು ಬಿಟ್ಟು ಸುತ್ತಲೂ ಇರುವ ಗ್ರಾಮಗಳಿಗೆ ಹೋಗಿ ಪ್ರತಿಯೊಂದು ಮನೆಯಲ್ಲಿ ಭಿಕ್ಷಾಟನೆ ಎಂಬ ಹೆಸರಿನಲ್ಲಿ ಪ್ರಯಾಣ ಬೆಳೆಸುತ್ತಾರೆ. ರಥದ ಅಲಂಕಾರವನ್ನು ಮಠದ ಸಿಬ್ಬಂದಿಗಳು ಹಾಗೂ ಊರಿನ ಪ್ರಮುಖನಾದ ಫಕ್ಕೀರಪ್ಪ ಬಡಿಗೇರ ಅವರ ಸಂಬಂಧಿಕರು ಈ ಕಾರ್ಯವನ್ನು ಮಾಡುತ್ತಾರೆ. ರಥೋತ್ಸವದ ಮುನ್ನ ಹುತ್ತಪ್ಪಯ್ಯ ಎಂಬ ಲಘು ರಥೋತ್ಸವವನ್ನು ಎರಡು ಗಾಲಿಗಳ ಹೊಂದಿದ ಚಕ್ಕಡಿಯ ರೂಪದಲ್ಲಿ ಇರುವ ರಥದಲ್ಲಿ ಏಳು ಹೆಡೆಯುಳ್ಳ ಆದಿಶೇಷನನ್ನೆ ಇಟ್ಟು ಮಠದ ಪಶ್ಚಿಮಕ್ಕೆ ಇರುವ ಪಾದಗಟ್ಟಿಯವರೆಗೂ ಹೋಗಿ ನಂತರ ಆಗಿಹುಣ್ಣಿಮೆ ದಿವಸ ಬೆಳಗ್ಗೆ ಫಕೀರೇಶ್ವರ ಸ್ವಾಮಿಗಳು ಶಿರಹಟ್ಟಿ ನಗರವನ್ನು ಹರಿಪುರದ ಮೂಲಕ ಮ್ಯಾಗೇರಿಗೆ ಬರುತ್ತಾರೆ. ನಂತರ ಸ್ವಾಮಿಗಳು ಪಾದಗಟ್ಟಿ ಜಾಗದಲ್ಲಿ ವಿಶ್ರಾಂತಿ ಪಡೆಯುತ್ತಾರೆ.[೨] ಅಲ್ಲಿಂದ ಅಡ್ಡಪಲ್ಲಕ್ಕಿಯಲ್ಲಿ ಕುಳಿತುಕೊಂಡು ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾರೆ. ಇದರಲ್ಲಿ ಭಜನಾ ಮಂಡಳಿಗಳು, ಡೊಳ್ಳಿನ ಕುಣಿತ ವಾದ್ಯ ಸಂಗೀತದೊಂದಿಗೆ ಮೆರವಣಿಗೆ ಮಾಡುತ್ತಾರೆ. ಅಡ್ಡಪಲ್ಲಕ್ಕಿಯ ಮುಂದೆ ಆನೆಗಳು ಬೆಳ್ಳಿ ಚಾಮರದಿಂದ ಸ್ವಾಗತವನ್ನು ಕೋರುತ್ತವೆ. ಪಲ್ಲಕ್ಕಿಯ ಹಿಂದೆ ಸಿಂಗಾರಗೊಂಡ ಪಟ್ಟದ ಕುದುರೆ ಅದರ ನಂತರ ಇಬ್ಬರು ಭಕ್ತಾದಿಗಳು ಬೆಳ್ಳಿ ಚಾಮರದ ಮೂಲಕ ಸ್ವಾಗತವನ್ನು ಬಯಸುತ್ತಾರೆ. ನಂತರ ಪೀಠಸ್ತ ಸ್ವಾಮಿಗಳು ಪೇಠವನ್ನು ಮೂಗಿನ ತನಕ ಸುತ್ತಿಕೊಂಡು ಕುದುರೆಮೇಲೆ ಕುಳಿತುಕೊಂಡು ವೇಗವಾಗಿ ಓಡಿಸುತ್ತಾರೆ. ಕತೃವಿನ ಪೀಠಕ್ಕೆ ಬರುವ ವೇಳೆಗೆ ಅವರು ಬಣ್ಣಗಳಿಂದ ವರ್ಣಮಯವಾಗಿರುತ್ತಾರೆ. ನಂತರ ಸ್ವಾಮಿಗಳು ವೇಷ ಬದಲಿಸಿಕೊಂಡು ದಿಲ್ಲಿಯ ಅಕ್ಬರ ಭಾದಷಾನು ಕಾಣಿಕೆಯಾಗಿ ನೀಡಿದ ರಣಬಿಲ್ಲೆಯನ್ನು (ವಜ್ರ ಖಚಿತ) ಹಸಿರು ಪೋಷಾಕಿನ ಮೇಲೆ ಬಲಕಾಲಿಗೆ ಕಟ್ಟಿಕೊಂಡ ದೃಶ್ಯವನ್ನು ನೋಡುವದು ಒಂದು ಅಪರೂಪ ದರ್ಶನ.[೩] ನಂತರ ಸಭೆಯನ್ನು ಮಾಡಿ ಭಕ್ತಾಧಿಗಳನ್ನು ಉದ್ದೇಶಿಸಿ ಆಶೀರ್ವದಿಸಿ ನಂತರ ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಎರಡನೇ ದಿವಸಕ್ಕೆ ಕಡಬಿನ ಕಾಳಗ ನಡೆಯುತ್ತದೆ. ಮೂರನೇ ದಿವಸದಲ್ಲಿ ವಿವಿಧ ಕ್ರೀಡೆಗಳ ಸ್ಪರ್ದೆಯನ್ನು ನಡೆಸಿ ಬಹುಮಾನ ಮತ್ತು ಪುರಸ್ಕಾರಗಳನ್ನು ಮಠದಿಂದ ದಯಪಾಲಿಸುತ್ತಾರೆ. ಐದನೇ ದಿವಸಕ್ಕೆ ರಥೋತ್ಸವದ ಕಳಸವನ್ನು ಕೆಳಗಿಳಿಸಿ ಮಠದ ಆವರಣದ

ಕೊಠಡಿಯಲ್ಲಿ ಇಡುತ್ತಾರೆ. ಈ ಜಾತ್ರೆಗೆ ೧೦-೧೫ ಸಾವಿರ ಜನಸಂಖ್ಯೆ ಬಂದಿರುತ್ತಾರೆ. ಮಠದ ಆವರಣದಲ್ಲಿ ಅನೇಕ ಬಗೆಬಗೆಯ ಅಂಗಡಿ ಮುಗ್ಗಟ್ಟುಗಳು ಬಂದು ಶ್ರೀ ಜಗದ್ಗುರು ಫಕೀರೇಶ್ವರ ಸ್ವಾಮಿಗಳ ಆಶೀರ್ವಾದದಿಂದ ಪುಳಕಿತರಾಗುತ್ತಾರೆ.[೪] ಇದೇ ಸಂದರ್ಭದಲ್ಲಿ ದನಗಳ ದೊಡ್ಡಜಾತ್ರೆಯೇ ನಡೆಯುತ್ತದೆ.

೨. ಶ್ರೀ ಕ್ಷೇತ್ರ ವರವಿಯ ಮೌನೇಶ್ವರರ ಜಾತ್ರೆ:

ಶಿರಹಟ್ಟಿಯಿಂದ ಆಗ್ನೇಯಕ್ಕೆ ೫ ಕಿ.ಮೀ. ದೂರದಲ್ಲಿ ವರವಿ ಕ್ಷೇತ್ರ ಇದೆ ಶ್ರಾವಣ ಮಾಸದ ಕೊನೆಯ ಸೋಮವಾರದಂದು ರಥೋತ್ಸವ ಜರುಗುತ್ತದೆ.[೬] ಇದು ಒಟ್ಟು ೫ ದಿವಸದ ವರೆಗೆ ಜಾತ್ರೆ ನಡೆಯುತ್ತದೆ. ಮೊದಲನೇ ದಿವಸ ಬೆಳಗಿನ ಜಾವ ರುದ್ರಾಭಿಷೇಕ ನಂತರ ಧಾರ್ಮಿಕ ವಿಚಾರಗಳ ಶಿಬಿರಗಳನ್ನು ಜಗದ್ಗುರುಗಳ ಮುಖಾಂತರ ನೆರವೇರಿಸುತ್ತಾರೆ. ನಂತರ ಭಕ್ತಾದಿಗಳು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಲು ಯಜ್ಞ, ಹೋಮ ಹವನದಲ್ಲಿ ಭಾಗವಹಿಸುತ್ತಾರೆ. ಮದ್ಯಾಹ್ನದ ವೇಳೆ ಜಗದ್ಗುರುಗಳಂದ ಆಧ್ಯಾತ್ಮಿಕ ಪ್ರವಚನ ಜರುಗುತ್ತದೆ. ನಂತರ ಮೌನೇಶ್ವರ ಲೀಲೆಗಳ ತೋರಿಸುವುದು. ಹೀಗೇ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿ ಸಾಯಂಕಾಲ ೬ ಘಂಟೆಗೆ ಮೌನೇಶ್ವರ ಉತ್ಸವಮೂರ್ತಿ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡುವ ಮೂಲಕ ರಥಕ್ಕೆ ತೆಗೆದುಕೊಂಡು ಬಂದು ರಥದ ಸುತ್ತಲೂ ಐದು ಸುತ್ತುಗಳನ್ನು ಹಾಕಿ ಉತ್ಸವ ಮೂರ್ತಿ ರಥದಲ್ಲಿ ಇರಿಸಿ ಸಾಗಿಸುತ್ತಾರೆ. ನಂತರ ೨ ನೇ ದಿವಸ ಬೆಳಗ್ಗೆ ರುದ್ರಾಭಿಷೇಕ ಧಾರ್ಮಿಕ ಶಿಭಿರಗಳನ್ನು ಮಾಡಿ ವಿಶ್ವಕರ್ಮ ಪತ್ರಿಕೆಯ ವಾರ್ಷಿಕೊತ್ಸವ ಆಚರಿಸುತ್ತಾರೆ.[೫] ಸಾಯಂಕಾಲ ಪೀಠಸ್ಥ ಸ್ವಾಮಿಗಳು ಕುದುರೆಯ ಮೇಲೆ ಕುಳಿತುಕೊಂಡು ದೇವಸ್ಥಾನದ ಸುತ್ತಲೂ ಸುತ್ತುಗಳನ್ನು ಹಾಕುವುದರ ಮೂಲಕ ಬೆಲ್ಲದಿಂದ ಮಾಡಿದ ಕಡುಬುಗಳನ್ನು ಭಕ್ತರಿಗೆ ಹಂಚುವುದರ ಮೂಲಕ ಕಡುಬಿನ ಕಾಳಗ ನಡೆಯುತ್ತದೆ. ೩ನೇ ದಿವಸ ಬೆಳಗ್ಗೆ ರುದ್ರಾಭಿಷೇಕದ ಮೂಲಕ ಪ್ರಾರಂಭಗೊಂಡು ನಂತರ ಭಕ್ತಾದಿಗಳು ಉಪನಯನ, ವಿವಾಹ, ಧಾರ್ಮಿಕ ಸಭೆಗಳು ಜರುಗುತ್ತವೆ. ಸಾಯಂಕಾಲ ಪಾಲಿಕೆಯು ಛಬ್ಬಿಗೆ ಹೋಗಿ ಹಣ್ಣು ಕಾಯಿಗಳನ್ನು ಮಾಡಿಸಿ ಬರುತ್ತಾರೆ. ನಂತರ ಧಾರ್ಮಿಕ ಶೈಕ್ಷಣಿಕ ವಿಚಾರಗಳು, ಅಧ್ಯಾತ್ಮಿಕ ವಿಚಾರಗಳ ಚಿಂತನೆ, ಸಂಗೀತ ಕಾರ್ಯಕ್ರಮಗಳು ಜರುಗುತ್ತವೆ. ನಂತರ ೪ ನೇ ದಿವಸ ಪಾಲಿಕೆ ಅಲಾವಿ ಗುಡ್ಡಕ್ಕೆ ಹೋಗಿ ಹಣ್ಣು ಕಾಯಿಗಳನ್ನು ಮಾಡಿಸಿ ಬರುತ್ತಾರೆ. ನಂತರ ಕರ್ನಾಟಕ ರಾಜ್ಯ ವಿಶ್ವಕರ್ಮ ಶ್ರೀ ಮೌನೇಶ್ವರ ಯುವಕಮಂಡಳ ವರವಿ ಕ್ಷೇತ್ರ ಇವರ ವತಿಯಿಂದ ರಂಗೋಲಿ ಸ್ಪರ್ಧೆ ಇತರೆ ಮನರಂಜನಾ ಸ್ಪರ್ಧೆಗಳು ಜರುಗುತ್ತವೆ. ಕೊನೆಯ ದಿವಸ ಮಹಾಪ್ರಸಾದದ ಮೂಲಕ ಮುಕ್ತಾಯಗೊಳ್ಳುತ್ತದೆ.[೭]

ರಣತೂರ :

ಸುಕ್ಷೇತ್ರ ರಣತೂರಲ್ಲಿ ಶ್ರೀ ಮಾರುತಿ ದೇವರ ಜಾತ್ರೆ ಶಿರಹಟ್ಟಿಯಿಂದ ಆಗ್ನೇಯಕ್ಕೆ ಸುಮಾರು ೧೮ ಕಿ.ಮೀ. ದೂರದಲ್ಲಿ ಇದೆ. ರಣತೂರು ಮಾರುತಿ ದೇವಸ್ಥಾನ ಮತ್ತು ಈಶ್ವರ ದೇವಸ್ಥಾನಗಳಿದ್ದು. ಇದೇ ಶ್ರೀ ಶಾಲಿವಾಹನ ಶಕೆ ೧೯೩೧ ನೇ ವಿರೋಧಿನಾಮ ಸಂವತ್ಸರದ ಚೈತ್ರಶುದ್ಧ ದವನದ ಹುಣ್ಣಿಮೆ ದಿವಸ ಶ್ರೀ ಜಗದ್ಗುರು ಫಕೀರಸಿದ್ಧರಾಮ ಮಹಾಸ್ವಾಮಿಗಳು ಸಂಸ್ಥಾನಮಠ, ಶಿರಹಟ್ಟಿ ಇವರುಗಳು ಅಡ್ಡಪಲ್ಲಕ್ಕಿ ಮಹೋತ್ಸವ ಸಕಲ ಬಿರುದಾವಳಿ ಹಾಗೂ ವಾದ್ಯ ವೈಭಗಳೊಂದಿಗೆ ಜರುಗುವುದು. ಇದಕ್ಕೂ ಪೂರ್ವದಲ್ಲಿ ಊರ ದೇವರ ಉಡಿ ತುಂಬುವ ಕಾರ್ಯಕ್ರಮ, ತೇರಿನ ಕಳಸಾರೋಹಣ, ಶ್ರೀ ಜಗದ್ಗುರು ಫಕೀರಸಿದ್ಧರಾಮ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವ, ಶ್ರೀ ಪಕೀರೇಶ್ವರ ಪುರಾಣ ಪ್ರಾರಂಭ, ಮಾರುತಿ ದೇವರ ರಥೋತ್ಸವ.
ಶ್ರೀ ಮಾರುತಿ ದೇವರ ಹೊಂಡ ತುಂಬಿಸುವ ಕಡುಬಿನ ಕಾಳಗ ಹಾಗೂ ಓಕಳಿ ಜರುಗುತ್ತದೆ. ಸಾಮೂಹಿಕ ವಿವಾಹ, ಪುರಾಣ ಮಹಾಮಂಗಲೋತ್ಸವ, ದಿವ್ಯ ಸಾನಿಧ್ಯ ೧೩ ನೇ ಪಟ್ಟಾಧ್ಯಕ್ಷರಾದ ಶ್ರೀ ಜಗದ್ಗುರು ಫಕೀರಸಿದ್ಧರಾಮ ಮಹಾಸ್ವಾಮಿಗಳು ಸಂಸ್ಥಾನಮಠ, ಶಿರಹಟ್ಟಿ ಇವರ ನೇತ್ರತ್ವದಲ್ಲಿ ಮತ್ತು ಪುರಾಣ ಪ್ರವಚನ ಕಾರರ ಸಮ್ಮುಖದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತವೆ.[೬]

ಸಾಸರವಾಡ :

ಸುಕ್ಷೇತ್ರ ಸಾಸರವಾಡದ ಗ್ರಾಮದಲ್ಲಿ ಶ್ರೀ ಗಡ್ಡಿ ಬಸವೇಶ್ವರ ಹಾಗೂ ವೀರಭದ್ರೇಶ್ವರ ಜಾತ್ರಾ ಮಹೋತ್ಸವಗಳು ಜರುಗುತ್ತವೆ. ಶಿರಹಟ್ಟಿಯಿಂದ ದಕ್ಷಿಣದ ಆಗ್ನೇಯಕ್ಕೆ ೩೫ ಕಿ.ಮೀ ದೂರದಲ್ಲಿ ಸಾಸರವಾಡ ಸುಕ್ಷೇತ್ರವಿರುತ್ತದೆ. ಈ ಕ್ಷೇತ್ರವು ಸಾಂಗಲಿ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟ ಸ್ಥಳವಾಗಿದೆ. ಇದು ತಂಗಭದ್ರಾ ನದಿಯ ನಡುಗಡ್ಡೆಯಲ್ಲಿರುವ ಗಡ್ಡಿ ಬಸವೇಶ್ವರ ಹಾಗೂ ವೀರಭದ್ರೇಶ್ವರ ದೇವಸ್ಥಾನಗಳು ಪೂರ್ವಕಾಲದಲ್ಲಿ ಇದೇ ನಡುಗಡ್ಡೆಯಲ್ಲಿ ಸಹಸ್ರಾರು ಋಷಿಗಳು ತಪಸ್ಸುಗೈದು ತಮ್ಮ ಸಾಧನೆಗಳನ್ನು ಸಿದ್ಧಿಸಿಕೊಳ್ಳುತ್ತಿದ್ದರು. ಆ ಕಾರಣಕ್ಕಾಗಿ ಸಹಸ್ರಾರುವಾಡು ಗ್ರಾಮ ಈಗ ರೂಢಿಯಲ್ಲಿ ಸಾಸರವಾಡು ಗ್ರಾಮ ಎಂದು ಉಲ್ಲೇಖಗೊಂಡಿದೆ. ಇದು ೫ ಕಿ.ಮೀ.ಉದ್ದ ಹಾಗೂ ೧ ಕಿ.ಮೀ ಅಗಲ ವಿಸ್ತಾರವನ್ನು ಹೊಂದಿದ ನಡುಗಡ್ಡೆ ಪ್ರದೇಶ. ಸಾಸರವಾಡ ಗ್ರಾಮದ ಈ ಉಭಯ ದೇವರ ಜಾತ್ರಾ ಮಹೊತ್ಸವವು ಪ್ರತಿ ವರ್ಷ ಶಿವರಾತ್ರಿ ಮುಗಿದು ೬ನೇ ದಿವಸಕ್ಕೆ ಜಾತ್ರೆ ನಡೆಯುವುದು. ವೀರಭದ್ರೇಶ್ವರ ಜಾತ್ರೆಗೆ ತೇರಿನ ಜಾತ್ರೆಯ ೫ ದಿವಸದ ಮುನ್ನ ಕಳಸಾರೋಹಣ ಮಾಡುತ್ತಾರೆ. ನಂತರ ಅಗ್ನಿ ಹಾಯುವುದು ಹೊಂಡ ಹಾಯುವುದು ಓಕಳಿ ಕಾರ್ಯಗಳು ಜರುಗುತ್ತವೆ. ರಥೋತ್ಸವ ಜರುಗುತ್ತದೆ. ಮಾರನೇ ದಿವಸ ಲಘು ರಥೋತ್ಸವ ಜರುಗುತ್ತದೆ. ಈ ಒಂದು ಕಾರ್ಯಕ್ಕೆ ಈ ಊರಿನ ಸುತ್ತಮುತ್ತಲಿನ ಗ್ರಾಮದ ಜನತೆಯು ಕೂಡ ಈ ಜಾತ್ರೆಯಲ್ಲಿ ಪಾಲ್ಗೋಳ್ಳುತ್ತಾರೆ.[೮]

ಶ್ರೀ ಕ್ಷೇತ್ರ ಹೊಳೆಇಟಗಿ ದ್ಯಾಮವ್ವನ ಜಾತ್ರೆ.

ಶಿರಹಟ್ಟಿಯಿಂದ ದಕ್ಷಿಣಕ್ಕೆ ೪೦ ಕಿಮೀ ದೂರದಲ್ಲಿರುವ ಈ ಇರುವ ಈ ಕ್ಷೇತ್ರವು ಪ್ರತಿ ವರ್ಷ ಎಳ್ಳಅಮವಾಸ್ಯೆ ಮುಗಿದು ಬರುವ ಸಣ್ಣ ಶುಕ್ರವಾರ ದಿವಸ ಈ ಜಾತ್ರೆಯು ನಡೆಯುತ್ತದೆ. ಜಾತ್ರೆಯ ಪೂರ್ವದಲ್ಲಿ ಗ್ರಾಮದ ಹಿರಿಯರು ೫ ಜನ ಸುಮಂಗಲೆಯರು ಒಳಗೊಂಡು ಸಿಮೋಲ್ಲಂಘನೆ ಕಾರ್ಯವನ್ನು ಮಾಡಿ ಅಲ್ಲಿಂದ ಜ್ಯೋತಿಯನ್ನು ತೆಗೆದುಕೊಂಡು ಬಂದು ದ್ಯಾಮವ್ವನಿಗೆ ಅರ್ಪಿಸುತ್ತಾರೆ. ಗ್ರಾಮದ ಎಲ್ಲ ಜನರು ಕೂಡಿಕೊಂಡು ಮಂಗಳವಾರದ ದಿವಸ ಶ್ರೀ ದೇವಿಯನ್ನು ಚೌತಿಮನೆ ಕಟ್ಟೆಗೆ ಕೂಡಿಸಿ ಮೆರವಣಿಗೆ ಮೂಲಕ ಗುಡಿಯನ್ನು ತುಂಬಿಸುತ್ತಾರೆ ನಂತರ ಬುಧವಾರ ದಿವಸ ಗ್ರಾಮದ ಜನತೆ ಕೂಡಿಕೊಂಡು ಹಣ್ಣುಕಾಯಿ ಕರ್ಪೂರದೊಡನೆ ಉಡಿ ತುಂಬುವ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಗ್ರಾಮದ ಜನರು ಕೂಡಿಕೊಂಡು ಬೇರೆ ಬೇರೆ ಧಾರ್ಮಿಕ ಕಾರ್ಯಕ್ರಮಗಳನ್ನು ೮ ದಿನಗಳವರೆಗೆ ಮಾಡಿ ಮಹಾಪ್ರಸಾದದ ಮೂಲಕ ಮುಕ್ತಾಯಗೊಳಿಸುತ್ತಾರೆ.

ಶ್ರೀ ಕ್ಷೇತ್ರ ಸಂಗಮೇಶ್ವರ ದೇವಸ್ಥಾನ

ಇದು ತಂಗಭದ್ರಾ ಹೊಳೆಯ ತೀರದಲ್ಲಿದ್ದು ಯುಗಾದಿ ಪಾಡ್ಯೆಯ ದಿವಸ ಜಾತ್ರೆ ನಡೆಯುತ್ತದೆ. ೧ ನೇ ದಿವಸ ಹೂವಿನ ತೇರು ೨ ನೇ ದಿವಸ ಮಹಾರಥೋತ್ಸವ ನಡೆಯುತ್ತದೆ. ೩ ನೇ ದಿವಸ ಓಕಳಿ ಕಾರ್ಯಕ್ರಮ ಮತ್ತು ಕುಸ್ತಿ ಪಂದ್ಯಾಟಗಳು ವಿವಿಧ ಸ್ಪರ್ಧೆಗಳು ನಡೆಯುತ್ತವೆ.

ಶ್ರೀ ವೆಂಕಟೇಶ್ವರ ಜಾತ್ರೆ

ಇದು ಕೂಡ ೯ ದಿವಸ ನಡೆಯು ಜಾತ್ರೆಯಾಗಿದ್ದು ಮಹಾನವಮಿಯ ದಿವಸ ಈ ಜಾತ್ರೆಯು ನಡೆಯುತ್ತದೆ. ಶ್ರೀ ವೆಂಕಟೇಶ್ವರನ ೯ ಅವತಾರವನ್ನು ಸಾರುವ ಪ್ರತಿ ದಿನಕ್ಕೊಂದು ಅವತಾರದಂತೆ ೯ ದಿನಗಳು ಒಂದೊಂದು ವಾಹನದ ಮೇಲೆ ಪಾಲಕಿಸೇವೆಯನ್ನು ಮಾಡುತ್ತಾರೆ. ೧೦ ನೇ ದಿನ ಬನ್ನಿಮುಡಿಯುವ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಗಂಗಾಮತ ಜನಾಂಗದವರು ಬಸವ ಜಯಂತಿ ದಿವಸ ಕುಂಬ ಹೊರುವ ಕಾರ್ಯಕ್ರಮದೊಂದಿಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಗ್ರಾಮದ ಸರ್ವರೂ ಕೂಡಿಕೊಂಡು ಜರುಗಿಸುತ್ತಾರೆ.[೯]

ಗೋವಿನಕೊಪ್ಪದ ಹನುಮಂತ ದೇವರ ಜಾತ್ರೆ :

ಈ ಕ್ಷೇತ್ರವು ಶಿರಹಟ್ಟಿಯಿಂದ ದಕ್ಷಿಣಕ್ಕೆ ೩೮ ಕಿಮೀ ದೂರದಲ್ಲಿ ಇದೆ. ಪ್ರತಿ ವರ್ಷ ಈ ಜಾತ್ರೆಯು ಹನುಮ ಜಯಂತಿಯಂದು ಈ ಜಾತ್ರೆ ಜರುಗುತ್ತದೆ. ಈ ಜಾತ್ರೆಯು ೩ ದಿವಸ ನಡೆಯುತ್ತದೆ ಮೊದಲನೇ ದಿವಸ ಲಘು ರಥೋತ್ಸವ ನಡೆಯುವದು ಎರಡನೇ ದಿವಸ ಧಾರ್ಮಿಕ ಕಾರ್ಯಕ್ರಮಗಳು ಅಗ್ನಿ ಹಾಯುವದು.[೧೦] ಮೂರನೇ ದಿವಸ ಓಕಳಿ ಕಾರ್ಯಕ್ರಮ ನಡೆಯುತ್ತದೆ. ಈ ಜಾತ್ರೆಯಲ್ಲಿ ವಿಶೇಷವಾಗಿ ಸುತ್ತಮುತ್ತಲಿನ ಗ್ರಾಮಸ್ಥರು ಕೂಡಿಕೊಂಡು ಡೊಳ್ಳಿನ ಸ್ಪರ್ದೆ ಭಜನಾ ಸ್ಪರ್ದೆ ಹೀಗೆ ವಿವಿಧ ಸ್ಪರ್ದೆಗಳನ್ನು ಏರ್ಪಡಿಸಿ ವಿಜೃಂಬಣೆಯಿಂದ ಈ ಜಾತ್ರೆ ನಡೆಯುತ್ತದೆ.

ಗಾಳೆಮ್ಮನ ಜಾತ್ರೆ

ಈ ಜಾತ್ರೆಯನ್ನು ಹೆಚ್ಚಾಗಿ ಗಂಗಾ ಮತಸ್ಥರು ತಮ್ಮ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡುತ್ತಾ ಈ ಜಾತ್ರೆಯನ್ನು ಮುಗಿಸುತ್ತಾರೆ.[೧೧] ಕೋಗನೂರಿನ ಕರಿಯಮ್ಮನ ಜಾತ್ರೆ ಇದು ಶಿರಹಟ್ಟಿಯಿಂದ ದಕ್ಷಿಣಕ್ಕೆ ೩೫ ಕಿಮೀ ದೂರದಲ್ಲಿ ಇದೆ. ಇದು ೨ ದಿವಸ ನಡೆಯು ಜಾತ್ರೆ ಆಗಿರುತ್ತದೆ. ಇಲ್ಲಿ ಅನ್ನ ಸಂತರ್ಪಣೆ ದಿವಸ ಗುಡಿಯ ಪೂಜಾರಿ ಕುದಿಯುವ ಅನ್ನದಲ್ಲಿ ಕೈಯಿದ್ದಿ ಭಕ್ತಾದಿಗಳಿಗೆ ತೋರುತ್ತಾನೆ. ನಂತರ ಅನೇಕ ಪವಾಡ ಸದೃಶ್ಯಗಳು ನಡೆಯುತ್ತವೆ. ದೇವರಿಗೆ ಹರಕೆ ಹೊತ್ತವರು ಬೇವಿನ ಉಡಿಗೆ ಮೂಲಕ ಹೊಳೆಯಿಂದ ದೇವಸ್ಥಾನಕ್ಕೆ ಮೆರವಣಿಗೆ ಮೂಲಕ ಬರುತ್ತಾರೆ.[೧೨] ನಾರಾಯಣಪುರದ ಬಸವೇಶ್ವರ ಜಾತ್ರೆ ಇದು ಶಿರಹಟ್ಟಿಯಿಂದ ದಕ್ಷಿಣಕ್ಕೆ ೨೦ ಕಿಮೀ ದೂರದಲ್ಲಿ ಇದೆ. ಈ ಜಾತ್ರೆಯು ಬಸವ ಜಯಂತಿಯಂದು ಜರುಗುತ್ತದೆ. ಇದು ೫ ದಿವಸ ನಡೆಯುವ ಜಾತ್ರೆಯಾಗಿದೆ ಮೊದಲನೇ ದಿವಸ ಮಹಾ ರಥೋತ್ಸವ ಎರಡನೇ ದಿವಸ ಲಘು ರಥೋತ್ಸವದಲ್ಲಿ ವೀರಭದ್ರದೇವರ ಒಡಪುಗಳನ್ನು ಹೇಳುವುದು, ಶಸ್ತ್ರ ಹಾಕುವುದು ಈ ಎಲ್ಲ ಧಾರ್ಮಿಕ ಕಾರ್ಯಕ್ರಗಳು ಜರುಗುತ್ತವೆ.[೧೩]

ಹೆಬ್ಬಾಳದ ಹಾಲೇಶ್ವರ ಮಠ ಜಾತ್ರೆ:

ಈ ಕ್ಷೇತ್ರವು ಶಿರಹಟ್ಟಿಯಿಂದ ದಕ್ಷಿಣಕ್ಕೆ ೩೨ ಕಿಮೀ ದೂರದಲ್ಲಿ ಇದೆ ಇದೂಕೂಡ ೨ ದಿವಸ ನಡೆಯುವ ಜಾತ್ರೆಯಾಗಿದೆ ಇಲ್ಲಿ ವಿಶೇಷವಾಗಿ ಶ್ರೀ ಹಾಲಸ್ವಾಮಿಗಳು ಮುಳ್ಳುಗದ್ದಿಗೆಯ ಮೇಲೆ ಪವಾಡ ದೃಶ್ಯಗಳನ್ನು ಮಾಡುವರು. ನಂತರ ಹೊಂಡ ಹಾಯುವದು. ಹೀಗೆ ಅನೇಕ ಧಾರ್ಮಿಕ ಸಾಮಾಜಿಕ ಕಾರ್ಯಕ್ರಮಗಳು ನಡೆಯುತ್ತವೆ.[೧೪] ವೀರಭದ್ರೇಶ್ವರ ದೇವಾಲಯದ ಜಾತ್ರೆಯು ಕೂಡ ತುಂಬಾ ಅದ್ದೂರಿಯಾಗಿದ್ದು ಇಲ್ಲಿ ಪುರವಂತಿರಿಂದ ವೀರಗಾಸೆ ನಡೆಯುತ್ತದೆ.

ದೇವಿಹಾಳದ ಹೊಳಲಮ್ಮಗುಡ್ಡದ ಹೊಳಲಮ್ಮನ ಜಾತ್ರೆ :

ಇದು ಶಿರಹಟ್ಟಿಯಿಂದ ದಕ್ಷಿಣಕ್ಕೆ ೧೬ ಕಿಮೀ ದೂರದಲ್ಲಿದೆ. ದೇವಿಹಾಳದ ಬಳಿಯ ಗುಡ್ಡದ ಮೇಲಿನ ಕೋಟೆಯೆ ಶ್ರೀಮಂತಗಡ ಶಿವಾಜಿ ಮಹಾರಾಜನ ಆಡಳಿತದ ಸೀಮೆಯ ಅಂಚಿನ ಕೋಟೆಯೆಂದೆ ಹಲವರ ಅಭಿಪ್ರಾಯ, ಕೋಟೆಯ ಗೋಡೆ, ಗೋಪುರಗಳು ಆರಾಧ್ಯ ದೇವತೆ ಹೊಳಲಮ್ಮನ ರಕ್ಷಣಾ ಕೋಟೆಯಾಗಿದೆ. ಹೊಳಲಮ್ಮದೇವಿಯ ವಿಗ್ರಹವು ೬ಅಡಿ ಎತ್ತರವಿದ್ದು ಇದು ಕಲಾತ್ಮಕ ಶಿಲ್ಪವಾಗಿದೆ. ಶಂಕ,ಪದ್ಮ,ಖಡ್ಗಗಳನ್ನು ಹಿಡಿದಿದ್ದಾಳೆ ದೇವಿಗೆ ೮ ಕೈಗಳಿವೆ. ಭಾರತದ ಹುಣ್ಣಿಮೆಯ ದಿವಸ ಈ ಜಾತ್ರೆಯು ನೆಡೆಯುತ್ತದೆ.[೧೫]

ಹೀಗೆ ಶಿರಹಟ್ಟಿ ಪರಿಸರದಲ್ಲಿ ಪ್ರಮುಖ ಗ್ರಾಮಗಳಲ್ಲಿ ನಡೆಯುವ ಜಾತ್ರೆಗಳಾಗಿವೆ. ಇವು ಧಾರ್ಮಿಕ ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ಇವುಗಳನ್ನು ವರ್ಣಿಸಬಹುದು.

೭.೨ ಉತ್ಸವಗಳು :

ಯಾವುದೇ ಉತ್ಸವಗಳು ಪ್ರಾಚೀನ ಎನಿಸಿಕೊಳ್ಳಬಹುದಷ್ಟೆ ಹೊರತು ಐತಿಹಾಸಿಕ ಆಗುವುದು ಕಷ್ಟ ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿರುವ ಕನ್ನಡ ನಿಘಂಟಿನ ಒಂದನೇ ಸಂಪುಟದಲ್ಲಿ ಉತ್ಸವಕ್ಕೆ ಸಂಬಂಧಿಸಿದ ಹಬ್ಬ, ಜಾತ್ರೆ, ಸಮಾರಂಭ, ಸಂಭ್ರಮ, ಸಡಗರ, ಸಂತೋಷ, ಉತ್ಸಾಹ, ಮೆರವಣಿಗೆ, ಇತ್ಯಾದಿ ಅರ್ಥಗಳನ್ನು ನೀಡಲಾಗಿದೆ. ಸಾಮಾನ್ಯವಾಗಿ ಉತ್ಸವ ಎಂದೊಡನೆ ಕೇಳಿದವರು ನೆನೆಪು ಮಾಡಿಕೊಳ್ಳುವುದು ದೇವರಿಗೆ ಸಂಬಂಧಿಸಿದ ಉತ್ಸವಗಳನ್ನು ಮಾತ್ರ, ದೇವರುಗಳಿಗೆ ಸಂಬಂಧಿಸಿದ ಉತ್ಸವಗಳು ಸಾರ್ವತ್ರಿಕ ಸ್ವರೂಪ ಪಡೆಯುವದಿಲ್ಲ. ಅವು ನಿರಂತರವೂ ಅಲ್ಲ, ಯಾವುದೋ ಸಂದರ್ಭದಲ್ಲಿ ಆಚರಣೆಗೊಂಡು ಇಲ್ಲವಾಗಿ ಬಿಡುತ್ತವೆ. ಸ್ವಾತಂತ್ರೋತ್ಸವ ಅಥವಾ ಗಣರಾಜ್ಯೋತ್ಸವ ಇತ್ಯಾದಿಗಳು ಸಾರ್ವತ್ರಿಕವಾದರೂ, ಇವುಗಳ ಆಚರಣೆ ಆಯ್ದ ಕೆಲವು ನಾಯಕರು, ಅಧಿಕಾರಿಗಳು, ಶಾಲಾ-ಕಾಲೇಜುಗಳು ಹಾಗೂ ಸಂಘ ಸಂಸ್ಥೆಗಳನ್ನು ಮಾತ್ರ ಒಳಗೊಳ್ಳುತ್ತದೆ. ಇಡಿ ಜನಸಮುದಾಯ ಭಾಗವಹಿಸಿ ಸಂಭ್ರಮ ಪಡುವ ಉತ್ಸವ ಆಗುವುದಿಲ್ಲ. ಇಡಿ ಗ್ರಾಮ ಊರು ಅಥವಾ ಸಮುದಾಯವನ್ನೇ ಒಳಗೊಂಡಂತೆ ಆಚರಿಸಲ್ಪಡುವ ಉತ್ಸವಗಳು ಸಾರ್ವತ್ರಿಕವಾಗುತ್ತವೆ. ನಿರಂತರವಾಗಿ ನಿರ್ಧರಿತ ದಿನದಂದು ಆಚರಿಸಲ್ಪಡುತ್ತವೆ. ಪ್ರಾಚೀನ ಕಾಲದಲ್ಲಿ ಕರ್ನಾಟಕದ ಜನತೆಯು ಯಾವುದೇ ರಾಜಕೀಯ ಅಥವಾ ಸಾಮಾಜಿಕ ಉತ್ಸವಗಳನ್ನು ಆಚರಿಸುತ್ತಿದ್ದ ಧಾಖಲೆಗಳು ಇಲ್ಲವಾದರೂ ದೇವಾಲಯಗಳ ಮೂಲಕ ಹಲವು ಉತ್ಸವಗಳನ್ನು ಆಚರಿಸುತಿದ್ದ ಧಾಖಲೆಗಳು ಶಾಸನಗಳ ಮೂಲಕ ದೊರೆತಿವೆ.

ದೇವಸ್ಥಾನದಲ್ಲಿ ನಿತ್ಯ ಪೂಜೆಯಲ್ಲದೆ ಕೆಲವು ನಿರ್ದಿಷ್ಟ ದಿನಗಳಂದು ವಿಶೇಷ ಪೂಜೆಗಳು ಇರುತ್ತವೆ. ಭಕ್ತಾದಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ನಡೆಸುವ ವಿಶೇಷ ಪೂಜೆ ಅಥವಾ ಉತ್ಸವಗಳಲ್ಲದೇ ವರ್ಷದ ಕೆಲವು ನಿರ್ದಿಷ್ಟ ದಿನಗಳಂದು ಶಾಶ್ವತವಾಗಿ ವಿಶೇಷ ಪೂಜೆಗಳು ನಡೆಯುತ್ತವೆ.[೨]

೭.೩ ನಂಬಿಕೆಗಳು

ಶಿರಹಟ್ಟಿ ಪರಿಸರದಲ್ಲಿ ಸರ್ವ ಸಾಮಾನ್ಯರ ನಂಬಿಕೆಗಳು ಗ್ರಹಣ ಕಾಲದಲ್ಲಿ ಕತ್ತರಿಸುವುದು, (ಹೆಚ್ಚುವದು) ನಿಷಿದ್ಧ. ಏಕೆಂದರೆ ಹುಟ್ಟುವ ಮಗುವು ಸಹಿತ ಅಂಗವಿಕಲರಾಗುತ್ತಾರೆ. ಎಂಬ ನಂಬಿಕೆಗಳಿವೆ, ಪ್ರಸವವಾದ ಐದನೇಯ ದಿನ ಕ್ಷುದ್ರಶಕ್ತಿಗಳ ಕಾಟವು ಪ್ರಬಲವಾಗಿರುವದೆಂದು ಜೀವತಿ ದೇವತೆಯನ್ನು ಪೂಜಿಸಿದರೆ ಇದು ಪರಿಹಾರವಾಗುವುದೆಂದೂ ನಂಬಿಕೆ ಇದೆ. ಈ ಕಾರಣದಿಂದಲೇ ಈ ಸಂದರ್ಭದಲ್ಲಿ ಕೆಲವು ಮಕ್ಕಳಿಗೆ ದತ್ತಿದಾನವನ್ನು ಮಾಡುತ್ತಾರೆ. ಏಳನೇ ದಿನದಲ್ಲಿ ವಿಳ್ಯದೆಲೆ ಅಡಕಿ, ಅರಿಶಿಣ, ಕೊಬ್ಬರಿ, ಚೂರು ಹಾಗೂ ದಕ್ಷಿಣೆಯನ್ನು ಒಂಬತ್ತು ಮನೆಗಳಿಗೆ ಕೊಡುತ್ತಾರೆ. ಬಾಣಂತಿ ವಾಸಿಸುವ ಕೊಠಡಿಯಲ್ಲಿ ಹತ್ತು ದಿನಗಳವರೆಗೆ ಜೀವಿತಿ ದೇವತೆಯು

ವಾಸಿಸುತ್ತಾಳೆಂಬ ನಂಬಿಕೆ ಇದೆ. ಆದ್ದರಿಂದ ೧೦ ದಿನಗಳವರೆಗೆ ಮೈಲಿಗೆ ಆಚರಿಸಿ, ೧೧ ನೇದಿನ ಸ್ನಾನಮಾಡಿ ಶುದ್ಧಿಮಾಡಿ ಮೈಲಿಗೆಯನ್ನು ನಿವಾರಿಸಿಕೊಳ್ಳುತ್ತಾರೆ.

ವಿಜಾಪುರದ ದರ್ಗಾದಲ್ಲಿ ಶಾಂತಿ ಸಂದೇಶ ಬೀರುವ ಬಾಬಾ ಅಮೀನ ಧೀನರು ನೆಲೆಸಿದ್ದರು. ಇವರನ್ನು ಕುರಿತು ಶಿರಹಟ್ಟಿ ಫಕ್ಕೀರೇಶನು “ನಿಮ್ಮನ್ನು ಅಗಲಿ ಹೋಗಲು ನನ್ನಿಂದ ಸಾದ್ಯವೇ ಇಲ್ಲ” ಎಂದು ದುಃಖಸಿದರು. ಆಗ ಅವರು ನಾನು ನಿನ್ನನ್ನು ಅಗಲಿ ಎಲ್ಲಿಯೂ ಹೋಗಲಾರೆ, ನಾನು ಹಳೇಯದಾದ ಈ ಶರೀರವನ್ನು ಬಿಟ್ಟು, ಗೋನಾಳ ಗ್ರಾಮದಲ್ಲಿ ಪುರ್ನಜನ್ಮ ತಾಳ ಬರುವೆ, ಗೋನಾಳ ಗ್ರಾಮದ ಹಾವಕ್ಕ ದಂಪತಿಗಳು ಮಕ್ಕಳಿಲ್ಲದೇ ಕೊರಗುತ್ತಿದ್ದಾರೆ. ಅವರು ವಿಶ್ವಕರ್ಮ ಮತದವರು ಅವರ ಪುಣ್ಯ ಗರ್ಭದಲ್ಲಿ ನಾನು ಮೌನೇಶ್ವರನಾಗಿ ಉದಿಸಿ ಬರುವೆನು ನಾನು ಬಂದು ಶಿರಹಟ್ಟಿ ತಾಲೂಕು, ವರವಿಯಲ್ಲಿ ವಾಸ ಮಾಡುವೆನು, ನೀನು ನಾಡೆಲ್ಲಾ ಸಂಚರಿಸಿ ವರವಿ ಹತ್ತಿರ ಶಿರಹಟ್ಟಿಗೆ ಬರುವಿ ಪುನಃ ಅಲ್ಲಿ ನನ್ನ ನಿನ್ನ ಭೇಟಿ ಅಗುವುದೆಂದರು. ಫಕೀರೇಶ್ವರರು ಅನೇಕ ಪವಾಡಗಳನ್ನು ಮಾಡಿದ್ದಾರೆ, ಅವುಗಳಲ್ಲಿ ಪ್ರಮುಖವಾದವುಗಳು, ಈ ಕೆಳಗಿನಂತಿವೆ.

೧) ಶ್ರೀ ಬಂಡೆಪ್ಪನವರ ಹಳ್ಳಿಯಲ್ಲಿ ಮಠ ಕಟ್ಟಲು ಅಣಿಯಾದಾಗ ಬಿಜಾಪುರದ ಆದಿಲ್‌ಶಾಹಿ ಮಠ ಕಟ್ಟಬಾರದೆಂದು ಆದೇಶ ಕಳಿಸಿದನು. ಇತ್ತ ಆದಿಲ್‌ಶಾಹಿಯು ಅನಾರೋಗ್ಯದಿಂದ ಬಳಲ ಹತ್ತಿದನು. ಯಾವ ಔಷಧ ಉಪಚಾರವೂ ಫಲ ನೀಡಲಿಲ್ಲ. ಕೊನೆಗೆ ಜೋತಿಷ್ಯ ಹೀಗೆ ಹೇಳಿದ ಫಕೀರಸ್ವಾಮಿಗಳ ಮಠ ಕಟ್ಟಿಸುವುದನ್ನು ನಿಲ್ಲಿಸಿದ ಕರ್ಮಕ್ಕಾಗಿ ನಿಮಗೀ ರೋಗ ಬಂದಿದೆ ಅದಕ್ಕೆ ಪರವಾನಿಗೆ ನೀಡಿದರೆ ನಿಮ್ಮ ರೋಗ ಗುಣಮುಖವಾಗುವುದೆಂದರು. ಆಗ ರಾಜ ಸಂತಸದಿಂದ ಪರವಾನಿಗೆ ಪತ್ರ ಬರೆಸಿ ಹಣದ ಗಂಟು ಕಳುಹಿಸಿ ಹದಿನಾಲ್ಕು ಎಕರೆ ಜಮೀನು ದಾನವಿತ್ತರು, ಆಗ ಎಲ್ಲರೂ ಸಂತಸದಿಂದ ಶ್ರೀಗಳ ಮಹಿಮೆಯನ್ನು ಕೊಂಡಾಡಿ ಮಠವನ್ನು ಕಟ್ಟಿದರು. ಹೀಗೆ ಅನೇಕ ಲೀಲೆ ಮತ್ತು ಪವಾಡಗಳನ್ನು ಜೀವನದುದ್ದಕ್ಕೂ ಈ ಮಠದ ಸ್ವಾಮಿಗಳು ಮಾಡುತ್ತಾ ಬಂದಿದ್ದಾರೆ, ಅತ್ತೆ ಸೊಸೆಯರ ಜಗಳ, ಹಾಗೂ ಹಾವು ಕಚ್ಚಿದ ಕೂಸಿಗೆ ಜೀವದಾನ ಮೈಸೂರು ಮಹಾರಾಜರಿಗೆ ಆಶೀರ್ವಾದಿಸಿದ್ದು, ಬಾದಶಾಹನಿಂದ ರಣಬಿಲ್ಲೆ, ಕಾಣಿಕೆಯನ್ನು ಪಡೆದದ್ದು ಅಂಕುಶಖಾನಗೆ ಸೋಮಶಿಶುದಾನ, ಹೀಗೆ ಅನೇಕ ಪವಾಡಗಳನ್ನು ತಮ್ಮ ಕ್ಷೇತ್ರದುದ್ದಕ್ಕೂ ಮಾಡಿದ್ದಾರೆ. ಒಟ್ಟಿನಲ್ಲಿ ಶಿರಹಟ್ಟಿ ಪರಿಸರದಲ್ಲಿ ವಿವಿಧ ಜನಾಂಗಗಳ ನೆಲೆಮನೆಯಾಗಿದ್ದು ಈ ಎಲ್ಲ ಜನಾಂಗಗಳು, ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಹಾಗೂ ಶೂದ್ರರೆಂಬ ಚತುವರ್ಣಗಳಲ್ಲಿ ವರ್ಗೀಕರಿಸಲ್ಪಟ್ಟಿದ್ದವು. ಈ ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣರಿಗೆ ಮೊದಲಸ್ಥಾನ ಇವರು ಸಮಾಜದ ಗಣ್ಯ ವ್ಯಕ್ತಿಗಳೆನಿಸಿದ್ದರು ವಿದ್ಯಾವಂತರು ಆಗಿದ್ದರು, ವೀರತನಕ್ಕೆ ಹೆಸರಾದ ಕ್ಷತ್ರೀಯರು ಎರಡನೇ ಸ್ಥಾನದಲ್ಲಿದ್ದರು, ಮೂರನೇ ಸ್ಥಾನದಲ್ಲಿದ್ದ ವೈಶ್ಯರು ಮುಖ್ಯ ಉದ್ಯೋಗ ವ್ಯಾಪಾರವಾಗಿತ್ತು. “ಉಗುರ-ಮುನ್ನೊರ್ವರು” ಎಂಬ

ಇವರ ಸಂಸ್ಥೆಯೊಂದು ತನ್ನ ವೃತ್ತಿಯೊಂದಿಗೆ ಈ ನಾಡಿನಲ್ಲಿ ಪ್ರಸಿದ್ಧವಾಗಿತ್ತು. ಕೊನೆಯವರಲ್ಲಿ ಶೂದ್ರರಲ್ಲಿ ಹೊಲೆಯರು ಮತ್ತು ಮಾದಿಗರು ಇವರು ಮೇಲ್ವರ್ಗಗಳ ಸೇವೆಯಲ್ಲಿ ನಿರತರಾಗಿದ್ದರು.

ಶಿರಹಟ್ಟಿ ಪರಿಸರದಲ್ಲಿ ಕಂಬಾರ, ಬಡಿಗ, ಕುಂಬಾರ, ಅಕ್ಕಸಾಲಿಗ, ಕಂಚುಗಾರ, ನಾವಿದರೆಂಬ, ಮೊದಲಾದ ವೃತ್ತಿಗಳನ್ನು ಮಾಡುವ ಜನಾಂಗಗಳು ಇದ್ದರೂ, ದೋಣಿಗಳನ್ನು ನಡೆಸುವ ಅಂಬಿಗರು ಅಂದು ಸಂಘಟಿತರಾಗಿದ್ದರು, ಒಕ್ಕಲಿಗರ ಸಂಘಗಳಿದ್ದವು ಉತ್ಸಾಹದಿಂದ ದಾನ ದತ್ತಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಮಾಜದಲ್ಲಿ ಸ್ತ್ರೀಯರಿಗೆ ಕೆಲವು ನಿರ್ಭಂದನೆಗಳಿದ್ದರೂ ಕೌಟುಂಬಿಕ ಜೀವನ ನೆಮ್ಮದಿಯಿಂದ ಕೂಡಿದ್ದಿತು, ವೇಶ್ಯಾವೃತ್ತಿಯಂಥ ಅನಿಷ್ಠ ಪದ್ಧತಿಗಳು ಅಸ್ಥಿತ್ವದಲ್ಲಿದ್ದವು. ವೈದಿಕ ವಿದ್ಯಾಭ್ಯಾಸ ಜಾರಿಯಲ್ಲದ್ದರೂ ಸ್ತ್ರೀ ಶಿಕ್ಷಣದ ಬಗ್ಗೆ ಇಲ್ಲಿಯ ಶಾಸನಗಳು ಏನನ್ನೂ ಹೇಳುವದಿಲ್ಲ ಅಗ್ರಹಾರ, ಬ್ರಹ್ಮಪುರಿ, ದೇವಾಲಯ, ಮಠ, ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದವು, ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ನ್ಯಾಯಪದ್ಧತಿ ಇತ್ತು. ಯುದ್ಧ ಕಲೆಯನ್ನು ಈ ನಾಡಿನ ಜನ ಕರಗತಮಾಡಿಕೊಂಡಿದ್ದರು ಅನೇಕ ನಂಬಿಕೆ ಆಚರಣೆಗಳ ಮಧ್ಯದಲ್ಲಿ ಪಾಪ-ಪುಣ್ಯಗಳ ಪರಿಕಲ್ಪನೆಯನ್ನು ಹೊಂದಿದವರಾಗಿದ್ದರು. ಹೀಗೆ ಶಿರಹಟ್ಟಿ ಪರಿಸರವು ಸಾಂಸ್ಕೃತಿಕ ಹಿರಿಮೆಯಿಂದ ಹಿಂದೂ-ಮುಸ್ಲಿಂ ಸಾಮರಸ್ಯದ ಅದ್ವಿತೀಯ ಪೀಠಗಳಾದ ಶ್ರೀ ಜಗದ್ಗುರು ಫಕೀರೇಶ್ವರರ ಸಂಸ್ಥಾನ ಮಠ ಹಾಗೂ ಶ್ರೀ ವರವಿ ಮೌನೇಶ್ವರ ಮಠಗಳೇ ಸಾಕ್ಷಿ.

೭.೪ ಆಚರಣೆಗಳು

ಜನರ ದೈನಂದಿನ ಹಾಗೂ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದಂತೆ ವಿಧಿಗಳು ಆಚರಣೆಗಳು, ಸಮಾರಂಭಗಳು ನಡೆಯುತ್ತವೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ನಮೂದಿಸಿದೆ.

ಗರ್ಭಾವಸ್ಥೆ ಮತ್ತು ಜೀವನ : ಗರ್ಭಾವಸ್ಥೆಯಲ್ಲಿರುವಾಗ ಹಾಗೂ ಮಗು ಜನನವಾದಾಗ ಅನೇಕ ಧಾರ್ಮಿಕ ಸಂಪ್ರದಾಯಗಳು ರೂಢಿಯಲ್ಲಿವೆ ಹಿಂದೂಗಳಲ್ಲಿ ಗರ್ಭಿಯಣಿರಿಗೆ ತಿಂಡಿ ತಿನಿಸುಗಳ ಬಯಕೆಗಳನ್ನು ಪೊರೈಸುವದು, ಗರ್ಭಿಣಿಯಾದವರಿಗೆ ಏಳು, ಎಂಟನೇ ತಿಂಗಳಲ್ಲಿ ಸೀಮಂತವನ್ನು ಮಾಡುವದು ಇಲ್ಲವೇ ಸೀರೆ ಉಡುಗೊರೆ ಸಮಾರಂಭವನ್ನು ಮಾಡುತ್ತಾರೆ. ಸಾಮಾನ್ಯವಾಗಿ ಮೊದಲ ಹೆರಿಗೆಗೆ ಹೆಣ್ಣು ತವರು ಮನೆಗೆ ಹೋಗುತ್ತಾಳೆ, ಜನನವಾದ ಮಗುವಿಗೆ ಜೇನುತುಪ್ಪ ನೆಕ್ಕಿಸುವುದು. ಮಗು ಪ್ರಸವವಾದ ಐದನೇ ದಿನ ಜೀವತಿ ದೇವತೆಯನ್ನು ಪೂಜಿಸುವುದು. ಮಗು ಹುಟ್ಟಿದ ೧೦ ದಿನಗಳ ವರೆಗೆ ಮೈಲಿಗೆ ಆಚರಿಸುವದು ೧೧ ನೇದಿನ ಸ್ನಾನಮಾಡಿ ಶುದ್ಧಿಮಾಡಿ ಮೈಲಿಗೆಯನ್ನು ನಿವಾರಿಸಿಕೊಳ್ಳುತ್ತಾರೆ. ೧೧ ನೇ ದಿನ ಮಗುವನ್ನು ತೊಟ್ಟಿಲಿಗೆ ಹಾಕಿ ನಾಮಕರಣ ಮಾಡುತ್ತಾರೆ. ಕೆಲವು ಸಂಧರ್ಭಗಳಲ್ಲಿ ಇದನ್ನು ೩ ತಿಂಗಳೊಳಗಾಗಿ ಆಚರಿಸುತ್ತಾರೆ. ಇತ್ತೀಚಿಗೆ ಹೆಚ್ಚಾಗಿ ಹೆರಿಗೆಯು ಆಸ್ಪತ್ರೆಯಲ್ಲಾಗುವುದರಿಂದ ಆಚರಣೆಗಳು ಕಣ್ಮರೆಯಾಗುತ್ತಿವೆ. ಬ್ರಾಹ್ಮಣರು ಹಾಗೂ ವೈಧಿಕ ಧರ್ಮವನ್ನು ಆಚರಿಸುವ ಇತರೆ ಜಾತಿಗಳಲ್ಲಿ, ವಿಶ್ವಕರ್ಮರು, ಜೈನರು ಗಂಡು

ಮಕ್ಕಳಿಗೆ ಉಪನಯನವನ್ನು ಮಾಡುತ್ತಾರೆ. ಲಿಂಗಾಯತರಲ್ಲಿ ಲಿಂಗದೀಕ್ಷೆ ಕೊಡುತ್ತಾರೆ. ಮುಸಲ್ಮಾನರಲ್ಲಿ ಮಗು ಹುಟ್ಟಿದ ಕೂಡಲೇ ಕಿವಿಯಲ್ಲಿ ಬಾಂಗ್ ನಮಾಜ ಮಾಡುತ್ತಾರೆ ತಕ್ಷಣವೇ ಹೆಸರನ್ನು ಇಡುತ್ತಾರೆ, ಮಗು ಹುಟ್ಟಿದ ಐದನೇ ದಿನ ಬಟ್ಟೆಯನ್ನು ಧರಿಸಿ ಅಲಂಕರಿಸುತ್ತಾರೆ. ಇದಕ್ಕೆ ಛಟ್ಟಿ ಎಂದು ಕರೆಯುತ್ತಾರೆ. ಹುಡುಗಿಯು ಮೊದಲಸಲ ಋತುಮತಿಯಾದಾಗ ಹೊಸ ಬಟ್ಟೆ ತರುವದು ಆರತಿ ಮಾಡಿಸುವುದು ಭೋಜನಕೂಟವನನ್ನು ಏರ್ಪಡಿಸುವದು ಹಿಂದೂಗಳಲ್ಲಿ ಸಾಮಾನ್ಯವಾಗಿದೆ. ಮಾಸಿಕ ಸ್ರುವದ ಮೂರುದಿನ ಮೈಲಿಗೆಯನ್ನು ಆಚರಿಸುವುದು ಹೆಚ್ಚಾಗಿ ಎಲ್ಲ ಜಾತಿಯವರು ಮಾಡುತ್ತಾರೆ, ಇತ್ತೀಚೆಗೆ ಇದು ದೂರವಾಗಹತ್ತಿದೆ.

ವಿವಾಹ ಹಿಂದೂಗಳಲ್ಲಿ ಮದು ಮಗಳನ್ನು ಮಧು ಮಗನಿಗೆ ಕನ್ಯಾದಾನವೆಂದು ಕೊಡುಗೆಯ ರೂಪದಲ್ಲಿ ಮದುವೆ ಮಾಡಿ ಕೊಡುವ ಸಂಪ್ರದಾಯವಿದೆ. ಇತ್ತೀಚೆಗೆ ಇದು ಗಂಡಿನ ಮದುವೆ ಮತ್ತು ಹೆಣ್ಣಿನ ಮನೆಗಳಲ್ಲಿ ಮದುವೆ ಆಗುವುದು ಕಡಿಮೆಯಾಗಿದೆ, ದೇವಸ್ಥಾನ, ಮಠ, ಇಲ್ಲವೇ, ಛತ್ರಗಳಲ್ಲಿ, ಮದುವೆ ನಡೆಯುತ್ತದೆ ಒಂದೇ ಗೋತ್ರ ಅಥವಾ ಬೆಡಗುಗಳಲ್ಲಿ ವಿವಾಹ ನಿಷಿದ್ಧ ವಿಳ್ಯದ ಶಾಸ್ತ್ರ, ವರಪೂಜೆ, ನಾಂದಿ, ಕಂಕಣ, ವಧುವರರ ತಲೆಯ ಮೇಲೆ ಹಾಲೆರೆಯುವುದು, ಅಕ್ಷತೆ ಹಾಕುವದು ಹೋಮ, ಸಪ್ತಪದಿ ಇವೆಲ್ಲ ಧಾರ್ಮಿಕ ವಿಧಿಗಳಲ್ಲಿ ಮುಖ್ಯವಾದವು.

ಸಾಮೂಹಿಕ ವಿವಾಹ ವೆಚ್ಚವನ್ನು ಹಾಗೂ ಕ್ರೀಯಾ ವಿಧಿಗಳನ್ನು ಮೊಟಕುಗೊಳಿಸಿ ಒಂದೇ ಸ್ಥಳದಲ್ಲಿ ಜರುಗಿಸುವ ಅನೇಕ ವಿವಾಹಗಳು ಇತ್ತೀಚೆಗೆ ನಡೆಯುತ್ತವೆ. ಅಂತರ್ಜಾತಿಯ ವಿವಾಹಗಳು ಬೇರೆ ಬೇರೆ ಜಾತಿಯ ನಡುವೆ, ಪಂಥದ ಜೊತೆಗೆ ವಿವಾಹ ಸಂಬಂದ ಬೆಳೆಸುವದಕ್ಕೆ ಅಂತರ್ಜಾತಿ ವಿವಾಹವೆನ್ನುವರು, ಕರ್ನಾಟಕ ಸರಕಾರವು ವಿವಾಹವಾದ ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ ಸಂದರ್ಭದಲ್ಲಿ ಅವರ ಸಾಮೂಹಿಕ ಭದ್ರತೆಗಾಗಿ ೫೦೦೦ ರೂಗಳ ಪ್ರೋತ್ಸಾಹ ಧನ ಇತ್ತೀಚೆಗೆ ಇದು ಹೆಚ್ಚಾಗಿ ನೀಡುತ್ತಾರೆ. ಹಿಂದೂಗಳೆಲ್ಲ ನ್ಯಾಯಾಲಯದ ಮೂಲಕ ಮಾತ್ರ ವಿವಾಹ ವಿಚ್ಛೇದನವನ್ನು ಪಡೆಯಲು ಸಾಧ್ಯ ಆದರೆ ಮುಸಲ್ಮಾನರಲ್ಲಿ ಇದಕ್ಕೆ ಅವಕಾಶವಿದೆ. ವಿಧವೆಯರು ಪುನಃ ವಿವಾಹವಾಗಲು ಅನೇಕ ಜಾತಿಗಳಲ್ಲಿ ಅವಕಾಶವಿದೆ. ಮುಸಲ್ಮಾನರಲ್ಲಿ ವಿವಾಹವು ಕಾಯಿದೆಯಂತೆ ವಿಧಿವತ್ತಾಗಿ ನಡೆಸಲ್ಪಡುತ್ತದೆ. ಇಲ್ಲಿ ಖಾಜಿಯು ಗಂಡು ಮತ್ತು ಹೆಣ್ಣಿನ ಒಪ್ಪಿಗೆ (ಕಬೂಲ್) ಪಡೆಯುವನು. ಸಾಕ್ಷಿಗಳ ಸಮ್ಮುಖದಲ್ಲಿ ದಪ್ತರದಲ್ಲಿ ದಾಖಲು ಆಗುತ್ತದೆ. ಇವರಿಗೆ ಶವಾಯ್ ಕರೆಯುತ್ತಾರೆ. ಖಾಜಿಯು 'ನಿಖಾ' ಓದುತ್ತಾರೆ. ಹಿಂದೂಗಳ ಸಂಪ್ರದಾಯದಂತೆ ಲಚ್ಚಾ (ಕರಿಮಣಿ) ಉಪಯೋಗಿಸುತ್ತಾರೆ. ಮುದುವೆಯಾದ ನಂತರ ಮೊದಲನೆ ಶುಕ್ರವಾರ ಹುಡುಗನು ಹುಡುಗಿಯ ಮನೆಯಲ್ಲಿ ಔತಣಕ್ಕೆ ಹೋಗುತ್ತಾನೆ. ಮುಂದಿನ ಮೂರು ಶುಕ್ರವಾರಗಳು ಸಂಬಂಧಿಕರಲ್ಲಿ ಔತಣಕ್ಕೆ ಆಮಂತ್ರಿಸಲಾಗುತ್ತದೆ.

೭.೫ ಶವ ಸಂಸ್ಕಾರ :

ಹಿಂದೂಗಳಲ್ಲಿ ಆಯಾ ಜಾತಿ ಸಂಪ್ರದಾಯದ ಅನುಗುಣವಾಗಿ ಶವವನ್ನು ದಹನ ಹಾಗೂ ಹೂಳುವ ಎರಡು ಪದ್ಧತಿಗಳು ಇವೆ. ಬ್ರಾಹ್ಮಣರು ಹಾಗೂ ವಿಶ್ವಕರ್ಮರು ಮತ್ತು ವೈದಿಕ ಪದ್ಧತಿಗಳ ಅನುಯಾಯಿಗಳಲ್ಲಿ ಹೆಚ್ಚಾಗಿ ಶವವನ್ನು ವಾಹಕರು ಹೆಗಲ ಮೇಲೆ ಹೊತ್ತು ಸಾಗಿಸುವುದು. ಹಿರಿಯ ಮಗನು ಜೊತೆಗೆ ಬೆಂಕಿ ಹಚ್ಚುವುದು ರೂಢಿಯಲ್ಲಿದೆ. ಮರಣದ ಮೂರನೇ ದಿನ ಶವದ ಅಸ್ತಿ ಮತ್ತು ಬೂದಿಗಳನ್ನು ಗಡಿಗೆಯಲ್ಲಿ ಸಂಗ್ರಹಿಸಿ ನದಿಯಲ್ಲಿ ವಿಸರ್ಜನೆ ಮಾಡುವುದು. ಹನ್ನೆರಡನೇಯ ದಿನದಂದು ಸಪಿಂಡೀಕರಣ ವಿಧಿಯನ್ನು ಮಾಡುತ್ತಾರೆ. ಇದರಿಂದ ಅವರ ಕುಟುಂಬಕ್ಕೆ ಸೂತಕ ಪರಿಹಾರವಾಗುತ್ತದೆ. ಹದಿಮೂರನೆ ದಿವಸ ವೈಕುಂಠ ಸಮಾರಾಧನೆಯನ್ನು ಮಾಡಿ ಭೋಜನ ಏರ್ಪಡಿಸುತ್ತಾರೆ. ಮೊದಲ ವರ್ಷಾಬ್ಧಿಕ್ರಮವನ್ನು ನಂತರದಲ್ಲಿ ಪ್ರತಿವರ್ಷ ಸತ್ತದಿನ ಶ್ರಾದ್ಧವನ್ನು ಮಾಡುವುದು. ಅದಲ್ಲದೇ ಮಹಾಲಯ ಅಮವಾಸ್ಯೆಯಂದು ಮೃತ ಬಂಧುಗಳಿಗೆ ತರ್ಪಣ ಕೊಡುತ್ತಾರೆ. ಲಿಂಗಾಯತರಲ್ಲಿ ಶವಗಳನ್ನು ಹೂಳುತ್ತಾರೆ. ಹನ್ನೊಂದನೇ ದಿವಸ ಶಿವಗಣ ಆರಾಧನೆಯನ್ನು ಆಚರಿಸಿ ಭೋಜನ ಏರ್ಪಡಿಸುತ್ತಾರೆ. ಮುಸಲ್ಮಾನರಲ್ಲಿ ಶವವನ್ನು ಸ್ನಾನದಿಂದ ಶುದ್ಧಿಕರಿಸಿ ಹೊಸ ಬಟ್ಟೆ ಸುಗಂಧ ಹಚ್ಚಿ 'ಕುರ್‌ಆನ್'ನ ಪಠಣ ಮಾಡುತ್ತಾರೆ. ನಮಾಜ್ ಮಾಡುತ್ತಾರೆ. ಸತ್ತ ೧೦ ನೇದಿನ ೨೦ನೇದಿನ ಮತ್ತು ೪೦ ನೇದಿನ ಪ್ರಾರ್ಥನೆ ಸಲ್ಲಿಸಿ ಬಡ ಬಗ್ಗರಿಗೆ ಊಟ ಹಾಕಿ ದಾನ ಧರ್ಮವನ್ನು ಮಾಡುತ್ತಾರೆ.

ಗೃಹ ಜೀವನ :

ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಳ ಪ್ರಭಾವದಿಂದ ಇತ್ತೀಚೆಗೆ ನಗರ ಪ್ರದೇಶಗಳ ಗೃಹ ನಿರ್ಮಾಣ ಹಲವಾರು ಬದಲಾವಣೆ ಕಂಡು ಬಂದರೂ ಗ್ರಾಮಾಂತರ ಪ್ರದೇಶಗಳಲ್ಲಿ ಅಷ್ಟೊಂದು ಬದಲಾವಣೆ ಆಗಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕೆಂಪು ಕಲ್ಲಿನ ನೆಲ, ಮಣ್ಣಿನ ಗೋಡೆ, ಹಾಗೂ ಮರದ ಜಂತಿಗಳ ಮೇಲೆ ಬಿದಿರು ಚಾಪೆ, ಸೊಪ್ಪು ಅದರ ಮೇಲೆ ಹಾಳು ಮಣ್ಣು ಕಲಿಸಿ ಮೆತ್ತಿರುವ ಮೇಲ್ಛಾವಣಿ ಅಥವಾ ಕಡಪಾ ಕಲ್ಲು ಹಾಕಿಸುವುದು. ಅಥವಾ ನಾಡ ಹೆಂಚು ಅಥವಾ ಮಂಗಳೂರಿನ ಹೆಂಚು ಇಳಿಜಾರಾದ ಮೇಲ್ಛಾವಣಿಗೆ ಲೋಹದ ತಗಡು, ಸಿಮೆಂಟು ತಗಡು ಮುಂತಾದ ಸಾಮಗ್ರಿಗಳನ್ನು, ಗೋಡೆಗೆ ಇಟ್ಟಿಗೆ, ಕಲ್ಲುಗಳನ್ನು ಬಳಸುವುದು ರೂಢಿಯಲ್ಲಿದೆ. ಮುಸಲ್ಮಾನರ ಮನೆಯ ಗೋಡೆಗಳು ಎತ್ತರವಾಗಿದ್ದು ಇದಕ್ಕೆ ಮಹಿಳೆಯರ ಪರದಾ ಪದ್ಧತಿಯೇ ಕಾರಣ ವಿರಬುಹುದು.

ಆಹಾರಾಭ್ಯಾಸ : ಹಿಂದೂಗಳಲ್ಲಿ ಪ್ರಧಾನವಾಗಿ ಹೆಚ್ಚಾಗಿ ಬ್ರಾಹ್ಮಣರು, ಲಿಂಗಾಯತರು ಹಾಗೂ ವೈಶ್ಯರು ಮತ್ತು ಜೈನಮತಸ್ಥರು ಸಸ್ಯಾಹಾರಿಗಳಾಗಿದ್ದು, ಅನೇಕ ಜಾತಿಯವರು ಮಾಂಸಾಹಾರಿ ಗಳಾಗಿದ್ದಾರೆ. ಸಸ್ಯಾಹಾರಿಗಳಲ್ಲಿ ಹೆಚ್ಚಾಗಿ ಜೋಳದ ರೊಟ್ಟಿ, ಗೋದಿ ರೊಟ್ಟಿ, ಶೇಂಗಾ ಚಟ್ನಿ ಕರ್ಲಿ ಚಟ್ನಿ

ಗುರೆಳ್ಳು ಚಟ್ನಿ, ಅಗಸಿ ಚಟ್ನಿಗಳು ಎಲ್ಲಾ ದ್ವಿದಳ ಧಾನ್ಯಗಳ ಕಾಳು ಪಲ್ಲೆಗಳು ಸಾಮಾನ್ಯವಾಗಿವೆ. ಕಿಚಡಿ, ಅಂಬ್ಲಿ (ಸಂಗಟಿ), ನವಣೆ ಅನ್ನ, ಅಕ್ಕಿಅನ್ನ, ರೂಢಿಯಲ್ಲಿದೆ. ಹಬ್ಬ ಹರಿದಿನಗಳಲ್ಲಿ ಹೋಳಿಗೆ, ಕರಿಗಡುಬು, ನಾನಾ ರೀತಿಯ ಲಾಡು ಹುಗ್ಗಿ ವಿವಿದ ರೀತಿಯ ಹುಗ್ಗಿಗಳು ವಿವಿಧ ರೀತಿಯ ತಿಂಡಿ ತಿನಿಸುಗಳನ್ನು ಸಹಿತ ಮಾಡುತ್ತಾರೆ. ಹಾಲು ಹೈನುಗಳನ್ನು ಸಹಿತ ಸಮೃದ್ಧಿಯಾಗಿ ಬಳಸುತ್ತಾರೆ. ಮುಸಲ್ಮಾನರು ಹಾಗೂ ಕ್ರೈಸ್ತರು ಮಾಂಸಾಹಾರಿಗಳಾಗಿದ್ದು, ಕೆಲವು ಸಂದರ್ಭಗಳಲ್ಲಿ ಸಸ್ಯಾಹಾರವನ್ನು ಸಹ ಬಳಸುತ್ತಾರೆ.

ಉಡುಮು : ಹಿಂದೂಗಳಲ್ಲಿ ಗಂಡಸರು ಹೆಚ್ಚಾಗಿ ಧೋತರ ಅಥವಾ ಪಂಚೆಯನ್ನು ಕಚ್ಚೆಹಾಕಿ ಧರಿಸುವುದು ನಿಲುವಾಗಿ ತಲೆಗೆ ರುಮಾಲು, ರಟ್ಟಿನ ಟೋಪಿ, ಅಥವಾ ಗಾಂಧೀ ಟೋಪಿ, ಕೋಟು ಧರಿಸುವುದು ಸಾಮಾನ್ಯವಾಗಿದೆ. ಸ್ತ್ರೀಯರು ಸೀರೆ, ಮತ್ತು ಖಣದ ಕುಪ್ಪಸ, ವಿಶೇಷ ಸಂದರ್ಭಗಳಲ್ಲಿ ರೇಷ್ಮೇ ಸೀರೆಯನ್ನುಡುವುದು ಸಹಜವಾಗಿದೆ ಇತ್ತೀಚೆಗೆ ಕೆಲವು ಮಾರ್ಪಾಡುಗಳಾಗಿ, ಲುಂಗಿ ಪ್ಯಾಂಟ್ ಪೈಜಾಮು, ಸ್ಕರ್ಟ, ಚೂಡಿದಾರ, ಹೀಗೆ ಬದಲಾದ ಶೈಲಿ ರೂಢಿಯಲ್ಲಿವೆ.

ಗೃಹೋಪಕರಣ : ಗ್ರಾಮಾಂತರ ಪ್ರದೇಶಗಳಲ್ಲಿ ಕುಳಿತುಕೊಳ್ಳಲು ಸಾಮಾನ್ಯವಾಗಿ ಕಡ್ಡಿಚಾಪೆ ಈಚಲು ಚಾಪೆ, ಕಂಬಳ, ಗುಡಾರ, ಜಮಖಾನ, ಮೊದಲಾದವುಗಳನ್ನು ಬಳಸುತ್ತಾರೆ. ಮದ್ಯಮ ವರ್ಗದ ಮನೆಗಳಲ್ಲಿ ಕುರ್ಚಿ ಮೇಲುಮಂಚ, ಸ್ಟೂಲುಗಳು ಬಳಕೆಯಲ್ಲಿ ಕಂಡು ಬರುತ್ತವೆ. ಶ್ರೀಮಂತ ವರ್ಗದ ಅದರಲ್ಲೂ ಪಟ್ಟಣದ ಪ್ರದೇಶಗಳಲ್ಲಿ ಹೆಚ್ಚು ಬೆಲೆಯುಳ್ಳ ಕುರ್ಚಿ ಸೋಫಾ, ಊಟದ ಮೇಜು, ಮಂಚ, ಮೊದಲಾದವುಗಳನ್ನು ಮತ್ತು ಬೆತ್ತದ ವಿವಿಧರೀತಿಯ ಪೀಠೋಪಕರಣಗಳನ್ನು ಬಳಸುತ್ತಾರೆ. ಹಾಗೂ ಇತ್ತೀಚೆಗೆ ವಿವಿದ ರೀತಿಯ ಫೋನ್,ಫ್ಯಾನ್, ಮತ್ತು ವಾಹನಗಳು ಸರ್ವೆ ಸಾಮಾನ್ಯವಾಗಿ ಬಿಟ್ಟಿವೆ.

ಆಭರಣ : ಇದರ ಮೋಹ ಸಾರ್ವತ್ರಿಕವಾಗಿದೆ ಅದರಲ್ಲಿ ಸ್ತ್ರೀಯರೇ ಪ್ರಮುಖರು, ಓಲೆ, ಜುಮುಕಿ, ಕೈಬಳೆ, ಸರ, ನತ್ತು, ವಿವಿಧರೀತಿಯ ಉಂಗುರುಗಳು, ಕಾಲ್ಗೆಜ್ಜೆ, ಕೈಬಳೆ, ಪಾಟ್ಲಿ, ಬಿಲವಾರ, ಬಾಜುಬಂದ್, ನಾಗಬಂದಿ, ವಂಕಿ, ಜಡೆಹೂ, ಬೆಳ್ಳಿಯ ನಡುಪಟ್ಟಿ, ಬೈತಲೆ ಬೊಟ್ಟು, ಗೋಡಂಬಿ, ಚೈನು, ಗುಂಡಿನಸರ ಕಾಳಿನಸರ, ಪದಕದ ಸರ, ಚೈನು, ಉಡದಾರ, ಹೀಗೆ ಅನೇಕ ವಿವಿಧ ಆಭರಣಗಳನ್ನು ಧರಿಸುವ ಆಚರಣೆ ರೂಢಿಯಲ್ಲಿದೆ.

ಹಬ್ಬ : ಹಿಂದೂಗಳಲ್ಲಿ ವರ್ಷತುಂಬ ಹಬ್ಬಗಳನ್ನು ಆಚರಿಸುವ ವ್ರತ-ಉಪವಾಸ, ಕೈಗೊಳ್ಳುವ ಅನೇಕ ಪವಿತ್ರ ದಿನಗಳಿವೆ, ಬೇರೆ ಬೇರೆ ಪಂಥದವರಿಗೆ ಬೇರೆ ಬೇರೆ, ಹಬ್ಬ ಹರಿದಿನಗಳ ಆಚರಣೆಗಳಿವೆ ಅವುಗಳಲ್ಲಿ ಪ್ರಮುಖವಾದವುಗಳು.[33] ಯುಗಾದಿ ಆರಂಬವಾಗುವ ಚೈತ್ರ ಮಾಸದ ಪ್ರಥಮ ದಿನ ಈ ಹಬ್ಬದ ಹಿಂದಿನ ನೀರು ತುಂಬುವ ಪಾತ್ರೆ ಮೇಲೆ ಸುಣ್ಣ ಬಣ್ಣಗಳಿಂದ ಸಿಂಗಾರ ಮಾಡಿ ನೀರು ತುಂಬಿ ಬೇವಿನ ಸೊಪ್ಪನ್ನು ಹಾಕುವರು. ಹಬ್ಬದ ದಿನ ಮುಂಜಾನೆ ಮನೆಯವರೆಲ್ಲರೂ ತೈಲಾಭ್ಯಂಜನ

ಮಾಡುವರು. ಬೇವಿನ ತಪ್ಪಲಿನ ಸತ್ವದಿಂದ ಕೂಡಿನ ನೀರು ಚರ್ಮರೋಗವನ್ನು ದೂರ ಮಾಡುವುದೆಂದು ಹೇಳುತ್ತಾರೆ. ಈ ದಿನ ಬೇವು-ಬೆಲ್ಲವನ್ನು ಸ್ವೀಕರಿಸುತ್ತಾರೆ. ಹೊಸ ವರುಷದ ಹಿಂದೂ ಪಂಚಾಂಗವನ್ನು ಓದುತ್ತಾರೆ. ಯುಗಾದಿಯ ಮಾರನೇದಿನ ಬೇಟೆಯಾಡುವ ದಿನವೆಂದು ಆಚರಿಸುವ ಪದ್ಧತಿ ಇದೆ. ಮರಾಠಿ ಜನ ಬಣ್ಣದ ಬಟ್ಟೆಯನ್ನು ಕೋಲಿನ ತುದಿಗೆ ಸಿಕ್ಕಿಸಿ ಅದರ ಮೇಲೆ ಚಂಬೊಂದನ್ನು ಕಳಸದಂತೆ ಸಿಕ್ಕಿಸಿ ಧ್ವಜವಾಗಿ ಮನೆಯಮುಂದೆ ಹಾರಿಸುತ್ತಾರೆ. ಇದನ್ನು "ಗುಡಿ ಪಾಡವಾ" ಎಂದು ಕರೆಯುತ್ತಾರೆ. ಚೈತ್ರ ಶುದ್ದಿ ತದಿಗೆ ದಿನ 'ವಸಂತ ಗೌರಿ' ಪೂಜೆಯನ್ನು ಮಾಡುತ್ತಾರೆ. ಚೈತ್ರ ಮಾಸದ ಒಂಬತ್ತನೇ ದಿನ ರಾಮನವಮಿಯನ್ನು ಚೈತ್ರ ಶುದ್ಧ ಪೂರ್ಣಮಿಗೆ ಸುಮಂಗಲೆಯರು ವನದೇವತೆಯನ್ನು, ಪೂಜಿಸಿ ದವನವನ್ನು ದೇವರಿಗೆ ಮತ್ತು ತಮ್ಮ ಮುಡಿಗೆ ಮುಡಿಸಿಕೊಳ್ಳುವುದು ರೂಢಿಯಲ್ಲಿದೆ. ಈ ದಿನವೇ ಹನುಮ ಜಯಂತಿಯನ್ನು ಎಲ್ಲರೂ ಆಚರಿಸುತ್ತಾರೆ., ಚೈತ್ರಮಾಸದ ಅಮವಾಸ್ಯೆಯನ್ನು ಕರಗದ ಅಮವಾಸ್ಯೆ ಎಂದು ಆ ದಿನ ರೈತರು ತಮ್ಮ ಜಮೀನುಗಗಳಿಗೆ ಹೋಗಿ ಊಟಮಾಡಿ ಬರುತ್ತಾರೆ.ವೈಶಾಖ ಶುದ್ಧ ತೃತಿಯಾವನ್ನು ಅಕ್ಷಯ ತೃತಿಯಾ ಎಂದು ಇದನ್ನು ಬಸವ ಜಯಂತಿ ಎಂದು ಬಸವಣ್ಣನವರ ಜನ್ಮದಿನವೆಂದು ಎಲ್ಲರೂ ವಿಜೃಂಬಣೆಯಿಂದ ಆಚರಿಸುತ್ತಾರೆ. ವೈಶಾಖ ಶುದ್ದ ಹುಣ್ಣಿಮೆಯ ದಿನ ವಿಷ್ಣುವಿನ ನಾಲ್ಕನೇ ಅವತಾರವಾದ ನರಸಿಂಹದೇವರ ಜಯಂತಿಯನ್ನು ಕೆಲವು ಬ್ರಾಹ್ಮಣರು ಆಚರಿಸುತ್ತಾರೆ. ಜೇಷ್ಠ ಮಾಸದ ಹುಣ್ಣಿಮೆಯನ್ನು 'ಕಾರ ಹುಣ್ಣಿಮೆ' ರೈತರು ತಮ್ಮ ಎತ್ತುಗಳಿಗೆ ಸಿಂಗರಿಸಿ, ಊರ ಅಗಸಿಮುಂದೆ ಅಲಂಕಾರದಿಂದ ಕಟ್ಟಿದ ಕರಿಯನ್ನು ಹರಿಯಲು ಓಡಿಸುತ್ತಾರೆ. ಕೆಂದೆತ್ತು ಕರಿಹರಿದರೆ ಕೆಂಜೋಳ, ಬಿಳಿಎತ್ತು ಕರಿ ಹರಿದರೆ ಬಿಳಿಜೋಳ ಬೆಳೆಯುವುದೆಂದು, ಅಮವಾಸ್ಯೆಯ ದಿನ ಮಣ್ಣಿನ ಎತ್ತುಗಳನ್ನು ಪೂಜಿಸುವರು. ಆಷಾಢಮಾಸದ ಪ್ರತಿ ಸೋಮವಾರ ಮಕ್ಕಳು ಕೆರೆಯ ಸಮೀಪ ಹೋಗಿ ಮಣ್ಣು ನೀರು ತಂದು ಗೋಪುರಾಕೃತಿ ಮಾಡಿ ಗುಳ್ಳವ್ವನ ಹಬ್ಬ ಎಂದು ಆಚರಿಸುತ್ತಾರೆ. ಶ್ರಾವಣಮಾಸದಲ್ಲಿ ಪ್ರತಿಸೋಮವಾರ ಬಸವಣ್ಣನ ದೇವಾಲಯಕ್ಕೆ ಪ್ರತಿ ಮಂಗಳವಾರ ಸ್ತ್ರೀಯರು ಮಂಗಳ ಗೌರಿ ವ್ರತವನ್ನು ಪ್ರತಿ ಶುಕ್ರವಾರ ಸಂಪತ್ ಶುಕ್ರವಾರ ವೆಂದು ಲಕ್ಷ್ಮಿ ಸಹಿತಳಾದ ಗೌರಿಯ ಮೂರ್ತಿಯನ್ನು ಪೂಜಿಸುತ್ತಾರೆ. ವಿವಿಧ ರೀತಿಯ ತಿಂಡಿಗಳು, ಕಡುಬಗಳನ್ನು ಮಾಡಿ ನೈವೇದ್ಯ ಮಾಡುತ್ತಾರೆ. ಅನೇಕ ಆಟಗಳನ್ನು ಆಡುತ್ತಾರೆ. ಶ್ರಾವಣ ಬಹುಳ ಎಂಟನೇ ದಿನ ಕೃಷ್ಣನ ಹುಟ್ಟುಹಬ್ಬದ ಅಂಗವಾಗಿ ಗೋಕುಲಾಷ್ಟಮಿಯನ್ನು ಆಚರಿಸುತ್ತಾರೆ. ಭಾದ್ರಪದ ಈ ದಿನದಂದು ಗಣಪತಿಯನ್ನು ಮಾಡಿ ನಿರ್ವಿಘ್ನದಾಯಕನೆಂದು ಸಾಮಾನ್ಯವಾಗಿ ಮಣ್ಣಿನಿಂದ ಪ್ಲಾಸ್ಟರ್ ಆಫ್ ಪ್ಯಾರೀಸ್ ನಿಂದ ಮಾಡಿದ ಗಣಪತಿಯನ್ನು ಪ್ರತಿಷ್ಠಾಪಿಸಿವರು. ಪೂಜೆಮಾಡಿ ಕೆಲವರು ಅಂದೆ ಕೆಲವರು ೫,೧೧,೧೫, ಮತ್ತು ತಿಂಗಳಿಗೆ ಗಣೇಶನನ್ನು ವಿಸರ್ಜಿಸುವ ರೂಢಿ ಇದೆ. ಆಶ್ವೀನ ಶುದ್ಧ ಮೊದಲನೇ ದಿನ ನವರಾತ್ರಿ ಪಾಢ್ಯವಾಗಿದ್ದು ಇದನ್ನು ದಸರಾ ಹಬ್ಬವೆಂದು ಕರೆಯುತ್ತಾರೆ. ಇದನ್ನು ನಾಡಹಬ್ಬವನ್ನಾಗಿ

ಸ್ವಾತಂತ್ರ ಸಂಗ್ರಾಮದ ದಿನಗಳಿಂದ ರೂಢಿಯಲ್ಲಿದೆ. ಶಿರಹಟ್ಟಿ ಪರಿಸರದಲ್ಲಿ ಭಾವೈಕ್ಯತೆಯ ವಿಶೇಷವೇನೆಂದರೆ ಕೆಲ ಗ್ರಾಮಗಳಲ್ಲಿ ಮಸೀದೆಗಳಲ್ಲಿ ಮುಸಲ್ಮಾನರಲ್ಲರು ಮೊಹರಂ ಆಚರಿಸುತ್ತಾರೆ. ಕೆಲ ಗ್ರಾಮಗಳಲ್ಲಿ ಶರಣ ಬಸವೇಶ್ವರ ಪುರಾಣ, ಗಣಪತಿ ಹಬ್ಬಗಳನ್ನು ಮುಸಲ್ಮಾನರೇ ಪ್ರಮುಖ ಕಾರ್ಯಕರ್ತರಾಗಿ ಕೆಲಸ ಮಾಡುತ್ತಾರೆ. ಶಿರಹಟ್ಟಿ ಜಗದ್ಗುರು ಶ್ರೀ ಫಕೀರೇಶ್ವರರ ಸಾನಿಧ್ಯದಲ್ಲಿ ನಡೆಯುವ ದಸರಾ ಉತ್ಸವದಲ್ಲಿ ಒಂಟಿ ಮತ್ತು ಆನೆಗಳೆರಡೂ ಇರುತ್ತವೆ. ಒಂಟಿ ಮುಸಲ್ಮಾನರ ಸಂಕೇತವಾದರೆ ಆನೆ ಹಿಂದೂಗಳ ಸಂಕೇತ ವಾಗಿರುತ್ತದೆ. ಶಿರಹಟ್ಟಿಯ ಗರಿಬನವಾಜ ಮಸೀದಿಯ ಮುಂದೆ ಬನ್ನಿ ಮುಡಿಯುವಾಗ ಡಂಕೆ ಇತ್ಯಾದಿ ವಾದ್ಯಗಳನ್ನು ಬಾರಿಸುವ ರೂಢಿ ಇದೆ.[೨೮]

ಕಾರ್ತಿಕ ಶುದ್ಧ ಪಾಡ್ಯದಂದು ಬಲಿಪಾಡ್ಯಮಿಯೆಂದು ಬಲಿಚಕ್ರವರ್ತಿಯನ್ನು ಪೂಜಿಸುತ್ತಾರೆ. ಹಬ್ಬದ ಕೊನೆಯದಿನ ಪಾಂಡವ ಪಂಚಮಿಯನ್ನು ಆಚರಿಸಿ ಆಕಾಶ ಬುಟ್ಟಿಗಳನ್ನು ಎಲ್ಲರ, ಮನೆಯ ಮುಂದ ಹಾರಿಸುವ ಪದ್ದತಿ ಇದೆ. ದೀಪಾವಳ ಪಾಡ್ಯವನ್ನು ಹಟ್ಟಿ ಹಬ್ಬವೆಂದು ತುಳಸಿ ಲಗ್ನವನ್ನು ಆಚರಿಸುತ್ತಾರೆ. ಮಾರ್ಗಶಿರ ಮಾಸದ ಹುಣ್ಣಿಮೆದಿನ ದತಾತ್ರೇಯ ಜಯಂತಿಯನ್ನು ಆಚರಿಸುತ್ತಾರೆ. ಎಳ್ಳು ಅಮವಾಸ್ಯೆಯನ್ನು ಹಿಂಗಾರಿ ಬೆಳೆಗಳಗೆ ರೈತರೆಲ್ಲರೂ ಹೊಲಗಳಲ್ಲಿ ಪೂಜಿಸುವ ರೂಢಿಇದೆ. ಜನೇವರಿ ೧೪-ಸಂಕ್ರಾಂತಿಯ ಹಬ್ಬವನ್ನು ಎಲ್ಲರೂ ಎಳ್ಳು-ಬೆಲ್ಲ ಹಂಚುತ್ತಾ ಎಲ್ಲರೂ ಸಹಿಯಾಗಿರೋಣ ಎಂದು ಆಚರಿಸುತ್ತಾರೆ.

ಮಾಘಮಾಸದ ಹಿಂದಿನ ದಿನ ಮಹಾಶಿವರಾತ್ರಿ ಇದು ಶಿವಭಕ್ತರಿಗೆ ಮಹತ್ವ ಪೂರ್ಣವಾದ ಆಚರಣೆಯಾಗಿದೆ. ಫಾಲ್ಗುಣಮಾಸದ ಹುಣ್ಣಿಮೆಯಂದು ಹೋಳ ಅಥವಾ ಕಾಮನ ಹಬ್ಬವನ್ನು ಆಚರಿಸುತ್ತಾರೆ. ಹುಣ್ಣಿಮೆಯ ಮೊದಲದಿನ ಕಾಮನ ದಹನಕ್ಕೆ ಬೇಕಾದ ಸಾಮಗ್ರಿಗಳನ್ನು ಊರ ಪ್ರಮುಖ ಸ್ಥಳಗಳಲ್ಲಿ ಸಂಗ್ರಹಿಸಿ, ಕಾಮನನ್ನು ರಾತ್ರಿಪೂರ್ತಿ ಮೆರವಣಿಗೆ ಮೂಲಕ ಅಶ್ಲೀಲದ ಮಾತುಗಳನ್ನು ಕಿರಚುತ್ತಾ ಹಾಡುಗಳನ್ನು ಹಾಡುತ್ತಾ, ಕಾಮದಹನ ಮಾಡುವರು ಕೆಲವು ಊರುಗಳಲ್ಲಿ ಅಂದೇ ಬಣ್ಣದ ನೀರಿನಿಂದ ಓಕುಳ ಆಡುವರು ಕೆಲವು ಊರುಗಳಲ್ಲಿ ಐದನೇ ದಿನ ರಂಗಪಂಚಮಿ ಮಾಡಿ ಓಕುಳ ಆಡುವರು.

ಮುಸ್ಲಿಮರ ಹಬ್ಬಗಳು : ಈದ್-ಉಲ್-ಫಿತರ್ ಅಥವಾ ರಮಂಜಾನ ತಿಂಗಳ ಕೊನೆಯಲ್ಲಿ ಬರುವ ಉಪವಾಸದ ಮೂರನೇ ದಿನ ಮತ್ತು ಜಿಲ್-ಹಾಜ್ ತಿಂಗಳ ಹತ್ತನೇ ದಿನ ಬರುವ ಇದ್-ಉಲ್-ಯಹ ಅಥವಾ ಬಕ್ರೀದ ಈ ಹಬ್ಬಗಳನ್ನು ಇವರು ಈದ ಮೈದಾನಕ್ಕೆ ಹೋಗಿ ಪ್ರಾರ್ಥನೆ ಮಾಡುತ್ತಾರೆ. ಶಾಬಾನ ತಿಂಗಳ ಹದಿನೈದನೇಯ ದಿವಸಗಳಲ್ಲಿ ಬರುವ ಶವ್-ಎ-ಬರಾತ್ ಹಬ್ಬವನ್ನು ಸಂಜೆಗೆ ಸಾಂಗಗೊಳಸುತ್ತಾರೆ. ಪೈಗಂಬರ ಜನ್ಮದಿನವಾದ ಈದ್ ಮಿಲಾದ್ ಹಾಗೂ ಮೊಹರಂಗಳು ಇವರು ಆಚರಿಸುವ ಹಬ್ಬಗಳಾಗಿವೆ. ಹೀಗೆ ಶಿರಹಟ್ಟಿ ಪರಿಸರದಲ್ಲಿ ನಡೆಯಯುವ ಪ್ರಮುಖ ಆಚರಣೆಗಳಾಗಿವೆ.

೭.೫ ನಾಟಕ ಕಲೆ :

ಕರ್ನಾಟಕದ ವೃತ್ತಿ ರಂಗಭೂಮಿಯ ಇತಿಹಾಸದಲ್ಲಿಯು ಶಿರಹಟ್ಟಿಯ ಹೆಸರು ಚಿರಸ್ಮರಣೀಯ. ಇಲ್ಲಿಯ ಶ್ರೀ ಮಹಾಲಕ್ಷ್ಮೀ ಪ್ರಸಾದಿಕ ಸಂಗೀತ ನಾಟಕ ಮಂಡಳಿಯು ಸಲ್ಲಿಸಿದ ಕೊಡುಗೆ ವಿಶಿಷ್ಟವಾಗಿದ್ದು. ಈ ನಾಟಕ ಮಂಡಳಿಯನ್ನು ಕಟ್ಟಿಬೆಳೆಸಿದವರು ಶ್ರೀ ವೆಂಕೋಬರಾಯರು. ಇವರು ಮೂಲತಃ ಕೊಪ್ಪಳದವರಾದರೂ ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡು ನಂತರ ತಾಯಿಯ ತವರು ಮನೆಯಾದ ಶಿರಹಟ್ಟಿಯಲ್ಲಿಯೇ ಬೆಳೆದರು. ತಮ್ಮ ಶಾಲಾ ಜೀವನದಿಂದಲೇ ಮುಖಕ್ಕೆ ಬಣ್ಣ ಬಳಿದುಕೊಂಡು ನಾಟಕದಲ್ಲಿ ಪಾತ್ರ ವಹಿಸುವ ಗೀಳು ಶ್ರೀ ವೆಂಕೋಬರಾಯರಿಗಿತ್ತು. ಮುಂದೆ ಅದೊಂದು ಹವ್ಯಾಸವಾಗಿ ಬೆಳೆಯಿತು. ಇದರಿಂದಾಗಿ ಅವರು ತಮ್ಮ ೧೫ ನೇ ವಯಸ್ಸಿನಲ್ಲಿ ಅಂದರೆ ಕ್ರಿ.ಶ. ೧೯೦೩ ರಲ್ಲಿ ಶ್ರೀ ಮಹಾಲಕ್ಷ್ಮೀ ಪ್ರಸಾದಿಕ ಸಂಗೀತ ನಾಟಕ ಮಂಡಳಿಯನ್ನು ಕಟ್ಟಿದರು ತಮ್ಮ ಗೆಳೆಯರಾದ ರೊಟ್ಟಿ ಗೋವಿಂದಚಾರ್ಯ, ವರವಿ ಚನ್ನಯ್ಯ ಸೋಗಿಹಾಳದ ಕೊರ್ಟಯ್ಯ, ಮೊದಲಾದವರೊಂದಿಗೆ ಸೇರಿಕೊಂಡು "ಸುಂದೋಪ" ಸುಂದ ಎಂಬ ಪ್ರಥಮ ನಾಟಕವನ್ನು ಯಾವ ರಂಗ ಪರಿಕರಗಳ ಆಡಂಬರವಿಲ್ಲದೇ ಶಿರಹಟ್ಟಿಯಲ್ಲಿ ಅಭಿನಯಿಸಿ ಜನಮೆಚ್ಚುಗೆಯನ್ನೇ ಪಡೆದರು ನಂತರ ಕ್ರಿ.ಶ. ೧೯೦೬ ರಲ್ಲಿ "ಶ್ರೀನಿವಾಸ ಕಲ್ಯಾಣ" ಎಂಬ ನಾಟಕವನ್ನು ಶ್ರೀ ಫಕೀರಸ್ವಾಮಿ ಜಾತ್ರೆಯಲ್ಲಿ ಅಭಿನಯಿಸಿ ಯಶಸ್ವಿಯಾದರು.

ಹೀಗೆ ಶಿರಹಟ್ಟಿಯಲ್ಲಿ ಪ್ರಾಯೋಗಿಕವಾಗಿ ನಾಡಿನ ಒಳಹೊರಗೂ ಸಂಚಾರ ಹೊರಟಿತು. ಕ್ರಿ.ಶ. ೧೯೦೮ ರಲ್ಲಿ ಈ ನಾಟಕ ಕಂಪನಿ ಧಾರವಾಡದಲ್ಲಿ ಕ್ಯಾಂಪ ಮಾಡಿತು. ಆಗ ಸ್ವದೇಶಿ ಚಳುವಳಿಯ ಪ್ರಚಾರ ನಿಧಿ ಸಂಗ್ರಹಣೆ ಕಾರ್ಯನಡೆದಿತ್ತು. ಈ ಕಾರ್ಯದ ನೇತೃತ್ವ ವಹಿಸಿದ ಬಾಲಗಂಗಾಧರ ತಿಲಕರು ಧಾರವಾಡಕ್ಕೆ ಆಗಮಿಸಿದಾಗ ವೇಂಕೊಬರಾಯರು ಅವರನ್ನು ನಾಟಕಕ್ಕೆ ಆಮಂತ್ರಿಸಿ ಅಂದಿನ ಪ್ರಯೋಗದ ಉತ್ಪನ್ನವನ್ನೇ ತಿಲಕ್ ಅವರಿಗೆ ಅರ್ಪಿಸಿದರು.

ಕ್ರಿ.ಶ. ೧೯೧೦ ರಲ್ಲಿ ಶ್ರೀ ವೇಂಕೋಬರಾಯರ ಕಂಪನಿ ಬೆಂಗಳೂರಿನಲ್ಲಿ ವಾಸ್ತವ್ಯ ಮಾಡಿ "ಭೋಜ ಪ್ರಬಂಧ" ಮತ್ತು ಭಕ್ತ ಪ್ರಲ್ಹಾಧ" ಎಂಬ ನಾಟಕಗಳನ್ನು ಅಭಿನಯಿಸಿ ಜನರ ಹೊಗಳಿಕೆಗೆ ಪಾತ್ರವಾಯಿತು. ಶಿರಹಟ್ಟಿ ಕಂಪನಿಯ ರಂಗ ಸಂಗೀತದ ಜನಪ್ರೀಯತೆ ಮೈಸೂರು ಮಹಾರಾಜರಿಗೂ ತಲುಪಿತ್ತು ಅವರು ತಮ್ಮ ಅರಮನೆಗೆ ವೆಂಕೋಬರಾಯರ ಕಂಪನಿಯನ್ನು ಆಹ್ವಾನಿಸಿ ಭೋಜ ಪ್ರಬಂಧ ಮತ್ತು ಪ್ರಹ್ಲಾದ ನಾಟಕಗಳನ್ನು ನೋಡಿ ಆನಂದಿತರಾದದ್ದಲ್ಲದೇ ಕಂಪನಿಗೆ ೨೦೦೦ ರೂಪಾಯಿ ಪ್ರೋತ್ಸಾಹ ಧನ ಮತ್ತು ನಾಟಕ ಕಲಾವಿದರಿಗೆ ಸುವರ್ಣ ಪದಕನೀಡಿ ಗೌರವಿಸಿದರು ಇದು ಅಲ್ಲದೇ ಕ್ರಿ.ಶ. ೧೯೨೯ ರಲ್ಲಿ ಈ ನಾಟಕ ಕಂಪನಿ ಮಂಗಳೂರಿನಲ್ಲಿ ಕ್ಯಾಂಪು ಮಾಡಿತ್ತು. ಆಗ ನಾ.ಸೂ. ಹರ್ಡೇಕರ ರಾಷ್ಟ್ರೀಯ ಸೇವಾದಲದ ಸಮ್ಮೇಳನದ ಉದ್ಘಾಟನೆಗಾಗಿ ಪಂಡಿತ ಜವಾಹರಲಾಲ ನೆಹರು ಅವರು ಮಂಗಳೂರಿಗೆ ಆಗಮಿಸಿದ್ದರು ಆ ಸಂಧರ್ಭದಲ್ಲಿ

ವೆಂಕೋಬರಾಯರು ನೆಹರೂರವರನ್ನು ತಮ್ಮ ಕಂಪನಿಯ ನಾಟಕನೋಡಲು ಆಮಂತ್ರಿಸಿ ಅವರ ಸಮ್ಮುಖದಲ್ಲಿ ಕನ್ನಡ ನಾಟಕವನ್ನು ಅಭಿನಯಿಸಿ ಅವರ ಮೆಚ್ಚುಗೆಯನ್ನೇ ಗಳಸಿದ್ದಾರೆ. ಕ್ರಿ.ಶ. ೧೯೧೭ ರಿಂಧ ೧೯೩೨ ರ ವರೆಗೆ ಶ್ರೀ ಮಹಾಲಕ್ಷ್ಮೀ ಪ್ರಸಾದಿಕ ಸಂಗೀತ ನಾಟಕ ಮಂಡಳಿಯು ಸಾಧನೆ ಕನ್ನಡ ರಂಗ ಭೂಮಿ ಹೆಮ್ಮೆ ಪಟ್ಟುಕೊಳ್ಳುವಂತಹದ್ದು. ಅಂದಿನ ಕಾಲದಲ್ಲಿ ಮರಾಠಿ ನಾಟಕ ಮಂಡಳಿಗಳ ಸರಿಸಾಟಿಯಾಗಿ ಈ ಕಂಪನಿ ಬೆಳೆದು ನಿಂತಿತ್ತು. ವಾಮನರಾಯರ ಕಂಠಶ್ರೀ ಇಂದ ತೇಲಿಬರುವ ಹಾಡನ್ನು ಕೇಳಿ ಜನರು ಹರ್ಷೋದ್ಗಾರ ಮಳೆಗರೆಯುತ್ತಿದ್ದರು. ಈ ಕಂಪನಿ ಕರ್ನಾಟಕ ಮಾತ್ರವಲ್ಲದೇ ಮದ್ರಾಸ್, ಕೊಯಿಮತ್ತೂರ, ಮಿರಜ, ಸಾಂಗಲಿ, ಇಚಲಕರಂಜಿ, ಸೊಲ್ಲಾಪೂರ ಮುಂತಾದ ಹೊರ ರಾಜ್ಯಗಳಲ್ಲಿಯೂ ತಿಂಗಳುಗಟ್ಟಲೇ ನೆಲೆಯೂರಿ ನಾಟಕವನ್ನು ಪ್ರದರ್ಶನಗೊಳಿಸಿ ಶಿರಹಟ್ಟಿಯ ಹೆಸರನ್ನು ಜನಪ್ರಿಯ ಗೊಳಿಸಿತ್ತು. ಸಂಗೀತ, ವಿದ್ಯುತ್ ದೀಪಾಲಂಕಾರ ಮುಂತಾದ ಅದ್ದೂರಿ ಪ್ರದರ್ಶನದಿಂದ ಶಿರಹಟ್ಟಿ ಕಂಪನಿ ಸಾಂಗಲಿ ಸಂಸ್ಥಾನದ ಮನಸ್ಸನ್ನೆ ಸೂರೆಗೊಂಡಿತ್ತು. ಎಸ್. ನಿಜಲಿಂಗಪ್ಪ, ದೇವರಾಜ ಅರಸ್, ವೈಕುಂಠ ಮೊದಲಾದವುಗಳು ಉತ್ತರ ಕರ್ನಾಟಕದ ಕರ್ನಾಟಕದಲ್ಲಿ ಭಾಗವಹಿಸಿ ಭಾಷಣ ಮಾಡುವಾಗ ನಾವೆಲ್ಲ ಶಿರಹಟ್ಟಿ ಕಂಪನಿಯ ನಾಟಕ ನೊಡಿದ್ದೇವೆ. ಎಂದು ಹೆಮ್ಮೆಯಿಂದ ಹೇಳಕೊಳ್ಳುತ್ತಿದ್ದರು.[೨] ಕ್ರಿ.ಶ. ೧೯೧೦ ರಲ್ಲಿ ಶಿರಹಟ್ಟಿ ಕಂಪನಿಯು ರಂಗಮಂಚನ್ನೆರಿದ ಮೊದಲ ನಟಿ ಇಮ್ಮಾಸಾನಿ ಪಾತ್ರಕ್ಕೆ ಸಹಜ ಅಭಿನಯ ಮಧುರ ಕಂಠದ ಹಾಡುಗಳಿಂದ ಅಕೆಯ ಹೆಸರು ಇಂದಿಗೂ ಜನಮನದಲ್ಲಿ ಅಚ್ಚಳಿಯದೇ ಉಳಿದಿದೆ. ಶ್ರೀ ವೆಂಕೋಬರಾಯರಿಗೆ ಕಂಪನಿ ವಿದ್ಯುತ್ ದೀಪ ಬಳಸಿಕೊಂಡ ಪ್ರಥಮ ನಾಟಕ ಕಂಪನಿಗಳಲ್ಲೊಂದಾಗಿದೆ. ಶಿರಹಟ್ಟಿ ವೆಂಕೋಬರಾಯರ ಕಂಪನಿ ಕನ್ನಡನಾಡಿಗೆ ಮತ್ತು ರಂಗ ಭೂಮಿಗೆ ಸಲ್ಲಿಸಿದ ಸೇವೆ ಗಮನಾರ್ಹವಾಗಿದ್ದು. ಶಿರಹಟ್ಟಿ ತಮ್ಮಣ್ಣನಾಯಕ ಅವರು ವೇಂಕೋಬರಾಯರಿಗೆ ಸಹಾಯ ಸಹಕಾರ ಪ್ರೋತ್ಸಾಹ ನೀಡಲು ಬೆನ್ನೆಲುಬಾಗಿ ನಿಂತಿದ್ದರು. ಶಿರಹಟ್ಟಿ ಪರಿಸರದ ಜನತೆ ನಾಟಕ ಕಲೆಗಳಲ್ಲಿ ತುಂಬಾ ಅಭಿರುಚಿಯುಳ್ಳವರು ದೂರ ದರ್ಶನದಂತಹ ಆಧುನಿಕ ಮಾದ್ಯಮಗಳು ಕಣ್ಣೆದುರಿಗೆ ಇದ್ದರೂ ನಾಟಕವನ್ನು ನೋಡುವ, ನಾಟಕ ಕಂಪನಿಗಳನ್ನು ಪ್ರೋತ್ಸಾಹಿಸುವ, ಕಲಾವಿದರನ್ನು ಅವರಿ ಹಿಂದಿನ ಮನೋಧರ್ಮ ಕಡಿಮೆಯಾಗಿಲ್ಲ. ಇದಕ್ಕೆ ಸಾಕ್ಷಿ ಸಂಗಮೇಶ್ವರ ನಾಟ್ಯ ಸಂಘ, ಗುಡಗೇರಿಯ ಕಂಪನಿಯವು ಶಿರಹಟ್ಟಿಯಲ್ಲಿ ಅಭಿನಯಿಸಿದ ಶಿರಹಟ್ಟಿ ಕರ್ತೃ "ಶ್ರೀ ಜಗದ್ಗುರು ಫಕೀರೇಶ್ವರ ಮಹಾತ್ಮೆ" (ಬಸವರಾಜ ಬೆಂಗೇರಿ ಕರ್ತೃ) ಎಂಬ ಆಧ್ಯಾತ್ಮಿಕ ನಾಟಕ ದಿನಾಂಕ ೨೩-೦೩-೧೯೯೭ ರಿಂದ ೧೫-೦೨-೧೯೯೮ ರ ವರೆಗೆ ನಡೆದು ೨೭೭ ಪ್ರಯೋಗ ಕಂಡಿರುವುದು. ಇದು ಒಂದೇ ನಾಟಕ ಗ್ರಾಮೀಣ ಮಟ್ಟದಲ್ಲಿ ಇಷ್ಟೊಂದು ಪ್ರಯೋಗ ಕಂಡಿರುವುದು ಇಲ್ಲಿನ ಜನತೆಯು ನಾಟಕದ ಮೇಲಿಟ್ಟ ಅಭಿಮಾನವೇ ಕಾರಣ. ಶಿರಹಟ್ಟಿಯಲ್ಲಿ ವೆಂಕೋಬರಾಯರ ಕಂಪನಿ ಪ್ರಸಿದ್ಧವಾದರೆ. ಲಕ್ಷ್ಮೇಶ್ವರದಲ್ಲಿದ್ದ ಸ್ತ್ರೀ ಸಂಗೀತ ನಾಟಕ ಮಂಡಳಿಯು ಕೇವಲ

ಸ್ತ್ರೀಯರಿಂದಲೇ ನಡೆಯುತ್ತಿತ್ತು. ಪುರುಷ ಪಾತ್ರಗಳನ್ನು ಸ್ತ್ರೀಯರೇ ಮಾಡುತ್ತಿದರು. ಇವೆರಡು ಕಂಪನಿಗಳು ಕ್ರಿ.ಶ. ೧೯೦೦ ರಿಂದ ೧೯೩೫ ರ ಅವಧಿಯಲ್ಲಿ ಕನ್ನಡ ರಂಗ ಭೂಮಿಗೆ ಮೆರೆಯಲಾಗದ ಕೊಡುಗೆಯನ್ನೇ ನೀಡಿವೆ. ನಾಟಕ ಕಂಪನಿ ಯಶಸ್ವಿಗೆ ಇಲ್ಲಿಯ ವೇಂಕೋಬರಾಯರು, ಇಮ್ಮಾಸಾನಿ, ರೊಟ್ಟಿ ಗೋವಿಂದಾಚಾರ್ಯ, ಮರಿಯಪ್ಪ ತಳವಾರ, ಸೀಮಣ್ಣಿ ಅಕ್ಕಿ, ಶಿವಪ್ಪ ಕಪ್ಪತ್ತನವರ, ಶಿವಾ ಜೋಗೆಪ್ಪ ಸಂಕದಾಳ, ಅಬ್ದುಲ್ ಖಾದರ ಅತ್ತಾರ, ಬಸವಣ್ಣೆಪ್ಪ ಪಲ್ಲೇದ ಮುಂತಾದ ಕಲಾವಿದರು ಕಾರಣರಾಗಿದ್ದಾರೆ. ಇದು ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ ಬೇಂದ್ರೆಯವರ ಹುಟ್ಟೂರು ಇದಾಗಿದೆ.

ಕೆರೆಗಳು : ಗಂಗಮಾರಸಿಂಹ ಅಜ್ಜಿ ಬುಜ್ಜಬ್ಬರಸಿಯು ಈ ಊರಿನಲ್ಲಿ ಕೆರೆಯನ್ನು ಕಟ್ಟಿಸಿ ತೂಬನ್ನಿಡಿಸಿರುವ ಉಲ್ಲೇಖವಿದ್ದರೂ ಈ ಊರಿನಲ್ಲಿ ಈ ಕೆರೆಯಿಲ್ಲ. ಆದರೆ ಈ ವಿಷಯ ತಿಳಸುವ ಶಾಸನವಿದೆ.

೭.೬ ಶಿಲಾ ಸ್ಮಾರಕಗಳು :

ಒಂದು ದೇಶದ ಸಂಸ್ಕೃತಿಯನ್ನು ಅರಿಯಲು ಬಹಳಷ್ಟು ಸಹಾಯಕಾರಿಯಾಗಿದೆ. ಸ್ಮಾರಕಗಳ ಅಧ್ಯಯನ ಅಂದಿನ ಜನಜೀವನ ಆ ಕಾಲದ ಕಲಾಭಿರುಚಿ, ಕಲಾಕುಶಲತೆ, ವಿವಿಧ ಧರ್ಮಗಳ ಪ್ರಭಾವ ಮೊದಲಾದ ವಿಷಯಗಳನ್ನು ಚಿತ್ರಿಸುವಲ್ಲಿ ಸಹಾಯಕವಾಗುತ್ತವೆ. ಸ್ಮಾರಕ ಶಿಲೆಗೆ ಸಂಬಂಧಿಸಿದವುಗಳೆಂದರೆ ವೀರಗಲ್ಲುಗಳು, ಮಾಸ್ತಿಗಲ್ಲು, ನಿಷಿಧಿ ಕಲ್ಲುಗಳು.

ವೀರಗಲ್ಲುಗಳು :

ಸಾಮಾನ್ಯವಾಗಿ ಯುದ್ಧದಲ್ಲಿ ಅಥವಾ ಹೋರಾಟದಲ್ಲಿ ಮಡಿದ ವೀರನ ಸ್ಮಾರಕವಾಗಿ ನೆಟ್ಟಕಲ್ಲುಗಳಿಗೆ ವೀರಗಲ್ಲುಗಳೆನ್ನುತ್ತೇವೆ. ವೀರಗಲ್ಲು ಬರಹ ಅಥವಾ ಶಾಸನಗಳನ್ನು ಕೆತ್ತುವ ಜೊತೆಗೆ ವೀರನ ಶಿಲ್ಪಗಳನ್ನು ಕೆತ್ತಲಾಗುತ್ತದೆ. ಇಂಥಹ ವೀರಗಲ್ಲುಗಳು ಯಾವ ವೀರನ ಸ್ಮಾರಕವಾಗಿವೆಯೋ ಆ ವೀರನ ಶೌರ್ಯವನ್ನು ಸಾರುತ್ತವೆ. ರಾಜ್ಯದ ವಿಸ್ತರಣೆಗಾಗಿ, ವೃತ್ತಿ ಮಾತ್ಸರ್ಯದಿಂದಾಗಿ ಯುದ್ಧಗಳು ನಡೆದ ಬಗ್ಗೆ ಶಾಸನಗಳಿಂದ ಗೊತ್ತಾಗುತ್ತದೆ. ಇಂಥಹ ಹೋರಾಟಗಳಲ್ಲಿ ಸೈನಿಕರದ್ದೇ ಮುಖ್ಯಪಾತ್ರ. ಸೈನಿಕರ ಸೋಲು ಗೆಲುವುಗಳು ಅರಸನ ಸೋಲು ಗೆಲುವುಗಳು. ತಮ್ಮ ಪರವಾಗಿ ಹೋರಾಡಿ ಮಡಿದ ವೀರನ ಸೇವೆಯನ್ನು ಮೆಚ್ಚಿ ಆತನ ಸಾಹಸವನ್ನು ಹೊಗಳುವ ಅರಸ ಅಥವಾ ಅವನ ಅಧಿಕಾರಿಗಳು ವೀರಗಲ್ಲುಗಳನ್ನು ನೆಡೆಸುತ್ತಿದ್ದರು. ಈ ವೀರಗಲ್ಲುಗಳಲ್ಲಿ ವೀರನ ಶೌರ್ಯವನ್ನು ಕೊಂಡಾಡುವದರ ಜೊತೆಗೆ ಆತನ ಮನೆಯವರಿಗೆ ಬಿಟ್ಟ ದಾನ ದತ್ತಿ ವಿಷಯವನ್ನು ಒಳಗೊಂಡಿರುತ್ತದೆ. ಹೀಗೆ ವೀರಗಲ್ಲುಗಳು ಒಂದು ರೀತಿಯಿಂದ ದಾನ ಶಾಸನಗಳು ಆಗಬಹುದು. ಗೋಗ್ರೋಹಣದ ವೀರಗಲ್ಲುಗಳು, ಬೇಟೆಯಲ್ಲಿ ಮಡಿದ ವೀರನ ಸ್ಮಾರಕಗಳು, ದಾರಿಕಳ್ಳರೊಡನೆ ಹೋರಾಡಿ ಮಡಿದ ವೀರ ಸ್ಮಾರಕಗಳು, ಹೆಂಗಸರ ಮಾನಭಂಗ ಸಮಯದಲ್ಲಿ ಹೋರಾಡಿ ಮಡಿದ

ಸ್ಮಾರಕಗಳು, ರಣರಂಗದಲ್ಲಿ ಹೋರಾಡಿ ಮಡಿದ ವೀರಗಲ್ಲುಗಳು, ಸೀಮಾ ಸಂಬಂಧ, ಊರ ಜಗಳದಲ್ಲಿ ಮಡಿದವರ ಸ್ಮಾರಕಗಳು, ಹೀಗೆ ವೀರಗಲ್ಲುಗಳಲ್ಲಿ ಅನೇಕ ಭೇದವನ್ನು ಕಾಣುತ್ತೇವೆ.

ಉದಾ:

ಅ. ಲಕ್ಷ್ಮೇಶ್ವರದ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯರ ನಾಲ್ಕನೇ ಸೋಮೇಶ್ವರನ ಕಾಲದ ಕ್ರಿ.ಶ. ೧೨ನೇ ಶತಮಾನದ ಕಂಪಿಲ ಮತ್ತು ಸಿಡಿಲಬೋಮರ ಮರಣಕ್ಕಾಗಿ ಜನರ ಮರುಕ. ಈ ವೀರಗಲ್ಲುಗಳಿಂದ ತಿಳಿಯಲಾಗಿದೆ. ನಾಗರಮಡುವಿನ ಹನಮಂತದೇವರ ಗುಡಿಯ ಮುಂಭಾಗದಲ್ಲಿ ದೊರೆತ ವೀರಗಲ್ಲು, ಛಬ್ಬಿಯ ಪಾರ್ವತಿ ಗುಡಿಯ ಮುಂಭಾಗ ಹಾಗೂ ಕಪಲಟ್ಟಿಯ ಹನಮಂತ ದೇವರಗುಡಿಯ ವೀರಗಲ್ಲುಗಳು ದೊರೆತಿವೆ. ಈ ವೀರಗಲ್ಲು ೫ ಅಡಿ ಎತ್ತರವಿದ್ದು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೇಲಿನ ಪಟ್ಟಿಕೆಯಲ್ಲಿ ಲಿಪಿಯಿದ್ದರೂ ಅಕ್ಷರಗಳು ಸವೆದುಹೋಗಿ ಓದಲು ಸಾಧ್ಯವಾಗಿಲ್ಲ. ಕೆಳ ಅಂಕಣದಲ್ಲಿ ಯುದ್ಧದ ದೃಶ್ಯ, ಬಿಲ್ಲು ಬಾಣಗಳನ್ನು ಹಿಡಿದ ಸೈನಿಕರು ಯುದ್ಧಮಾಡುವ ದೃಶ್ಯವಿದೆ. ಇದರಲ್ಲಿ ಅಶ್ವದಳವನ್ನು ತೋರಿಸಿರುವುದು ವಿಷೇಶ. ಮಧ್ಯ ಅಂಕಣದಲ್ಲಿ ಸತ್ತ ವೀರನನ್ನು ಮೇನೆಯಲ್ಲಿ ಕೂಡಿಸಿಕೊಂಡು ಸ್ವರ್ಗಕ್ಕೆ ಹೊತ್ತೊಯ್ಯುವ ದೃಶ್ಯವಿದ್ದು ಈಶ್ವರಲಿಂಗ ಅದರ ಬಲಭಾಗದಲ್ಲಿ ಕೈಮುಗಿದುಕುಳಿತ ವೀರ ಹಾಗೂ ಪೂಜೆಯಲ್ಲಿ ನಿರತನಾದ ಅರ್ಚಕನನ್ನು ತೋರಿಸಿದೆ. ಎಲ್ಲಕ್ಕೂ ಮೇಲೆ ಸೂರ್ಯ ಚಂದ್ರರನ್ನು ತೋರಿಸಿ ಅವರಿರುವರೆಗೆ ಆತ ಅಮರನೆಂಬುದನ್ನು ಬಿಂಬಿಸಿದ್ದಾರೆ.

ಬ.ನಿಷಧಿಕಲ್ಲು : ಜೈನ ಧರ್ಮಗಳಲ್ಲಿ ಸಲ್ಲೇಖನ ವೃತವನ್ನು ಸ್ವೀಕರಿಸಿ ದೇಹತ್ಯಾಗ ಮಾಡಿದವರ ನೆನಪಿಗಾಗಿ ನಿಲ್ಲಿಸುವ ಪರಿಪಾಠ ನಮ್ಮ ಪ್ರಾಚೀನ ಕರ್ನಾಟಕದಲ್ಲಿ ಕಂಡುಬಂದಿದೆ. ಇಂತಹ ಸ್ಮಾರಕಗಳನ್ನು ನಿಷಧಿಕಲ್ಲುಗಳೆನ್ನುವರು. ವೀರಗಲ್ಲುಗಳಲ್ಲಿನಂತೆ ನಿಷಧಿಕಲ್ಲುಗಳಲ್ಲಿಯೂ ಎರಡು ಮೂರು ಹಂತಗಳಲ್ಲಿ ಬಿಡಿಸಿರುತ್ತಾರೆ. ಮೊದಲ ಪಟ್ಟಿಕೆಯಲ್ಲಿ ವೃತ ಸ್ವೀಕರಿಸಿದ ವ್ಯಕ್ತಿ ಗುರೋಪದೇಶ ಪಡೆಯುತ್ತಿರುವಂತೆಯೂ, ಧರ್ಮಗ್ರಂಥವನ್ನು ಪಠಣಮಾಡುತ್ತಿರುವಂತೆಯೂ ಗುರವಿನ ಚಿತ್ರ, ಗಂಡ ಹೆಂಡರಿಬ್ಬರೂ ಒಟ್ಟಿಗೆ ಸ್ವೀಕರಿಸಿದ್ದರೆ ಇಬ್ಬರ ಶಿಲ್ಪಗಳನ್ನು ಬಿಡಿಸಿರುತ್ತಾರೆ. ಎರಡನೇ ಪಟ್ಟಿಕೆಯಲ್ಲಿ ಗುರೋಪದೇಶದ ನಂತರ ಆ ವ್ಯಕ್ತಿ ಸಿದ್ಧಿ ಹಂತವನ್ನು ತಲುಪಿರುವ ಜೀತೇಂದ್ರನಂತೆ ಕುಳಿತಿರುವಂತೆ ಬಿಡಿಸಲಾಗಿರುತ್ತದೆ. ಮೂರನೇ ಪಟ್ಟಿಕೆಯಲ್ಲಿ ಅವನು ಮುಕ್ತಿಯನ್ನು ಪಡೆದು ಪದ್ಮಾಸನದಲ್ಲಿ ಕುಳಿತಿರುವಂತೆ ಬಿಡಿಸುತ್ತಿದ್ದರು.

ಉದಾ: ರಣತೂರಿನ ಹನಮಂತ ದೇವಾಲಯದ ಮುಂದೆ ನಿಲ್ಲಿಸಿದ ನಿಷಧಿಕಲ್ಲು.

ಟಿಪ್ಪಣಿಗಳು :

೧. ಧಾರವಾಡ ಜಿಲ್ಲಾ ಗೆಜಿಟಿಯರ್, ಪು. ೨೫೮

೨. ಕ್ಷೇತ್ರಕಾರ್ಯ ನಿಮಿತ್ಯ ಶಿರಹಟ್ಟಿ ವನಪಾಲರಾವ್ ಮನಸೂಳಿಯವರ ನೀಡಿದ ವಿವರಣೆ.

೩. ಇತಿಹಾಸ ದರ್ಶನ ಸಂಪುಟ-೮.

೪. ಪೂರ್ವೋಕ್ತ

೫. ಪ್ರಜಾವಾಣಿ ಪತ್ರಕೆ (೧೮-೦೫-೨೦೦೦), ರ ಪ್ರಕಟವಾದ ವಿಚಾರಣೆ.

೬. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ.

೭. ಜಾತ್ರಾಮಹೋತ್ಸವದ ಆಮಂತ್ರಣದ ಪತ್ರಿಕೆ ಪ್ರಸಾರ.

೮. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ.

೯. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ. (ವಿರೂಪಾಕ್ಷ ಬಡಿಗೇರ ಹೊಳೆಇಟಗಿ)

೧೦. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ. (ವಿ.ಎಂ,ಸಿ. ಕಬ್ಬೇರಳ್ಳಿ ಗೋವಿನಕೊಪ್ಪ)

೧೧. ಅದೇ.

೧೨. ಅದೇ.

೧೩. ಅದೇ.

೧೪. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ.

೧೫. ಕಪೋತಗಿರಿ.

೧೬. "ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ", ಪು-೪೧೭.

೧೭. ಧಾರವಾಡ ಜಿಲ್ಲಾ ಗೆಜಿಟಿಯರ್, ಪು. ೨೧೯

೧೮. ಅದೇ.

೧೯. ಅದೇ.

೨೦. ಅದೇ.

೨೧. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ ಸಂಗ್ರಹಣೆ

೨೨. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ ಸಂಗ್ರಹಣೆ

೨೩. ಅದೇ.

೨೪. ಪೂರ್ವೋಕ್ತ, ಪು. ೨೩೨

೨೫. ಪೂರ್ವೋಕ್ತ, ಪು. ೨೨೯-೨೪೭

೨೬. ಧಾರವಾಡ ಜಿಲ್ಲಾ ಗೆಜಿಟಿಯರ್, ಪು. ೨೫೮

೨೭. ಅದೇ.

೨೮. ಪೂರ್ವೋಕ್ತ, ಪು. ೨೩೦ ರಿಂದ ೨೩೧.

೨೯. "ಶಿರಹಟ್ಟಿಯ ಶ್ರೀ ಫಕೀರೇಶ್ವರ ಮಠ ಒಂದು ಅಧ್ಯಯನ", ಪು-೨೨-೨೪

ಅಧ್ಯಾಯ : ೮

ಸಮಾರೋಪ

ಅಧ್ಯಾಯ – ೮
ಸಮಾರೋಪ

ಪುರಾತತ್ವ ಆಕರಗಳಲ್ಲಿ ಶಾಸನ ಮತ್ತು ದೇವಾಲಯಗಳು ಸಮಕಾಲೀನ ರಾಜಕೀಯ ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಮುಂತಾದ ವಿಷಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು ತುಂಬಾ ಸಹಾಯಕವಾಗುತ್ತವೆ. ಈ ಹಿನ್ನೆಲೆಯಲ್ಲಿ ಶಿರಹಟ್ಟಿ ತಾಲೂಕಿನ ಆಯ್ದ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಶಾಸನ, ದೇವಾಲಯ ಮತ್ತು ಶಿಲ್ಪಗಳನ್ನು ಒಂದೆಡೆಗೆ ಸಂಗ್ರಹಿಸಿ ಈ ಪರಿಸರದ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನಃ ರಚಿಸುವ ಉದ್ದೇಶದೊಂದಿಗೆ ಪ್ರಾರಂಭವಾದ ಈ ಅಧ್ಯಯನದಲ್ಲಿ ಅನೇಕ ಮಹತ್ವದ ಹೊಸ ಹೊಸ ವಿಚಾರಗಳು ವ್ಯಕ್ತವಾಗಿವೆ.

ಶಿರಹಟ್ಟಿ ತಾಲೂಕಿನ ಇತಿಹಾಸ ಪೂರ್ವಕಾಲದ ಜನವಸತಿ ಪ್ರದೇಶಗಳಾದ ಶಿರಹಟ್ಟಿ, ಆದರಳ್ಳಿ, ನವೇಭಾವನೂರು, ಚೌಡಾಳ, ಇಟಗಿ, ನಾಗರಮಡವು, ತಂಗೋಡ, ಬೆಳ್ಳಟ್ಟಿ, ಈ ನೆಲೆಗಳು ಕಂಡುಬಂದಿವೆ. ಇತಿಹಾಸ ಆರಂಭಕಾಲದ ಜನವಸತಿ ನೆಲೆಗಳು ಕಂಡುಬಂದುದು, ಈ ಪರಿಸರದ ಪ್ರಾಚೀನತೆಗೆ ನಿದರ್ಶನವಾಗಿದೆ. ಈ ಪರಿಸರದ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ಈ ಪರಿಸರದಲ್ಲಿ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚೂರಿ, ಗೋವೆಯ ಕದಂಬರು, ಸಿಂಧೂರ ದೇವಗಿರಿಯ ಸೇವುಣರು, ವಿಜಯನಗರ ಅರಸರು. ಹೀಗೆ ವಿವಿಧ ಅರಸು ಮನೆತನದವರೂ ಆಳ್ವಿಕೆ ನಡೆದುದ್ದುದು ಸ್ಪಷ್ಟವಾಗಿದೆ. ಅದಲ್ಲದೇ ಭೌಗೋಳಿಕವಾಗಿ ವಿಸ್ತಾರವಾಗಿದ್ದ ಸಾಮ್ರಾಜ್ಯವನ್ನು ವ್ಯವಸ್ಥಿತವಾದ ಆಡಳಿತದ ದೃಷ್ಟಿಯಿಂದ ಅನೇಕ ವಿಭಾಗಗಳಲ್ಲಿ ವಿಂಗಡಿಸುವದು ಪ್ರಾಚೀನ ಕಾಲದಿಂದಲೂ ನಡೆದುಬಂದ ವ್ಯವಸ್ಥೆಯಾಗಿದ್ದಿತು. ಅದರಂತೆ ಈ ತಾಲೂಕಿನ ಕೆಲವು ಭಾಗ ಪುಲಿಗೆರೆ-೩೦೦ರ ಆಡಳಿತವು ಸೇರ್ಪಡೆಯಾದಂತೆ ತೋರುತ್ತದೆ. ಅಲ್ಲದೇ ಹಲವು ಮಹಾಮಂಡಳೇಶ್ವರ ಹಾಗೂ ಗ್ರಾಮದ ಅಧಿಕಾರಿಗಳು ಸ್ಥಳೀಯ ಆಡಳಿತವನ್ನು ಕೈಗೊಂಡಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ಶಿರಹಟ್ಟಿ ತಾಲೂಕಿನಲ್ಲಿ ಕಲ್ಯಾಣರ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ದೇವಾಲಯಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿವೆ. ಈ ದೇವಾಲಯಗಳಲ್ಲಿ ಶೈವ, ವೈಷ್ಣವ, ಹೀಗೆ ಇತ್ಯಾದಿ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳಲ್ಲಿ ಶೈವ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು ಹೆಚ್ಚಿನ ಪ್ರಮಾಣದಲ್ಲಿ ಗೋಚರಿಸಿವೆ. ಕಾಲಾಂತರದಲ್ಲಿ ಹೆಚ್ಚಿನ ಪ್ರಮಾಣದ ದೇವಾಲಯಗಳು ಹಾಳಾಗಿದ್ದರೂ ದೇವಿಹಾಳ ಹೊಳಲಮ್ಮ, ಇಟಗಿಯ ಈಶ್ವರ, ಶಿರಹಟ್ಟಿಯ ಫಕೀರೇಶ್ವರ ಮಠ, ಗುಡಗೇರಿಯ ಮಹಾವೀರ ಬಸದಿ, ವರವಿಯ ಮೌನೇಶ್ವರ, ಛಬ್ಬಿಯ

ಭೋಗೇಶ್ವರ ಇಂದಿಗೂ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿವೆ. ಇವು ಈ ಪರಿಸರದ ವಾಸ್ತುಕಲೆಯ ಅಧ್ಯಯನದಲ್ಲಿ ಮಹತ್ವದ ಪಾತ್ರವಹಿಸಿವೆ. ಇಲ್ಲಿಯ ಬಹುತೇಕ ದೇವಾಲಯಗಳು ದಾಕ್ಷಿಣಾತ್ಯ ಶೈಲಿಯಲ್ಲಿ ನಿರ್ಮಾಣವಾಗಿವೆ. ಕೆಲವೇ ಕೆಲವು ದೇವಾಲಯಗಳ ಮೇಲೆ ಹಿಂದೂ ಮುಸ್ಲಿಂ ಮತ್ತು ಆಧುನಿಕ ಶೈಲಿಯ ಶಿಖರಗಳು ನಿರ್ಮಾಣವಾಗಿವೆ. ಇಲ್ಲಿನ ಬಹುತೇಕ ದೇವಾಲಯಗಳು ಪೂರ್ವಾಭಿಮುಖವಾಗಿರುವುದು ವಿಶೇಷವೆನಿಸುತ್ತದೆ.

ಶಿರಹಟ್ಟಿ ಪರಿಸರದಲ್ಲಿ ಶೈವ, ವೈಷ್ಣವ, ಶಾಕ್ತ– ಹೀಗೆ ಇತ್ಯಾದಿ ಸಂಪ್ರದಾಯಗಳಿಗೆ ಸಂಬಂಧಿಸಿದ ಶಿಲ್ಪಗಳು ಕಂಡುಬರುತ್ತವೆ. ಇವುಗಳಲ್ಲಿ ಶೈವ ಸಂಪ್ರದಾಯದ ಶಿಲ್ಪಗಳೇ ಹೆಚ್ಚಿನ ಪ್ರಮಾಣದಲ್ಲಿವೆ. ಶೈವ ಸಂಪ್ರದಾಯಕ್ಕೆ ಸಂಬಂಧಿಸಿದ ಶಿವನ ಸಂಕೇತವಾಗಿ ಪೂಜಿಸಲ್ಪಡುವ ವಿವಿಧ ಬಗೆಯ ಬ್ರಹ್ಮ ಸೂತ್ರಗಳನ್ನೊಳಗೊಂಡ ಶಿವಲಿಂಗಗಳು ಇಟಗಿ, ಛಬ್ಬಿ, ವರವಿ ಗ್ರಾಮಗಳಲ್ಲಿ ಕಂಡುಬರುತ್ತವೆ. ವಿವಿಧ ಕಾಲಮಾನಗಳಿಗೆ ಸಂಬಂಧಿಸಿದ ನಂದಿ, ಗಣೇಶ, ವೀರಭದ್ರ ಶಿಲ್ಪಗಳು ಕಂಡುಬಂದಿವೆ. ವೈಷ್ಣವ ಧರ್ಮದ ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಲ್ಲಿ ಲಕ್ಷ್ಮೀ ನಾರಾಯಣ, ಗರುಡ ಶಿಲ್ಪಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆತಿವೆ. ಶಾಕ್ತ ಸಂಪ್ರದಾಯದ ಶಿಲ್ಪಗಳಲ್ಲಿ ಬನಶಂಕರಿ, ದುರ್ಗೆ, ಕಾಳಿ, ಸಪ್ತಮಾತೃಕೆ ಶಿಲ್ಪಗಳು ಪ್ರಮುಖವಾಗಿ ಕಂಡುಬಂದಿರುತ್ತವೆ.

ಈ ಪರಿಸರದಲ್ಲಿ ನಾಗಾರಾಧನೆಯು ಪ್ರಾಚೀನ ಕಾಲದಿಂದಲೂ ಪ್ರಚಲಿತ ದಲ್ಲಿರುವದಕ್ಕೆ ವರವಿ, ಛಬ್ಬಿ, ಬೆಳ್ಳಟ್ಟಿ, ರಣತೂರ, ಮೊದಲಾದ ಗ್ರಾಮಗಳಲ್ಲಿ ಕಂಡುಬರುವ ನಾಗಶಿಲ್ಪಗಳು ನಿದರ್ಶನವಾಗಿವೆ. ಇದರಂತೆ ಬಹುತೇಕ ಗ್ರಾಮಗಳಲ್ಲಿ ಹನುಮಾನ ಶಿಲ್ಪಗಳು ಕಂಡುಬಂದಿವೆ. ಈ ಪರಿಸರದಲ್ಲಿನ ಶಿಲ್ಪಗಳೆಲ್ಲವೂ ಕಪ್ಪು ಮಿಶ್ರಿತ ನೀಲಿ ಛಾಯೆಯು ಬಳಪದ ಶಿಲೆಯಲ್ಲಿ ಖಂಡರಿಸಲ್ಪಟ್ಟಿವೆ. ಈ ಶಿಲ್ಪಗಳೆಲ್ಲವು ಸಮಕಾಲೀನ ಪ್ರತಿಮಾ ಲಕ್ಷಣಗಳ ಅಧ್ಯಯನದ ದೃಷ್ಟಿಯಿಂದ ಮಹತ್ವದ್ದಾಗಿವೆ.

ಶಿರಹಟ್ಟಿ ತಾಲೂಕಿನಲ್ಲಿ ಈ ವರೆಗೆ ೬೨ ಶಾಸನಗಳು ಕಂಡುಬಂದಿವೆ. ಇದರಲ್ಲಿ ೫೫ ಶಾಸನಗಳು ಮಾತ್ರ ವಿವಿಧ ಶಾಸನ ಸಂಪುಟಗಳಲ್ಲಿ ಪಾಠ ಮತ್ತು ಸಾರಾಂಶದೊಂದಿಗೆ ಪ್ರಕಟವಾಗಿವೆ. ಇನ್ನುಳಿದ ಶಾಸನಗಳು ವಾರ್ಷಿಕ ಶಾಸನ ಸಂಪುಟಗಳಲ್ಲಿ ಸೂಚಿತವಾಗಿವೆ. ಇವುಗಳಲ್ಲದೇ ಕ್ಷೇತ್ರ ಕಾರ್ಯದಲ್ಲಿ ಮೂರು ಹೊಸ ಅಪ್ರಕಟಿತ ಶಾಸನಗಳು ಕಂಡುಬಂದಿದ್ದು, ಇವು ಬಹಳಷ್ಟು ಹಾಳಾಗಿದ್ದುದರಿಂದ ಇವುಗಳಲ್ಲಿರುವ ವಿವರಗಳು ಅಸ್ಪಷ್ಟವಾಗಿವೆ. ಈ ಶಾಸನಗಳು ರಾಜಕೀಯ, ಆಡಳಿತ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ವಾಸ್ತುಕಲೆ, ಶಿಲ್ಪಕಲೆ ಮೊದಲಾದವುಗಳ ಅಧ್ಯಯನಕ್ಕೆ ಮತ್ತು ಈ ತಾಲೂಕಿನ ಇತಿಹಾಸವನ್ನು ಪುನಾರಚಿಸುವಲ್ಲಿ ಮಹತ್ವದ ಪಾತ್ರವಹಿಸಿವೆ.

ಹೀಗೆ ಶಿರಹಟ್ಟಿ ಪರಿಸರದ ಶಾಸನ, ದೇವಾಲಯ ಮತ್ತು ಶಿಲ್ಪಗಳು ಪ್ರಾದೇಶಿಕವಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳ ಅಧ್ಯಯನಕ್ಕೆ ಅಪಾರವಾದ ಕೊಡುಗೆಗಳನ್ನು ಸಲ್ಲಿಸಿರುವುದು ಈ ಮೇಲಿನ ಅವಲೋಕನದಿಂದ ದೃಢವಾಗುತ್ತದೆ. ಇಷ್ಟೆಲ್ಲ ಮಹತ್ವದ ವಿಷಯಗಳನ್ನು ಹೊರಗೆಡುಹುವ ಈ ಅವಶೇಷಗಳು ಇಂದು ವಿನಾಶದ ಅಂಚಿನಲ್ಲಿವೆ. ಕೆಲವು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಇನ್ನೂ ಕೆಲವು ವಿವಿಧ ಸ್ಥಳೀಯ ಮೂಢ ನಂಬಿಕೆಗಳಿಗೆ ಆಹುತಿಯಾಗುತ್ತಿವೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು, ಸಂಘ ಸಂಸ್ಥೆಗಳು, ಜನರು ಇವುಗಳ ಸಂರಕ್ಷಣೆಯಡೆಗೆ ಗಮನಹರಿಸಬೇಕಾಗಿರುದು ಅತ್ಯವಶ್ಯಕವಾಗಿದೆ.

✲✲✲✲✲

ಅನುಬಂಧಗಳು

೧. ಗ್ರಂಥ ಋಣ

೨. ತಲಾ ನಕ್ಷೆಗಳು

೩. ಸಂಕೇತ ಸೂಚಿ

೪. ಛಾಯಾಚಿತ್ರಗಳು

ಗ್ರಂಥಋಣ

ಕನ್ನಡ


ಲೇಖಕರು	ಪ್ರಕಟಣೆ	ಕೃತಿ/ಲೇಖನ ಮತ್ತು ಪ್ರಕಾಶಕರು.
ಅನಂತರಂಗಾಚಾರ್ ಎನ್.	೧೯೫೪	"ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ", ಬಾಗಿನ (ಶ್ರೀ ಎಸ್.ವಿ. ರಂಗಣ್ಣನವರ ಸ್ಮರಣ ಸಂಚಿಕೆ), ಮಹಾರಾಜಾ ಕಾಲೇಜು, ಮೈಸೂರು.
ಅಪರ್ಣ ಕೂ.ಸ.	೧೯೯೯	ದೇವಾಲಯ ವಾಸ್ತು ಶಿಲ್ಪ ಪರಿಚಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಕಲಬುರ್ಗಿ ಎಂ.ಎಂ.	೧೯೮೦	ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
	೧೯೯೯	ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ-೧. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಕಟ್ಟಿ ವೆಂಕಟರಂಗೊ	೧೯೮೪	ಧಾರವಾಡ, ಬೆಳಗಾವಿ, ಬಿಜಾಪೂರ, ಕಾನಡಾ, ಜಿಲ್ಲೆಗಳ ಗೆಜೆಟಿಯರ್, ಏಶಿಯನ್ ಏಜುಕೇಶನ್, ಸರ್ವಿಸಸ್, ನವದೆಹಲಿ.
ಕಾಮತ್ ಸೂರ್ಯನಾಥ (ಸಂ)	೧೯೮೪	ಧಾರವಾಡ ಜಿಲ್ಲೆಯ ಗೆಜೆಟಿಯರ್, ಕರ್ನಾಟಕ ಸರಕಾರ, ಬೆಂಗಳೂರು.
ಗೋಪಾಲ ಬಿ.ಆರ್. (ಸಂ)	೨೦೦೬	ಧಾರವಾಡ ಜಿಲ್ಲೆಯ ಗೆಜೆಟಿಯರ್, ಕರ್ನಾಟಕ ಸರಕಾರ, ಬೆಂಗಳೂರು.
ಗೋಪಾಲರಾವ್. ಎಚ್.ಎಸ್.	೧೯೯೩	ಕಲ್ಯಾಣ ಚಾಲುಕ್ಯರ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
ಚಂದ್ರಪೂಜಾರಿ ಎಂ.	೨೦೦೫	ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಚಿದಾನಂದಮೂರ್ತಿ ಎಂ.	೧೯೬೬	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ತಿಪ್ಪೇರುದ್ರಸ್ವಾಮಿ ಎಚ್.	೧೯೭೮	ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಕೃಷ್ಣಮೂರ್ತಿಪುರಂ, ಮೈಸೂರು.
ತೆಲಗಾವಿ ಲಕ್ಷ್ಮಣ್	೨೦೦೪	ಮೌರ್ಯ ಮತ್ತು ಶಾತವಾಹನ ಯುಗ,
ಪ್ರಸಾರಾಂಗ.		ಕನ್ನಡ ವಿಶ್ವವಿದ್ಯಾಲಯ, ಹಂಪಿ.
ನರಸಿಂಹಮೂರ್ತಿ .ಎ.ವಿ.	೨೦೦೩	ಕರ್ನಾಟಕ ನಾಣ್ಯ ಪರಂಪರೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ನಾಗಯ್ಯ ಜೆ.ಎಂ.	೧೯೯೨	ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ ವೀರಶೈವ ಅದ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ.
ನಾಯಕ ಹಾ.ಮಾ.(ಸಂ)	೧೯೯೪	ಕನ್ನಡ ವಿಶ್ವಕೋಶ ಸಂ. ೧೦, ಪ್ರಸಾರಾಂಗ ಮೈಸೂರು. ವಿಶ್ವವಿದ್ಯಾನಿಲಯ ಮೈಸೂರು.
ನಿರುಪಮಾ	೨೦೦೨	ಸಂಶೋಧನಾ ವಿಧಾನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಪಂಚಮುಖಿ ಆರ್.ಎಸ್.	೧೯೪೭	ಕರ್ನಾಟಕದ ಅರಸು ಮನೆತನಗಳು, ಧಾರವಾಡ.
ಪ್ರಭಾಕರ್ ಎಂ.ಎನ್.	೧೯೮೯	"ದೇವಾಲಯಗಳ ಉಗಮ ಮತ್ತು ಲಾಡಖಾನ್ ದೇವಾಲಯ" ಇತಿಹಾಸ ದರ್ಶನ ಸಂ.೪, ಸೂರ್ಯನಾಥ ಕಾಮತ್ (ಸಂ), ಕರ್ನಾಟಕ ಇತಿಹಾಸ ಅಕಡೆಮಿ (ರಿ) ಬೆಂಗಳೂರು.
ಪರಮಶಿವಮೂರ್ತಿ ಡಿ.ವಿ.	೧೯೯೯	ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ ಹಂಪಿ.
ಪಾವಟೆ ಚನ್ನಕ್ಕ	೧೯೯೦	ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಬಾಲಸುಬ್ರಮಣ್ಯ, ವಾಸುದೇವನ್.ಸಿ.ಎಸ್, ರಮೇಶ ನಾಯಕ.	೨೦೦೭	ಕರ್ನಾಟಕ ದೇವಾಲಯ ಕೋಶ. ಗದಗ ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
ಶಿರಹಟ್ಟಿ ಎಸ್.ಆರ್.	೨೦೦೪	ಶಿರಹಟ್ಟಿ ಫಕೀರೇಶ್ವರ ಮಠ ಒಂದು ಅಧ್ಯಯನ, (ಅಪ್ರಕಟಿತ ಎಂ.ಫಿಲ್ ಕಿರು ಪ್ರಬಂಧ).
ಪಡಶೆಟ್ಟಿ ಎಂ.ಎಂ.	೧೯೪೮	ತಿಂಥಣಿ ಮೌನಪ್ಪಯ್ಯ ಒಂದು ಅಧ್ಯಯನ,


		ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಧನವಂತ ಹಾಜವಗೋಳ	೨೦೦೪	ಮುಳಗುಂದ: ನಾಡು ಒಂದು ಅಧ್ಯಯನ, ಮಾಧವಿ ಪ್ರಕಾಶನ ಧಾರವಾಡ.
ಗುರುರಾಜ ಬಿ.ಕೆ.		ಕರ್ನಾಟಕದ ಶಿಲಾಯುಗದ ಸಂಸ್ಕೃತಿಗಳು, ಪ್ರಚಾರ ಪುಸ್ತಕ ಮಾಲೆ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ.
ಶಿವತಾರಕ್ ಕೆ. ಬಿ.	೨೦೦೧	ಕರ್ನಾಟಕದ ಪುರಾತತ್ವೀಯ ನೆಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಷಡಕ್ಷರಯ್ಯ ರು.ಮ.	೧೯೯೫	ಲಕ್ಷ್ಮೇಶ್ವರ ವಿಜಯ ನಗರದ ಅಧ್ಯಯನ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಗೋಪಾಲ್ ಆರ್ (ಸಂ)	೨೦೦೭	ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
ದಿಕ್ಷಿತ್ ಪ್ಥಿ.ಜಿ.	೨೦೦೧	ಶ್ರೀ ಮೌನೇಶ್ವರರ ವಚನ ಸುಧೆ. ಮೂಲ ಸ್ತಂಬ ಸಾಹಿತ್ಯ ಪ್ರಕಾಶನ ಧಾರವಾಡ.
ಕಾರಬಾರಿ ಕೃಷ್ಣಪ್ಪ ನರೇಂದ್ರಪ್ಪ,	೧೯೯೮	ಶಿರಹಟ್ಟಿ ತಾಲೂಕಿನ ಶಾಸನಗಳ ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
ಈರಣ್ಣ ಕೆ.ಪಿ.	೧೯೯೮	ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಮನು ಸಾಹಿತ್ಯ ಪ್ರಕಾಶನ ಧಾರವಾಡ.
ದೇಸಾಯಿ ಪಿ.ಬಿ.	೧೯೭೭	ಕರ್ನಾಟಕದ ಕಲಚೂರ್ಯರು ಕರ್ನಾಟಕ ಇತಿಹಾಸ ಧಾರವಾಡ
ರಾಮಚಂದ್ರರಾವ ಎಸ್.ಕೆ.	೧೯೭೫	ಮೂರ್ತಿಶಿಲ್ಪ ನೆಲೆ ಹಿನ್ನಲೆ. ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.
ಕಲಬುರ್ಗಿ ಎಂ.ಎಂ (ಸಂ)	೧೯೭೫	ಧಾರವಾಡ ಜಿಲ್ಲೆ ಶಾಸನ ಸೂಚಿ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
ದೇಸಾಯಿ ಗೋವಿಂದ ಮೂರ್ತಿ	೧೯೯೭	ಶಿರಹಟ್ಟಿ ವರ್ಣರಂಜಿತ ಐತಿಹಾಸಿಕ ಪುಟಗಳು, ಸಂಯುಕ್ತ ಕರ್ನಾಟಕ (ಸಾಪ್ತಾಹಿಕ ಸೌರಭ),

Rajeshkar S. ೧೯೮೫ Karnataka Architecture.
Sujata Publication Dharwad.


೧೯೫೯ Gazaetter of Bombay State Dharwad.
District by manager, governamentt.
central press, Bombay



ವರವಿ ಮೌನೇಶ್ವರ ದೇವಾಲಯ ತಲನಕ್ಷೆ



ಶಿರಹಟ್ಟಿಯ ಫಕೀರಸ್ವಾಮಿ ಮಠ




ಹೊಳಲಮ್ಮ ದೇವಸ್ಥಾನ ದೇವಿಹಾಳ

ಸಂಕೇತ ಸೂಚಿ


ಎ.ಆಯ್.	:	ಇಂಡಿಯನ್ ಆಂಟಿಕ್ವೆರಿ.
ಇ.ಆಯ್	:	ಎಪಿಗ್ರಫಿಯ ಇಂಡಿಕಾ.
ಎಸ್.ಆಯ್.ಆಯ್.	:	ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಶನ್ಸ್
ಕೆ.ಆಯ್.	:	ಕರ್ನಾಟಕ ಇನ್ಸ್‌ಕ್ರಿಪ್‌ಶನ್ಸ್
ಎ.ಆರ್. ಎಸ್.ಆಯ್.ಇ	:	ಎನ್ಯೂವಲ್ ರಿಪೋರ್ಟ್ಸ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ.
ಶಾ.ಸಂ.	:	ಶಾಸನ ಸಂಖ್ಯೆ
ಕ್ರಿ.ಶ.ಸು	:	ಕ್ರಿಸ್ತಶಕ ಸುಮಾರು
ಅದೇ	:	ಮೇಲಿನ ಉಲ್ಲೇಖ
ಪೂರ್ವೋಕ್ತ	:	ಈ ಮೊದಲು ಉಲ್ಲೇಖಿಸಿದ ಕೃತಿ/ ಲೇಖನ
ಸಂ	:	ಸಂಪುಟ, ಸಂಚಿಕೆ
ಪು.	:	ಪುಟ
(ಸಂ)	:	ಸಂಪಾದಕರು.

ವಕ್ತೃಗಳ ವಿವರ

ಹೆಸರು	ವೃತ್ತಿ	ಗ್ರಾಮ
೧. ಶ್ರೀ ಶ್ರೀ ವಿರುಪಾಕ್ಷ ಸ್ವಾಮಿಗಳು	ಪೀಠಸ್ಥ ಸ್ವಾಮಿಗಳು	ವರವಿ
೨. ಉಮೇಶಯ್ಯ .ಶಿ. ಹಿರೇಮಠ	ರೈತ	ನಾಗರಮಡವು
೩. ಸಿದ್ಧನಗೌಡ ಪಾಟೀಲ	ನಿವೃತ್ತ ಗ್ರಾ.ಪಂ ಕಾ.	ಸಾಸರವಾಡ
೪. ಸೋಮಲಿಂಗಪ್ಪ ಚನ್ನಮ್ಮನವರ	ರೈತ	ತಂಗೋಡ
೫. ಶಂಭು ಪಟ್ಟೇದ	ರೈತ	ಬೆಳ್ಳಟ್ಟಿ
೬. ಪ್ರಕಾಶ ರಾ. ಅಚ್ಚಲಕಾರ	ಶಿಕ್ಷಕರು	ಹೊಳೆಇಟಗಿ
೭. ಡಾ.ವೀರುಪಾಕ್ಷ ನರಗುಂದ	ವೈದ್ಯಕೀಯ	ಹೊಳೆಇಟಗಿ
೮. ಈರಣ್ಣ ಕಡ್ಲಿಕೊಪ್ಪ	ಕಮೀಟಿಯ ಅಧ್ಯಕ್ಷರು	ವರವಿ
೯. ವನಪಾಲರಾವ್ ಮನಸೂಳ	ಸಾಹಿತಿ	ಶಿರಹಟ್ಟಿ
೧೦. ಶಂಕರಗೌಡ ಪಾಟೀಲ	ಆಧ್ಯಾತ್ಮಿಕ ಪಂಡಿತರು	ಶಿರಹಟ್ಟಿ
೧೧. ವಿ.ಪಿ.ಬಳಗಾರ	ಶಿಕ್ಷಕರು	ಶಿರಹಟ್ಟಿ
೧೨. ವಿ.ಎಸ್. ಹಿರೇಮಠ	ಕಮೀಟಿಯ ಅಧ್ಯಕ್ಷರು	ಶಿರಹಟ್ಟಿ
೧೩. ಲಕ್ಷ್ಮಣ ಡಿ. ಕಮ್ಮಾರ		ಕಮ್ಮಾರಿಕೆ ನಾಗರಮಡವು
೧೪. ನವೀನ ಎಸ್. ಆಚಾರಿ	ಆಚಾರಿ	ಹೊಸೂರ
೧೫. ಬಿ.ಎಮ್.ಸಿ. ಕಬ್ಬೇರಹಳ್ಳಿ	ಶಿಕ್ಷಕರು	ಗೋವಿನಕೊಪ್ಪ
೧೬. ದೇವರಾಜ ಹಡ್ಲಿ	ಸಂಶೋದಕ	ಹೆಬ್ಬಾಳ
೧೭. ಕೊತ್ತಲ ಮಹಾದೇವಪ್ಪ	ಸಾಹಿತಿ	ಲಕ್ಷ್ಮೇಶ್ವರ
೧೮. ಮಂಜುನಾಥ ದೇವರಮನಿ	ರೈತ	ಛಬ್ಬಿ
೧೯. ಸಂಜೀವಕುಮಾರ.ಬಿ	ಸಹಾಯಕ ಮಾರ್ಗದಾಳು	ಲಕ್ಷ್ಮೇಶ್ವರ
೨೦. ವೆಂಕಟೇಶ .ಕೆ. ಕುಲಕರ್ಣಿ	ಡಿ.ಟಿ.ಪಿ ಸೆಂಟರ್	ಸೊರಟೂರ



ನಾಗರಮಡವಿನ ನೂತನ ಶಿಲಾಯುಗದ ಮಡಿಕೆ ಚೂರುಗಳು



ನವೇಭಾವನೂರಿನ ನೂತನ ಶಿಲಾಯುಗದ ಮಡಿಕೆ ಚೂರುಗಳು







ರಣತೂರಿನ ಈಶ್ವರ ದೇವಾಲಯ



ವರವಿಯ ಮೌನೇಶ್ವರ ದೇವಾಲಯ







ಶಿರಹಟ್ಟಿಯ ಫಕ್ಕೀರೇಶ್ವರ ಮಠ



ವರವಿಯ ವಿರುಪಾಕ್ಷೇಶ್ವರ ದೇವಾಲಯ







ಹೊಳೆ ಇಟಗಿಯ ಸೋಮಲಿಂಗೇಶ್ವರ ದೇವಾಲಯ



ಛಬ್ಬಿಯ ಹನುಮಂತ ದೇವಾಲಯ







ರಣತೂರಿನ ಈಶ್ವರ ದೇವಾಲಯದ ಶಿಖರ



ಹೊಳೆಇಟಗಿಯ ಈಶ್ವರ ದೇವಾಲಯದ ಶಿಖರ







ಹೊಳೆಇಟಗಿಯ ಎಲ್ಲಮ್ಮ ದೇವಾಲಯದ ಶಿಖರ



ರಣತೂರಿನ ಈಶ್ವರ ದೇವಾಲಯದ ಭುವನೇಶ್ವರಿ







ವರವಿಯ ಕಾಳಿಕಾ ಮೂರ್ತಿ



ವರವಿಯ ಸಿದ್ಧಮ್ಮನ ಮೂರ್ತಿ







ಭಳ್ಳಿಯ ಪಾರ್ವತಿದೇವಿಯ ಮೂರ್ತಿ



ಸಾಸರವಾಡದ ಪಾರ್ವತಿ ಮೂರ್ತಿ







ವರದಿಯ ಮೌನೇಶ್ವರ ಮೂರ್ತಿ



ವರದಿಯ ವಿರುಪಾಕ್ಷೇಶ್ವರ ಮೂರ್ತಿ







ಹೆಬ್ಬಾಳದ ರಾಮಲಿಂಗ



ಬೆಳ್ಳಟ್ಟಿಯ ಈಶ್ವರ ದೇವಾಲಯ







ಛಬ್ಬಿಯ ನಂದಿಯ ಮೂರ್ತಿ



ಸಾಸರವಾಡದ ನಂದಿಯ ಮೂರ್ತಿ







ಛಬ್ಬಿಯ ಹನುಮಂತನ ಮೂರ್ತಿ



ಹೊಳೆಇಟಗಿ ಹನುಮಂತನ ಮೂರ್ತಿ







ರಣತೂರಿನ ಹನುಮಂತದೇವಾಲಯದ ಮುಂದಿನ ದೀಪಸ್ಥಂಭ



ಛಬ್ಬಿಯ ಹನುಮಂತದೇವಾಲಯದ ಮುಂದಿನ ದೀಪಸ್ಥಂಭ








ಛಬ್ಬಿಯ ಗಜಲಕ್ಷ್ಮೀ ಮೂರ್ತಿ



ವರವಿಯ ಗಜಲಕ್ಷ್ಮೀ ಮೂರ್ತಿ








ಶಿರಪಟ್ಟಿಯ ಫಕ್ಕೀರಸ್ವಾಮಿಮಠದ ಶಾಸನ



ಸಾಸರವಾಡದ ಹಳ್ಳದ ದಂಡೆಯಲ್ಲಿರುವ ಶಾಸನ



ಸಾಸರವಾಡದ ಹನುಮಂತದೇವಾಲಯದ ಮುಂದಿನ ಶಾಸನ









ವರದಿಯ ಮೌನೇಶ್ವರನ ಜಾತ್ರೆ.



ರಣತೂರಿನ ಈಶ್ವರ ಜಾತ್ರೆ